ಕ್ರೈಸ್ತ ತತ್ವದರ್ಶನ

೧ ಸತ್ಯದರ್ಶನ

ಬಂದಿಯ ನಿರೂಪಣೆ

ಸುಮಾರು ಎರಡುಸಾವಿರ ವರ್ಷಗಳ ಹಿಂದೆ ಯುದೇಯಾದ ಪ್ರಧಾನ ನಗರವಾದ ಯೆರೂಶಲೇಮಿನಲ್ಲಿ ವಿಚಾರಣೆಯೊಂದು ನಡೆಯಿತು. ಆಗ ಯುದೇಯಾವು ಪ್ರಸಿದ್ಧ ರೋಮಕ ಸಾಮ್ರಾಜ್ಯದ ಭಾಗವಾಗಿತ್ತು. ರೋಮಿನಲ್ಲಿ ಸೀಜರನು ಸಿಂಹಾಸನಾರೂಢನಾಗಿದ್ದನು. ದಕ್ಷ ಸರದಾರರು ವಿವಿಧ ಪ್ರಾಂತಗಳಲ್ಲಿ ಚಕ್ರವರ್ತಿಯ ಹೆಸರಲ್ಲಿ ನ್ಯಾಯಪರಿಪಾಲನೆ ಮಾಡುತ್ತಿದ್ದರು. ಅಖಿಲ ಸಾಮ್ರಾಜ್ಯದಲ್ಲಿ ಶಾಂತಿಯು ನೆಲಸಿ, ಸುಭಿಕ್ಷವಿರುವಂತೆ ಚಕ್ರವರ್ತಿಯೂ ಆತನೊಡನೆ ಸರದಾರರೂ ಸಾಧಿಸುತ್ತ ಬಂದಿದ್ದರು. ಯುದ್ಧಗಳ ಭೀತಿಯೇ ಮಾಯವಾಗಿ ದೂರ ದೂರದ ಪ್ರಾಂತಗಳಲ್ಲಿಯೂ 'ರೋಮಕ ಶಾಂತಿ' (Pasè Romana) ಎಂದ್ರ ಅನ್ವರ್ಥನಾಮವನ್ನು ಪಡೆದ ಶಾಂತಿಯು ವಿರಾಜಿಸುತ್ತಿತ್ತು. ನ್ಯಾಯಕ್ಕೆ ಬೆಂಬಲವಿತ್ತು. ನ್ಯಾಯಕರ್ತರು ದಕ್ಷತೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ರೋಮಕ ಶಾಂತಿಗೆ ಭಂಗವನ್ನುಂಟುಮಾಡದ ಯಾವ ಬಗೆಯ ಮತೀಯ ಕ್ರಿಯೆಗಳಲ್ಲಿ atn ಸರಕಾರದ ಹಸ್ತಕ್ಷೇಪವಿದ್ದಿಲ್ಲ. ನಿಶ್ಚಿತ ತೆರಿಗೆಯನ್ನು ಸಂದಾಯ ಮಾಡಿದರೆ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಯಾವ ಬಗೆಯ ಎಡರೂ ಇದ್ದಿಲ್ಲ.

ಯುದೇಯಾದ ಒಂದು ಭಾಗದಲ್ಲಿ ಪಿಲಾತ (Pilate) ನೆಂಬ ಹೆಸರಿನ ಗವರ್ನರನು ಆಡಳಿತಾಧಿಕಾರಿಯಾಗಿದ್ದನು. ಅವನು ಅಧಿಕಾರ

ವಹಿಸಿದಂದಿನಿಂದ ಅವನ ಅಧಿಕಾರಕ್ಷೇತ್ರದಲ್ಲಿ ಶಾಂತಿ ಭಂಗವಾಗುವಂತಹ ಅದಾವ ಬಗೆಯ ಚಟುವಟಿಕೆಯೂ ನಡೆದಿರಲಿಲ್ಲ. ಯೆಹೂದ್ಯರು ತಮ್ಮ ಧರ್ಮಾಭಿಮಾನವನ್ನು ಬಿಟ್ಟಿರದಿದ್ದರೂ, ಅಂತರ್ಯದಲ್ಲಿ ರೋಮಕ ಸರಕಾರವನ್ನು ದ್ವೇಷಿಸುತ್ತಿದ್ದರೂ ಬಹಿರಂಗದಲ್ಲಿ ಗೌರವದಿಂದಲೇ ಸಮರ್ಥಿಸುತ್ತ ಶಾಂತಜೀವನವನ್ನು ಸಾಗಿಸುತ್ತಿದ್ದರು.

ಹೀಗಿರಲು ವಸಂತ ಪೂರ್ಣಿಮೆಯು ಬಂದಿತ್ತು. ಇನ್ನೆರಡು ದಿನಗಳಲ್ಲಿ ಯೆಹೂದ್ಯರ 'ಪಾಸ್ಕ'ದ (Pasch) ಮಹಾಪರ್ವ ದಿನವೊಂದು ನಡೆಯಲಿತ್ತು. ಆದರೆ ಯೆಹೂದ್ಯರೇ ತಮ್ಮವನಾದನೊಬ್ಬನನ್ನು ಬಂಧಿಸಿ, ಅತ್ಯವಸರದಿಂದ ಆತನಲ್ಲಿ ಅಪರಾಧವನ್ನು ನಿಶ್ಚಯಿಸಿ, ಮರಣದಂಡನೆಯನ್ನು ಕೊಡಿಸಬೇಕೆಂದು ಪಿಲಾತನಲ್ಲಿಗೆ ತಂದಿದ್ದರು. ಯೆಹೂದ್ಯರ ನಿಯಮದಂತೆ ಅಪರಾಧಿಯನ್ನು ಸರಿಯಾದ ಸಾಕ್ಷ್ಯಗಳ ಆಧಾರದ ಮೇಲೆ ವಿಚಾರಿಸಬೇಕಾಗಿತ್ತು. ಆದರೆ ಆ ಅಪರಾಧಿಯನ್ನು ನಟ್ಟಿರುಳಲ್ಲಿಯೇ ಬಂಧಿಸಿ, ಹಿರಿಯ ,ಯಾಜಕನ ಅಧ್ಯಕ್ಷತೆಯಲ್ಲಿ 'ಸೆನೆಡ್ರಿನ್' ಎಂಬ ನೀತಿಸಭೆಯನ್ನು ಆತನ ವಿಚಾರಣೆಗಾಗಿಯೇ ಕೂಡಿಸಿ ಉಷಃಕಾಲದಲ್ಲಿಯೇ ಪಿಲಾತನಲ್ಲಿಗೆ ತಂದಿದ್ದರು. ಆ ವ್ಯಕ್ತಿಗೆ ಸಿಲುಬೆಯ ಮರಣದ ದಂಡನೆಯನ್ನೀಯುವಂತೆ ಆಗ್ರಹ ತೊಟ್ಟರು. ಪಿಲಾತನು ಬಂದಿಯನ್ನು ನೋಡಿದನು. ಅವನದು ಮೂವತ್ತ ಮೂರರ ತುಂಬುಜವ್ವನ. ಪ್ರತಿಭಾವ್ಯಕ್ತಿಯೆಂದು ಮೊಗದ ತೇಜಸ್ಸು ತಿಳಿಸುತ್ತಿತ್ತು. ಅಪರಾಧಿಯನ್ನು ನ್ಯಾಯಪೂರ್ಣರೀತಿಯಲ್ಲಿ ವಿಚಾರಿಸಿ ಯುಕ್ತ ದಂಡನೆಯನ್ನೀಯಬೇಕೆಂದು ಬಯಸುವ ಬದಲು, ಕೇವಲ ಮರಣದಂಡನೆಯನ್ನೇ ವಿಧಿಸಬೇಕೆಂದು ಆಗ್ರಹಪಡುವ ಯೆಹೂದ್ಯರ ಕೇಳಿಕೆಯನ್ನು ನೇರವಾಗಿ ಪಿಲಾತನು ಮನ್ನಿಸದಾದನು. ತನ್ನ ಸಮಾಜದವರಿಂದ ರಕ್ಷಣೆಯನ್ನು ಪಡೆಯಬೇಕಾದ ಸ್ಥಾನದಲ್ಲಿ, ಅವರೇ ಪ್ರಾಣಾಪಹರಣಕ್ಕಾಗಿ ಹಾತೊರೆಯುತ್ತಿದ್ದುದನ್ನು ಪಿಲಾತನು ಗಮನಿಸಿದನು. ಬಂದಿಯನ್ನೂ ಹಲವು ಪ್ರಶ್ನೆಗಳ ಮೂಲಕ ವಿಚಾರಿಸಿ, ಆತನ ನಿರ್ದೋಷತ್ವವನ್ನು ತಿಳಿದನು. ಯೆಹೂದ್ಯ ನಾಯಕರ-ಆ ಯಾಜಕ ವೃಂದದ ಪ್ರತಿಯೊಂದು ಆರೋಪವು ಜಲಹೋಮದಂತಾಯಿತು. ಪಿಲಾತನ ಸೂಕ್ಷ್ಮದೃಷ್ಟಿಗೆ ಅವರ ಆರೋಪಗಳು

ಬರಿಯ ಕಲ್ಪನೆಯೆಂದು ಸುಸ್ಪಷ್ಟವಾಯಿತು. ಆತನು ಅದನ್ನು ಸಾರುತ್ತ ಅವರ ಬಯಕೆಯನ್ನು ನಿರಾಕರಿಸಿದನು.

ಯೆಹೂದ್ಯ ಯಾಜಕರು ತಮ್ಮ ಸೋಲನ್ನು ಅಷ್ಟು ಸುಲಭವಾಗಿ ಸ್ವೀಕರಿಸಲೊಪ್ಪದಾದರು. ಅವರು " ಈತನು ತಾನು ಕ್ರಿಸ್ತನೆಂದೂ ರಾಜನೆಂದೂ ಹೇಳುತ್ತ, ಸೀಜರ ಮಹಾರಾಜನಿಗೆ ಕರವನ್ನು ನಿರಾಕರಿಸುವಂತೆ ಜನತೆಯನ್ನು ಉದ್ರೇಕಿಸುತ್ತಿರುವನೆಂದು ನಾವು ತಿಳಿದಿರುವೆವು " ಎಂಬ ಹೊಸ ಆರೋಪವನ್ನು ಮುಂಡಿಸಿದರು. ಪಿಲಾತನಿಗೆ ಅದೊಂದು ಆಶ್ಚರ್ಯವೆನಿಸಿತು. ಯೆಹೂದ್ಯರು ಅಂತರ್ಯದಲ್ಲಿ ರೋಮಕ ಅಧಿಕಾಗವನ್ನು ವಿರೋಧಿಸುತಿದ್ದರೂ, ಕಂದಾಯ ಪಾವತಿಯನ್ನು ಒಪ್ಪದ ಮನಸ್ಸಿನಿಂದ ನೀಡುತ್ತ ಬಾಹ್ಯದಲ್ಲಿ ನಮ್ರತೆಯಿಂದ ನಡೆದುಕೊಳ್ಳುತ್ತಿದ್ದುದನ್ನು ಅವನು ತಿಳಿದಿದ್ದನು, ಮಾತ್ರವಲ್ಲ ಯಾವ ಬಗೆಯಲ್ಲಿಯೂ ವಾತಾವರಣವು ಪ್ರಕ್ಷುಬ್ಧಗೊಳ್ಳುವ ವಿಷಯದ ಪೂರ್ವಸೂಚನೆಯೂ ಕೂಡ ಅವನ ಅವಗಾಹನೆಗೆ ಬಂದಿರಲಿಲ್ಲ. ಹೀಗಾಗಿ ಈ ಕಾರಣವೂ ಕೇವಲ ಮಿಥ್ಯಾರೋಪವೆಂದು ಆತನು ತಿಳಿದನು. ಆದರೂ ಚಕ್ರವರ್ತಿಯ ಪ್ರತಿನಿಧಿಯಾಗಿ ತಾನು ಆ ವಿಷಯದಲ್ಲಿ ವಿಚಾರಿಸಬೇಕಾಯಿತು ; ಅದಕ್ಕಾಗಿ, " ನೀನು ಯೆಹೂದ್ಯರ ರಾಜನೇ ?" ಎಂದು ಪಿಲಾತನು ಪ್ರಶ್ನಿಸಿದನು. ಆಗ ಬಂದಿಯು ಆ ನ್ಯಾಯಕರ್ತನ ಅಂತರ್ಯವನ್ನು ಶೋಧಿಸುವಂತೆ, " ಅದನ್ನು ನೀನಾಗಿಯೇ ಹೇಳುವೆಯೋ ಅಥವಾ ನನ್ನ ಕುರಿತು ಇತರರು ತಿಳಿಸಿರುವರೋ ?" ಎಂದು ಮರುಪ್ರಶ್ನೆಯನ್ನಿತ್ತನು. ನ್ಯಾಯಾಧೀಶನ ಮನವು ಕಲಕಿದಂತಾಗಿ, " ನಾನೇನು ಯೆಹೂದ್ಯನೇ ? ನಿನ್ನ ಜನತೆಯೂ ಯಾಜಕರೂ ನಿನ್ನನ್ನು ನನ್ನಲ್ಲಿಗೆ ತಂದಿರುವರು. ನೀನೇನು ಮಾಡಿರುವೆ ?" ಎಂದು ಹೇಳುತ್ತ ಅಪರಾಧಿಯ ಮೊಗವನ್ನು ನೋಡಿದನು. ಆಗ ಬಂದಿಯು :

" ನನ್ನ ರಾಜ್ಯವು ಈ ಲೋಕಕ್ಕೆ ಸಂಬಂಧಿಸಿದುದಲ್ಲ. ನನ್ನ ರಾಜ್ಯವು ಈ ಲೋಕಕ್ಕೆ ಸಂಬಂಧಿಸಿದುದಾಗಿದ್ದರೆ ಯೆಹೂದ್ಯರ ಕೈಗೆ ನಾನು ಬೀಳದಂತೆ ನನ್ನ ಅನುಯಾಯಿಗಳು ಹೋರಾಡುತಿದ್ದರು. ನನ್ನ ರಾಜ್ಯವು ಇಲ್ಲಿನದಲ್ಲ " (ಯೋಹಾನ, XVIII-೩೬) ಎಂದನು,

ಇಷ್ಟು ಕೇಳಿದಾಗಲೇ ಪುನಃ ಪ್ರಶ್ನಿಸುವ ಸಂದರ್ಭವೊಂದು ಪಿಲಾತನಿಗೆ ದೊರಕಿತು. "ಹಾಗಾದರೆ ನೀನೊಬ್ಬ ರಾಜನಾಗಿರುವೆಯಾ?" ಎಂದು ಆತನು ಕೇಳಿದನು.

"ನಾನು ರಾಜನೆಂದು ನೀನು ಹೇಳುತ್ತಿ. ಇದಕ್ಕಾಗಿಯೇ ನಾನು ಜನಿಸಿದೆನು; ಸತ್ಯದ ಸಮರ್ಥನೆಗಾಗಿ ಈ ಲೋಕಕ್ಕೆ ನಾನು ಬಂದಿರುವೆನು. ಸತ್ಯವಂತನಾದ ಪ್ರತಿಯೊಬ್ಬನೂ ನನ್ನ ಸ್ವರವನ್ನು ಆಲಿಸುತ್ತಾನೆ" (ಯೋಹಾನ XVIII-೩೭) ಎಂದು ಆ ಅಪರಾಧಿಯು ಸ್ಪಷ್ಟಗೊಳಿಸಿದನು. ಪಿಲಾತನ ತುಮುಲವೆದ್ದ ಮನೋಮಂದಿರದಲ್ಲಿ ಅದೊಂದು ನವೀನ ವಾಣಿಯನ್ನು ಕೇಳಿದಂತಾಗಿ, "ಸತ್ಯವೆಂದರೇನು?" ಎಂದು ಉದ್ಗಾರವೆತ್ತಿ, ಅಪರಾಧಿಯ ನಿರಪರಾಧತ್ವವನ್ನು ಸಾರಲುಪಕ್ರಮಿಸಿದನು. ಆದರೇನು! ಮುಂದೆ ಆ ಜನತೆಯ ಕುಹಕಕ್ಕೆ ಬಲಿಯಾಗಿ ಮರಣದಂಡನೆಯನ್ನಿತ್ತನು. ನಿರಪರಾಧಿಯ ವಧೆಯಾಯಿತು.

ನ್ಯಾಯಾಧೀಶನಾದ ಪಿಲಾತನಲ್ಲಿ ಎರಡುಸಾವಿರ ವರ್ಷಗಳ ಹಿಂದೆ ಉದ್ಭವಿಸಿದ ಪ್ರಶ್ನೆಯು ಇಂದಿನವರೆಗೆ ಪ್ರತಿಕಾಲದಲ್ಲಿಯೂ ಅನೇಕರಲ್ಲಿ ಉದ್ಭವಿಸಿದೆ. ಕೆಲವರಲ್ಲಿ ವಿಚಾರಪೂರ್ವಕವಾಗಿಯೇ ಆಗಿದ್ದರೂ, ಅನೇಕರಲ್ಲಿ ವ್ಯಂಗ್ಯಾರ್ಥದಲ್ಲಿಯೋ ಅಪಹಾಸ್ಯಾರ್ಥದಲ್ಲಿಯೋ ಆಗಿರಬಹುದು.

ಆ ಬಂದಿ ಯಾರು?

ಯುದೇಯಾವು ಯೆಹೂದ್ಯರ ಮಾತೃಭೂಮಿ. ಬಹು ಪ್ರಾಚೀನ ಕಾಲದಿಂದಲೂ ಏಕೇಶ್ವರ ಭಕ್ತಿಯಲ್ಲಿ ಕೀರ್ತಿಪಡೆದ ಜನರ ತವರೂರು. ಅವರ ಪ್ರಾಚೀನ ಗ್ರಂಥಗಳಲ್ಲಿ ಮಹಾ ಪ್ರವಾದಿ (Prophets) ಗಳಿಂದಲೂ, ಜ್ಞಾನಿಗಳಿಂದಲೂ ಯೆಹೂದ್ಯರ ಉದ್ಧಾರಕ್ಕಾಗಿ ಮಹಾಪುರುಷನೊಬ್ಬನು ಜನಿಸುವನೆಂದೂ, ಬೆತ್ಲೆಹೇಮ್ ಆತನ ಜನ್ಮಸ್ಥಾನವಾಗುವುದೆಂದೂ, ಅವನು ಕಾಸೀನನಾಗಿ ಜನಿಸುವನೆಂದೂ, ಆತನ ಸಾಮ್ರಾಜ್ಯವು ವಿಶ್ವವಿಸ್ತಾರವಾಗುವುದೆಂದೂ ನಿರೂಪಿಸಲ್ಪಟ್ಟಿತ್ತು. ಆ

ಪವಿತ್ರ ಗ್ರಂಥಗಳಲ್ಲಿ ಸೂಚಿಸಿದ ಕಾಲಾವಧಿಯೂ ಸನ್ನಿಹಿತವಾಗಿತ್ತು. ಆ ಮಹಾತ್ಮನು ತಮ್ಮ ಜನಾಂಗವನ್ನು ದಾಸ್ಯದಿಂದನಿವೃತ್ತಿ ಗೊಳಿಸಲು, ಯುದೇಯಾಕ್ಕೆ ಸ್ವಾತಂತ್ರ್ಯವನ್ನು ತರುವುದಕ್ಕಾಗಿ ರೋಮಕರನ್ನು ಪರಾಜಿತಗೊಳಿಸುವ ಮಹಾರಾಜಾಧಿರಾಜನಾಗುವನೆಂದೂ ಸತ್ಯಮಾರ್ಗ ದಲ್ಲಿ ಜನರನ್ನು ನಡೆಯಿಸಬಲ್ಲ ಶಕ್ತಶ್ರೀಮಂತನೆಂದೂ ಯೆಹೂದ್ಯರು ಭಾವಿಸಿದರು.

ಯುದೇಯಾದ ನಜರೇತ (Najareth) ಎಂಬಲ್ಲಿ ಬಡಗಿ ಯೋಸೆಫನೆಂಬುವನೊಬ್ಬನಿದ್ದನು. ಮರೀಯಾ ಎಂಬವಳು ಆತನ ಪತ್ನಿ. ಅವರಿಬ್ಬರೂ ಯೆಹೂದ್ಯ ರಾಜ ದಾವಿದನ ವಂಶದವರು. ಕೌಟುಂಬಿಕ ಉನ್ನತಿ-ಅವನತಿಗಳ ವಿಭೇದದಿಂದ ಸಾಮಾನ್ಯಸ್ಥಿತಿಗೆ ಬಂದಿದ್ದರು. ಯೇಸುವು ಮರಿಯಳಲ್ಲಿ ಜನಿಸಿದನು. ಎಳವೆಯಲ್ಲಿ ಮಾತ್ರ ವಲ್ಲ ಯೌವನ ಕಾಲದಲ್ಲಿಯೂ ಮರಿಯ ಹಾಗೂ ಯೋಸೆಫರಿಗೆ ವಿಧೇಯ ನಾಗಿ ಸಾಕಷ್ಟು ವಿದ್ಯಾಭ್ಯಾಸವನ್ನು ಮಾಡಿದನು. ಯೋಸೆಫನಿಂದ ಮರ ಗೆಲಸವನ್ನು ಕಲಿತು ಆತನೊಡನೆಯೂ ಆತನ ಮರಣಾನಂತರವೂ ತನ್ನ ತಾಯಿಯನ್ನು ನೋಡಿಕೊಂಡಿದ್ದನು. ಅವನು ಆಗಿನ ಪ್ರಸಿದ್ಧ ರಾಜವಂಶ ದಲ್ಲಾಗಲಿ, ಪುರೋಹಿತ ಕುಲಗಳಲ್ಲಾಗಲಿ, ಶ್ರೀಮಂತರಲ್ಲಾಗಲಿ ಜನಿಸದ ಸಾಮಾನ್ಯ ವ್ಯಕ್ತಿಯಾಗಿದ್ದನು. ಆದರೆ ಮೂವತ್ತರ ಹರೆಯದಲ್ಲಿ ಒಮ್ಮೆಲೆ ಆತನು ಪ್ರಕಾಶಕ್ಕೆ ಬಂದನು. ಬಾಹ್ಯದಲ್ಲಿ ಇತರ ವ್ಯಕ್ತಿಗಳಂತಿದ್ದ ಯೇಸುವು ತನ್ನ ನೂತನ ಸಂದೇಶವನ್ನು ನೀಡುತ್ತ ಊರಿಂದೂರಿಗೆ ಸಂಚರಿಸತೊಡಗಿದನು. ಮಹಾ ಪಾಪಿಗಳೆಂದು ಹೆಸರು ಪಡೆದ ವ್ಯಕ್ತಿಗಳ ಸಂಪರ್ಕವನ್ನು ಮಾಡಿ ತನ್ನ ಅಮೃತವಾಣಿಯಿಂದ ಅವರನ್ನು ಸನ್ಮಾರ್ಗಕ್ಕೆ ಪರಿವರ್ತಿಸಿದನು. ರೋಗಿಗಳನ್ನು ದೆವ್ವಹಿಡಿದವ ರನ್ನು ಸುಖಗೊಳಿಸಿದನು. ಹೀಗಾಗಿ ಸಹಸ್ರ ಸಂಖ್ಯೆಯ ಜನರ ಮೆಚ್ಚುಗೆಗೆ ಪಾತ್ರನಾದನು. ಕೆಲವರು ಆತನ ಪವಾಡಗಳಿಂದ ಸೆಳೆ ಯಲ್ಪಟ್ಟಿದ್ದರೂ ಹಲವರು ಆತನ ವಾಗಾಮೃತದ ಪ್ರಭಾವದಿಂದಲೇ ಆತನನ್ನು ಹಿಂಬಾಲಿಸತೊಡಗಿದ್ದರು.

ಅದನ್ನು ಕಂಡ ಯಾಜಕರು, ಶಾಸ್ತ್ರಿಗಳು ಮುಂತಾದ ಮತ್ತಾ

ಚಾರ್ಯರು ಉರಿದುಬಿದ್ದರು. ಅತಿ ಸಾಮಾನ್ಯ ವ್ಯಕ್ತಿಯಾಗಿದ್ದು, ಯಾವ ಬಗೆಯ ವಿಶಿಷ್ಟ ವಿದ್ವಾಂಸನಾಗಿರದ ಬಡಗಿಯೊಡನೆ ಜನತೆಯು ಹೋಗುವುದನ್ನು ಕಂಡು ಅವರು ಸಹಿಸದಾದರು. ಪುರೋಹಿತರು ಯೆರೂಸಲೇಮಿನ ಮಹಾದೇವಾಲಯದಂತಹ ಪವಿತ್ರಸ್ಥಳದಲ್ಲಿ ವ್ಯಾಪಾರ ಮಾಡುವುದನ್ನು ನಿಷೇಧಿಸಿ, ವ್ಯಾಪಾರಿಗಳನ್ನು ಹೊಡೆದೋಡಿಸಿದ ಯೇಸುವನ್ನುಳಿಸಿದರೆ ತಮ್ಮ ಸ್ವಾರ್ಥಸಾಧನೆಗೆ, ಅರ್ಥ ಸಂಪಾದನೆಗೆ ಸೊನ್ನೆ ಬರುವುದೆಂದು ತಿಳಿದುಕೊಂಡರು. ಪಾಪಿಗಳೊಡನೆಯೂ ಮತಾಚಾರ್ಯರು ದ್ವೇಷಿಸುತಿದ್ದ ವ್ಯಕ್ತಿಗಳೊಡನೆಯೂ ಕೂಡಿಕೊಂಡು ಅವರೊಡನೆ ಸಹ ಭೋಜನವನ್ನು ಮಾಡುತಿದ್ದವನ ಅಂತ್ಯವನ್ನು ಅವರು ಬಯಸಿದರು. ರೋಮಕರ ದಬ್ಬಾಳಿಕೆಯಿಂದ ನೊಂದಿದ್ದ ಯೆಹೂದ್ಯ ಜನಾಂಗವನ್ನು ಬಂಧಮುಕ್ತರನ್ನಾಗಿ ಮಾಡುವ ಸ್ವಾತಂತ್ರ್ಯ ಸಾಧಕ, ರಾಜಕೀಯ ವ್ಯಕ್ತಿಯಾಗಿ ಕಾರ್ಯಾಸಕ್ತನಾಗುವ ಬದಲು ನವೋಪದೇಶವೊಂದನ್ನು ನೀಡುತ್ತ, ಪ್ರಾಚೀನರೂಢಿಗಳನ್ನು ವಿರೋಧಿಸುವ ವ್ಯಕ್ತಿಯನ್ನು ಕಂಡು ಅವರ ಸಹನೆ ಮೀರಿತು. ಯಾಜಕರೂ ಮತಾಚಾರ್ಯರೂ ಜನತೆಯನ್ನು ಯೇಸುವಿನ ವಿರೋಧವಾಗಿ ಪರಿವರ್ತಿಸಲು ಪ್ರಯತ್ನಿಸಿದರೂ ವಿಫಲ ಮನೋರಥರಾಗಿ, ಒಳಸಂಚೊಂದರ ಸಹಾಯದಿಂದ ಜನಮುದವನ್ನು ಪಡೆದ ವ್ಯಕ್ತಿಯನ್ನು ವಧಿಸಿದರು.

ಅದೇ ಯೇಸುವು ಪಿಲಾತನ ಮುಂದೆ 'ಸತ್ಯ'ದ ನಾಮನಿರ್ದೇಶನ ಮಾಡಿದಂತೆ ತನ್ನ ಧರ್ಮೋಪದೇಶದ ಕಾಲದಲ್ಲಿ 'ಜೀವ'ವನ್ನು ಕುರಿತೂ ಹೇಳಿರುವನು.

"ಅವರಲ್ಲಿ (ಜನರಲ್ಲಿ) ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ನಾನು ಬಂದೆನು" (ಯೋಹಾನ X-೧೦)

ಸತ್ಯವೂ ಜೀವನವೂ

ಸತ್ಯವು ಸುಂದರವಾದುದು; ಅದುವೆ ಶುಭವಾದುದು. ಅದು ಮಾತ್ರ ಶಾಶ್ವತವಾಗಿ ಬಾಳುತ್ತದೆ. ಯಾವುದು ಶಾಶ್ವತವಾಗಿರುವು

ದಿಲ್ಲವೋ ಅದು ಸತ್ಯವಾದುದಲ್ಲ. ನಾವು ಈಗ ಲೋಕದಲ್ಲಿ ಬಾಳುತಿದ್ದೇವೆ. ಆದರೆ ಶಾಶ್ವತವಾಗಿ ನಾವಿಲ್ಲಿ ಉಳಿಯಲಾರೆವು ; ಅಂದರೆ ನಮ್ಮ ಅಸ್ತಿತ್ವವು ಕೇವಲ ಕ್ಷಣಿಕವಾದುದು. ಹಾಗಾದರೆ ಬೇರೊಂದು ಸತ್ಯವಾದ ಲೋಕವು ಇರಬೇಕು.

ನಮ್ಮ ಜೀವನವು ಒಂದು ಪಯಣವಾಗಿದೆ. ಈ ಪಯಣವು ನಮ್ಮ ಜನನದಿಂದ ಆರಂಭಗೊಂಡು ಮರಣದಲ್ಲಿ ಕೊನೆಗೊಳ್ಳುವುದು. ಅನಂತರ ನಮ್ಮ ಶಾಶ್ವತ ಜೀವನವು ನಡೆಯಬೇಕು. ಆ ಶಾಶ್ವತಗೃಹವೇ 'ಸತ್ಯ' ಲೋಕವು. ಅದು ಮಾತ್ರ ಅದಾವಬಗೆಯ ವ್ಯತ್ಯಾಸಗಳನ್ನೂ ಪಡೆಯದು.

ಈ ಲೋಕದಲ್ಲಿ ನಾವಿದ್ದೇವೆ. ನಮ್ಮ ಸಕಲ ವಸ್ತು ವಿಷಯಗಳಲ್ಲಿ ಅತ್ಯಂತ ಮೆಚ್ಚುಗೆಯ ಹಾಗೂ ಅತ್ಯಧಿಕ ಮೌಲ್ಯದ ವಸ್ತುವೇ ನಮ್ಮ ಪ್ರಾಣವಾಗಿದೆ. ಇತರ ಯಾವುದೇ ವಸ್ತುವಿಗಿಂತ, ಯಾವ ಆಪ್ತಬಂಧು ಅಥವಾ ಮಿತ್ರನಿಗಿಂತ ಹತ್ತಿರದ ಸಂಬಂಧದಲ್ಲಿ ಅದು ಇದೆ. ಅದೂ ನಾವೂ ಒಂದಾಗಿದ್ದೇವೆ. ಅದಿಲ್ಲದೆ ಹೋದರೆ ನಮ್ಮ ಅಸ್ತಿತ್ವವಿಲ್ಲ. ಇತರ ಯಾವ ವಸ್ತು ಅಥವಾ ವ್ಯಕ್ತಿಯನ್ನುಳಿದು ನಾವು ಬಾಳಬಹುದು ; ಆದರೆ ಪ್ರಾಣ ವನ್ನುಳಿದು ನಾವು ಕ್ಷಣಕಾಲವಾದರೂ ನಾವಾಗಿರಲಾರೆವು.

ಯೇಸುಕ್ರಿಸ್ತನು ನಿರ್ದೇಶಿಸಿದ 'ಜೀವ'ವು ಈ ಪ್ರಾಣವಾಗಿರ ಲಾರದು. ಪ್ರಾಣವನ್ನು ನಮ್ಮ ತಂದೆ ತಾಯಿಗಳ ಮೂಲಕ ನಾವು ಪಡೆದಿರುವೆವು. ಅದನ್ನೇ ತಾನು ನೀಡಲು ಬಂದವನೆಂದು ಹೇಳಿದರೆ ಸಮಂಜಸವೆನಿಸದು. ಮಾನವಜೀವಿಯು ಸಕಲ ಪ್ರಾಣಿವರ್ಗಗಳಲ್ಲಿ ಸರ್ವಶ್ರೇಷ್ಠನೆಂದು ನಾವೊಪ್ಪುವೆವು. ಆತನಲ್ಲಿ ಐಹಿಕ ಸುಖ-ಭೋಗ ಗಳಿಷ್ಟಿದ್ದರೂ ಇನ್ನೂ ಅತೃಪ್ತಿಯೊಂದಿದೆ. ಅವನ ಹೃದಯವು ಸಂತೃಪ್ತಿ ಯನ್ನು ಪಡೆಯಲು ಬೇಕಾದ ಅದೊಂದು ವಿಶೇಷತ್ವವೇ ಯೇಸುವು ಹೇಳಿದ 'ಜೀವ'ವಾಗಿದೆ. ಈ ಆಧ್ಯಾತ್ಮಿಕ ವಿಶೇಷತ್ವವು ಮೊದಲೊಮ್ಮೆ ಮಾನವನಿಗಿರದೆ ಹೋಗಿದ್ದರೆ, ಈಗ ಅವನ ನೈಜಸ್ವಭಾವವು ಅದನ್ನು ಬಯಸುತ್ತಿರಲಿಲ್ಲ. ಭಗವಂತನಿಂದ ನೀಡಲ್ಪಟ್ಟ ಆ ಶ್ರೇಷ್ಠತ್ವ ಗಳನ್ನು ಮಾನವ ವ್ಯಕ್ತಿಯು ತನ್ನ ಕುಲಕ್ಕಾಗಿ ಕಳೆದುಕೊಳ್ಳಲು, ಆತನು ಪತನಗೊಂಡಿರಬೇಕು. ಆ ಪತನದ ಮುನ್ನ ಮಾನವನು ತನ್ನ ಸಹಜ

ಸ್ವಭಾವಕ್ಕೆ ಮೀರಿದ ಆ ಶ್ರೇಷ್ಠತೆಗಳಿಂದ ಕೂಡಿದವನಾಗಿ ಭಗವಂತನ ನಿಕಟ ಸಂಬಂಧದಲ್ಲಿರಬೇಕು. ಕೇವಲ ಮೃತ್ಪಿಂಡಮಾನವನು ಆ ದಿವ್ಯತೆಗಳಿಂದ ಅಲಂಕರಿಸಲ್ಪಟ್ಟು ಭಗವಂತನ ಸ್ವರೂಪ ಸಾದೃಶ್ಯವನ್ನು-ಸಮಾನತೆಯಲ್ಲ-ಪಡೆದಿರಬೇಕು. ಯೇಸುವು ಹೇಳಿದ ಮಾತುಗಳನ್ನು ಅವಧಾನಿಸಬೇಕು

"ಅವರಲ್ಲಿ ಜೀವವಿರುವಂತೆಯೂ ಅದು ಸಮೃದ್ಧಿಯಾಗಿರುವಂತೆಯೂ ನಾನು ಬಂದೆನು." (ಯೋಹಾನ X-೧೦)

"ನಾನೇ ಪುನರುತ್ಥಾನವೂ ಜೀವವೂ ಆಗಿರುವೆನು; ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಜೀವಿಸುವನು. ಮತ್ತು ನನ್ನಲ್ಲಿ ಜೀವಿಸುವವನೂ ವಿಶ್ವಾಸವಿಡುವವನೂ ಎಂದೆಂದಿಗೂ ಸಾಯನು" (ಯೋಹಾನ XI-೨೬)

ನೀವು ಸತ್ಯವನ್ನು ತಿಳಿಯುವಿರಿ; ಮತ್ತು ಆ ಸತ್ಯವು ನಿಮ್ಮನ್ನು ಬಂಧ ಮುಕ್ತರನ್ನಾಗಿ ಮಾಡುವುದು" (ಯೋಹಾನ VIII-೩೨)

ಇಲ್ಲಿ ಕೊಟ್ಟ ಯೇಸುವಿನ ಮಾತುಗಳಲ್ಲಿ 'ಜೀವ' ಹಾಗೂ 'ಸತ್ಯ'ಗಳ ಉಲ್ಲೇಖಗಳಿಂದ ಅವೆರಡೂ ಪರಸ್ಪರ ಹತ್ತಿರದ ಸಂಬಂಧವುಳ್ಳವೆಂದು ತಿಳಿಯಬೇಕಾಗುತ್ತದೆ ಆತನು ಸೂಚಿಸಿದ ಜೀವವು ಸತ್ಯಕ್ಕೆ ಸಂಬಂಧಿಸಿರಬೇಕು. ಅದುವೆ ಸತ್ಯದ ಜೀವವು. ಅದೆಂದಿಗೂ ವ್ಯತ್ಯಾಸಗೊಳ್ಳದಂತಹುದು. ಆ ಸತ್ಯವು ತ್ರಿಕಾಲಾಬಾಧಿತ. ಆ ಸತ್ಯದಿಂದ ಸರ್ವ ಜೀವಿಗಳ ಸರ್ವೋತ್ತಮ ಹಿತವನ್ನು ಸಾಧಿಸಲಾಗುತ್ತದೆ." ಯದ್ಭೂತ ಹಿತಮತ್ಯಂತಂ ತತ್ಸತ್ಯಂ ಹಿ ಮತಂ ಮಮ" (ಮಹಾಭಾರತ) ಅಂತಹ ಹಿತವು ಎಂದಿಗೂ ವಿಕಾರಕ್ಕೊಳಗಾಗದು. ಆ ಸತ್ಯದ ಶೋಧನೆಯೇ ಪ್ರತಿಯೊಬ್ಬನ ಐಹಿಕ ಜೀವನದ ಗುರಿಯಾಗಬೇಕು. ಏಕೆಂದರೆ, ಸತ್ಯದ ಮೇಲೆ ಲೋಕವು ನೆಲೆ ನಿಂತಿರುವುದು. ("ಸತ್ಯೇ ಲೋಕಃ ಪ್ರತಿಷ್ಠಿತಃ")

ಸತ್ಯವೂ ಭಾರತವೂ

ಭಾರತವು ಸತ್ಯಾಗ್ರಹಿಗಳ ನೆಲೆ. ಸತ್ಯಶೋಧಕರ ಮಾತೃಭೂಮಿ ಬಹು ಪ್ರಾಚೀನಕಾಲದಿಂದಲೂ ಸತ್ಯದ ನೆಲೆಯನ್ನು ಶೋಧಿಸಿ, ತಮ್ಮ

ಶೋಧನೆಗಳನ್ನು ಜನತೆಗೆ ನೀಡಿದ ಮಹಾವ್ಯಕ್ತಿಗಳು ಭಾರತೀಯರ ಆಧ್ಯಾತ್ಮಿಕ ಗುರುಗಳಾಗಿದ್ದಾರೆ. ಗೌತಮಬುದ್ಧ, ಗಾಂಧೀಜಿಯವರಂತಹ ಪುರುಷರ ಶೋಧನೆಗಳ ಪರಿಣಾಮವಾಗಿ ನಮ್ಮ ರಾಷ್ಟ್ರೀಯ ಸಂಸ್ಕೃತಿಯು ರೂಪಗೊಂಡಿದೆ. ಗೌತಮಬುದ್ಧನ ಶೋಧನೆಯು ಭವದ ತೃಷ್ಣೆಯ ನಿವಾರಣೆಗಾದರೆ ಗಾಂಧೀಜಿಯವರ ಶೋಧನೆಯು ರಾಜಕೀಯ ಸಾಮಾಜಿಕ ಹಿನ್ನೆಲೆಗಳನ್ನು ಪಡೆದಿದೆ. ಹೀಗೆ ಅವರ ದೃಷ್ಟಿಕೋಣಗಳೂ ಅವುಗಳಿಗನುಸಾರವಾಗಿ ಅವರು ಹಿಡಿದ ದಾರಿಗಳೂ ಪಡೆದ ಪರಿಣಾಮಗಳೂ ಬೇರೆ ಬೇರೆಯಾಗಿವೆ. ಗಾಂಧೀಜಿಯವರಿಂದ ಸತ್ಯಾಗ್ರಹವೆಂಬ ಪದವೊಂದು ರೂಢಿಗೆ ಬಂದಿದೆ. ಸತ್ಯಕ್ಕಾಗಿ ಆಗ್ರಹಪಡುವುದು ನ್ಯಾಯವೇ ಆಗಿದೆ. ಅದುವೆ ಸತ್ಯಶೋಧನೆಯು. ಆ ರೀತಿಯಲ್ಲಿ ಆಗ್ರಹಪಟ್ಟು ಶೋಧಿಸಿದ ಸತ್ಯವನ್ನು ಆರಿಸಿ, ಉಳಿದುದನ್ನು ತಿರಸ್ಕರಿಸುವುದು ಪ್ರತಿಯೊಬ್ಬ ಮಾನವನ ಕರ್ತವ್ಯ.

ಆದರೆ, ಈಗ ಸತ್ಯಾಗ್ರಹವೆಂಬ ಪದವನ್ನು ಭಿನ್ನಾರ್ಥವೊಂದರಲ್ಲಿ ಬಳಸುತ್ತಿರುವರು. ತಮ್ಮ ಉದ್ದೇಶ ಸಾಧನೆಗಾಗಿ-ಅದು ನ್ಯಾಯವಾದುದಲ್ಲವಾದರೂ—ಮಾಡಿದ ಪ್ರತಿಯೊಂದು ಚಲನ-ವಲನವನ್ನು ಸತ್ಯಾಗ್ರಹವೆಂದು ಕರೆಯುತ್ತಿರುವುದು ಸಮಂಜಸವೆನಿಸದು. ತಮ್ಮ ಉದ್ದೇಶವು ಉದಾತ್ತವಾಗಿರುವ ಸಂದರ್ಭಗಳಲ್ಲಿ, ನ್ಯಾಯಕ್ಕೆ ತಕ್ಕ ಸ್ಥಾನವು ದೊರೆಯುವಂತೆ ಮಾಡುವ ಕಾರ್ಯವನ್ನು ಸತ್ಯಾಗ್ರಹವೆಂದು ಕರೆಯುವುದು ತಪ್ಪೆನಿಸದು. ಆದರೆ ನ್ಯಾಯ ವಿರುದ್ಧವಾದ ಕಾರ್ಯಗಳಲ್ಲಿಯೂ ಜಯಸಿಗುವಂತೆ, ಅನ್ಯಾಯವು ನ್ಯಾಯದಷ್ಟೇ ಸ್ಥಾನವನ್ನು ಪಡೆಯುವಂತೆ ಅಥವಾ ಅದನ್ನು ಅಡಿಗೆ ಹಾಕುವಂತೆ,–ಸತ್ಯವನ್ನು ಅಸತ್ಯವು ಗೆಲ್ಲುವಂತೆ ಮಾಡುವ ಪ್ರತಿಯೊಂದು ಕಾರ್ಯವನ್ನೂ ಸತ್ಯಾಗ್ರಹವೆಂಬ ಗಂಭೀರನಾಮದಿಂದ ಕರೆಯುತ್ತಿರುವುದು ಮೌಢ್ಯವಾಗಿದೆ. ತಮ್ಮ ಸ್ವಾರ್ಥಸಾಧನೆಗಾಗಿ ಅಧಿಕಾರಿಗಳ, ಸಮಾಜ ನಾಯಕರ ಅಥವಾ ಶ್ರೀಮಂತರ ಮನೆಗಳ ಮುಂದೆ ನಿಂತು ಅವರನ್ನು ಅವಾಚ್ಯಪದಗಳಿಂದ ಅಥವಾ ಇತರ ರೀತಿಗಳಿಂದ ಅಪಮಾನಗೊಳಿಸುವುದನ್ನೂ, ಅವರ ಸಾಹಿತ್ಯಗಳಿಗೆ ನಷ್ಟವನ್ನುಂಟುಮಾಡುವುದನ್ನೂ ಸತ್ಯಾಗ್ರಹವೆಂದೇ ಕರೆಯಲಾಗು

ತ್ತದೆ. ಇದೇ ರೀತಿ ಯಾವುದೋ ಒಂದು ಉದ್ದೇಶ ಸಾಧನೆಗಾಗಿ ಆಹಾರವನ್ನು ,ಸ್ವೀಕರಿಸದಿರುವುದನ್ನು ಅನ್ನಸತ್ಯಾಗ್ರಹವೆಂದು ಸಂಬೋಧಿಸಲಾಗುತ್ತದೆ. ಇಂತಹ ಸಂಕುಚಿತಾರ್ಥದಲ್ಲಿ ಪ್ರಯೋಗಗೊಂಡ 'ಸತ್ಯ' ಪದವು ತನ್ನ ನೈಜಾರ್ಥವನ್ನು ಕಳೆದುಕೊಳ್ಳತೊಡಗಿದೆ. ಇದು ಯುಕ್ತವಲ್ಲ.

ಈ ಹೊತ್ತಗೆಯ ಧ್ಯೇಯ

ಸತ್ಯದ ಪರಿಚಯವನ್ನು ಹಲವರು ಮಾಡಿದ್ದಾರೆಂದು ಹೇಳಿದ್ದಾಯಿತು. ಮೂಲಸತ್ಯವೊಂದೇ ಆಗಿರುವುದರಿಂದ ಅದೆಂದಿಗೂ ವ್ಯತ್ಯಾಸಗೊಳ್ಳದು. ಅದು ಮಾತ್ರ ಸತ್ಯವು. ಉಳಿದುವು ಪೂರ್ಣಸತ್ಯವಾದುವಲ್ಲ. ಕೆಲವು ಸತ್ಯನಾಮದ ಅಸತ್ಯಗಳು. ಎರಡು ಮತ್ತು ಮೂರು ಐದಾಗುತ್ತದೆ ಎಂಬುದು ಸತ್ಯವು. ಆದರೆ ಐದರ ಹೊರತು ಬೇರೆ ಯಾವ ಮೊತ್ತವು ಬಂದರೂ ಅಸತ್ಯವೇ ಸರಿ. ಐದರ ಮೇಲಣ ಅಥವಾ ಅದರ ಕೆಳಗಣ ಸಂಖ್ಯೆಯು ಮೊತ್ತವಾಗಿ ಬರಬಹುದಾದರೂ ಐದೆಂಬುದು ಮಾತ್ರ ಸತ್ಯವು. ತಪ್ಪಾದ ಸಂಖ್ಯೆಯನ್ನು ಸರಿಯಾದ ಮೊತ್ತವೆಂದು ಸ್ಪಷ್ಟಪಡಿಸಲು ಪ್ರಯೋಗದ ಆಧಾರವನ್ನು ಕೊಡುವವರಿರಬಹುದು. ತರ್ಕಶಾಸ್ತ್ರದ ಆಧಾರವನ್ನೊಡ್ಡಬಹುದು ಆದರೆ ಸತ್ಯವೆಂಬುದು ಒಂದು ಮಾತ್ರ. ಒಂದೇ ಒಂದು ಉತ್ತರವಿರುವುದು. ಉತ್ತರಗಳೆರಡಾದರೆ ಅವುಗಳಲ್ಲೊಂದು ಮಾತ್ರ ಸರಿಯೆಂದೂ ಇನ್ನೊಂದು ತಪ್ಪೆಂದೂ ಹೇಳದಿರಲಾರೆವು.

ಯೇಸುವು ನ್ಯಾಯಕರ್ತ ಪಿಲಾತನ ಪ್ರಶ್ನೆಗೆ ಉತ್ತರಕೊಡುತ್ತ ಸತ್ಯದ ಉಲ್ಲೇಖವನ್ನು ಮಾಡಿದನು. ಆತನು 'ಸತ್ಯದ ಸಮರ್ಥನೆಗೆ' ಬಂದವನೆಂದು ಆತನೇ ಹೇಳಿರುವನು. ಆದರೆ ಆ ಪಿಲಾತನಿಗೆ ಸತ್ಯದ ಸುಳಿವಾಗಲಿಲ್ಲ. "ಸತ್ಯವೆಂದರೇನು" ಎಂದು ಆತನು ಉದ್ಗರಿಸಿದ್ದನು. ಆತನ ಪ್ರಶ್ನೆಯನ್ನು ಇಂದಿಗೂ ಹಲವಾರು ಜನರು ಕೇಳುತ್ತಿರುವರು. ಸತ್ಯಸಮರ್ಥನೆಗೆ ಬಂದ ಯೇಸುವೇ ಸತ್ಯವನ್ನು ತಿಳಿಯುವಿರುತಿದ್ದರೆ ಆತನು ಅದನ್ನು ಸ್ಪಷ್ಟೋಕ್ತಿಯಲ್ಲಿ, ಅದೂ ಬಹಿರಂಗ ವಿಚಾರಣೆಯಲ್ಲಿ

ಉಲ್ಲೇಖಿಸುತ್ತಿರಲಿಲ್ಲ. ಆದುದರಿಂದ ಸತ್ಯದ ಸಂಪೂರ್ಣ ಪರಿಚಯವು ಆತನಿಗಿರಬೇಕು. ಆತನು ಆ ಚಿರಂತನ ಸತ್ಯದ ಪರಿಚಯುವನ್ನು ಹೇಗೆ ಮಾಡಿಕೊಟ್ಟನು ಎಂಬುದನ್ನು ತಿಳಿಯಬೇಕಾಗಿದೆ. ಅದುವೆ ಈ ಹೊತ್ತಗೆಯ ಗುರಿ.

ಆರೋಗ್ಯವೇ ಭಾಗ್ಯವೆಂದು ನಾವೆಲ್ಲರೂ ಒಪ್ಪುವೆವು. ಆದರೆ ಆರೋಗ್ಯಭಾಗ್ಯದ ಅರಿವಾಗುವುದು ನಾವದನ್ನು ಕಳೆದುಕೊಂಡಾಗ ಮಾತ್ರ. ರೋಗಿಗಳಾದಾಗ, ಪುನಃ ಆ ಭಾಗ್ಯವನ್ನು ಪಡೆಯಲು ನಾವು ಪ್ರಯತ್ನಿಸುವೆವು. ಇತರ ಎಲ್ಲ ಸಾಧನ ಸಂಪತ್ತುಗಳನ್ನೂ ಅದಕ್ಕಾಗಿ ನೀಡಲು ಹಿಂಜರಿಯೆವು. ಆದರೆ ಅದನ್ನು ಪಡೆಯಲು ನಮ್ಮಷ್ಟಕ್ಕೆ ಸಾಧ್ಯವಿಲ್ಲ; ವೈದ್ಯನೊಬ್ಬನ ಸಹಾಯವೂ ಅಗತ್ಯವಿದೆ. ಯಾವುದೊಂದು ರೋಗವು ತನ್ನಲ್ಲಿ ತಾನು ಗುಣವಾಗುವಂತಿಲ್ಲ. ಔಷಧ, ಅನುಪಾನ, ಪಥ್ಯ ಮೊದಲಾದುವುಗಳಲ್ಲಿ ಒಂದನ್ನಾದರೂ ನಾವು ಬಳಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ನಿರೋಗತ್ವವನ್ನು ಅರ್ಥಾತ್ ಆರೋಗ್ಯವನ್ನು ಪಡೆಯಬಹುದು.

ಹೀಗೆಯೇ ಮಾನವನು ಭಗವದ್ದತ್ತ ವಿಶೇಷತ್ವಗಳನ್ನು ತನ್ನ ಪತನದಿಂದಾಗಿ ಕಳೆದುಕೊಂಡನು. ಅವನ್ನು ಪುನಃ ಮಾನವನು ಪಡೆಯುವಂತೆ ಮಾಡಲು ವ್ಯಕ್ತಿಯೊಬ್ಬನು ಬೇಕಾದನು. ಅದನ್ನೇ ನೀಡಲು, ಅದು ಸಮೃದ್ಧಿಯಾಗಿರುವಂತೆ ಮಾಡಲು ಯೇಸುವು ಬಂದನು.

ರಕ್ಷಣೆಯ ಮಾರ್ಗ

ಯೇಸುವು ಸೂಚಿಸಿದ 'ಜೀವ'ವು ನಮ್ಮ ನಿಜವಾದ ಜೀವವಾಗಿದೆ. ಅಸ್ಥಿರವಾದ ಈ ಪ್ರಾಣವು ಇನ್ನೊಂದು ಸ್ಥಿರವಾದ ಪ್ರಾಣವನ್ನು ಬಯಸುತ್ತದೆ. ಅದುವೆ 'ಸತ್ಯದ ಜೀವ'ವಾಗಿದೆ. ಈ ಜೀವನವು ಅಂತ್ಯಗೊಂಡಾಗ ಆ 'ಜೀವ'ದ ಪೂರ್ಣತೆಯು ನಮಗೆ ದೊರಕಬೇಕು. ಆದರೆ ಆ 'ಜೀವ'ಕ್ಕಾಗಿ ಈಗಲೇ, ಈ ಲೋಕದಲ್ಲಿಯೇ ನಾವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ನಮ್ಮ ಐಹಿಕ ಜೀವನವು ನಮ್ಮ ಜನನದಿಂದ ಆರಂಭವಾಗುವು

ದಾದರೂ, ಅದರ ಸಿದ್ಧತೆಗಾಗಿ ನಮ್ಮ ಮಾತೆಯ ಉದರದಲ್ಲಿ ನವಮಾಸಾವಧಿಯ ಸಿದ್ಧತೆಯನ್ನು ನಾವು ಮಾಡಿಕೊಳ್ಳುವೆವು. ಅಸ್ಥಿರವಾದ ಈ ಜೀವನಕ್ಕೆ ಸಿದ್ಧತೆಯು ಬೇಕಾಗಿರುವಾಗ, ಸ್ಥಿರವಾದ ಹಾಗೂ ಸರ್ವೋತ್ಕೃಷ್ಟವಾದ ಆ ನೈಜ ಜೀವನಕ್ಕೆ ಅದೆಷ್ಟೋ ಪರಿಪೂರ್ಣವಾದ ಸಿದ್ಧತೆಯು ಬೇಕಾಗಿದೆ. ಅಲ್ಲದೆ ನಮ್ಮ ನೈಜ ಜೀವನವು ಐಹಿಕ ಜೀವನಾನಂತರದಲ್ಲಿ ಆರಂಭವಾಗುವುದರಿಂದ ನಮ್ಮ ಮರಣದ ಪೂರ್ವಭಾವಿಯಾಗಿಯೇ ಆ ಸಿದ್ಧತೆಯೂ ಪೂರ್ಣವಾಗಬೇಕು.

೨. ಬೈಬಲ್ ಪರಿಚಯ

ಶ್ರೇಷ್ಠತಮ ದಾಖಲೆಗಳು

ಬೈಬಲ್ ಕ್ರೈಸ್ತರ ಪವಿತ್ರ ಗ್ರಂಥ. ಜಗತ್ತಿನ ಅತ್ಯುತ್ತಮ ಗ್ರಂಥ ಪಂಚಕದಲ್ಲಿ ಬೈಬಲ್ ಒಂದಾಗಿದೆ. ಇದು ಎಂದಿಗೂ ಹಳೆಯದಾಗುವಂತಿಲ್ಲ. ನಿತ್ಯನೂತನವಾಗಿಯೇ ಅದು ಜಗತ್ತಿನ ಮಾನ್ಯತೆಯನ್ನು ಪಡೆದಿದೆ. ಲೋಕವು ದಿನದಿಂದ ದಿನಕ್ಕೆ ಹಳೆಯದಾಗುತ್ತಿದ್ದರೂ ಬೈಬಲ್ ಮಾತ್ರ ಹೊಸ ಹೊಸದಾಗಿಯೇ ನಿಲ್ಲುವುದು.

ಅನೇಕ ಕಾದಂಬರಿಗಳನ್ನೂ ಇತರ ಗ್ರಂಥಗಳನ್ನೂ ರಚಿಸಿದ ಪ್ರಸಿದ್ಧ ಇಂಗ್ಲಿಷ್ ಲೇಖಕ ಸರ್ ವಾಲ್ಟರ್ ಸ್ಕಾಟನು ತನ್ನ ಅಂತ್ಯಕಾಲದಲ್ಲಿ ತನ್ನ ಮರಣಶಯ್ಯೆಯ ಸಮೀಪದಲ್ಲಿ ನಿಂತಿದ್ದ ಬಂಧುವಿಗೆ, "ಗ್ರಂಥವನ್ನು ತಾ" ಎಂದನು. ಆದರೆ ಆ ಬಂಧು ಮಾತ್ರ ಸ್ಕಾಟನ ಮಾತುಗಳಲ್ಲಿ ಸ್ಪಷ್ಟತೆಯನ್ನು ಬಯಸುತ್ತ "ಯಾವ ಗ್ರಂಥ ?" ಎಂದು ಪ್ರಶ್ನಿಸಿದನು. ಅನೇಕ ಗ್ರಂಥಗಳನ್ನು ರಚಿಸಿದ ಆತನು ಸೂಚಿಸುವ ಅದಾವ ಗ್ರಂಥವೆಂದು ಆತನು ತಿಳಿಯ ಬಯಸಿದನು. ಆದರೆ ಬಂಧುವಿನ ಮಾತಿನಲ್ಲಿ ಆಶ್ಚರ್ಯವನ್ನು ಸೂಚಿಸುತ್ತ, "ಏನು ? ಯಾವ ಗ್ರಂಥ ? ಇರುವುದು ಒಂದೇ ಗ್ರಂಥವಲ್ಲವೇ" ಎಂದು ಸ್ಕಾಟನು ಬೈಬಲನ್ನು ತರಲು ಹೇಳಿದನು.

ಪ್ರಾಚೀನ ಕಾಲದಲ್ಲಿ ಐಗುಪ್ತದ ಜನರಿಂದ ಆರಂಭಿಸಲ್ಪಟ್ಟ ಪೆಪಿರಸ್ ಮರದ ತೊಗಟೆಯಲ್ಲಿ ಗ್ರಂಥಗಳನ್ನು ಬರೆದಿಡುತ್ತಿದ್ದರು. ಪೆಪಿರಸ್ ಹಾಳೆಗೆ ಗ್ರೀಕ್ ಭಾಷೆಯಲ್ಲಿ Biblos ಎನ್ನುವರು. ಲ್ಯಾಟಿನ್ ಭಾಷೆಯಲ್ಲಿ Biblia ಎಂದು ರೂಪಾಂತರ ಹೊಂದಿತು. Biblia ಎಂದರೆ 'ಗ್ರಂಥಗಳು' ಎಂದರ್ಥ. ಲೋಕದ ಸರ್ವೋತ್ತಮ ಗ್ರಂಥವನ್ನು ಅದನ್ನು ಗೌರವಿಸುತಿದ್ದ ಜನರು ಕೇವಲ ಗ್ರಂಥವೆಂದು ಅದನ್ನು ಕರೆದುದು

ಯುಕ್ತವೇ ಆಗಿದೆ. ಕ್ರೈಸ್ತ ಪವಿತ್ರ ಗ್ರಂಥ ಸಮುದಾಯಕ್ಕೆ Bible ಎಂಬ ಹೆಸರನ್ನು ಜಾನ್ ಕ್ರಿಸೊಸ್ತಮ್ ಎಂಬ ಹೆಸರಿನ ಕ್ರೈಸ್ತ ಧರ್ಮಾಧಿಕಾರಿಯು ಇತ್ತನು. ಈ ಧರ್ಮಾಧಿಕಾರಿಯು ಕ್ರಿ. ಶ. ನಾಲ್ಕನೆಯ ಶತಮಾನದಲ್ಲಿದ್ದು, ಬೈಬಲಿನ ಪಾಠಗಳು, ಅವುಗಳ ಪರಿಶೋಧನೆ ಹಾಗೂ ಅಂಗೀಕಾರಗಳ ಕಾರ್ಯಕ್ಕಾಗಿ ನೇಮಿಸಲ್ಪಟ್ಟಿದ್ದನು. ಆದರೆ ಅನೇಕರು ಬೈಬಲನ್ನು ಕ್ರೈಸ್ತಮತ ಸಂಸ್ಥಾಪನಾಚಾರ್ಯ ಯೇಸುಕ್ರಿಸ್ತನ ಜೀವನ, ಮರಣ ಮತ್ತು ಬೋಧನೆಗಳ ಗ್ರಂಥವೆಂದು ತಿಳಿದು ಕೊಂಡಿರುವರು. ಇದು ಸರಿಯಲ್ಲ. ಯೇಸುಕ್ರಿಸ್ತನ ಜೀವನಾದಿಗಳ ವಿವರಗಳಿರುವುದು ಎಪ್ಪತ್ತು ಮೂರು ಗ್ರಂಥ ಭಾಗಗಳಲ್ಲಿ ಕೇವಲ ನಾಲ್ಕರಲ್ಲಿ ಮಾತ್ರ. ಆದುದರಿಂದ ವಿವಿಧ ಭಾಗಗಳ ಸೂಕ್ಷ್ಮ ಪರಿಚಯವನ್ನಿಲ್ಲಿ ಕೊಟ್ಟರೆ ಅಪ್ರಸ್ತುತವಾಗದು.

ಬೈಬಲ್ ಮಹಾಗ್ರಂಥವನ್ನು ಹಳೆಯ ಒಡಂಬಡಿಕೆ (Old Testament) ಮತ್ತು ಹೊಸ ಒಡಂಬಡಿಕೆ (New Testament) ಎಂಬ ಎರಡು ಮುಖ್ಯ ಭಾಗಗಳಾಗಿ ವಿಭಜಿಸಿರುವರು. ಮೊದಲಭಾಗದಲ್ಲಿ ನಾಲ್ವತ್ತಾರು ಗ್ರಂಥ ವಿಭಾಗಗಳಿದ್ದು ಪ್ರಪಂಚ ಸೃಷ್ಟಿಯಿಂದ ಕ್ರಿಸ್ತ ಜನನದ ವರೆಗಿನ ವಿಷಯುಗಳನ್ನೊಳಗೊಂಡಿದೆ. ಉತ್ತರ ಭಾಗವು ಇಪ್ಪತ್ತೇಳು ಗ್ರಂಥ ವಿಭಾಗಗಳಿದ್ದು ಯೇಸುಕ್ರಿಸ್ತನ ಜನನ, ಬೋಧನೆ ಮರಣಗಳನ್ನೂ ಆತನ ಶಿಷ್ಯರ ಮುಖ್ಯ ಕಾರ್ಯಗಳನ್ನೂ ಕೆಲವು ಪತ್ರಗಳನ್ನೂ ಒಳಗೊಂಡಿರುವುದು. ಇಷ್ಟು ದೊಡ್ಡ ಗ್ರಂಥ ಸಂಕಲನವು ಒಬ್ಬ ಕವಿಯಿಂದ ಅಥವಾ ಲೇಖಕನಿಂದ ಬರೆಯಲ್ಪಟ್ಟಿತೆಂದಾಗಲಿ, ಏಕಕಾಲದಲ್ಲಿಯೇ ರಚಿತವಾಯಿತೆಂದಾಗಲಿ ತಿಳಿಯಬಾರದು. ಬೈಬಲಿನ ಹಳೆಯ ಒಡಂಬಡಿಕೆಯ ಕೆಲವು ಭಾಗಗಳು ಕ್ರಿಸ್ತನ ಜನನದ ಹದಿನಾಲ್ಕು ಶತಮಾನಗಳ ಪೂರ್ವದಲ್ಲಿಯೇ ಬರೆಯಲ್ಪಟ್ಟುವು. ಅವುಗಳಲ್ಲಿ ಕೆಲವು ಭಾಗಗಳನ್ನು ವಿದ್ವಾಂಸರು ಬರೆದಿರುವರಾದರೂ ಸಾಮಾನ್ಯರು ಬರೆದ ಭಾಗಗಳೂ ಇವೆ. ವಿಷಯದಲ್ಲಿ ಮಾತ್ರವಲ್ಲ ನಿರೂಪಣಾ ರೀತಿಯಲ್ಲಿಯೂ ವೈವಿಧ್ಯಗಳಿರುವ ಈ ಗ್ರಂಥದಲ್ಲಿ ಸಾಮಾಜಿಕ ಉನ್ನತಿ-ಅವನತಿಗಳು, ಇತಿಹಾಸ, ಧರ್ಮಶಾಸ್ತ್ರಗಳು, ಭವಿಷ್ಯದ್ವಾಣಿಗಳು, ಸ್ಥಳೀಯ ಘಟನಾವಳಿ

ಮೂರು ವಿಷಯಗಳು

ಸೃಷ್ಟಿಯ ಮೂಲಪುರುಷನನ್ನು ನಾವು ಸರ್ವೇಶ್ವರನೆಂದೂ ಭಗವಂತನೆಂದೂ ದೇವರೆಂದೂ ಬಹುಬಗೆಯ ಹೆಸರುಗಳಿಂದ ಕರೆಯುವೆವು. ಆತನು ಸರ್ವಶಕ್ತನಾಗಿರುವುದರಿಂದ ಆತನ ಕ್ರಿಯಾತ್ಮಕ ಶಕ್ತಿಯನ್ನು ನಾವು ಯಾವತ್ತೂ ವಸ್ತುವಿನೊಡನೆ ಹೋಲಿಸಲರಿಯೆವು. ಆತನ ಸೃಷ್ಟಿಯ ಫಲವಾಗಿ ಅಸ್ತಿತ್ವದಲ್ಲಿರದುದು ಅಸ್ತಿತ್ವಕ್ಕೆ ಬರುವುದು ; ಶೂನ್ಯತೆಯಿಂದ ಭೌತಿಕರೂಪಕ್ಕೆ ಬರುವುದು. ಇರುವ ವಸ್ತು ವಿಷಯಗಳಿಂದ ನವ ವಸ್ತು ವಿಷಯಗಳನ್ನು ಆತನು ನೀಡಬಹುದು ; ನಿರ್ಜೀವ ವಸ್ತುವು ಸಜೀವಿಯಾಗಬಲ್ಲುದು ; ಆತನು ತನಗೆ ಬೇಕಾದ ವಿಷಯವನ್ನು ಕ್ರಮಶಃ ಅಸ್ತಿತ್ವಕ್ಕೆ ಬರುವಂತೆ ಮಾಡಬಹುದು ; ಅಥವಾ ಸಾಮಾನ್ಯ ರೂಪದಿಂದ ವಿಶೇಷ ರೂಪಕ್ಕೆ ಬರುವಂತೆ ನಿಯಾಮಿಸಬಹುದು.

ಹೀಗೆ ಆತನ ಮಹಿಮೆಯ ಅಗಾಧತೆಯನ್ನು ತರ್ಕವೂ ತತ್ವವೂ ಸಮರ್ಥಿಸುತ್ತವೆ. ಆತನನ್ನು ಪುರುಷಾತ್ಮಕವಾಗಿ ನಾವು ಕರೆಯುವೆವಾದರೂ ಆತನಿಗೆ ದೇಹವಿಲ್ಲದುದರಿಂದ ದೈಹಿಕ ವಿಷಯಗಳಾದ ಲಿಂಗ, ಎಡಬಲಗಳು ಆತನಲ್ಲಿಲ್ಲ. ಮಾತ್ರವಲ್ಲ ಆತನೊಬ್ಬನು ಮಾತ್ರ ಸಕಲ ಸೃಷ್ಟಿಗೆ ಸಂಪೂರ್ಣ ಕಾರಣಭೂತನಾದ ಸರ್ವೇಶ್ವರನಾಗಿರುವುದರಿಂದ ಅದು ಆತನನ್ನು ಪರಿಪೂರ್ಣವಾಗಿ ಅವಲಂಬಿಸಿಕೊಂಡಿರಬೇಕಾಗಿದೆ. ಆದರೂ ಅದು ಭಗವಂತನಲ್ಲ–ಆತನಿಂದ ಪ್ರತ್ಯೇಕತೆಯನ್ನು ಪಡೆದಿದೆ. ಸ್ವರವು ವಾಚಕನನ್ನು, ಛಾಯೆಯು ಅದನ್ನುಂಟುಮಾಡಿದ ಭೌತಿಕ ವಸ್ತುವನ್ನು, ಮಗುವು ತನ್ನ ಮಾತೆಯನ್ನು ಹೊಂದಿಕೊಂಡಿರುವುದಕ್ಕಿಂತಲೂ ಅಧಿಕವಾಗಿ ಪ್ರಕೃತಿಯು ಅರ್ಥಾತ್ ಸೃಷ್ಟಿಯು ಸೃಷ್ಟಿಕರ್ತನನ್ನು ಹೊಂದಿಕೊಂಡಿದೆ. ಹೀಗೆಯೇ ಮನುಷ್ಯನೂ ಕೇವಲ ಸೃಷ್ಟಿ ಮಾತ್ರನಾಗಿರುವುದರಿಂದ ಭಗವಂತನನ್ನು ಅವಲಂಬಿಸಿಕೊಂಡಿರಬೇಕಾಗಿದೆ.

ಈ ಒಂದು ವಿಷಯವನ್ನು ಸರಿಯಾಗಿ ಇತ್ಯರ್ಥಿಸಿಕೊಂಡಲ್ಲಿ ಮೂರು ವಿಷಯಗಳೇಳುತ್ತವೆ–ದೇವರು, ನಾವು ಮತ್ತು ಆ ದೇವರಿಗೂ ನಮಗೂ ಇರುವ ಸಂಬಂಧ ಎಂಬಿವು. ಈ ಮೂರನ್ನು ಕುರಿತು ಸಾಕಷ್ಟು ಪರ್ಯಾ

ಲೋಚಿಸಿದರೆ ನಮ್ಮ ಸರಿಯಾದ ಮಾರ್ಗದ ಅರಿವಾಗುವುದು. ಸತ್ಯದೆಡೆಗೆ ನಾವು ಗಮಿಸುವೆವು.

ಏಸುಕ್ರಿಸ್ತನು ಆ ಮೂರು ವಿಷಯಗಳನ್ನು ಕುರಿತು ಸರಿಯಾದ ಮಾರ್ಗದರ್ಶನವನ್ನು ಮಾಡಿರುವನು. ಯೇಸುಕ್ರಿಸ್ತನು ಕಾಲ್ಪನಿಕ ಅಥವಾ ಪೌರಾಣಿಕ ವ್ಯಕ್ತಿಯೆ ? ಅಥವಾ ಇತಿಹಾಸವು ಆತನ ಬೋಧನೆಯನ್ನು ಸಮರ್ಥಿಸುತ್ತದೆಯೆ ಮೊದಲಾದ ಕೆಲವು ವಿಷಯಗಳನ್ನು ತಿಳಿಯ ಬೇಕಾಗುತ್ತದೆ. ಹಿಂದೆ ತಿಳಿಸಿದಂತೆ, ಯೇಸುಕ್ರಿಸ್ತನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ವ್ಯಕ್ತಿ. ಅವನು ಲೋಕಕ್ಕೆ ಬಂದ ಭಗವದ್ವ್ಯಕ್ತಿಯೆಂದೂ ಮಾನವ ಕುಲದ ರಕ್ಷಕನೆಂದೂ ಆತನೂ ಕ್ರೈಸ್ತಮತವೂ ಬೋಧಿಸುವುವು. ಆತನ ಸಂಬಂಧವಾಗಿ ಬರೆದಿಟ್ಟ ಲಿಖಿತಗಳಿವೆ. ಆತನೊಡನೆ ಜೀವಿಸಿದ್ದ ಆತನ ಸಹಚರರೂ ಬರೆದಿರು ವರು. ಆತನ ಆಗಮನವನ್ನು ಕುರಿತು ಅದೆಷ್ಟೋ ಶತಮಾನಗಳ ಮೊದಲೇ ನೇರವಾಗಿ ಅಥವಾ ಪರೋಕ್ಷವಾಗಿ ಉಚ್ಚರಿಸಿದ ಭವಿಷ್ಯದ್ವಾಣಿಗಳ ದಾಖಲೆಗಳಿವೆ. ಈ ದಾಖಲೆಗಳೆಲ್ಲವನ್ನು ಬೈಬಲ್ ಎಂಬ ಹೆಸರಿನಿಂದ ಕರೆಯುವರು.

೨. ಬೈಬಲ್ ಪರಿಚಯ

ಶ್ರೇಷ್ಠತಮ ದಾಖಲೆಗಳು

ಬೈಬಲ್ ಕ್ರೈಸ್ತರ ಪವಿತ್ರ ಗ್ರಂಥ. ಜಗತ್ತಿನ ಅತ್ಯುತ್ತಮ ಗ್ರಂಥ ಪಂಚಕದಲ್ಲಿ ಬೈಬಲ್ ಒಂದಾಗಿದೆ. ಇದು ಎಂದಿಗೂ ಹಳೆಯ ದಾಗುವಂತಿಲ್ಲ. ನಿತ್ಯನೂತನವಾಗಿಯೇ ಇದ್ದು ಜಗತ್ತಿನ ಮಾನ್ಯತೆಯನ್ನು ಪಡೆದಿದೆ. ಲೋಕವು ದಿನದಿಂದ ದಿನಕ್ಕೆ ಹಳೆಯದಾಗುತ್ತಿದ್ದರೂ ಬೈಬಲ್ ಮಾತ್ರ ಹೊಸ ಹೊಸದಾಗಿಯೇ ನಿಲ್ಲುವುದು.

ಅನೇಕ ಕಾದಂಬರಿಗಳನ್ನೂ ಇತರ ಗ್ರಂಥಗಳನ್ನೂ ರಚಿಸಿದ ಪ್ರಸಿದ್ಧ ಇಂಗ್ಲಿಷ್ ಲೇಖಕ ಸರ್ ವಾಲ್ಟರ್ ಸ್ಕಾಟನು ತನ್ನ ಅಂತ್ಯಕಾಲದಲ್ಲಿ ತನ್ನ ಮರಣಶಯ್ಯೆಯ ಸಮೀಪದಲ್ಲಿ ನಿಂತಿದ್ದ ಬಂಧುವಿಗೆ, "ಗ್ರಂಥವನ್ನು ತಾ" ಎಂದನು. ಆದರೆ ಆ ಬಂಧುವು ಮಾತ್ರ ಸ್ಕಾಟನ ಮಾತುಗಳಲ್ಲಿ ಸ್ಪಷ್ಟತೆಯನ್ನು ಬಯಸುತ್ತ "ಯಾವ ಗ್ರಂಥ ?" ಎಂದು ಪ್ರಶ್ನಿಸಿದನು. ಅನೇಕ ಗ್ರಂಥಗಳನ್ನು ರಚಿಸಿದ ಆತನು ಸೂಚಿಸುವುದು ಯಾವ ಗ್ರಂಥವೆಂದು ಆತನು ತಿಳಿಯ ಬಯಸಿದನು. ಆದರೆ ಬಂಧುವಿನ ಮಾತಿನಲ್ಲಿ ಆಶ್ಚರ್ಯವನ್ನು ಸೂಚಿಸುತ್ತ, "ಏನು ? ಯಾವ ಗ್ರಂಥ ? ಇರುವುದು ಒಂದೇ ಗ್ರಂಥವಲ್ಲವೇ" ಎಂದು ಸ್ಕಾಟನು ಬೈಬಲನ್ನು ತರಲು ಹೇಳಿದನು.

ಪ್ರಾಚೀನ ಕಾಲದಲ್ಲಿ ಐಗುಪ್ತದ ಜನರಿಂದ ಆರಂಭಿಸಲ್ಪಟ್ಟ ಪೆಪಿರಸ್ ಮರದ ತೊಗಟೆಯಲ್ಲಿ ಗ್ರಂಥಗಳನ್ನು ಬರೆದಿಡುತ್ತಿದ್ದರು. ಪೆಪಿರಸ್ ಹಾಳೆಗೆ ಗ್ರೀಕ್ ಭಾಷೆಯಲ್ಲಿ Biblos ಎನ್ನುವರು. ಲ್ಯಾಟಿನ್ ಭಾಷೆಯಲ್ಲಿ Biblia ಎಂದು ರೂಪಾಂತರ ಹೊಂದಿತು. Biblia ಎಂದರೆ 'ಗ್ರಂಥಗಳು' ಎಂದರ್ಥ. ಲೋಕದ ಸರ್ವೋತ್ತಮ ಗ್ರಂಥವನ್ನು ಅದನ್ನು ಗೌರವಿಸುತಿದ್ದ ಜನರು ಕೇವಲ ಗ್ರಂಥವೆಂದು ಕರೆದುದು ಯುಕ್ತವೇ ಆಗಿದೆ. ಕ್ರೈಸ್ತ ಪವಿತ್ರ ಗ್ರಂಥ ಸಮುದಾಯಕ್ಕೆ Bible

ಎಂಬ ಹೆಸರನ್ನು ಜಾನ್ ಕ್ರಿಸೊಸ್ತಮ್ ಎಂಬ ಹೆಸರಿನ ಕ್ರೈಸ್ತ ಧರ್ಮಾಧಿಕಾರಿಯು ಇತ್ತನು. ಈ ಧರ್ಮಾಧಿಕಾರಿಯು ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿದ್ದು, ಬೈಬಲಿನ ಪಾಠಗಳು, ಅವುಗಳ ಪರಿಶೋಧನೆ ಹಾಗೂ ಅಂಗೀಕಾರಗಳ ಕಾರ್ಯಕ್ಕಾಗಿ ನೇಮಿಸಲ್ಪಟ್ಟಿದ್ದನು.

ಆದರೆ ಅನೇಕರು ಬೈಬಲನ್ನು ಕ್ರೈಸ್ತಮತ ಸಂಸ್ಥಾಪನಾಚಾರ್ಯ ಯೇಸುಕ್ರಿಸ್ತನ ಜೀವನ, ಮರಣ ಮತ್ತು ಬೋಧನೆಗಳ ಗ್ರಂಥವೆಂದು ತಿಳಿದುಕೊಂಡಿರುವರು. ಇದು ಸರಿಯಲ್ಲ. ಯೇಸುಕ್ರಿಸ್ತನ ಜೀವನಾದಿಗಳ ವಿವರಗಳಿರುವುದು ಎಪ್ಪತ್ತು ಮೂರು ಗ್ರಂಥ ಭಾಗಗಳಲ್ಲಿ ಕೇವಲ ನಾಲ್ಕರಲ್ಲಿ ಮಾತ್ರ. ಆದುದರಿಂದ ವಿವಿಧ ಗ್ರಂಥ ಭಾಗಗಳ ಸೂಕ್ಷ್ಮಪರಿಚಯವನ್ನಿಲ್ಲಿ ಕೊಟ್ಟರೆ ಅಪ್ರಸ್ತುತವಾಗದು.

ಬೈಬಲ್ ಮಹಾಗ್ರಂಥವನ್ನು ಹಳೆಯ ಒಡಂಬಡಿಕೆ (Old Testament) ಮತ್ತು ಹೊಸ ಒಡಂಬಡಿಕೆ (New Testament) ಎಂಬ ಎರಡು ಮುಖ್ಯ ಭಾಗಗಳಾಗಿ ವಿಭಜಿಸಿರುವರು. ಮೊದಲಭಾಗದಲ್ಲಿ ನಾಲ್ವತ್ತಾರು ಗ್ರಂಥ ವಿಭಾಗಗಳಿದ್ದು ಪ್ರಪಂಚ ಸೃಷ್ಟಿಯಿಂದ ಕ್ರಿಸ್ತ ಜನನದ ವರೆಗಿನ ವಿಷಯಗಳನ್ನೊಳಗೊಂಡಿದೆ. ಉತ್ತರ ಭಾಗವು ಇಪ್ಪತ್ತೇಳು ಗ್ರಂಥ ವಿಭಾಗಗಳಿದ್ದು ಯೇಸುಕ್ರಿಸ್ತನ ಜನನ, ಬೋಧನೆ ಮರಣಗಳನ್ನೂ ಆತನ ಶಿಷ್ಯರ ಮುಖ್ಯ ಕಾರ್ಯಗಳನ್ನೂ ಕೆಲವು ಪತ್ರಗಳನ್ನೂ ಒಳಗೊಂಡಿರುವುದು. ಇಷ್ಟು ದೊಡ್ಡ ಗ್ರಂಥ ಸಂಕಲನವು ಏಕಮೇವ ಕವಿಯಿಂದ ಅಥವಾ ಲೇಖಕನಿಂದ ಬರೆಯಲ್ಪಟ್ಟಿತೆಂದಾಗಲಿ, ಏಕಕಾಲದಲ್ಲಿಯೆ ರಚಿತವಾಯಿತೆಂದಾಗಲಿ ತಿಳಿಯಬಾರದು. ಬೈಬಲಿನ ಹಳೆಯ ಒಡಂಬಡಿಕೆಯ ಕೆಲವು ಭಾಗಗಳು ಕ್ರಿಸ್ತನ ಜನನದ ಹದಿನಾಲ್ಕು ಶತಮಾನಗಳ ಪೂರ್ವದಲ್ಲಿಯೇ ಬರೆಯಲ್ಪಟ್ಟುವು. ಅವುಗಳಲ್ಲಿ ಕೆಲವು ಭಾಗಗಳನ್ನು ವಿದ್ವಜ್ಜನರು ಬರೆದಿರುವರಾದರೂ ಸಾಮಾನ್ಯರು ಬರೆದ ಭಾಗಗಳೂ ಇವೆ. ವಿಷಯದಲ್ಲಿ ಮಾತ್ರವಲ್ಲ ನಿರೂಪಣಾ ರೀತಿಯಲ್ಲಿಯೂ ವೈವಿಧ್ಯಗಳಿರುವ ಈ ಗ್ರಂಥದಲ್ಲಿ ಸಾಮಾಜಿಕ ಉನ್ನತಿ - ಅವನತಿಗಳು; ಇತಿಹಾಸ, ಧರ್ಮಶಾಸ್ತ್ರಗಳು, ಭವಿಷ್ಯದ್ವಾಣಿಗಳು, ಸ್ಥಳೀಯ ಘಟನಾವಳಿಗಳು ಸೇರಿವೆ. ಸಾಹಿತ್ಯ ದೃಷ್ಟಿಯಲ್ಲಿ ನೋಡಿದರೆ ಗದ್ಯ, ಪದ್ಯ, ಗೀತೆಗಳು,

ನಾಟಕ, ಜೀವನ ಚರಿತ್ರೆಗಳು, ಉಪದೇಶಗಳು, ಕೌಟುಂಬಿಕ ಸನ್ನಿವೇಶಗಳು ಮುಂತಾದುವು ಸೇರಿವೆ.

ಹಳೆಯ ಒಡಂಬಡಿಕೆ

ಯೆಹೂದ್ಯ ಜನಾಂಗದವರು ಇಂದು ಲೋಕದ ಸಕಲ ರಾಷ್ಟ್ರಗಳಲ್ಲಿಯೂ ವಿಸ್ತರಿಸಿರುವರು. ಅವರಿಗೆಂದು ಕಟ್ಟಿದ ಸಣ್ಣದೊಂದು ರಾಷ್ಟ್ರ-ಇಸ್ರೇಲ್-ಇದೆಯಾದರೂ ಲೋಕದಲ್ಲಿ ಅವರು ಆರ್ಥಿಕ ದೃಷ್ಟಿಯಲ್ಲಿ ಶ್ರೀಮಂತರೆಂದು ಹೆಸರು ಪಡೆದರೂ ಅವರು ಜನಸಂಖ್ಯೆಯಲ್ಲಿ ಇತರ ಮತೀಯರಿಗಿಂತ ಎಷ್ಟೋ ಕಡಮೆ ಇರುವರು. ಬಹು ಪ್ರಾಚೀನಕಾಲದಿಂದಲೂ ಅವರು ತಮ್ಮ ಧರ್ಮಾಭಿಮಾನಕ್ಕೆ ಹೆಸರಾದವರು. ಇಂದಿಗೂ ಧರ್ಮ ನಿಶಿದ್ಧ ಕಾರ್ಯವನ್ನು ಅವರು ಮಾಡಲರಿಯರು. ಯೆಹೂದ್ಯ ಜನಾಂಗದಲ್ಲೊಬ್ಬನಾಗಿ ಯೇಸುವು ಹುಟ್ಟಿದನು.

ಯೆಹೂದ್ಯರು ಏಕದೇವನ ಭಕ್ತಿಗೆ ಮೀಸಲಾದವರು. ಅವರ ದಶ ಭಗನನ್ನಿಯಮುಗಳು ಅವರ ಧರ್ಮಶಾಸ್ತ್ರಗಳ ಸಾರವಾಗಿವೆ. ಅನೇಕ ಯೆಹೂದ್ಯ ಪ್ರಮುಖರು ಏಕದೇವರ ಉಪಾಸನೆಯಲ್ಲಿ ಜಗುಳಿದರೂ ಅವರಲ್ಲಿ ಅನೇಕ ಧೀಮಂತಿಗಳು ಭಗವತ್ ಪ್ರೇರಣೆಯಿಂದ ಜನತೆಯನ್ನು ಸರಿದಾರಿಗೆ ತಂದಿದ್ದರು. ಈ ಯೆಹೂದ್ಯರ ಹಿರಿಯರು ಮಾಡಿದ ಸಂಚಾರ ಅಥವಾ ಇನ್ನಿತರ ಸಾಧನೆಗಳನ್ನು ಅವು ನಡೆದ ಕೆಲಕಾಲದ ಬಳಿಕ ಮುಂದಿನವರ ಉಪಯೋಗಕ್ಕಾಗಿ ಬರೆದಿಟ್ಟರು. ಇನ್ನು ಕ್ರಮಾಗತವಾಗಿ ನಡೆದ ವಿಷಯಗಳನ್ನು ಕೆಲವು ಪ್ರಾರ್ಥನಾಮಂದಿರಗಳಲ್ಲಿ ಇಂದಿಗೂ ಬರೆದಿಡುವ ಕ್ರಮವನ್ನು ಹಿಂದೆಯೂ ಕೆಲವೆಡೆಗಳಲ್ಲಿ ಅನುಸರಿಸಿದುದರ ಫಲವಾಗಿ ಹಿಂದಿನ ಕೆಲವು ವಿಷಯಗಳ ವಿವರಗಳನ್ನು ನಾವು ಇಂದಿಗೂ ತಿಳಿಯಬಹುದು. ಇಂತಹ ಒಂದು ಸಂಕಲನವು ಹಳೆಯ ಒಡಂಬಡಿಕೆಯಾಗಿದೆ. ಇದು ಯೆಹೂದ್ಯರಿಗೂ ಮಾನ್ಯವಾಗಿನೆಯಾದರೂ ಅವರು ಅದನ್ನು ಬೈಬಲ್ ಎಂದಾಗಲಿ, ಹಳೆಯ ಒಡಂಬಡಿಕೆಯೆಂದಾಗಲಿ ಕರೆಯಲೊಪ್ಪರು.

ಹಳೆಯ ಒಡಂಬಡಿಕೆಯು ಭಗವಂತನ ಪರಿಚಯವನ್ನು ಕೊಡುವುದು. ಯೆಹೊವಾನೇ ಭಗವಂತನು. ಆತನೇ ಸೃಷ್ಟಿ ನಿಯಾಮಕನು. ಸಜ್ಜನರಿಗೆ ಸುಖವನ್ನೂ ದುರ್ಜನರಿಗೆ ನರಕವನ್ನೂ ಮರಣಾನಂತರದಲ್ಲಿ ನೀಡುವನು. ಯೆಹೂದ್ಯರು ಆತನ ಪ್ರೀತಿಯ ಜನಾಂಗವು. ಅವರು ನ್ಯಾಯಮಾರ್ಗವನ್ನು ಅತಿಕ್ರಮಿಸಿದಾಗ, ಅವರಿಗೆ ಬಹುವಿಧದ ಕಷ್ಟಗಳನ್ನಿತ್ತು ಸರಿದಾರಿಗೆ ತರುವ ಕರುಣಾಮಯನು; ಮಾತ್ರವಲ್ಲ ಅವರ ಉದ್ಧಾರಕ್ಕಾಗಿ ಕ್ರಿಸ್ತನನ್ನು ಕಳುಹಿಸಿ, ಅವನ ಭಕ್ತಿ ಸಾಮ್ರಾಜ್ಯವನ್ನು ಜಗತ್ತಿನಲ್ಲಿ ವಿಸ್ತರಿಸುವವನು. ಹೀಗೆ ಹಳೆಯ ಒಡಂಬಡಿಕೆಯಲ್ಲಿ ಮುಂದೆ ಬರಲಿದ್ದ ಕ್ರಿಸ್ತನ ಸಂಬಂಧದಲ್ಲಿ ಹಲವು ಭವಿಷ್ಯದ್ವಾಕ್ಯಗಳಿವೆ. ಅವುಗಳಲ್ಲಿ ಕೆಲವನ್ನು ಮುಂದೆ ನೋಡಲಿರುವೆವು.

ಹಳೆಯ ಒಡಂಬಡಿಕೆಯ ಗ್ರಂಥವಿಭಾಗಗಳನ್ನು ಮೂರು ವಿಧಗಳಾಗಿ ವಿಭಾಗಿಸಬಹುದು. ೧. ಐತಿಹಾಸಿಕ ಗ್ರಂಥಗಳು ೨. ಕವಿತ್ವದ ಗ್ರಂಥಗಳು. ೩. ಕಾಲಜ್ಞಾನದ ಗ್ರಂಥಗಳು.

ಐತಿಹಾಸಿಕ ಗ್ರಂಥಗಳು

ಉತ್ಪತ್ತಿ (Genesis) ಇದರಲ್ಲಿ ಲೋಕಸೃಷ್ಟಿ, ಆದಿ ದಂಪತಿಗಳು, ಅವರ ಪತನ, ಹಿಂದಿನ ಕುಲಪಿತರು, ಮೊದಲಾದ ವಿಷಯಗಳನ್ನು ತಿಳಿಸುವ ಗ್ರಂಥ. ಈ ಗ್ರಂಥದಲ್ಲಿ ಯೆಹೂದ್ಯರಿಗೆ ಇಸ್ರೆಯೇಲ್ ಎಂಬ ಹೆಸರು ಬಂದ ವಿಚಾರವನ್ನು ತಿಳಿಸಿದೆ. ಕುಲಪಿತರು (Patriarchs) ಪಶುಪಾಲಕರಾಗಿದ್ದರೆಂದು ತಿಳಿಯಬಹುದು. ಈ ಗ್ರಂಥವನ್ನು ಮೋಸೆಯು ಬರೆದಿರಬೇಕೆಂದು ಹೇಳುವರು.

ನಿರ್ಗಮನ (Exodus) ಪಶುಪಾಲಕ ಪಿತೃಗಳು ಐಗುಪ್ತದಲ್ಲಿದ್ದರು. ಅಲ್ಲಿಯ ಅರಸು ಮನೆತನವು ಪಲ್ಲಟಗೊಂಡಾಗ ಇಸ್ರೇಲರಿಗೆ ತೊಂದರೆ ಬಂತು. ಫಿರೋ ಅರಸರು ಅವರನ್ನು ದಾಸರಂತೆ ನಡೆಸತೊಡಗಿದರು. ಮೋಸೆಯು ಇಸ್ರೇಲರನ್ನು ದಾಸ್ಯದಿಂದ ವಿಮೋಚನೆಗೊಳಿಸಿ, ವಾಗ್ದತ್ತ ಭೂಮಿಯಾದ ಪೆಲೆಸ್ತೀನಕ್ಕೆ ನಡೆಸತೊಡಗಿದನು.

ವಿಧಿ ವಿಧಾನಗಳು (Levitiens) ಇದರಲ್ಲಿ ಪುರೋಹಿತರ ಜೀವನ ಕ್ರಮ, ಪೌರೋಹಿತ್ಯದ ನಿಯಮಗಳು, ವಿವಿಧ ಕ್ರಿಯೆಗಳ ವಿವರಗಳು, ಬಹುವಿಧ ಶುದ್ಧೀಕರಣದ ವ್ಯವಸ್ಥೆ, ಪರ್ವಕಾಲಗಳು, ಆಹಾರದಲ್ಲಿ ಶುದ್ಧಾ ಶುದ್ಧ ವಿಚಾರ ಮೊದಲಾದುವುಗಳು ಲಿಖಿಸಲ್ಪಟ್ಟವೆ.

ಅಂಕೆ ಸಂಖ್ಯೆಗಳು (Numbers)-ಇದರಲ್ಲಿ ಇಸ್ರೇಲ ಜನಾಂಗದ ದ್ವಾದಶ ಕುಲಗಳ ಗಣನೆ, ಪುರೋಹಿತಕುಲದ ಆಯ್ಕೆ, ಅಧಿ ನಾಯಕರ ಕಾಣಿಕೆಯ ಕ್ರಮ, ಮರುಭೂಮಿಯ ಸಂಚಾರಾವಧಿಯ ಮುಖ್ಯ ಘಟನೆ ಗಳು ಹೇಳಲ್ಪಟ್ಟವೆ.

ದ್ವಿತೀಯ ಗ್ರಂಥ (Denteronomy) ಇದರಲ್ಲಿ ಕಾನಾನ್ ಪ್ರದೇಶದ ವಿವರ, ಭಗವನ್ನಿಯಮಗಳ ಲಿಖಿತ ರೂಪವನ್ನು ಮೋಸೆಯು ಇಸ್ರೇಲರಿಗಿತ್ತುದು, ಭಗವದೈಕ ವ್ಯಕ್ತಿಯ ಭಕ್ತಿಯ ವಿರೋಧ, ಮೂರ್ತಿ ಭಜಕರ ದಂಡನೆ, ಮಹಾಪರ್ವತ್ರಯಗಳು, ವಿವಿಧ ನಿಯಮಗಳು ಮೊದ ಲಾದುವುಗಳಿವೆ.

ಈ ಐದು ಗ್ರಂಥವಿಭಾಗಗಳಿಗೆ ಗ್ರಂಥ ಪಂಚಕವೆಂಬ ಹೆಸರಿದೆ.

ಯೋಶುವಾ (Joshua) ಮೋಸೆಯು ಭಗವಂತನಿಂದ ವಾಗ್ದಾನ ಮಾಡಲ್ಪಟ್ಟ 'ಪವಿತ್ರಭೂಮಿ' ಯೆಂದು ಕರೆಯಲ್ಪಡುವ ಕಾನಾನ್ ಪ್ರದೇಶವನ್ನು ಸೇರುವ ಮುನ್ನವೇ ಮರಣವನ್ನು ಪಡೆದುದರಿಂದ, ಯುದ್ಧ ವೀರನಾದ ಯೋಶುವಾನೇ ನಾಯಕತ್ವವನ್ನು ವಹಿಸಿ, ಕಾನಾನ್ ಪ್ರದೇಶ ವನ್ನು ಸ್ವಾಧೀನಮಾಡಿ, ವಿವಿಧ ಕುಲಗಳಿಗೆ ವಿಭಾಗಿಸಿಕೊಟ್ಟ ಕ್ರಮವನ್ನು ಈ ಗ್ರಂಥದಲ್ಲಿ ಹೇಳಿದೆ.

ನೀತಿ ಕರ್ತೃಗಳು (Judges) ಇಸ್ರೇಲ್ ಜನಾಂಗವು ನೀತಿ ಕರ್ತೃಗಳು ಎಂಬ ಅನ್ವರ್ಥನಾಮವನ್ನು ಧರಿಸಿದ ನಾಯಕರ ಮೂಲಕ ವಿವಿಧ ವೈರಿಗಳನ್ನು ಎದುರುಗೊಂಡ ರೀತಿ, ಹಲವು ಜಯಾಪಜಯಗಳು ಹೇಳಲ್ಪಟ್ಟವೆ.

ರೂತ್ (Ruth) ಇದೊಂದು ಸಾಮಾಜಿಕ ಉಪಾಖ್ಯಾನವೆನ್ನ ಬಹುದು. ವಿಸ್ತಾರದಲ್ಲಿ ಬಹು ಸಣ್ಣದು.

ರಾಜರ ಗ್ರಂಥಗಳು (Kings)-ಇವು ಸಂಖ್ಯೆಯಲ್ಲಿ ನಾಲ್ಕು.

ಕೊನೆಯ ನೀತಿಕರ್ತೃ ಸಾಮುವೆಲನ ಕಾರ್ಯಗಳಿಂದಾರಂಭವಾಗಿ ಕ್ರಿಸ್ತ ಪೂರ್ವ ೫೮೬ ರ ವರೆಗೆ ರಾಜತ್ವದ ಜನನ, ಅಭಿವೃದ್ಧಿ, ಮತ್ತು ಅವನತಿಯನ್ನು ತಿಳಿಸುವುವು. ಯೆಹೂದ್ಯರ ಪ್ರಸಿದ್ಧ ರಾಜರು, ದಾವೀದ ಸಾಲಮೋನರ ವೈಭವಪೂರ್ಣವಾದ ಆಳ್ವಿಕೆಯನ್ನೂ ಯೆರೂಸಲೇಮಿನಲ್ಲಿ ನಿರ್ಮಿಸಿದ ಮಹಾದೇವಾಲಯದ ವಿವರಗಳನ್ನೂ ಈ ಗ್ರಂಥ ಚತುಷ್ಕವು ತಿಳಿಸುತ್ತದೆ.

ಕಾಲಕ್ರಮದ ಘಟನೆಗಳು (Chronicles) ಇವು ಎರಡು. ಕಾಲಕ್ರಮದಲ್ಲಿ ನಡೆದುಬಂದ ಘಟನೆಗಳನ್ನು ಸಿಂಹಾವಲೋಕನ ಕ್ರಮದಲ್ಲಿ ತಿಳಿಸುವುವು. ಹೀಗಾಗಿ ಇತರ ಐತಿಹಾಸಿಕ ವಿಭಾಗಗಳಲ್ಲಿ ಹೇಳಿದ ವಿಷಯಗಳು ಇಲ್ಲಿ ಹೇಳಲಾಗಿವೆ.

ಎಸ್ಡ್ರಾಸ್ ಮತ್ತು ನೆಹೇಮಿಯಾಸರ ಗ್ರಂಥಗಳು (Books of Esdras and Nehemias) ಯೆಹೂದ್ಯರು ದೇಶಾಂತರಕ್ಕೊಳಗಾಗಿದ್ದರು. ಅಲ್ಲಿಂದ ಅವರು ಬಿಡುಗಡೆ ಹೊಂದಿ ತಮ್ಮ ಮಾತೃಭೂಮಿಗೆ ಮರಳಿ ಬಂದು ಯೆರೂಸಲೇಮಿನ ದೇವಾಲಯವನ್ನೂ ನಗರದ ಪ್ರಾಕಾರವನ್ನೂ ಪುನಃ ಕಟ್ಟಿದ ವಿಚಾರವನ್ನು ತಿಳಿಸುವುವು. ಕ್ರಿ.ಪೂ. ೫೩೬ ರಿಂದ ಕ್ರಿ.ಪೂ. ೪೩೨ ರ ವರೆಗಿನ ವಿಚಾರಗಳಿವೆ.

ತೊಬಿಯಾಸನ ಗ್ರಂಥ (Tobias) ಸಮಾರಿಯದ ವಿನಾಶದ ಬಳಿಕ ನಡೆದ ಘಟನೆಗಳನ್ನು ಅಂದಿನ ಜನಜೀವನವನ್ನೂ ತಿಳಿಸುವುದು.

ಯೂದಿತ್ ಮತ್ತು ಎಸ್ತೆರ್ (Judith and Esther) ಈ ಎರಡು ಗ್ರಂಥಗಳಲ್ಲಿ ಇಬ್ಬರು ಸ್ತ್ರೀಯರ ಸಾಹಸದ ವರ್ಣನೆಯಿದೆ. ಬಾಬಿಲೋನದಲ್ಲಿ ದೇಶಾಂತರಕ್ಕೊಳಗಾಗಿದ್ದ ಯೆಹೂದ್ಯರು ಪುನಃ ಹಿಂದೆ ಬಂದ ವಿಚಾರವನ್ನು ತಿಳಿಸುವುವು.

ಮಕಾಬೀಗಳ ಗ್ರಂಥಗಳು (Machabees) ಇವು ಎರಡಿವೆ. ಕ್ರಿ.ಪೂ. ೧೭೬ ರಿಂದ ಕ್ರಿ.ಪೂ. ೧೩೦ ರ ವರೆಗೆ ಯೆಹೂದ್ಯರು ತಮ್ಮ ರಾಜಕೀಯ ಹಾಗೂ ಧಾರ್ಮಿಕ ಸ್ವಾತಂತ್ರ್ಯಗಳನ್ನುಳಿಸಿಕೊಳ್ಳಲು ಮಾಡಿದ ಹೋರಾಟದ ಚಿತ್ರಣವಿದೆ.

ಹೀಗಿರುವ ಐತಿಹಾಸಿಕ ಗ್ರಂಥಗಳು ಕಾಲಕ್ರಮದಲ್ಲಿ ಸ್ಪಷ್ಟವೂ

ಸರಳವೂ ಆದ (ಯೆಹೂದ್ಯ ಜನಾಂಗದ) ಇತಿಹಾಸವನ್ನು ನೀಡುತ್ತವೆ. ಇತಿಹಾಸದ ಶೋಧನೆಗಾರರ ದೃಷ್ಟಿಯಲ್ಲಿ ಇವು ಅಮೂಲ್ಯ ಸಾಕ್ಷಿಗಳಾಗಿವೆ. ಅವುಗಳ ಆಧಾರದಿಂದ ಇತರ ಐತಿಹಾಸಿಕ ಘಟನೆಗಳನ್ನು ಗುರುತು ಹಚ್ಚಿರುವರು.

ಕವಿತ್ವದ ಗ್ರಂಥಗಳು

ಇವನ್ನು ಕಾವ್ಯಗಳೆಂದು ಕರೆಯಬಹುದು. ಸಾಹಿತ್ಯದ ದೃಷ್ಟಿಯಲ್ಲಿ ಇವು ಶ್ರೇಷ್ಠ ವರ್ಗಕ್ಕೆ ಸೇರುವುವು. ಜೋಬ (Job) ಇದೊಂದು ನಾಟಕ ವಾಗಿದೆ. ಹಿಂದಿನ ರೀತಿಯಲ್ಲಿ ಕೃತಿಗೀಳಿದ ಈ ನಾಟಕವನ್ನು ಕೇವಲ ಅಲ್ಪ ವ್ಯತ್ಯಾಸಗಳೊಡನೆ ಸುಖಾಂತ ನಾಟಕವನ್ನಾಗಿ ಪರಿವರ್ತಿಸಬಹುದು.

ಗೀತೆಗಳು (Psalms) ಇಸ್ರೇಲರ ಗೀತಗಳ ಸಂಗ್ರಹಕ್ಕೆ (Psalter) ಎನ್ನುವರು. ಇವು ಸಂಖ್ಯೆಯಲ್ಲಿ ಸುಮಾರು ನೂರೈವತ್ತ ರಷ್ಟಿವೆ ಹೆಚ್ಚಿನವುಗಳನ್ನು ದಾವೀದರಾಜನು ರಚಿಸಿದನೆಂದು ಹೇಳುವರು. ಮೂಲವು ಹೀಬ್ರೂ ಭಾಷೆಯಲ್ಲಿದೆ. ಇಂದಿಗೂ ಕ್ರೈಸ್ತದೇವಾಲಯುಗಳಲ್ಲಿ ಇವನ್ನು ಹಾಡುತ್ತಿರುವರು. ವಿವಿಧ ಸನ್ನಿವೇಶಗಳಿಗೆ ಯುಕ್ತವಾದ ಈ ಗೀತೆಗಳನ್ನು ಮೆಚ್ಚದವರಿಲ್ಲ. ಕೀರ್ತನೆಯ ಕೀರ್ತನೆ (Canticle of Canticles). ಇದೊಂದು ಭಾವಗೀತೆ. ಸಾಲೊಮಾವ ರಾಜನು ರಚಿ ಸಿದನೆಂದು ಹೇಳುವರು. ಇದರಲ್ಲಿ ಪ್ರಣಯಭಾವನೆಯು ಕಾಣುವುದಾ ದರೂ, ಅದು ಆಧ್ಯಾತ್ಮಿಕ ಭಾವನೆಯ ಪ್ರತೀಕವೆಂದು ವಿದ್ವಜ್ಜನರು ಹೇಳುವರು.

ಉಪದೇಶಾತ್ಮಕ ಗಂಥ್ರಗಳೆಂದು ಹೆಸರಾದ ಗಾದೆಗಳು (Proverbs) ಉಪದೇಶಕರು (Eeclesiastes) ಜ್ಞಾನ (Wisdom) ಮತ್ತು ಉಪದೇಶಸಾರ (Eeclesiasticus) ಎಂಬ ನಾಲ್ಕು ಗ್ರಂಥ ಗಳಿವೆ. ಇವು ಇಸ್ರೇಲಿನ ಆಧ್ಯಾತ್ಮಿಕ ಶ್ರೇಷ್ಠತೆಯ ಕುರುಹಾಗಿವೆ.

ಕಾಲಜ್ಞಾನದ ಗ್ರಂಥಗಳು

ಯೆಹೂದ್ಯರಲ್ಲಿ ಕಾಲಜ್ಞಾನವನ್ನು ಬಲ್ಲ ವ್ಯಕ್ತಿಗಳಿಗೆ ಪ್ರವಾದಿಗಳು (Prophets) ಎನ್ನುವರು. ಇವರು ಭಾರತೀಯ ಋಷಿ ಹಾಗೂ

ಸನ್ಯಾಸಿಗಳು ಮಾಡಿದ ಕಾರ್ಯವನ್ನೇ ಮಾಡಿದರು. ಅರಸನಾಗಲಿ, ಜನತಾ ನಾಯಕರಾಗಲಿ ನ್ಯಾಯ ಮಾರ್ಗವನ್ನು ತ್ಯಜಿಸಿದಾಗ ಭಗವತ್ ಪ್ರೇರಣೆಯಿಂದ ತುಂಬಿದ ಕೆಲವು ಆಧ್ಯಾತ್ಮಿಕ ತಜ್ಞರು ಆ ವ್ಯಕ್ತಿಗಳಿಗೆ ನ್ಯಾಯಾದೇಶವನ್ನು ನೀಡುತಿದ್ದರು. ರಾಷ್ಟ್ರದ ನ್ಯಾಯ ಶಕ್ತಿಯೇ ಆ ಗುರುಗಳ ರೂಪದಲ್ಲಿ ಯುಕ್ತ ಮಾರ್ಗದರ್ಶನವನ್ನು ಮಾಡುತಿತ್ತೆಂದು ಹೇಳಬಹುದು. ಅಂತರಂಗದಲ್ಲಿ ನಡೆದ ದುರಾಚಾರವನ್ನು ಅವರು ಅಪ ರಾಧಿಗೆ ತಿಳಿಸಿ, ಅದರ ದುಷ್ಫಲದ ಪರಿಣಾಮುಗಳನ್ನು ಪರಿಹಾರೋಪಾಯ ಗಳನ್ನೂ ಉದ್ಘೋಷದಿಂದ ಸಾರುತಿದ್ದರು. ಅಂತಹ ಪ್ರವಾದಿಗಳ ಪೂರ್ವ ಜೀವನವಾಗಲಿ, ಅಂತ್ಯಕಾಲವಾಗಲಿ ಸರಿಯಾಗಿ ತಿಳಿಯದು. ಆದರೂ ಭಗವತ್-ಶಕ್ತಿಯಿಂದ ಅವರು ನ್ಯಾಯ ನಿರ್ದೇಶ ಮಾಡಿ ಜನತೆಯನ್ನುದ್ಧರಿಸಿದ ವಿಷಯಗಳನ್ನು ಮಾತ್ರ ನಾವು ತಿಳಿಯಬಹುದು. Praphecy ಎಂಬ ಪದಕ್ಕೆ ಕಾಲಜ್ಞಾನದ ಮಾತು-ಭವಿಷ್ಯದ ನುಡಿ ಎಂಬರ್ಥಗಳಿವೆಯಾದರೂ ಬೈಬಲಿನಲ್ಲಿ ಅದಕ್ಕೆ 'ಭಗವತ್-ಸಂದೇಶ ಪ್ರಕಟಗೊಳಿಸು' ಎಂಬರ್ಥವಿದೆ. ಆದುದರಿಂದ ಪ್ರವಾದಿಯು ಭಗವಂತನ ಸ್ಥಾನದಲ್ಲಿ, ಆತನ ದೂತನಾಗಿ, ಆತನ ಪವಿತ್ರ ನಾಮದಲ್ಲಿ ಮಾತಾಡುವ ವನೆಂದು ತಿಳಿಯಬೇಕು. ಆತನು ಭವಿಷ್ಯವನ್ನು ಮಾತ್ರ ನುಡಿಯ ಬೇಕೆಂದಿಲ್ಲ.

ಕಾಲಜ್ಞಾನಿಗಳು ಅನೇಕರಿರುವರು. ಸಾಮುವೇಲ್, ನಾಥಾನ್, ಎಲಿಯಾಸ್, ಎಲಿಜೆಯುಸ್ ಮೊದಲಾದವರು ಪ್ರಸಿದ್ಧರು. ಆದರೆ ಕಾಲ ಜ್ಞಾನದ ಗ್ರಂಥಗಳು (Prophets) ಎಂದು ಹೆಸರಿರುವ ಹದಿನೆಂಟು ಗ್ರಂಥಗಳನ್ನು ಬರೆದವರು ಇತರ ಪ್ರವಾದಿಗಳು- ಅವರಲ್ಲಿ ಹಿರಿಯರು ನಾಲ್ವರು-ಇಸಾಯಸ್, ಯೆರೆಮಿಯಸ್ (ಮತ್ತು ಆತನ ಕಾರ್ಯದರ್ಶಿ ಬಾರುಖ್) ಎಜೆಕೀಯಲ್ ಮತ್ತು ದಾನಿಯೆಲ್. ಇವರಲ್ಲದೆ ಬಿಸ್ಪಿ, ಜೋಯೆಲ್, ಆಮೊಸ್, ಅಬ್ದಿಯಸ್, ಯೊನಾಸ್, ಮಿಕೀಯಸ್, ನಾಹುಮ್, ಹಬಕುಕ್, ಸೊಫೊನಿಯಸ್, ಅಗ್ಗೆಯುಸ್, ಜಾಕಾ-ರಾಯಸ್ ಮತ್ತು ಮಲಕೀಯಸ್-ಎಂಬ ಹನ್ನೆರಡು ಮಂದಿ ಕಿರಿಯರು.

ಕ್ರಿಸ್ತನ ನಿರೀಕ್ಷೆ

ಹಳೆಯ ಒಡಂಬಡಿಕೆಯು ವಿವಿಧ ರೀತಿಯ ಗ್ರಂಥವಿಭಾಗಗಳ ಸಂಕಲನವಾದರೂ ಯೆಹೋವಾನೇ ಅದರ ಕೇಂದ್ರವಾಗಿರುವವನು. ಕ್ರಿಸ್ತನ ನಿರೀಕ್ಷೆ ಮಾಡುತ್ತ ಅಂದಿನವರು ಆತನ ಆಗಮನವನ್ನು ವಿವಿಧ ಭವಿಷ್ಯ ನುಡಿಗಳಿಂದ ಸೂಚಿಸಿದರು. ಈ ಭವಿಷ್ಯ ನುಡಿಗಳು ಮೊತ್ತಮೊದಲು ಬಹು ಸೂಕ್ಷ್ಮರೂಪದಲ್ಲಿದ್ದುವಾದರೂ ಕಾಲಕ್ರಮೇಣ ವಿಸ್ತರಿಸುತ್ತ ಹೋಗಿವೆ - ಬೀಜವು ಬೆಳೆದು ಮರವಾದಂತೆ. ಅಂತಹ ಭವಿಷ್ಯ ನುಡಿಗಳು ಯೇಸುಕ್ರಿಸ್ತನ ಜೀವನದಲ್ಲಿ ಸತ್ಯವಾಗಿವೆ. ಕೆಲವು ಮಾತುಗಳನ್ನು ಉದ್ಧರಿಸಿದರೆ ಅಪ್ರಸ್ತುತವಾಗದು.

೧. ಆದಿಮಾನವ ಆದಮನು ಪತನಗೊಂಡ ಬಳಿಕ, ಭಗವಂತನು ಆತನ ಹಾಗೂ ಆತನ ಸಂತತಿಯ ಉದ್ಧಾರಕ್ಕಾಗಿ ರಕ್ಷಕನೊಬ್ಬನ ಆಶ್ವಾಸನೆಯನ್ನು ಕೊಟ್ಟನು. ಸರ್ಪರೂಪದ ಸೈತಾನನಿಗಿತ್ತ ಮಾತದು.

"ನಿನ್ನ ಮತ್ತು ಸ್ತ್ರೀಯ, ನಿನ್ನ ಸಂತತಿಯ ಹಾಗೂ ಆಕೆಯ ಸಂತತಿಯ ಮಧ್ಯದಲ್ಲಿ ವೈರವನ್ನು ಹಾಕುವೆನು. ಆಕೆಯು ನಿನ್ನ ಶಿರವನ್ನು ಮೆಟ್ಟುವಳು ಮತ್ತು ಆಕೆಯ ಹಿಮ್ಮಡಿಗಾಗಿ ನೀನು ಕಾದಿರು" (ಉತ್ಪತ್ತಿ III ೧೫)

೨. "ಪ್ರೇಷಿಸಲ್ಪಡುವವನು ಬರುವವರೆಗೆ ಯೂದಾನಿಂದಾಗಲಿ, ಅಥವಾ ಆತನ ಸಂತತಿಯ ರಾಜನಿಂದಾಗಲಿ ರಾಜದಂಡವು ಕೀಳಲ್ಪಡದು; ಆತನು ಜನಾಂಗಗಳ ನಿರೀಕ್ಷೆಯಾಗಿರುವನು"(ಉತ್ಪತ್ತಿ XLIX–೧೦) ಎಂದು ಯೂದಾನ ಸಂತತಿಯಲ್ಲಿ ರಕ್ಷಕನಾಗುವವನು ಜನಿಸುವನೆಂದು ಹೇಳಿತ್ತು.

೩. ರಕ್ಷಕನು ಕಾರ್ಯಾಸಕ್ತನಾಗುವ ಮುನ್ನ ಆತನ ಮುಂಬಿಗ (Preenrsor) ನಾದವನ ಕುರಿತು ಮಲಾಕಿಯು ಹೇಳಿರುವನು "ಇದೋ ನನ್ನ ದೂತನನ್ನು ನಾನು ಕಳುಹಿಸುವೆನು: ಆತನು ಮಾರ್ಗವನ್ನು ನನಗಿಂತ ಮೊದಲೇ ಸರಿಗೊಳಿಸುವನು" (ಮಲಾಕಿ III-೧)

ಯೇಸುಕ್ರಿಸ್ತನು ಕಾರ್ಯವೆಸಗುವ ಮುನ್ನ ಸ್ನಾನಿಕ ಯೋಹಾನ

(Jhon the Baptist) ನು ಜನತೆಯಲ್ಲಿ ಭಗವದ್ಭಕ್ತಿಯನ್ನು ವೃದ್ಧಿಗೊಳಿಸಲು ಆದೇಶವೀಯುತ್ತಿದ್ದನು. ಆತನೇ ಯೇಸುಕ್ರಿಸ್ತನನ್ನು ತನ್ನ ಶಿಷ್ಯರಿಗೆ ತೋರಿಸುತ್ತ ಆತನನ್ನು ಹಿಂಬಾಲಿಸಲು ಕಳುಹಿಸಿದನು.

೪. ರಕ್ಷಕನು ಕನ್ಯೆಯಲ್ಲಿ ಜನಿಸುವನು – ಯೇಸುವು ಕಾನೀನನಾಗಿಯೇ ಜನಿಸಿದನು.

"....ಆದುದರಿಂದ ಸ್ವಾಮಿಯೇ ನಿಮಗೊಂದು ಸೂಚನೆಯನ್ನಿತ್ತಿರುವನು. ಇದೋ ಕನ್ಯೆಯೊಬ್ಬಳು ಬಸುರಿಯಾಗುವಳು, ಪುತ್ರನೊಬ್ಬನನ್ನು ಪಡೆಯುವಳು ; ಮತ್ತು ಎಮ್ಮಾನುವೆಲ್ (Emmoannel) ಎಂದು ಆತನ ಹೆಸರಾಗಿ ಕರೆಯುವಳು" (ಇಸಾಯಸ್ VII–೧೪)

ಎಮ್ಮಾನುವೆಲ್ = ಭಗವಂತನು ನಮ್ಮೊಡನೆ

೫. ರಕ್ಷಕನು ಬೆತ್ಲೆಹೇಮಿನಲ್ಲಿ ಜನಿಸುವನು- ಯೇಸುವೂ ಬೆತ್ಲೆಹೇಮಿನಲ್ಲಿ ಜನಿಸಿದನು.

"ಎಲೈ ಬೆತ್ಲೆಹೇಮ್ ಎಫ್ರಾಟವೇ, ಯೂದಾನ ಸಾವಿರಾರು ಹಳ್ಳಿಗಳಲ್ಲಿ ನೀನೊಂದಾಗಿದ್ದರೂ, ಇಸ್ರೇಲನ್ನು ಆಳುವವನು ನಿನ್ನಿಂದಲೇ ಹೊರಬರುವನು" (ಮಿಕಿಯಸ್ V : ೨)

೬. ಯೇಸುಕ್ರಿಸ್ತನನ್ನು ಆತನ ದ್ವಾದಶ ಶಿಷ್ಯರಲ್ಲೊಬ್ಬನು ಮೂವತ್ತು ರಜತ ನಾಣ್ಯಗಳ ಶುಲ್ಕವನ್ನು ಪಡೆದು ಪರಾಧೀನಗೊಳಿಸಿದನು.

"ನಿಮಗೆ ವಿಹಿತವೆಂದು ತೋರಿದರೆ ನನ್ನ ಬೆಲೆಯನ್ನು ಕೊಡಿರಿ, ಅಥವಾ ತಡೆಯಿರಿ. ಆದುದರಿಂದ ಅವರು ನನ್ನ ಬೆಲೆಯಾಗಿ ಮೂವತ್ತು ರಜತನಾಣ್ಯಗಳನ್ನು ಎಣಿಸಿದರು" (ಜಕಾರಾಯಸ್ XI-೧೨)

೭. ಯೇಸುವನ್ನು ಶಿಲುಬೆಗೇರಿಸುವುದನ್ನು ಕುರಿತು–

ಒಬ್ಬನು ಆತನನ್ನು ಕೇಳುವನು "ನಿನ್ನ ಹಸ್ತಗಳಲ್ಲಿ ಅದೇನು ಗಾಯಗಳು"

೮. ಆತನ ವಸನಗಳ ವಿತರಣೆಯನ್ನು ಕುರಿತು

"ನನ್ನ ಬಟ್ಟೆಗಳನ್ನು ಹಂಚಿಕೊಂಡರು, ನನ್ನ ಅಂಗಿಗೆ ಸೊಡ್ತಿ ಹಾಕಿದರು" (ಗೀತೆ XXI–೧೯)

೯. ಯೇಸುವಿನ ಪುನರುತ್ಥಾನವನ್ನು ಕುರಿತು

" ನನ್ನ ಆತ್ಮವು ನರಕದಲ್ಲಿರಲು ನೀನು ಅನುಮತಿಸಲಾರೆ ; ಮಾತ್ರವಲ್ಲ ಪವಿತ್ರನಾದ ನಿನ್ನವನನ್ನು ಕೊಳೆಯಲು ಬಿಡಲಾರೆ." (ಗೀತೆ XV-೧೦).

೧೦. ಜೋಬನು ರಕ್ಷಕನನ್ನು ಭಗವಂತನೆನ್ನುವನು.

" ನನ್ನ ರಕ್ಷಕನು ಜೀವಂತನಾಗಿರುವನೆಂದು ನಾನರಿದಿರುವೆನು. ಕೊನೆಯ ದಿನ ಭೂಮಿಯಿಂದ ನಾನು ಏಳುವೆನು....ಮತ್ತು ನನ್ನ ದೇಹದಿಂದ ನನ್ನ ಭಗವಂತನನ್ನು ಕಾಣುವೆನು (ಜೋಬ XIX-೨೫-೨೬)

ಹಳೆಯ ಒಡಂಬಡಿಕೆಯಲ್ಲಿ ಭಗವಂತನೇ ಕೇಂದ್ರ ವಿಷಯವಾಗಿರುವನು. ಹೊಸ ಒಡಂಬಡಿಕೆಯಲ್ಲಿ ನಿರೀಕ್ಷಿಸಿದ ರಕ್ಷಕ-ಯೇಸುವೇ ಕೇಂದ್ರವಾಗಿರುವನು.

ಹೊಸ ಒಡಂಬಡಿಕೆ

ಇದರಲ್ಲಿ ಸುವಾರ್ತೆಗಳೆಂಬ ನಾಲ್ಕು ವಿಭಾಗಗಳೂ, ಪ್ರೇಷಿತರ ಕಾರ್ಯಗಳೆಂಬ ಭಾಗವೊಂದೂ, ಇಪ್ಪತ್ತೊಂದು ಧರ್ಮಪತ್ರಗಳೂ ಕೊನೆಗೆ ದೇವೋಕ್ತ ಶಾಸ್ತ್ರವೆಂಬ ಭಾಗವೊಂದೂ ಸೇರಿ ಒಟ್ಟು ಇಪ್ಪತ್ತೇಳು ಗ್ರಂಥ ವಿಭಾಗಗಳಿವೆ. ಪ್ರತಿಯೊಂದನ್ನು ಕುರಿತು–ಅವುಗಳ ಬರಹಗಾರರ ಸಮನ್ವಯದಲ್ಲಿ ಒಂದೆರಡು ಮಾತುಗಳಲ್ಲಿ ಪರಿಚಯವು ಹಿತವು.

ಇದರ ನಾಲ್ಕು ಪ್ರಥಮ ಭಾಗಗಳಿಗೆ ' ಭಗವಂತನ ಸುವಾರ್ತೆ ' (ರೋಮನ್ಸ್ ೧) ' ಕ್ರಿಸ್ತನ ಸುವಾರ್ತೆ ' (ಗಾಲಾತ್ಸಿಯನ ೧) ' ಭಗವಂತನ ಕೃಪೆಯ ಸುವಾರ್ತೆ (ದೇವ ಪ್ರೇಷಕರ ಕಾರ್ಯಗಳು) ' ಶಾಂತಿಯ ಸುವಾರ್ತೆ,' (ದೇವ ಪ್ರೇಷಕರ ಕಾರ್ಯಗಳು) ಮೊದಲಾದ ಹೆಸರುಗಳು ಬೈಬಲಿನಲ್ಲಿ ಸಿಗುತ್ತವೆ. ಈ ನಾಲ್ಕು ಭಾಗಗಳಲ್ಲಿ ಯೇಸು ಕ್ರಿಸ್ತನ ಜನನ, ಜೀವನ, ಮರಣ ಮತ್ತು ಬೋಧನೆಗಳ ವಿವರಗಳಿವೆ. ಸುವಾರ್ತೆಯನ್ನು ' ಸಂದೇಶ ' ಎಂದೂ ಅನುವಾದಿಸುತ್ತಿರುವರು. ಇದಕ್ಕೆ ಕಾರಣವಿದೆ.

ಯೇಸುಕ್ರಿಸ್ತನ ಜೀವನಾದಿಗಳಿರುವ ನಾಲ್ಕು ವಿಭಾಗಗಳಿಗೆ ಇಂಗ್ಲಿಷಿನಲ್ಲಿ ' Gospel' ಎನ್ನುವರು. ಈ ಪದವು Anglo

Saxon ಪದಗಳೆರಡರ ಸೇರಿಕೆಯಿಂದ ಉಂಟಾಗಿದೆ. ಆ ಪ್ರಕಾರ 'God' (ಭಗವಂತ) 'Spel' (ಕಥೆ) ಎಂದಾಗಿ ಭಗವಂತ ಸಂಬಂಧವಾದ ಕಥೆಯೆಂದು ಕೆಲವರು ವಿವರಿಸುವರು. ಆದರೆ ಕೆಲವರು 'Good' ಎಂಬ ಪದವೂ Spell ಎಂಬ ಪದವೂ ಸೇರಿ 'ಸುವಾರ್ತೆ, ಸಂದೇಶ' ಎಂಬರ್ಥದ ಪದವೆಂದೂ ಹೇಳುವರು. ಯಾವ ಹೆಸರಾದರೂ ಲೋಕ ಸಂರಕ್ಷಕನಾಗಿ ಜನಿಸಿದ ದೈವಿಕ ಪುರುಷನಾದ ಯೇಸುವಿನ ಜೀವನಾದಿಗಳ ಪರಿಚಯವನ್ನು ಅವು ನೀಡುವುದರಿಂದ ಅದಕ್ಕೆ ಒಪ್ಪುತ್ತದೆ. ಸುವಾರ್ತೆಯ ನಾಲ್ಕು ವಿಭಾಗಗಳನ್ನು ನಾಲ್ವರು ಬರೆದಿರುವರು. ಆ ನಾಲ್ವರೂ ಯೇಸುವಿನ ಜೀವನಾದಿಗಳನ್ನು ವಿವಿಧ ಧ್ಯೇಯಗಳಿಂದ ಬರೆದಿರುವುದರಿಂದ ಕೆಲವು ವಿಷಯಗಳನ್ನು ಎಲ್ಲರೂ ಹೇಳುವರು. ಈ ನಾಲ್ವರ ಕೃತಿಗಳನ್ನು ಕಥನಗಳೆನ್ನುವರು.

ಹೊಸ ಒಡಂಬಡಿಕೆಯ ಇಪ್ಪತ್ತೇಳು ಗ್ರಂಥ ವಿಭಾಗಗಳನ್ನು ಸೂಕ್ಷ್ಮವಾಗಿ ಪರಿಚಯಮಾಡಿಕೊಳ್ಳುವುದು ಹಿತ.

ಮತ್ತೀಯನು ಕಥಿಸಿದ ಸುವಾರ್ತೆ ; ಮತ್ತೀಯನು ಯೇಸುಕ್ರಿಸ್ತನ ದ್ವಾದಶ ಶಿಷ್ಯರಲ್ಲೊಬ್ಬನು ಯೇಸುವು ಆತನನ್ನು ತನ್ನ ಶಿಷ್ಯನ್ನನಾಗಿ ಮಾಡಿಕೊಳ್ಳುವ ಮುನ್ನ ಆತನು ರೋಮಕ ಸರಕಾರದ ಕರಸಂಗ್ರಹಾಧಿಕಾರಿಯಾಗಿದ್ದನು. ಆತನ ಮೊದಲ ಹೆಸರು ಲೆವಿಯೆಂದಿತ್ತು. ಕ್ರೈಸ್ತ ಮತಾವಲಂಬಿಗಳಾದ ಆಗಿನ ಯೆಹೂದ್ಯರಿಗಾಗಿ ಯೇಸುವಿನ ದಿವಾರೋಹಣದ ಆರುವರ್ಷಗಳ ಅನಂತರ ಬರೆದನು. ಮೂಲವು ಅಂದಿನ ಯೆಹೂದ್ಯರು ಆಡುತ್ತಿದ್ದ ಹೆಬ್ರೂ ಭಾಷೆಯಲ್ಲಿತ್ತು. ಅದು ಅದಾಗಲೇ ಗ್ರೀಕ್ ಭಾಷೆಗೆ ಅನುವಾದವಾಯಿತು. ಮೂಲ ರೂಪವು ಈಗ ಲಭ್ಯವಿಲ್ಲ. ಯೇಸುವು ಲೋಕಸಂರಕ್ಷಕನೆಂದು ಸೂಚಿಸಲು ಅವನು ಆತನ ಪವಾಡಗಳನ್ನೂ ಬೋಧೆಗಳನ್ನೂ ಸಂಗ್ರಹಿಸಿರುವನು.

ಮಾರ್ಕನು ಕಥಿಸಿದ ಸುವಾರ್ತೆ : ಮಾರ್ಕನು ಪ್ರಥಮ ಜಗದ್ಗುರು ಪೇತ್ರನ ಶಿಷ್ಯನು. ಪೇತ್ರನೊಡನೆ ಆತನು ರೋಮಿನಲ್ಲಿದ್ದು ಅನೇಕರ ಅಪೇಕ್ಷೆಯಂತೆ ಪೇತ್ರನ ಸಹಾಯದಿಂದ ಬರೆದನು. ಮೂಲವು ರೋಮಿನ ಭಾಷೆಯಾದ ಲತೀನಿನಲ್ಲಿದ್ದಿತೆಂದು ಕೆಲವರೂ ಗ್ರೀಕ್‌ಭಾಷೆಯಲ್ಲಿದ್ದಿ

ತೆಂದು ಕೆಲವರೂ ಹೇಳುವರು. ಯೇಸುವು ಭಗವತ್-ಪುರುಷನೆಂದು ತೋರಿಸುವುದು ಆತನ ಕಥನದ ಧ್ಯೇಯವಾಗಿದ್ದುದರಿಂದ ಯೇಸುವಿನ ಅಲೌಕಿಕ ವಿಷಯಗಳನ್ನು ಸ್ಪಷ್ಟವಾಗಿ ಹೇಳಿರುವನು. ಯೇಸುವಿನ ಮರಣದ ಹತ್ತುವರ್ಷಗಳ ಅನಂತರ ಈ ಕಥನವನ್ನು ಬರೆದುದೆಂದು ಹೇಳುವರು.

ಲೂಕನು ಕಥಿಸಿದ ಸುವಾರ್ತೆ: ಲೂಕನು ಸೀರಿಯಾದೇಶದ ಅಂತಿಯೋಕದವನು. ವೃತ್ತಿಯಲ್ಲಿ ಆತನು ವೈದ್ಯನಾಗಿದ್ದನು. ಚಿತ್ರ ಕಲೆಯಲ್ಲಿ ನಿಷ್ಣಾತನಾಗಿದ್ದನೆಂದೂ ಹೇಳುವರು. ಇವನು ಯೇಸುವಿನ ಜೀವನ ಪ್ರತ್ಯಕ್ಷ ದರ್ಶಿಯಾದರೂ ಪಾವ್ಲನಿಂದ ಕ್ರೈಸ್ತಮತಾವಲಂಬಿ ಯಾಗಿದ್ದನು. ಪಾವ್ಲನ ಹಲವು ಪಯಣಗಳಲ್ಲಿಈತನು ಒಡನಾಡಿಯಾಗಿದ್ದು ಆತನ ಪ್ರಚಾರ ಕಾರ್ಯದಲ್ಲಿ ಸಹಾಯಕನೂ ಮಿತ್ರನೂ ಆಗಿದ್ದನು. ಯೇಸುಕ್ರಿಸ್ತನ ಮರಣದ ಇಪ್ಪತ್ತನಾಲ್ಕುವರ್ಷಗಳ ಅನಂತರ ಗ್ರೀಕ್ ಭಾಷೆಯಲ್ಲಿ ಈ ಕಥನವನ್ನು ಬರೆದನು. ಲೂಕನು ತನ್ನ ಕಥನವನ್ನು ಬರೆಯುವ ಮುನ್ನ ಹಲವು ವ್ಯಕ್ತಿಗಳನ್ನು ಸಂದರ್ಶಿಸಿ, ವಿಷಯಗಳ ವಿವಿಧ ಹೇಳಿಕೆಗಳನ್ನು ವಿಮರ್ಶಿಸಿರುವನೆಂಬುದಕ್ಕೆ ಧಾರಾಳ ಸಾಕ್ಷಿಗಳಿವೆ. ಆತನು ಯೇಸುವಿನ ಮಾತೆ ಮರಿಯಾಳನ್ನು ಸಂದರ್ಶಿಸಿ, ಆಕೆಯ ಹೇಳಿಕೆ ಗಳನ್ನು ಬೇಡಿದನೆಂದೂ, ತನ್ನ ಮರಣದವರೆಗೆ ಪ್ರಕಟಗೊಳಿಸದಿರುವ ಭಾಷೆಯನ್ನು ಸ್ವೀಕರಿಸಿ, ಆಕೆಯು ಯೇಸುವಿನ ಜನನ, ಶೈಶವ ಮೊದ ಲಾದುವುಗಳ ವಿವರಗಳನ್ನು ತಿಳಿಸಿದಳೆಂದೂ ಶೋಧನೆಯಿಂದ ತಿಳಿದು ಬಂದಿದೆ.

ಯೋಹಾನನು ಕಥಿಸಿದ ಸುವಾರ್ತೆ: ಯೋಹಾನನು ಯೇಸುವಿನ ದ್ವಾದಶ ಶಿಷ್ಯರಲ್ಲೊಬ್ಬನು. ಅವನ ಅಗ್ರಜ, ಯಾಕೋಬ (ಹಿರಿಯ) ನೂ ಯೇಸುವಿನ ಶಿಷ್ಯನು. ಅವರಿಬ್ಬರೂ ಜೆಬೆದಿ ಹಾಗೂ ಸಾಲೊಮೆಯರ ಪುತ್ರರು—ಯೇಸುವಿನ ಸಂಬಂಧಿಕರು. ಈ ಯೋಹಾನನು ಹರೆಯದಲ್ಲಿ ಕ್ರಿಸ್ತನಿಗಿಂತಲೂ ಎಳೆಯನು. ಯೇಸುವಿನ 'ಮೆಚ್ಚಿನ ಶಿಷ್ಯ' ನೆಂದು ಕರೆಯಲ್ಪಡುತ್ತಿದ್ದನು. ತನ್ನ ಗುರುವಿನ ಎಲ್ಲ ಬಹಿರಂಗ ಕಾರ್ಯಗಳಲ್ಲಿ ಜೊತೆಯಲ್ಲಿದ್ದು, ಇತರ ಎಲ್ಲರೂ ಅಡಗಿದ್ದರೂ ಆತನ ಮರಣಕಾಲದಲ್ಲಿ

ಶಿಲುಬೆಯ ಬಳಿ ನಿಂತಿದ್ದನು. ಯೇಸುವು ತನ್ನ ಮಾತೆಯನ್ನು ಅವನ ಸಂರಕ್ಷಣೆಗೆ ಸಮರ್ಪಿಸಿದ್ದನು. ಯೇಸುವಿನ ಶಿಷ್ಯರೆಲ್ಲರಿಗೂ ಧರ್ಮಕ್ಕಾಗಿ ಪ್ರಾಣವನ್ನು ನೀಡಬೇಕಾಗಿ ಬಂದಿತಾದರೂ ಯೋಹಾನನಿಗೆ ದೀರ್ಘಾಯುಷ್ಯವು ಬಂತು. ಹೀಗಾಗಿ ಯೇಸುವಿನ ಜೊತೆಗಾರರಲ್ಲಿ ಅವನೊಬ್ಬನಾಗಿದ್ದುದರಿಂದ ಕ್ರಿಸ್ತನ ಜೀವನದ ಹಲವು ವಿಶಿಷ್ಟ ಘಟನೆಗಳ ವಿವರಗಳನ್ನು ಆಗಿನ ಕ್ರೈಸ್ತಮತಾವಲಂಬಿಗಳಿಗೆ ನೀಡುತಿದ್ದನು. ಅಂತಹ ವಿಷಯಗಳು ಇನ್ನೂ ಬರಹದಲ್ಲಿ ಬಂದಿರಲಿಲ್ಲ. ಜನತೆಯು ಆತನು ಅವುಗಳನ್ನು ಬರೆಯುವಂತೆ ಹಲವು ಸಲ ಕೇಳಿಕೊಂಡರು-ಆತನು ನಿರಾಕರಿಸಿದನು. ಕೊನೆಗೆ ಅವರು ಬಲವಂತಗೊಳಿಸಲು ಅವರು ಜಪತಪಗಳನ್ನು ಮಾಡಿ ತನ್ನ ಕಾರ್ಯಸಿದ್ಧಿಗಾಗಿ ಪ್ರಾರ್ಥಿಸಬೇಕೆಂದು ಕೇಳಿಕೊಂಡನು. ಅವರೆಲ್ಲರೂ ಆ ರೀತಿಯಲ್ಲಿ ವ್ರತವನ್ನಾಚರಿಸುತ್ತಿರಲು ಯೋಹಾನನು ಪೆಪಿರಸ್ ಹಾಳೆಯನ್ನೆತ್ತಿಕೊಂಡನು. ಮೊದಲ ವಾಕ್ಯದಲ್ಲಿಯೇ ಆತನು ಆಧ್ಯಾತ್ಮಿಕ ವಿಷಯದ ಅಂತರಾಳವನ್ನು ಪ್ರವೇಶಿಸಿದನು. ಮಾತ್ರವಲ್ಲ ಯೇಸುವಿನ ದೈವತ್ವವನ್ನು ಈತನ ಕಥನವು ಸ್ಫುಟಗೊಳಿಸುವುದರಿಂದ ಅದಕ್ಕೆ 'ಆಧ್ಯಾತಿಕ ಕಥನ'ವೆಂಬ ಹೆಸರೂ ಇದೆ. ಇದನ್ನು ಯೇಸು ಕ್ರಿಸ್ತನ ಮರಣದ ತರುವಾಯ ಅರುವತ್ತ್ಮೂರನೆಯ ವರ್ಷದಲ್ಲಿ ಬರೆದನು.

ಪ್ರೇಷಿತರ ಕಾರ್ಯಗಳು (Acts of the Apostles)

ಯೇಸುಕ್ರಿಸ್ತನು ತನ್ನ ದ್ವಾದಶ ಶಿಷ್ಯರಿಗೆ ತನ್ನ ಕಾರ್ಯವನ್ನು ಮುಂದುವರಿಸಲು ತಕ್ಕ ಶಿಕ್ಷಣವನ್ನು ನೀಡಿದ್ದನು. ಅವರೆಲ್ಲರಿಗೂ ಪೇತ್ರನೆಂಬುವನನ್ನು ನಾಯಕನಾಗಿ ಆರಿಸಿದ್ದನು. ಈ ಹನ್ನೆರಡು ಮಂದಿ ಶಿಷ್ಯರಿಗೆ Apostles ಎಂಬ ಹೆಸರು ಬಂತು. ಕ್ರಿಸ್ತನ ಹನ್ನೆರಡು ಮಂದಿಗಳಲ್ಲಿ ಒಬ್ಬನಾದ ಯೂದಾನು ತನ್ನ ಸ್ವಾಮಿಯನ್ನು ಪರಾಧೀನಗೊಳಿಸಿದನು. ಯೇಸುವಿಗೆ ಮರಣದಂಡನೆಯು ದೊರೆಯಿತು. ಅದರಿಂದ ನಿರಾಶೆ ಹೊಂದಿದ ಯೂದಾನು ಆತ್ಮಹತ್ಯೆಯನ್ನೆಸಗಿದನು. ಹೀಗಾಗಿ ಹನ್ನೆರಡರಲ್ಲಿ ಹನ್ನೊಂದು ಮಂದಿಗಳು ಮಾತ್ರವೇ ಉಳಿದರು.

ಯಾದಾನ ಸ್ಥಾನವನ್ನು ಭರ್ತಿಗೊಳಿಸಲು ಮತಿಯಾಸನೆಂಬುವನನ್ನು ಆರಿಸಿದರು; ಪುನಃ ಸಂಖ್ಯೆಯು ಭರ್ತಿಯಾಯಿತು. ಈ ಹನ್ನೆರಡು ಮಂದಿ ಭಗವಾನ್ ಯೇಸುಕ್ರಿಸ್ತನ ಕಾರ್ಯವನ್ನು ವಿವಿಧ ಕ್ಷೇತ್ರಗಳಲ್ಲಿ ಮುಂದುವರಿಸತೊಡಗಿದರು. ನವೀನ ರೀತಿಯ ಧರ್ಮೋಪದೇಶವನ್ನು ಮಾಡಿದುದಕ್ಕಾಗಿ ನಾಯಕ ಯೇಸುವನ್ನು ವಧಿಸಿದವರೇ ಆತನ ಶಿಷ್ಯರ ನಾಶಕ್ಕಾಗಿ ಪ್ರಯತ್ನಿಸತೊಡಗಿದರು. ಹಿರಿಯರ ಹಾಗೂ ಧರ್ಮಾಧಿಕಾರಿಗಳಿಂದ ಯುಕ್ತ ಪ್ರಮಾಣ ಪತ್ರಗಳನ್ನು ಸಾವ್ಲನೆಂಬುವನು ಪಡೆದು ಕ್ರೈಸ್ತರ ನಾಶಕ್ಕಾಗಿ ಬದ್ಧಕಂಕಣನಾದನು.

ಸಾವ್ಲನು ತಾರ್ಸುಸ್ ಎಂಬಲ್ಲಿ ಜನಿಸಿದವನು; ಹುಟ್ಟಿನಲ್ಲಿ ಯೆಹೂದ್ಯನಾದರೂ ಗ್ರೀಕ್ ಹಾಗೂ ಲತೀನ್ ಭಾಷೆಗಳಲ್ಲಿ ಸಮರ್ಥ ಪಂಡಿತನಾಗಿದ್ದನು. ಡೇರೆಗಳನ್ನು ತಯಾರಿಸುವುದರಲ್ಲಿ ನಿಷ್ಣಾತನಾಗಿದ್ದು ಧರ್ಮ ಪ್ರಚಾರದ ಕಾಲದಲ್ಲಿಯೂ ತನ್ನ ಕಾರ್ಯದಿಂದ ಉದರ ಪೋಷಣೆಯನ್ನು ಮಾಡಲು ಸಮರ್ಥನಾಗಿದ್ದನು. ಆಗಿನ ಕಾಲದಲ್ಲಿ ಜನಸಾಮಾನ್ಯರಿಗೆ ಅಲಭ್ಯವಾಗಿದ್ದ ರೋಮಕ ನಾಗರಿಕತನ (Citizenship) ದ ಹಕ್ಕು ಜನ್ಮದಾರಭ್ಯ ಅವನದಾಗಿತ್ತು. ಹೀಗೆ ಧನಮಾನಗಳೆರಡನ್ನೂ ಪಡೆದ ಸಾವ್ಲನು ಯೆಹೂದ್ಯರ ಪ್ರಸಿದ್ಧ ವಿದ್ವಾಂಸನಾಗಿದ್ದ ಗಾಮಾಲಿಯಲನ ಶಿಷ್ಯನಾಗಿ ಯೆಹೂದ್ಯ ಧರ್ಮ ಶಾಸ್ತ್ರಗಳನ್ನು ಕೂಲಂಕಷವಾಗಿ ಕರಗತಮಾಡಿಕೊಂಡಿದ್ದನು. ತನ್ನ ನಾಗರಿಕತನದ ಅಧಿಕಾರದ ಪ್ರಯೋಗವನ್ನು ಮಾಡುತ್ತ, ಯೆಹೂದ್ಯ ಧರ್ಮವಿರೋಧಿಗಳೆಂದು ಹೇಳಲಾಗುತ್ತಿದ್ದ ಕ್ರೈಸ್ತರನ್ನು ಶಿಕ್ಷೆಗೆ ಗುರಿಪಡಿಸುತಿದ್ದನು. ಅಂತಹ ಸಾವ್ಲನು ಅಧಿಕಾರ ಪತ್ರಗಳ ಸಮೇತ ಕ್ರೈಸ್ತಕೇಂದ್ರವಾದ ದಮಸ್ಕಸ್ ನಗರಾಭಿಮುಖವಾಗಿ ಹೊರಟನು. ದಾರಿಯಲ್ಲಿ ದಿವ್ಯ ಪ್ರಭೆಯ ನಡುವೆ ಭಗವಾನ್ ಯೇಸುಕ್ರಿಸ್ತನು ಪ್ರತ್ಯಕ್ಷನಾಗಿ, ಕ್ರೈಸ್ತರನ್ನು ಹಿಂಸಿಸಬಾರದೆಂದೂ ಮುಂದೇನು ಮಾಡಬೇಕೆಂದೂ ಯುಕ್ತ ಸಲಹೆಯನ್ನು ನೀಡಿದನು. ಸಾವ್ಲನು ಪಾವ್ಲನೆಂಬ ತನ್ನ ರೋಮಕ ನಾಮದಿಂದ ಕ್ರೈಸ್ತಮತಾವಲಂಬಿಯಾಗಿ ಮರಣ ಪರ್ಯಂತ ಧರ್ಮಪ್ರಚಾರವನ್ನು ಮಾಡಿದನು. ಹೀಗೆ ಮತಾಂತರ ಹೊಂದಿದ ಪಾವ್ಲನು ಯಾವ ಮತದ ತತ್ವದ ಅನು

ಯಾಯಿಗಳ ನಿರ್ಮೂಲನಕ್ಕಾಗಿ ಬದ್ಧನಾಗಿದ್ದನೋ ಅದುವೇ ತತ್ವಗಳಿಗಾಗಿ ಇಮ್ಮಡಿಯಷ್ಟು ದುಡಿದನು. ಹನ್ನೆರಡು ಪ್ರೇಕ್ಷಿತರ ಸಾಲಿಗೆ ಹದಿಮೂರನೆಯವನಾಗಿ ಸ್ವೀಕರಿಸಲ್ಪಟ್ಟನು.

ಪ್ರೇಕ್ಷಿತರ ಕಾರ್ಯಗಳಲ್ಲಿ ಸಮಸ್ತ ಹದಿಮೂರು ಮಂದಿಗಳ ಕಾರ್ಯಗಳ ವಿವರಗಳಿಲ್ಲ. ಈ ಗ್ರಂಥ ವಿಭಾಗದಲ್ಲಿ ಇಪ್ಪತ್ತೆಂಟು ಅಧ್ಯಾಯಗಳಿವೆ. ಅವುಗಳಲ್ಲಿ ಮೊದಲಿನ ಹನ್ನೆರಡು ಅಧ್ಯಾಯಗಳಲ್ಲಿ ಪ್ರಥಮ ಜಗದ್ಗುರು ಪೇತ್ರನ ಪ್ರಚಾರ ಕಾರ್ಯದ ವಿವರಗಳಿವೆ. ಮುಂದಿನ ಭಾಗವು ಪಾವ್ಲನ ಪ್ರಚಾರಕಾರ್ಯದ ಮುಖ್ಯ ವಿಷಯಗಳನ್ನು ತಿಳಿಸುತ್ತದೆ. ಉಳಿದ ಶಿಷ್ಯರ ವಿವರಗಳನ್ನು ಕೊಟ್ಟಿಲ್ಲ. ತೋಮಸ್ (St. Thomas Apostle) ನೆಂಬುವನು ಕ್ರಿಸ್ತ ಸಂದೇಶವನ್ನು ಭಾರತಕ್ಕೆ ತಂದವನು).

ಈ ಗ್ರಂಥದ ಲೇಖಕನು ಲೂಕನು.

ಧರ್ಮ ಪತ್ರಗಳು (Epistles)

ಇವು ಸಂಖ್ಯೆಯಲ್ಲಿ ಇಪ್ಪತ್ತೊಂದು ಇವೆ. ಅವುಗಳಲ್ಲಿ ಹದಿನಾಲ್ಕನ್ನು ಪಾವ್ಲನೊಬ್ಬನೇ ಬರೆದಿರುವನು.

೧. ರೋಮಕರಿಗೆ–ಯೇಸುಕ್ರಿಸ್ತನ ಮರಣದ ಇಪ್ಪತ್ತನಾಲ್ಕು ವರ್ಷಗಳ ಅನಂತರ ಪಾವ್ಲನು ಈ ಪತ್ರವನ್ನು ರೋಮಿನಲ್ಲಿದ್ದ ಕ್ರೈಸ್ತರಿಗೆ ಬರೆದುದು.

೨. ಕೊರಿಂತಿಯನರಿಗೆ ಪ್ರಥಮ ಪತ್ರ–ಇದನ್ನು ಪಾವ್ಲನು ಕ್ರಿಸ್ತನ ಮರಣದ ಇಪ್ಪತ್ತನಾಲ್ಕು ವರ್ಷಗಳ ಅನಂತರ ಬರೆದುದು. ಕೊರಿಂತದಲ್ಲಿ ಪಾವ್ಲನು ಧರ್ಮಪ್ರಚಾರ ಮಾಡಿದನು.

೩. ಕೊರಿಂತಿಯನರಿಗೆ ದ್ವಿತೀಯ ಪತ್ರ–ಮೊದಲನೆಯ ಪತ್ರವನ್ನು ಬರೆದ ವರ್ಷವೇ ಇದನ್ನೂ ಪಾವ್ಲನು ಬರೆದನು.

೪. ಗಾಲಾಸಿಯನ್ನರಿಗೆ—ಇದನ್ನೂ ಪಾವ್ಲನೇ ಬರೆದುದು. ಗಾಲಾಸಿಯಾದಲ್ಲಿ ಪಾವ್ಲನು ಪ್ರಚಾರಕ್ಕೆ ತೊಡಗಿದಾಗ ಬಂದ ಸಮಸ್ಯೆಗಳನ್ನು ಚರ್ಚಿಸಿ ಕ್ರಿಸ್ತನ ದಿವಾರೋಹಣದ ಇಪ್ಪತ್ತಮೂರು ವರ್ಷಗಳಲ್ಲಿ ಬರೆದುದು.

೫. ಎಫೆಸುಸರಿಗೆ–ಇದನ್ನು ನಿರೂಪಿಸಿದವನು ಪಾವ್ಲನೇ. ಈ ನಗರದಲ್ಲಿ ಪಾವ್ಲನು ಎರಡು ಸಲ ಪ್ರಚಾರಮಾಡಿದ್ದನು. ಆತನ ಕೊನೆಗಾಲದಲ್ಲಿ ರೋಮಿನಲ್ಲಿ ಬಂದಿಯಾಗಿದ್ದಾಗ ಕ್ರಿಸ್ತನ ಮರಣದ ಮೂವತ್ತು ವರ್ಷಗಳ ಅನಂತರ ಬರೆದುದು.

೬. ಫಿಲಿಪ್ಪಿಯನರಿಗೆ–ಈ ನಿರೂಪವನ್ನು ರೋಮಿನಲ್ಲಿ ಬಂದಿಯಾಗಿದ್ದ ಪಾವ್ಲನು ಕ್ರಿಸ್ತನ ದಿವಾರೋಹಣದ ಇಪ್ಪತ್ತೊಂಬತ್ತು ವರ್ಷಗಳ ಅನಂತರ ಬರೆದುದು.

೭. ಕೊಲೊಸಿಯನ್ನರಿಗೆ–ಇದನ್ನು ಕ್ರಿಸ್ತನ ಮರಣದ ಇಪ್ಪತ್ತೊಂಬತ್ತು ವರ್ಷಗಳ ಅನಂತರ ಪಾವ್ಲನು ರೋಮಿನಲ್ಲಿ ಬಂದಿಯಾಗಿದ್ದಾಗ ನಿರೂಪಿಸಿದುದು.

೮. ಥೆಸ್ಸಾಲೊನಿಕರಿಗೆ ಪಾವ್ಲನ ಪ್ರಥಮ ಪತ್ರ–ಈ ನಗರದಲ್ಲಿ ಪಾವ್ಲನು ಪ್ರಚಾರಮಾಡಿದ್ದನು. ಆದರೆ ವೈರಿವರ್ಗದ ಉಪದ್ರವವನ್ನು ತಡೆಯಲಾರದೆ ಅಲ್ಲಿಂದ ಬೇರೆಡೆಗೆ ಓಡಿಹೋಗಬೇಕಾಯಿತು. ಅಲ್ಲಿಯ ಕ್ರೈಸ್ತರಿಗೆ ವೈರಿಗಳ ಪೀಡೆಯನ್ನು ಸಹಿಸಲು ಧೈರ್ಯವನ್ನು ನೀಡುವುದಕ್ಕಾಗಿ–ಯೇಸುವಿನ ದಿವಾರೋಹಣದ ಹತ್ತೊಂಬತ್ತು ವರ್ಷಗಳ ಅನಂತರ ಕಳುಹಿಸಿದ ನಿರೂಪವಿದು.

೯. ಥೆಸ್ಸಾಲೊನಿಕರಿಗೆ ಪಾವ್ಲನ ದ್ವಿತೀಯ ಪತ್ರ–ಪ್ರಥಮ ಪತ್ರವನ್ನು ಕಳುಹಿಸಿದ ವರ್ಷವೇ ಇದನ್ನು ಬರೆದುದು.

೧೦. ತಿಮೊತಿಗೆ ಪಾವ್ಲನ ಪ್ರಥಮ ಪತ್ರ—ತನ್ನ ಶಿಷ್ಯನಾದ ತಿಮೊತಿಯನ್ನು ಎಫಿಸುಸ್ ನಗರದಲ್ಲಿ ಬಿಷಪನಾಗಿ ನೇಮಿಸಿದ್ದನು. ಧರ್ಮಕಾರ್ಯದಲ್ಲಿ ಆತನನ್ನು ಮುನ್ನಡೆಸಲು ಕ್ರಿಸ್ತನ ಮರಣದ ಮೂವತ್ತಮೂರು ವರ್ಷಗಳ ಅನಂತರ ಬರೆದುದು.

೧೧. ತಿಮೊತಿಗೆ ಪಾವ್ಲನ ದ್ವಿತೀಯ ಪತ್ರ—ತನ್ನ ಶಿಷ್ಯನನ್ನು ಮುನ್ನಡೆಸಲು ಪಾವ್ಲನು ತನ್ನ ಮರಣದ ಮುನ್ನ ಈ ಪತ್ರವನ್ನು ಬರೆದುದು.

೧೨. ತಿತ್ತುಸನಿಗೆ ಪಾವ್ಲನ ಪತ್ರ— ಕ್ರೀಟ್ ದ್ವೀಪದಲ್ಲಿ ಧರ್ಮಪ್ರಚಾರಮಾಡಿ, ಅಲ್ಲಿ ಬಿಷಪನಾಗಿ ತನ್ನ ಶಿಷ್ಯ ತಿತ್ತುಸನನ್ನು ನಿಯಮಿಸಿ

ಪಾವ್ಲನು ಬೇರೆಡೆಗೆ ಹೋಗಿದ್ದನು. ಆತನನ್ನು ಸ್ಥಿರಗೊಳಿಸಲು ಕ್ರಿಸ್ತನ ಮರಣದ ಮೂವತ್ತುಮೂರನೆಯ ವರ್ಷದಲ್ಲಿ ಈ ನಿರೂಪವನ್ನು ಬರೆದನು.

೧೩. ಫಿಲೆಮೋನನಿಗೆ ಪಾವ್ಲನ ಪತ್ರ—ಕ್ರೈಸ್ತಮತಾವಲಂಬಿಯಾದ ಫಿಲೆಮೋನನಿಗೆ ಬಿನೆಸಿಮಸ್ ಎಂಬ ದಾಸನಿದ್ದನು. ಇವನು ತನ್ನ ಯಜಮಾನನ ಸಂಪತ್ತನ್ನು ಅಪಹರಿಸಿ, ಪರಾರಿಯಾದನು. ಬಿನೆಸಿಮಸ್‌ನನ್ನು ಬಂದಿಯಾಗಿದ್ದ ಪಾವ್ಲನು ಮತಾಂತರಗೊಳಿಸಿ ಆತನ ಯಜಮಾನನಲ್ಲಿಗೆ ಪುನಃ ಕಳುಹಿಸುವಾಗ ಬರೆದ ನಿರೂಪವಿದು.

೧೪. ಹಿಬ್ರೂಜನರಿಗೆ ಪಾವ್ಲನ ಪತ್ರ—ಯೆಹೂದ್ಯರ ಮಾತೃಭೂಮಿಯಾದ ಪಾಲೆಸ್ತಿನದ ಯಹೂದ್ಯ ವಂಶದ ಕ್ರೈಸ್ತರಿಗಾಗಿ, ಕ್ರಿಸ್ತನ ಮರಣದ ಇಪ್ಪತ್ತೊಂಬತ್ತು ವರ್ಷಗಳ ಅನಂತರ ಬರೆದ ನಿರೂಪವಿದು.

೧೫. ಯಾಕೋಬನ ವಿಶ್ವ ಪತ್ರ — ಪಾವ್ಲನ ಪತ್ರಗಳು ಪ್ರತ್ಯೇಕ ಜನರಿಗೆ ಬರೆದುವು. ಆದರೆ ಯಾಕೋಬ ಮೊದಲಾದವರ ಕೆಲವು ಪತ್ರಗಳು ಸಮಸ್ತ ಕ್ರೈಸ್ತರನ್ನು ಉದ್ದೇಶಿಸಿ ಬರೆದುವುಗಳು. ಈ ಯಕೋಬನು ಯಾದಾನನ ಅಗ್ರಜನು—ಯೇಸುವಿನ ಸಂಬಂಧಿಕನು ಯಕೋಬನ ವಧೆಗೆ ಕೆಲವು ದಿನಗಳ ಮುನ್ನ ಈ ಪತ್ರವನ್ನು ಅವನು ಕ್ರಿಸ್ತ ಮರಣದ ಇಪ್ಪತ್ತೆಂಟು ವರ್ಷಗಳ ಅನಂತರ ಬರೆದನು.

೧೬. ಪೇತ್ರನ ಪ್ರಥಮ ಪತ್ರ—ಪೇತ್ರನು ಯೇಸುವಿನ ಶಿಷ್ಯರ ನಾಯಕನು. ಆತನೇ ಪ್ರಥಮ ಜಗದ್ಗುರು–ಕ್ರಿಸ್ತನ ಮರಣದ ಹದಿನೈದು ವರ್ಷಗಳ ಅನಂತರ ಈ ಪತ್ರವನ್ನು ಬರೆದನು.

೧೭. ಪೇತ್ರನ ದ್ವಿತೀಯ ಪತ್ರ—ಪೇತ್ರನು ಸಾಯುವ ಮುನ್ನ ಕ್ರಿಸ್ತನ ದಿವಾರೋಹಣದ ಮೂವತ್ತುಮೂರು ವರ್ಷಗಳ ಅನಂತರ ಈ ಪತ್ರವನ್ನು ಆತನು ಬರೆದನು.

೧೮. ಯೋಹಾನನ ಪ್ರಥಮ ಪತ್ರ—ದೀರ್ಘಾಯುಷಿಯಾಗಿದ್ದ ಯೋಹಾನನು ಕ್ರಿಸ್ತನ ದಿವಾರೋಹಣದ ಅರವತ್ತಾರು ವರ್ಷಗಳ ಅನಂತರ ಈ ನಿರೂಪವನ್ನು ಬರೆದುದು.

೧೯. ಯೋಹಾನನ ದ್ವಿತೀಯ ಪತ್ರ—ಎಲೆತ್ತಾ ಎಂಬ

ಮಾನ್ಯೆಯು ಮಾಡಿದ ಕಾರ್ಯದ ಸಂದರ್ಭದಲ್ಲಿ ಆಕೆಗೆ ಕಳುಹಿಸಿದ ನಿರೂಪವಿದು.

೨೦. ಯೋಹಾನನ ತೃತೀಯ ಪತ್ರ—ಗಾಯುಸ್ ಎಂಬುವನ ಸೇವೆಯನ್ನು ಹೊಗಳಿ, ಬರೆದ ನಿರೂಪವಿದು.

೨೧. ಯೂದನ ವಿಶ್ವ ಪತ್ರ—ಇವನೂ ಯೇಸುವಿನ ಶಿಷ್ಯರಲ್ಲಿ ಒಬ್ಬನು. ಈ ಪತ್ರವನ್ನು ಬರೆಯುವ ಕಾಲದಲ್ಲಿ ಯೋಹಾನನ್ನುಳಿದು ಎಲ್ಲ ಶಿಷ್ಯರೂ ವಧೆಯಾಗಿದ್ದರು. ಈ ನಿರೂಪಕಾರನ ಸೋದರ ಯಾಕೋಬನೂ ಯೇಸುವಿನ ಶಿಷ್ಯನಾಗಿದ್ದನು.

ದೇವೋಕ್ತ ಶಾಸ್ತ್ರ

ಇದೊಂದು ವಿಶೇಷಗ್ರಂಥ ವಿಭಾಗವು. ಯೋಹಾನನು ಅದರ ಲೇಖಕನು, ಅವನು ಅನೇಕ ದೈವಿಕ ಸಾಕ್ಷಾತ್ಕಾರಗಳನ್ನು ಪಡೆ ದಿದ್ದನು. ಆ ಸಂದರ್ಭಗಳಲ್ಲಿ ಅವನು ತಿಳಿದುಕೊಂಡ ಹಿತವಾದಗಳನ್ನು ಈ ಗ್ರಂಥದ ಮೊದಲಿನ ಅಧ್ಯಾಯಗಳಲ್ಲಿ ಬರೆದಿರುವನು. ಉಳಿದ ಭಾಗದಲ್ಲಿ ಕ್ರಿಸ್ತಮತದ ಭವಿಷ್ಯವನ್ನು ಹೇಳಿದೆ. ಲೋಕಾಂತ್ಯದ ಲಕ್ಷಣ ಗಳು ಅಂತಕ್ರಿಸ್ತ (Anti-Christ) ನ ಪ್ರಚಾರ ಮೊದಲಾದ ವಿಷಯಗಳು ವಿವರವಾಗಿ ನಿರೂಪಿಸಲ್ಪಟ್ಟಿವೆ. ಯೋಹಾನನು ರೋಮುಕ ಚಕ್ರವರ್ತಿಯಿಂದ ದೇಶಾಂತರ ಶಿಕ್ಷೆಗೊಳಗಾಗಿದ್ದು ಪಾತ್ಮೊಸ್ ದ್ವೀಪ ದಲ್ಲಿದ್ದನು. ಕ್ರಿಸ್ತನ ದಿವಾರೋಹಣದ ಅರುವತ್ತನಾಲ್ಕು ವರ್ಷಗಳ ಅನಂತರ ಬರೆದುದೆಂದು ತಿಳಿದುಬರುತ್ತದೆ.

ನಾಮಸಾರ್ಥಕತೆ

ಬೈಬಲಿನ ಪೂರ್ವೋತ್ತರ ಭಾಗಗಳಿಗೆ ಒಡಂಬಡಿಕೆಯೆಂಬ ಹೆಸರಿದೆ ಯಷ್ಟೆ. ಇಂಗ್ಲಿಷಿನ '(Testament)' ಎಂಬ ಪದವನ್ನು ಅನು ವಾದಕರು ಒಡಂಬಡಿಕೆ ಎಂದಿರುವರು. ಇಚ್ಛೆ, ಶಾಸನ ಎಂಬ ಅರ್ಥ ಗಳಿರುವ, '(Will)' ಪದವೂ ಒಪ್ಪಂದ, ಸಂಧಿ ಎಂಬ ಅರ್ಥಗಳಿರುವ 'Contract' ಎಂಬ ಪದವೂ ಅದಕ್ಕೆ ಸಮವೆಂದೂ ಹೇಳುವರು.

ಯೇಸುಕ್ರಿಸ್ತನ ಶಾಸನ ಅಥವಾ ಇಚ್ಛೆಯು ಬೈಬಲಿನಲ್ಲಿದೆಯೆಂದೂ, ದೇವ-ಮಾನವರೊಳಗೆ ನಡೆದ ಶಾಂತಿಯ ಸಂಧಿ-ಒಡಂಬಡಿಕೆಯೆಂದೂ ಹೇಳುವರು.

ಹಳೆಯ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆಗಳು ಪರಸ್ಪರ ಪೂರಕಗಳು. ಹಾಗಿದ್ದರೂ ಇತರ ಅನೇಕ ಗ್ರಂಥಗಳಿದ್ದುವೆಂದೂ ಅವುಗಳಲ್ಲಿ ಪ್ರಕ್ಷಿಪ್ತಭಾಗಗಳೂ ಸೇರಿದ್ದುವೆಂದೂ ತಿಳಿದುಬಂದಿದೆ. ಆದುದರಿಂದ ವಿವಿಧ ಗ್ರಂಥಗಳ ಪ್ರತಿಗಳನ್ನು ಸಂಗ್ರಹಿಸಿ, ವಿಮರ್ಶಿಸಿ ಒರೆಗೆ ಹಚ್ಚಿ, ಸಂಶಯಾತೀತವಾದ ವಿಷಯಗಳಿರುವ ಹಸ್ತಪ್ರತಿಗಳನ್ನು ಮಾತ್ರ ಅಂಗೀಕರಿಸಿದರು. ಎಷ್ಟೋ ಗ್ರಂಥಗಳು ಕಾಲಗತಿಯಿಂದ ದುರ್ಲಭವಾದುವು. ಅದಕ್ಕಾಗಿ ಕ್ರೈಸ್ತ ಶ್ರೀಸಭೆಯು ವಿದ್ವಜ್ಜನರ ಸಮಿತಿಯೊಂದನ್ನು ರಚಿಸಿ, ಸಂಗ್ರಹ ಕಾರ್ಯವನ್ನು ವಹಿಸಿಕೊಟ್ಟಿತು. ಅದರ ಫಲವಾಗಿ ಕ್ರೈಸ್ತ ಪವಿತ್ರಗ್ರಂಥ ಬೈಬಲ್ ರೂಪವನ್ನು ತಾಳಿತು. ಅಂದಿನಿಂದ ಕ್ರೈಸ್ತ ಶ್ರೀಸಭೆಯು ಬೈಬಲಿನಲ್ಲಿ ಅದಾವಬಗೆಯ ವ್ಯತ್ಯಾಸಗಳೂ ಆಗದಂತೆ ನೋಡಿಕೊಂಡಿದೆ. ಬೈಬಲ್ ಭಗವತ್ ಪ್ರೇರಣೆಯಿಂದ ರಚಿತವಾದ ಗ್ರಂಥ (Inspired) ವೆಂದು ಕೆಥೋಲಿಕರು ವಿಶ್ವಾಸಪೂರ್ವಕವಾಗಿ ಗೌರವಿಸುತ್ತ ಬಂದಿರುವರು. ಬೈಬಲ್ ಸತ್ಯ (Bible Truth) ವೆಂದರೆ ತ್ರಿಕಾಲಾಬಾಧಿತ ಸತ್ಯವೆಂಬ ಅನ್ವರ್ಥನಾಮವು ರೂಢಿಗೆ ಬಂದಿದೆ.

ಕ್ರೈಸ್ತಮತದ ತತ್ವಗಳು

ಕ್ರೈಸ್ತಮತದ ಸ್ಥಾಪಕನಾದ ಯೇಸುವಿನ ಜೀವನಾದಿಗಳನ್ನು ಬೈಬಲಿನ ನಾಲ್ಕು ವಿಭಾಗಗಳಿಂದ ಮಾತ್ರ ನಾವು ತಿಳಿಯಬಹುದು. ಯೇಸುವಾಗಲಿ, ಆತನ ಜೀವನ ಕಾಲದಲ್ಲಾಗಲಿ ಆತನ ಸಂದೇಶ ಸಂಬಂಧದ ಒಂದಾದರೂ ಗ್ರಂಥವನ್ನು ಬರೆದುದಿಲ್ಲ. ಸುವಾರ್ತೆಗಳಲ್ಲಿ ಬಿತ್ತರಿಸಿದ ವಿಷಯಗಳಲ್ಲಿ ಅತ್ಯುಕ್ತಿಯಾಗಲಿ, ಪೌರಾಣಿಕ ಭಾವನೆಗಳಾಗಲಿ ಇರಲು ಸಾಧ್ಯವಿಲ್ಲ. ಕಥನಕಾರರಲ್ಲಿ ಮೂವರು ಧರ್ಮಕ್ಕಾಗಿ ವಧೆಗೊಂಡವರು. ಯೋಹಾನನನ್ನು ಕುದಿಸಿದ ತೈಲಭಾಂಡದಲ್ಲಿ ಮುಳುಗಿಸಲಾಗಿತ್ತು; ಆದರೆ ಆತನಿಗೆ ಅದರಿಂದ ಬಾಧೆಯಾಗದಿದ್ದುದರಿಂದ ಗಡಿ

ಪಾರು ಮಾಡಲಾಗಿತ್ತು. ಕಥನಕಾರರು ಕಾಲ್ಪನಿಕ ವಿಷಯಗಳನ್ನು ಬರೆದಿದ್ದರೆ ಕ್ರೈಸ್ತ ಜನತೆಯೇ ಅವರನ್ನು ಬಲಿಗೊಡುತ್ತಿದ್ದಿತು. ಅಂದಿನ ಸರಕಾರಗಳೂ ಅವರಿಗೆ ಅಪಪ್ರಚಾರದ ತಪ್ಪಿಗಾಗಿ ಶಿಕ್ಷಿಸುತ್ತಿದ್ದರು. ಅಂದಿನ ಲೇಖಕರು ತಮ್ಮ ಸಮಾಜ ಹಾಗೂ ಸರಕಾರಗಳಿಂದ ಯಾವ ಬಗೆಯ ಬಾಧಕವೂ ಬಾರದಂತೆ ತಮ್ಮ ಲೇಖನಗಳನ್ನು ರೂಪಿಸಬಹುದಿತ್ತು. ಆದರೆ ಸತ್ಯಕ್ಕಾಗಿ, ಸತ್ಯದ ವಿಷಯಗಳ ಪ್ರಚಾರಕ್ಕಾಗಿ ಅವರು ಪ್ರಾಣವನ್ನು ನೀಡಿದರು. ಧರ್ಮಕ್ಕಾಗಿ, ಸತ್ಯಕ್ಕಾಗಿ, ತಾವು ಪ್ರತ್ಯಕ್ಷವಾಗಿ ಕಂಡುದನ್ನು ಅಥವಾ ಕೇಳಿದುದನ್ನು ಇತರರ ಅನುಭವಕ್ಕಾಗಿ ಬರೆದಿಟ್ಟರು.

"ನಾವು ಯಾವುದನ್ನು ತಿಳಿದುಕೊಂಡಿರುವೆವೋ ಅದನ್ನು ಹೇಳುತ್ತೇವೆ, ನಾವು ಅದಾವುದನ್ನು ನೋಡಿರುವೆವೋ ಅದಕ್ಕೆ ನಾವೇ ಸಾಕ್ಷಿಗಳಾಗಿದ್ದೇವೆ." (ಯೋಹಾನ ೩-೧೧)

ಸುವಾರ್ತೆಗಳಲ್ಲಿ ಮಾತ್ರ ಧರ್ಮ ಸಂಸ್ಥಾಪನಾಚಾರ್ಯ ಯೇಸುಕ್ರಿಸ್ತನ ಜೀವನಾದಿಗಳನ್ನು ತಿಳಿಯಬಹುದಷ್ಟೆ. ಯೇಸುವಿನ ಜೀವನವನ್ನು ಕುರಿತು ಪ್ರತ್ಯಕ್ಷದರ್ಶಿಗಳ ಹಲವು ಬರಹಗಳು ಬೈಬಲಿನ ಸಂಗ್ರಹದ ಕಾಲದಲ್ಲಿ ಕಣ್ಮರೆಯಾಗಿದ್ದುವು. ಎಷ್ಟೋ ವಿಷಯಗಳನ್ನು ಜಾನಪದ ಹೇಳಿಕೆಗಳಿಂದ ಮುಂದಿನ ಲೇಖಕರು ಸಂಗ್ರಹಿಸಿರುವರಾದರೂ ಅವು ಬೈಬಲಿನ ಭಾಗಗಳಲ್ಲ. ಸುವಾರ್ತೆಗಳ ಲೇಖಕರು ತಮ್ಮ ಕಥನದ ಉದ್ದೇಶವನ್ನು ತಮ್ಮ ಗ್ರಂಥಗಳಲ್ಲಿ ತಿಳಿಸಿರುವರು. ಎಲ್ಲರ ಉದ್ದೇಶವೂ ಧರ್ಮ ಪ್ರಚಾರವಾಗಿದ್ದಿತು. ಕ್ರಿಸ್ತನ ಮರಣದ ೨೪ ವರ್ಷಗಳ ಅನಂತರ ಕಥನಕ್ಕೆ ತೊಡಗಿದ ಲೂಕನು:

"ಆರಂಭದಿಂದಲೇ ಸ್ವಾಮಿಯ ಪ್ರತ್ಯಕ್ಷದರ್ಶಿಗಳೂ, ಸೇವಕರೂ ಆಗಿದ್ದವರು ನಮಗೆ ಉದ್ಧರಿಸಿದ ಪ್ರಕಾರ ನಮ್ಮಲ್ಲಿ ಸಂಭವಿಸಿದ ವಿಷಯಗಳ ಕಥನವನ್ನು ಕ್ರಮಗೊಳಿಸುವುದರಲ್ಲಿ ಅನೇಕರು ತೊಡಗಿದ್ದುದರಿಂದ, ನಿನಗೆ ಉಪದೇಶವಿತ್ತ ಆ ಮಾತುಗಳ ಸತ್ಯತೆಯ ಅರಿವಾಗುವುದಕ್ಕಾಗಿ, ಎಲೈ ಶ್ರೇಷ್ಠನಾದ ಥಿಯೋಫಿಲಸನೇ, ಆರಂಭದಿಂದಲೇ ಎಲ್ಲ ವಿಷಯಗಳನ್ನು

ತತ್ಪರತೆಯಿಂದ ಪಡೆದುದನ್ನು ನಿನಗಾಗಿ ಅನುಕ್ರಮವಾಗಿ ಬರೆಯಲು ನನಗೂ ಯೋಗ್ಯವೆನಿಸಿತು." (ಲೂಕ ೧, ೧-೪)

ಎಂದು ತಿಳಿಸುವನು. ಆದುದರಿಂದ ಸುವಾರ್ತೆಗಳಲ್ಲಿ ಯೇಸುವಿನ ಸಮಸ್ತ ಬೋಧನೆಯನ್ನಾಗಲಿ, ಜೀವನದ ಎಲ್ಲ ಘಟನೆಗಳನ್ನಾಗಲಿ ನಾವು ಪಡೆಯಲಾರೆವು. ಈ ಕುರಿತು ಯೋಹಾನನ "ಯೇಸುವು ಮಾಡಿದ ಅದೆಷ್ಟೋ ವಿಷಯಗಳಿವೆಯಾದರೂ ಅವುಗಳಲ್ಲಿ ಪ್ರತಿಯೊಂದನ್ನೂ ಬರೆಯುವುದಾದರೆ, ಹಾಗೆ ಬರೆದ ಗ್ರಂಥಗಳನ್ನಿಡಲು ಇಡಿ ಜಗತ್ತೇ ಸಾಲದೆಂದು ನನ್ನ ಭಾವನೆಯಾಗಿದೆ" (ಯೋಹಾನ ೨೧-೨೫)

ಎಂಬ ಮಾತುಗಳನ್ನು ನಾವು ಲಕ್ಷ್ಯದಲ್ಲಿರಿಸಬೇಕು. ಆದುದರಿಂದ ಗ್ರಂಥಸ್ಥ ವಿಷಯಗಳ ಜೊತೆಯಲ್ಲಿ ಜಾನಪದ ವಿಷಯಗಳನ್ನೂ ಅನ್ವಯಿಸಿ ಕೊಳ್ಳಬೇಕಾಗುತ್ತದೆ.

ಕ್ರೈಸ್ತಮತವು ಹೊಸ ಒಡಂಬಡಿಕೆಯ ೨೭ ಗ್ರಂಥವಿಭಾಗ ಗಳೆಲ್ಲವೂ ಪೂರ್ಣವಾಗುವ ಮುನ್ನವೇ ಪ್ರಚಾರದಲ್ಲಿತ್ತು. ಕೇವಲ ಗ್ರಂಥ ವನ್ನು ಮಾತ್ರ ಆಧಾರವಾಗಿಟ್ಟುಕೊಂಡು ಒಂದು ಮತದ ಎಲ್ಲ ಸಮಸ್ಯೆ ಗಳನ್ನು ಪರಿಹರಿಸಲು ಸಾಧ್ಯವಾಗದು. ಮಾತ್ರವಲ್ಲ, ಹೊಸ ಒಡಂ ಬಡಿಕೆಯ ವಿವಿಧ ಭಾಗಗಳು ಕಾಲಕ್ರಮದಲ್ಲಿ ಬರೆಯಲ್ಪಟ್ಟು ಕ್ರಿ. ಶ. ಮೊದಲನೆಯ ಶತಮಾನಾಂತ್ಯದಲ್ಲಿ ಪೂರ್ಣಗೊಂಡಿತು. ಹಾಗಿರುವಾಗ ಅದಕ್ಕಿಂತಲೂ ಪೂರ್ವದಲ್ಲಿದ್ದ ಕ್ರೈಸ್ತರಿಗೆ ಕ್ರಿಸ್ತಮತದ ವಿವಿಧ ತತ್ವಗಳ ಹಾಗೂ ಮತ ಪ್ರಕ್ರಿಯೆಗಳ ಲಾಭವು ದುರ್ಲಭವಾಗಿತ್ತು. ಆದುದರಿಂದ ಕ್ರೈಸ್ತಧರ್ಮ ಸಭೆಯಾದ ಶ್ರೀಸಭೆ (Church) ಯೇ ಸಮಸ್ತ ತತ್ವಗಳ ಬೋಧನೆಯನ್ನು ನೀಡಿತ್ತು. ಬೈಬಲ್–ಹೊಸ ಒಡಂಬಡಿಕೆಯು ಆಧಾರ ಗ್ರಂಥ ಮಾತ್ರ. ಇದನ್ನೊಂದು ದೃಷ್ಟಾಂತದಿಂದ ಸಮರ್ಥಿಸ ಬಹುದು:

ಭಾರತವು ಘಟನಾತ್ಮಕ ರಾಷ್ಟ್ರವಾಗಿದೆ. ಅದರ ರಾಜ್ಯಾಂಗ ಘಟನೆಯನ್ನು ಅದೆಷ್ಟೋ ವಿವೇಚನೆಯಿಂದ ರಚಿಸಿದ್ದರೂ, ಕೇವಲ ಅದನ್ನು ಮಾತ್ರ ಆಧಾರವಾಗಿಟ್ಟು ಯಾವನೊಬ್ಬನೂ ತನ್ನ ಜೀವನ ವನ್ನು ಸಮಗ್ರವಾದ ರೀತಿಯಲ್ಲಿ ನಡೆಸಲಾರನು. ಮಾತ್ರವಲ್ಲ ಪ್ರತಿ

ಯೊಂದು ಸೂತ್ರದ ಅರ್ಥವೂ ವ್ಯಕ್ತಿ-ವ್ಯಕ್ತಿಗೆ ಭಿನ್ನರೀತಿಯಲ್ಲಾಗಬಹುದು. ಅದಕ್ಕಾಗಿ ಏಕಾರ್ಥದಿಂದ ಐಕ್ಯತೆಯುಳಿಯುವಂತೆ ಪ್ರತಿಯೊಂದು ಸೂತ್ರದ ಇತಿಮಿತಿಗಳನ್ನು ಕೂಲಂಕಷವಾಗಿ ವಿವರಿಸುವ ನ್ಯಾಯಾಂಗವಿದೆ.

ಇದೇ ರೀತಿಯನ್ನು ಮತಕ್ಕೂ ಅನ್ವಯಿಸಬಹುದು. ಬೈಬಲ್ ದೈವಿಕ ಪ್ರೇರಣೆಯಿಂದ ಬರೆಯಲ್ಪಟ್ಟಿತೆಂದು ನಾವೊಪ್ಪಿಕೊಳ್ಳುತ್ತೇವಾದರೂ ಅದರಲ್ಲಿ ಕ್ರಿಸ್ತಮತದ ಪರಿಪೂರ್ಣ ಬೋಧನೆಯಿದೆಯೆಂದೊಪ್ಪಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಶ್ರೀ ಸಭೆಯು ಜಾನಪದ ಹೇಳಿಕೆಗಳ ಆಧಾರವನ್ನು ಪಡೆದು ವಿವಿಧ ತತ್ವಗಳನ್ನು ಸ್ಫುಟಗೊಳಿಸುವುದಾದರೂ–ಏನನ್ನೂ ಕೂಡಿಸಲಾರದು ಅಥವಾ ಕಳೆಯಲಾರದು.

ಯೇಸುವು ತನ್ನ ಮರ್ತ್ಯ ಜೀವನವನ್ನು ಮುಗಿಸಿ ಹತ್ತೊಂಬತ್ತು ಶತಮಾನಗಳು ಪೂರ್ಣವಾಗಿ ಸಂದಿವೆ. ಇಪ್ಪತ್ತನೆಯ ಶತಮಾನವು ನಡೆಯುತ್ತಲಿದೆ. ಅಂದು ಯೇಸುವಿನ ಕಾಲದಲ್ಲಿ ಅಥವಾ ಮೊದಲನೆಯ ಶತಮಾನದಲ್ಲಿ ಬೋಧನೆ ಅಥವಾ ತತ್ವವು ಬರಹಗಳಲ್ಲಿ ಪ್ರಕಟ ಪಡಿಸುತ್ತಿದ್ದ ಅಲಕ್ಷ್ಯವು ವೈಜ್ಞಾನಿಕ ಶೋಧನೆಗಳಿಗೆ ಅತಿಮಾನ್ಯತೆ ನೀಡುವ ಈ ವೈಜ್ಞಾನಿಕ ಯುಗದಲ್ಲಿಯೂ ತೋರದಿಲ್ಲ. ಆದರೆ ಬೈಬಲಿನ ಸತ್ಯತೆಯು ಸ್ಪಷ್ಟವಾಗತೊಡಗಿದೆ. ಶೋಧನೆಗಳು ಬೈಬಲಿನ ಹಿರಿಮೆಯನ್ನು ಅನುಮೋದಿಸುತ್ತವೆ.

ಕ್ರಿಸ್ತಶಕವು ಯೇಸುವಿನ ಜನನದಿಂದ ಆರಂಭವಾಗುತ್ತದೆ. ಕ್ರೈಸ್ತ ಪಂಚಾಂಗದ ಪ್ರಕಾರ ಕ್ರಿಸ್ತಜನನದ ದಿನವು ಡಿಸೆಂಬರ್ ೨೫ ರಂದು. ಯೇಸುಕ್ರಿಸ್ತನು ಮರಣ ಹೊಂದುವಾಗ ೩೩ ವರ್ಷ ಪ್ರಾಯವಾಗಿ ೩೪ ನೆಯ ವರ್ಷದ ಸ್ವಲ್ಪಾಂಶವು ಕಳೆದಿತ್ತು.

ಕ್ರಿಸ್ತಶಕವು ಕ್ರಿಸ್ತನ ಜೀವನಕಾಲದಲ್ಲಿ ಬಳಕೆಗೆ ಬಂದಿರಲಿಲ್ಲ. ಆತನ ಮರಣವಾದಮೇಲೂ ಒಮ್ಮೆಲೇ ಸಾರ್ವತ್ರಿಕವಾಗಿ ರೂಢಿಗೆ ಬರಲಿಲ್ಲ. ಕ್ರೈಸ್ತ ವಿದ್ವಜ್ಜನರೂ ಶಿಷ್ಯರೂ 'ಕ್ರಿಸ್ತನ ಮರಣದ....ವರ್ಷಗಳಲ್ಲಿ' ಎಂದೂ "ಸ್ವಾಮಿಯ ಮರಣದ ...ವರ್ಷಗಳಲ್ಲಿ" ಎಂದೂ ತಮ್ಮ ಹಸ್ತ ಪ್ರತಿಗಳಲ್ಲಿ ಮಾತ್ರವಲ್ಲ ಪ್ರಮಾಣಪೂರ್ವಕವಾಗಿ ಹೇಳಬೇಕಾದಾಗಲೂ ಬಳಸುತ್ತಿದ್ದರು. ಆದರೆ ಅವರಿಂದ ಹಲವು ತೊಂದರೆಗಳಿದ್ದುವು. ಅವನ್ನು ನಿವಾ

ರಿಸಲು ನಾಲ್ಕನೆಯ ಶತಮಾನದಲ್ಲಿ ಪಂಡಿತ ಸನ್ಯಾಸಿಯೊಬ್ಬನನ್ನು ನೇಮಿಸಿದರು. ಆತನು ವಿವಿಧ ಗ್ರಂಥಗಳ ಸಹಾಯದಿಂದ ಕ್ರಿಸ್ತನ ಜನನದ ವರ್ಷವನ್ನು ಗುಣಿಸಿ ಹೇಳಿದನು. ಅದು ರೂಢಿಗೆ ಬಂದಿತು. ಅನಂತರವೇ ಅದು ತಪ್ಪಾಗಿ ಹೋದ ವಿಚಾರವು ತಿಳಿಯಿತು. ಆ ಸನ್ಯಾಸಿಯು ವರ್ಷ ವನ್ನು ಎಣಿಸುತ್ತಿರುವಾಗ ೪ ನ್ನು ಮರೆತನು. ಹೀಗಾಗಿ ನಾವು ಬಳಸುವ ಕ್ರಿಸ್ತಶಕದ ವರ್ಷ ಸಂಖ್ಯೆಗೆ ೪ ನ್ನು ಸೇರಿಸಿದರೆ ಕ್ರಿಸ್ತನ ಜನನದ ವರ್ಷವು ಬರುವುದು.

ಕ್ರಿಸ್ತನು ೩೪ ನೆಯ ವರ್ಷ ಪ್ರಾಯದಲ್ಲಿ–ಕ್ರಿ. ಶ. ೩೦ ನೆಯ ವರ್ಷ ಏಪ್ರಿಲ್ ತಿಂಗಳ ೭ ನೆಯ ಶುಕ್ರವಾರ ಅಪರಾಹ್ನ ಘಂಟೆ ೩ ಕ್ಕೆ ಶಿಲುಬೆಯ ಮೇಲೆ ಪ್ರಾಣಬಿಟ್ಟನು.

ಬೈಬಲ್ ಸಂಪೂರ್ಣ ಸತ್ಯವಾದ ವಿಷಯಗಳನ್ನು ತಿಳಿಸುತ್ತದೆ ಎಂದು ಹೇಳಿದೆವು. ಅದಕ್ಕಾಗಿ ಅದನ್ನು ಸತ್ಯವೇದ ಎಂದೂ ಕರೆಯು ವರು. ಬೈಬಲಿನ ವಿವಿಧ ಗ್ರಂಥವಿಭಾಗಗಳಲ್ಲಿ ಆಧುನಿಕ ವೈಜ್ಞಾನಿಕ ದೃಷ್ಟಿಯಿಂದ ಹಲವು ದೋಷಗಳು ಕಾಣುತ್ತವೆ. ಅವುಗಳಿಂದಾಗಿ ಬೈಬಲ್ ತನ್ನ ಸ್ಥಾನಮಾನವನ್ನು ಕಳೆದುಕೊಂಡಿಲ್ಲ. ಬೈಬಲಿನಲ್ಲಿ ಹೇಳಲಾದ ವಿಷಯಗಳು ಆಗಿನವರ ಮನೋಭಾವನೆಗೆ ಅನುಗುಣವಾದ ರೀತಿಯಲ್ಲಿ ನಿರೂಪಿಸಲ್ಪಟ್ಟವೆ. ವಿಷಯಗಳು ಹೇಗೆ ನಡೆದುವು ಎಂದು ಅವರು ತಿಳಿದುಕೊಂಡರೋ ಅದೇ ರೀತಿಯಲ್ಲಿ ಬರೆಯಲ್ಪಟ್ಟವೆ. ಇದನ್ನೊಂದು ದೃಷ್ಟಾಂತದಿಂದ ನಾವು ಸ್ಪಷ್ಟಗೊಳಿಸಬಹುದು.

ವೈಜ್ಞಾನಿಕ ಶೋಧನೆಗಳ ಫಲವಾಗಿ, ಭೂಮಿಯೇ ಸೂರ್ಯನ ಸುತ್ತಲೂ ತಿರುಗುವುದೆಂದು ನಾವರಿತಿರುವೆವು. ಆದರೂ ಮಾತಾಡುವಾಗ, 'ಸೂರ್ಯನು ಉದಯಿಸಿದನು; ನೆತ್ತಿಯ ಮೇಲೆ ಬಂದನು' ಎಂದು ಮುಂತಾಗಿ ಸೂರ್ಯನ ಚಲನೆಯನ್ನೇ ಹೇಳುವ ರೂಢಿಯನ್ನಿಟ್ಟು ಕೊಂಡಿರುವೆವು. ಹೀಗೆಯೇ ಪೂರ್ವಿಕರೂ ಆಡಿದರು. ವಿವಿಧ ಘಟನೆಗಳ ಕಾಲವು ಹಿಂದು-ಮುಂದಾಗಿರಬಹುದು; ವಿವರಗಳಲ್ಲಿ ವ್ಯತ್ಯಾಸವಿರ ಬಹುದು; ಆದರೂ ಆ ಘಟನೆಯು ನಡೆದಿರಬೇಕು.

ಒಂದು ಉತ್ಸವದಲ್ಲಿ ಅಥವಾ ಸಭೆಯಲ್ಲಿ ಅನೇಕ ಜನರು ಸೇರಿದ್ದರೆ,

ಒಬ್ಬನು ಹತ್ತುಸಾವಿರವೆನ್ನುವಾಗ ಇನ್ನೊಬ್ಬನು ಐದುಸಾವಿರವೆನ್ನ ಬಹುದು. ಜನರು ಅವರು ಹೇಳುವಷ್ಟೇ ಮಂದಿ-ಒಂದು ಹೆಚ್ಚಿಲ್ಲ, ಒಂದು ಕಡಮೆಯಿಲ್ಲ—ಎಂದು ಯಾರು ಎಣಿಸಿದರು ! ಆದರೆ ಸಭೆ ಸೇರಿತ್ತೆಂಬ ವಿಷಯವೂ, ಅನೇಕರಿದ್ದರೆಂಬ ವಿಚಾರವೂ ಸತ್ಯವಾಗಿವೆ.

ಹೀಗಿವೆ ಬೈಬಲಿನ ಹಲವು ನಿರೂಪಣೆಗಳು. ಆದರೆ ಒಂದು ಮಾತ್ರ ನಿಜ : ಬೈಬಲ್ ಪುರಾಣವಲ್ಲ. ಸತ್ಯವು ನೀರೊಳಗೆ ಅದುಮಿಟ್ಟರೂ ತೇಲುವುದು ; ವೃಕ್ಷಕ್ಕೆ ಬಡಿದರೂ ಜಯಿಸುವುದು.

೩. ಭಗವತ್ ಪ್ರೇಮದ ಕುರುಹು

ಸೃಷ್ಟಿಯು ಪ್ರೇಮದ ಕುರುಹು

ಸ್ವಯಂ ಪೂರ್ಣನಾದ ಸರ್ವೇಶ್ವರನು ನಿತ್ಯಸಂತೃಪ್ತನು. ಆತನಿಗೆ ಯಾವ ಬಗೆಯ ಕೊರತೆಯಾಗಲಿ, ಔದಾಸೀನ್ಯವಾಗಲಿ ಇಲ್ಲ. ಪ್ರತಿಯೊಂದರಲ್ಲಿಯೂ ಸ್ವಯಂಸಂಪೂರ್ಣನಾದ ಆತನಿಗೆ ಜಗತ್ ಸೃಷ್ಟಿಯಿಂದಾಗಲಿ, ವಿಶ್ವ ಸೃಷ್ಟಿಯಿಂದಾಗಲಿ ಪ್ರಯೋಜನವಿಲ್ಲ. ಮನುಷ್ಯನಾಗಲಿ, ಇತರ ಜೀವಿಗಳಾಗಲಿ ಆತನ ಮಹಿಮೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲರಿಯವು. ಚಿರಂತನ ಸತ್ಯವಾದ ಆ ಭಗವಂತನೇ ನಮ್ಮೆಲ್ಲರ ಆದಿಯು, ಆತನೇ ನಮ್ಮ ಅಂತ್ಯವು. ಎರಡು ವಸ್ತುಗಳು ಸಮೀಪದಲ್ಲಿರಬೇಕಾದರೆ ಅವುಗಳಲ್ಲಿ ಯಾವುದಾದರೊಂದು ಸಂಬಂಧವಿರಬೇಕು. ಅದುವೆ ಪ್ರೇಮವು. ಸಾದೃಶ್ಯಭಾವವು ಎರಡು ವಸ್ತುಗಳನ್ನಾಗಲೀ, ಇಬ್ಬರು ವ್ಯಕ್ತಿಗಳನ್ನಾಗಲಿ ಸಮೀಪಕ್ಕೆ ತರುತ್ತದೆ. ಆಗಲೇ ಅವರಲ್ಲಿ ಪ್ರೇಮವು ಉದಯವಾಗುವುದು.

"ಭಗವಂತನು ಪ್ರೇಮ ಸ್ವರೂಪಿಯು" (1 ಯೋಹಾನ ೪–೮) ಆತನ ಆ ಪ್ರೇಮವು ಸಕಲ ಸ್ಥಿರ–ಚರ ಸೃಷ್ಟಿಗೆ ಕಾರಣವಾಯಿತು. ಪ್ರೇಮಕ್ಕೆ ಪ್ರತಿಯಾಗಿ ಪ್ರೇಮವನ್ನು ನೀಡುವುದು ಸಹಜಗುಣವು. ಹಾಗಾದರೆ ಭಗವಂತನ ಪ್ರೇಮಕ್ಕೆ ಪ್ರತಿಯಾಗಿ ಆತನನ್ನು ಪ್ರೀತಿಸುವುದು ಅಗತ್ಯ. ಆದರೆ ಆತನ ಪರಿಚಯವಿಲ್ಲದೆ ಪ್ರೀತಿಸುವುದು ಸಾಧ್ಯವಿಲ್ಲ. ಆದುದರಿಂದ ಆತನ ಪರಿಚಯವನ್ನು ಮಾಡಿ, ಆತನ ಸೇವೆ ಮಾಡುವ ರೂಪದಲ್ಲಿ ನಮ್ಮ ಪ್ರೇಮವು ವೃದ್ಧಿಯಾಗಬೇಕು, ಹೃದಯದಿಂದ ಹೊರ ಹೊಮ್ಮಬೇಕು.

ಭಗವಂತನು ತನ್ನ ಮಹದಾನಂದಕ್ಕಾಗಿ ಈ ವಿಶ್ವವನ್ನು ಸೃಷ್ಟಿಸಿದನು. ಅದರೊಳಗಿರುವ ಸಕಲ ವಸ್ತುಜೀವಿಗಳಿಗೂ ಆತನೇ ಕರ್ತೃವು. ಡೊಂಬರ

ವನು ತಾನೇ ಮಾಡಿದ ಬೊಂಬೆಗಳ ಸೂತ್ರಗಳನ್ನು ಹಿಡಿದಾಡಿಸಿ, ಅವುಗಳ ಚಲನವಲನಗಳನ್ನು ಕಂಡು ಆನಂದಿಸುವಂತೆ ಭಗವಂತನು ತನ್ನ ಸೃಷ್ಟಿಯನ್ನು ಕಂಡು ಆನಂದಿಸುವನು. ಡೊಂಬರವನು ಬೊಂಬೆಗಳನ್ನು ಇತರ ವಸ್ತುಗಳಿಂದ ಮಾಡಿದನು. ಭಗವಂತನು ಶೂನ್ಯತೆಯಿಂದಲೇ ತನಗೆ ಬೇಕಾದುದನ್ನು, ಬಯಸಿದುದನ್ನು ಅಸ್ತಿತ್ವದಲ್ಲಿ ತರಬಲ್ಲನು. ಆತನ ದೃಷ್ಟಿಯಲ್ಲಿ ಡೊಂಬರವನೂ ಬೊಂಬೆಗಳೂ ಸಮಾನಸ್ಥಾನದಲ್ಲಿರುವುವು-ಎಲ್ಲವೂ ಆತನ ಸೃಷ್ಟಿಯು. ಸೃಷ್ಟಿಯು ಕರ್ತನ ಬಳಿಗೆ ಹೋಗಬಯಸುವುದು: ಮಾನವನ ಮನಸ್ಸು ನಿತ್ಯವೂ ಊರ್ಧ್ವಗಾಮಿ. ಉನ್ನತಿಯನ್ನು ಬಯಸುವ ಪ್ರತಿಯೊಬ್ಬನೂ ಆತನೆಡೆಗೆ ಹೋಗಲೇಬೇಕು. ವೇದಗಳಲ್ಲಿ ಹೇಳಿರುವ, "ಉದ್ಯಾನಂತೇ ಪುರುಷನಾವಯಾನಂ" ಎಂಬ ಮಾತೂ ಅದೇ ಅರ್ಥವನ್ನು ನೀಡುವುದು. ಉನ್ನತಿಯನ್ನು ಬಯಸುವುದು, ಅದನ್ನು ಸಾಧಿಸುವುದು ನಮ್ಮ ಕರ್ತವ್ಯ; ಅವನತಿಯನ್ನಲ್ಲ.

ಸೃಷ್ಟಿಯ ಅಸಂಖ್ಯಾತ ವಿಷಯಗಳಲ್ಲಿ ಮಾನವಜೀವಿಯೇ ಶ್ರೇಷ್ಠತಮನೆಂದು ಹೇಳದವರಿಲ್ಲ. ನಮ್ಮ ದೃಗ್ಗೋಚರವಾದ ವಸ್ತುವಿಷಯಗಳಲ್ಲಿ ಪ್ರಾಣಿವರ್ಗವೂ ಅದರಲ್ಲಿ ಮನುಷ್ಯವರ್ಗವೂ ಮೇಲಿನ ಸಾಲಿಗೆ ಬಂದಿವೆ. ಆದರೆ ಕ್ರೈಸ್ತ ಪವಿತ್ರ ಗ್ರಂಥಗಳಲ್ಲಿ ಮನುಷ್ಯನು ಲೋಕದಲ್ಲಿ ಬರುವುದಕ್ಕಿಂತಲೂ ಮೊದಲು ದೇಹರಹಿತ ವ್ಯಕ್ತಿಗಳನ್ನು ಭಗವಂತನು ಸೃಷ್ಟಿಸಿದ್ದನೆಂದು ಹೇಳಿದೆ. ಆ ವ್ಯಕ್ತಿಗಳಿಗೆ ಕೇವಲ ಮನಸ್ಸೊಂದು ಮಾತ್ರವಿರುವುದು. ಆದುದರಿಂದ ಅಂತಹ ದೇಹರಹಿತ ವ್ಯಕ್ತಿಗಳಿಗೆ ಸುಮನಸರು (Angels) ಎಂದು ಹೇಳುವೆವು.

ಸುಮನಸರೂ ನಾವೂ ಭಗವಂತನನ್ನು ಹೊಂದಿಕೊಂಡಿರಬೇಕಾದುದು ಧರ್ಮವು. ನಾವು ಸೃಷ್ಟಿಯಾದರೂ ನಮಗೊಂದು ಸ್ವತಂತ್ರವಾದ ಮನಸ್ಸಿದೆ. ಅದಕ್ಕೆ ಸ್ವತಂತ್ರವಾದ ಮೂರು ಶಕ್ತಿಗಳಿವೆ. ಯಾವ ಪ್ರಾಣಿಜಾತಿಗೂ ಇರದ ಈ ಶಕ್ತಿಗಳನ್ನು ಬುದ್ಧಿಶಕ್ತಿ (Wisdom) ಎಂದೂ, ವಿವೇಕ (Intellect) ಎಂದೂ ಇಚ್ಛಾಶಕ್ತಿ (Will) ಎಂದೂ ಕರೆಯುವೆವು.

ಸ್ವತಂತ್ರವಾದ ಬುದ್ಧಿಶಕ್ತಿಯಿರುವುದರಿಂದಲೇ ಮನುಷ್ಯನು ನವೀನ

ವಿಷಯಗಳನ್ನು ಶೋಧಿಸಲು ಸಮರ್ಥನಾದನು. ನಾವಾದರೂ ನಮ್ಮ ಬುದ್ಧಿಶಕ್ತಿಯನ್ನು ಪ್ರಯೋಗಿಸಿ, ನಮ್ಮ ನಿತ್ಯದ ಸಮಸ್ಯೆಗಳನ್ನು ಪರಿಹರಿಸುವೆವು. ಪ್ರಾಣಿಜಾತಿಗೆ ಈ ಬುದ್ಧಿಶಕ್ತಿಯಿರದುದರಿಂದ ಅದು ಸಾವಿರಾರು ವರ್ಷಗಳ ಹಿಂದೆ ಇರುವಂತೆಯೇ ಇಂದಿಗೂ ಇದೆ. ಮಾನವನು ತನಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವನು.

ಸ್ವತಂತ್ರವಾದ ವಿವೇಕದಿಂದ ಯಾವುದಾದರೊಂದು ವಿಷಯದಲ್ಲಿ ಸರಿ-ತಪ್ಪುಗಳನ್ನು ನಾವು ಇತ್ಯರ್ಥಿಸಬಲ್ಲೆವು. ಮತ್ತು ಸ್ವತಂತ್ರವಾದ ಇಚ್ಛಾಶಕ್ತಿಯಿಂದ ನಾವು ನಮಗೆ ಬೇಕಾದುದನ್ನು ಮಾಡುವೆವು. ಮಾನವನ ಈ ಶಕ್ತಿತ್ರಯವು ಅಂತಃಕರಣ ಅಥವಾ ಮನಸಾಕ್ಷಿಯ ರೂಪದಲ್ಲಿ ಕಾರ್ಯವೆಸಗುವುದು. ಮನಸ್ಸಾಕ್ಷಿಯು ಭಗವಂತನ ನಿಯಮವನ್ನು ನಮಗೆ ಸೂಚಿಸುವುದು. “ ಇದು ಸರಿಯಲ್ಲ. ಇದನ್ನು ಮಾಡದಿರು,” ಎಂದು ಅದು ಸೂಚಿಸುವಾಗಲೂ ನಾವು ಅದನ್ನು, ಅದರ ಆ ಸ್ವರವನ್ನು ವಿರೋಧಿಸಿ, ಸರಿಯಲ್ಲದುದನ್ನು ಮಾಡುವಷ್ಟು ಸ್ವತಂತ್ರರು. ಅಥವಾ “ ಇದು ಸರಿ, ಇದನ್ನು ಮಾಡು ” ಎಂದು ಅದು ಸೂಚಿಸುವಾಗಲೂ ನಾವು ಅದನ್ನು ಮಾಡದಿರಲೂಬಹುದು. ಹೀಗೆ ಸೃಷ್ಟಿಯಾದ ನಮಗೆ ಸ್ವತಂತ್ರವಾದ ಶಕ್ತಿಗಳಿರುವುದರಿಂದ ನಾವು ಭಗವಂತನಿಂದ ಪ್ರತ್ಯೇಕವಾಗಿಯೇ ಇರುವೆವೆಂದು ಹೇಳಬಹುದು.

ಸ್ವೇಚ್ಛೆಯ ಪರಮಾವಧಿಯೇ ಪತನ

ಸ್ವತಂತ್ರ ಶಕ್ತಿಗಳನ್ನು ಪಡೆದ ಸೃಷ್ಟಿಯು ಭಗವಂತನನ್ನು ಅವಲಂಬಿಸಿರಬೇಕಾದುದು ನ್ಯಾಯವು. ಭಗವಂತನನ್ನು ಬಿಟ್ಟುಕೊಂಡರೆ ಸೃಷ್ಟಿತವಸ್ತುವನ್ನೇ ಆಧರಿಸಬೇಕಾಗುತ್ತದೆ. ಸತ್ಯವನ್ನು ಅವಲಂಬಿಸುವ ಬದಲು ಅಸತ್ಯವನ್ನು, ಸ್ಥಿರವಾದುದರ ಸ್ಥಾನದಲ್ಲಿ ಅಸ್ಥಿರವಾದುದನ್ನು, ಶಾಶ್ವತ ಸುಖದ ಬದಲು ನಶ್ವರ ಭೋಗವನ್ನು ಸ್ವೀಕರಿಸಬೇಕಾಗಿದೆ. ಆದರೆ ಭಗವಂತನು ಹಿಂದೆ ಅನೇಕರಿಗೆ ಪ್ರತ್ಯಕ್ಷದರ್ಶನವಿತ್ತು, ಕೈಹಿಡಿದು ಮುನ್ನಡೆಸಿದಂತೆ ಇಂದು ನಮಗೆ ನೀಡಬೇಕೆಂದು ಯಾರೂ ಬಯಸಬಾರದು: ಪ್ರತಿಯೊಬ್ಬನಿಗೂ ಮನಸ್ಸಾಕ್ಷಿಯೆಂಬುದಿದೆ. ಅದು ಸಮರ್ಪಕ

ವಾಗಿ ಕಾರ್ಯ ಪ್ರವೃತ್ತನಾಗುವವರೆಗೆ ವ್ಯಕ್ತಿಗೆ ಹಿತ ಬೋಧೆಯನ್ನೀಯುವುದು ; ಭಗವಂತನ ನಿಯಮದ ಸೂಚನೆಯನ್ನು ಅದು ನೀಡುವುದು ; ಮಾತ್ರವಲ್ಲ ನಮಗೆ ಎಷ್ಟೋ ಮಂದಿ ಶಿಕ್ಷಕರಿರುವರು. ಅವರ ಮೂಲಕ ಭಗವಂತನ ಅಮೃತ ವಾಕ್ಯಗಳು ಜಗತ್ತಿಗೆ ಪ್ರಕಟಗೊಂಡಿವೆ. ಅವುಗಳ ಸದುಪಯೋಗವನ್ನು ನಾವು ಮಾಡಬೇಕು. ಆದುದರಿಂದ ನೇರವಾದ ಆಣತಿಗಳನ್ನು ಬಯಸಬಾರದು. ಸೃಷ್ಟಿಯು ತನ್ನ ಸ್ವೇಚ್ಛೆಯಂತೆ ನಡೆಯಲು ಸಮರ್ಥವಾಗಿದೆಯೆಂದು ತಿಳಿದೆವು. ಅದನ್ನು ಪ್ರಯೋಗಿಸಿ, ಭಗವಂತನನ್ನುಳಿದು ಸೃಷ್ಟಿತ ವಸ್ತುವನ್ನು ಆತನ ಸ್ಥಾನದಲ್ಲಿ ಸ್ವೀಕರಿಸಿದರೆ ಅದು ನ್ಯಾಯ ಮಾರ್ಗವನ್ನು ಅಗಲಿದಂತಾಯಿತು. ಅದುವೆ ಅದರ ಪತನವು. ಪತನವೆಂದರೆ ಬೀಳುವಿಕೆ. ಬೀಳಬೇಕಾದರೆ ಸ್ಥಳದಲ್ಲಿ ಏರು-ತಗ್ಗುಗಳಿರಬೇಕು. ಮೇಲಿನ ಸ್ಥಾನದಿಂದ ಕೆಳಗಿನ ಸ್ಥಾನಕ್ಕೆ ಬೀಳುವುದೇ ಪತನವಾಯಿತು. ಆದುದರಿಂದ ಭಗವಂತನ ಪ್ರೇಮಮಯ ಆಧಾರವನ್ನು ನಿರಾಕರಿಸಿ, ಆತನಿಂದ ಸೃಷ್ಟಿತವಾದ ವಸ್ತುವೊಂದನ್ನು ನೆಚ್ಚಿಕೊಂಡಿರುವುದು ಪತನವೇ ಸರಿ.

ಕ್ರೈಸ್ತ ಪವಿತ್ರ ಗ್ರಂಥಗಳಲ್ಲಿ ಮಾನವನ ಸೃಷ್ಟಿಯ ಪೂರ್ವದಲ್ಲಿ ಮೋಕ್ಷ ಸಾಮ್ರಾಜ್ಯವನ್ನು (Heaven) ಭಗವಂತನು ಸೃಷ್ಟಿಸಿದನೆಂದೂ ಅದರಲ್ಲಿ ಸುಮನಸರನ್ನು ಇರಗೊಳಿಸಿದನೆಂದೂ ಹೇಳಿದೆ. ಮಾನವ ಜೀವಿಯ ಅತ್ಯುನ್ನತ ಸ್ಥಿತಿಗಿಂತಲೂ ಉನ್ನತ ಸ್ಥಿತಿಯಲ್ಲಿ ಅವರ ಸೃಷ್ಟಿಯಾಗಿತ್ತು. ಮಾನವ ಸ್ವಭಾವವರಿಯದ ತೇಜಸ್ಸು ಅವರಲ್ಲಿತ್ತು. ಆದರೆ ಲೂಸಿಫೆರನೆಂಬುವನ ನಾಯಕತ್ವದಲ್ಲಿ ಅವರಲ್ಲೊಂದಂಶವು ಭಗವಂತನನ್ನು ಮರೆತು ತಮ್ಮ ಹೆಗ್ಗಳಿಕೆಯನ್ನು ತೋರಿಸಿತು-ಅದು ಸ್ವತಂತ್ರವಾದ ಇಚ್ಛಾಶಕ್ತಿಯ ದುರುಪಯೋಗವು. ಆದರೆ ಅಧಿಕಾಂಶವು ಭಗವದನುಗ್ರಹವೇ ತಮ್ಮ ಮೂಲವೆಂಬುದನ್ನು ಮರೆತಿರಲಿಲ್ಲ. ಲೂಸಿಫೆರನೂ ಆತನ ಪಕ್ಷದವರೂ ಪತನಗೊಂಡರು-ನರಕವೆಂಬುದು ಅಂದು ಸೃಷ್ಟಿಯಾಯಿತು. ಲೂಸಿಫೆರನನ್ನು ಸೈತಾನ (Satan) ನೆಂದೂ ಕರೆಯುವರು. ಸಕಲ ವಿಧಗಳ ಪತನವನ್ನು ಮಾಡಿಸುವುದರಲ್ಲಿ ಆತನದು ಮೇಲುಗೈ.

ಮಿಕಾಯಿಲನು ಭಗವಂತನ ಸೇವಾನಿರತನು. ಆತನ ಸಾಲಿನಲ್ಲಿ

ರಾಫಾಯಿಲ, ಗಾಬ್ರಿಯೇಲ ಮೊದಲಾದವರಿರುವರು. ಭಗವಂತನು ಪ್ರತಿ ಮಾನವ ಜೀವಿಯ ರಕ್ಷಣೆಗಾಗಿ ಒಬ್ಬ ಸುಮನಸನನ್ನು ಕರುಣಿಸುತ್ತಾನೆಂದೂ ಸೈತಾನನೂ ಆತನ ಪಕ್ಷದವರೂ ಭಗವಂತನ ಸೇವಾಭಕ್ತಿಯಿಂದ ಮಾನವನನ್ನು ವಿಮುಖಗೊಳಿಸಲು ಪ್ರಯತ್ನಿಸುವರೆಂದೂ ಕಥೋಲಿಕರ ವಿಶ್ವಾಸವಿದೆ.

ಪತನವು ಪಾತಕವು

ಮಾನವ ವ್ಯಕ್ತಿಗಳಾದ ನಮಗೆಲ್ಲರಿಗೂ ಪರಸ್ಪರ ವಿರುದ್ಧವಾದ ದ್ವಿವಿಧ ಸೆಳೆತಗಳಿವೆ. ನಮ್ಮ ಮೂಲವೂ ಅಂತ್ಯವೂ ಸರ್ವಾಂತರ್ಯಾಮಿಯೂ, ಸರ್ವಶಕ್ತನೂ, ಸರ್ವಾಧಾರಕನೂ, ಸಕಲ ಪರಿಪೂರ್ಣನೂ, ಸ್ವಪ್ರಕಾರ ಪೂರ್ಣನೂ, ಅಮೂರ್ತನೂ, ಮಹಾಮಹಿಮನೂ, ಅಪ್ರತಿಮನೂ ಸದಾ ಶುಭನೂ ಆದ ಭಗವಂತನೆಡೆಗೆ; ಅವನ ಬದಲು ಭೌತಿಕ ಪದಾರ್ಥವೋ ಸ್ವಾಭಿಮಾನವೋ ಆದ ಸೃಷ್ಟಿತ ವಿಷಯದೆಡೆಗೆ–ಇವೇ ಆ ಎರಡು. ಈ ಪಥದ್ವಯದಲ್ಲಿ ಯುಕ್ತವಾದುದನ್ನು ಆರಿಸುವ ಶಕ್ತಿಯನ್ನು-ಇಚ್ಛಾಶಕ್ತಿಯನ್ನು ಭಗವಂತನು ನಮಗೆ ನೀಡಿರುವನು. ಆದುದರಿಂದ ಆತನ ಕಾರ್ಯ ತತ್ಪರರಾದ ಮಕ್ಕಳಂತೆ ಆತನಿಗೆ ವಿಧೇಯರಾಗಿ ಆತನನ್ನು ಪ್ರೀತಿಸುವುದೂ, ಕೇವಲ ಈ ಮರ್ತ್ಯ ಜೀವನ ಕಾಲದಲ್ಲಿ ದಂಗೆಗಾರರಂತೆ ಆತನನ್ನು ವಿರೋಧಿಸಿ, ಆತನಲ್ಲಿ ಅವಿಧೇಯತೆಯನ್ನು ಪ್ರದರ್ಶಿಸುವುದೂ ನಮ್ಮಲ್ಲಿರುವ ಶಕ್ತಿಯಿಂದಲೇ. ಆ ಶಕ್ತಿಯ ಪ್ರಯೋಗದಿಂದ ವಿವಿಧ ಸಮಸ್ಯೆಗಳಲ್ಲಿ ನಮ್ಮ ಸ್ಥಿತಿಗೆ ನಿಜವಾಗಿಯೂ ಅನುಕೂಲವಾದುದು ಯಾವುದು? ಪ್ರತಿಕೂಲವಾದುದು ಯಾವುದು? ಎಂದು ತಿಳಿದು ಯುಕ್ತವಾದುದನ್ನು ಆರಿಸಬೇಕಾಗಿದೆ. ಭಗವಂತನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿಧಿಸಿದ ನಿಯಮಗಳನ್ನು ಪಾಲಿಸುವುದೂ, ವಿರೋಧಿಸುವುದೂ ನಮ್ಮ ಪಾಲಿನದು. ವಿರುದ್ಧಾಚರಣೆಯೇ ಪತನವು. ಅದನ್ನು ಲಘುತರವೆಂದೂ ಮಹತ್ತರವೆಂದೂ ದ್ವಿವಿಧವಾಗಿ ವಿಭಜಿಸಬಹುದು. ಪತನದಿಂದ ಲಭಿಸಿದ ಅಪರಾಧವನ್ನು ಪಾತಕ (Sin) ವೆಂದೂ ಪಾಪವೆಂದೂ ಹೇಳುವರು. ನಿಯಮಾತಿಕ್ರಮಣವು ಮಹಾಪರಾಧವಾಗ

ಬೇಕಾದರೆ ತ್ರಿವಿಧ ಸೂತ್ರಗಳು ಅನ್ವಯವಾಗಬೇಕು: ಮೊದಲನೆಯದಾಗಿ ಭಗವಂತನ ನಿಯಮವನ್ನು ತೀವ್ರವಾಗಿ (ವಿಶೇಷರೀತಿಯಲ್ಲಿ) ಅತಿ ಕ್ರಮಿಸಬೇಕು, ಮುರಿಯಬೇಕು; ಎರಡನೆಯದಾಗಿ ಆ ನಿಯಮದ ಪೂರ್ಣಾನುಭವವಿರಬೇಕು; ಮೂರನೆಯದಾಗಿ ವ್ಯಕ್ತಿಯು ಆ ಅತಿ ಕ್ರಮಣಕ್ಕೆ ಸ್ವೇಚ್ಛೆಯಿಂದ ಪೂರ್ಣಾನುಮತಿಯನ್ನು ನೀಡಬೇಕು. ಈ ಮೂರು ಸೂತ್ರಗಳಲ್ಲಿ ಯಾವುದಾದರೊಂದು ಅನ್ವಯಗೊಳ್ಳದೆ ಹೋದರೆ ಆ ನಿಯಮಾತಿಕ್ರಮಣವು ಪಾತಕವೆನಿಸಲಾರದು; ಸಂದರ್ಭವಶದಿಂದ ಲಘುಪಾತಕವಾಗಬಹುದು, ಮಹಾಪಾತಕವಂತೂ ಆಗದು.

ಸುಮನಸರು ತಮ್ಮ ಪೂರ್ಣಾನುಭವದಿಂದಲೇ ಭಗವಂತನ ನಿಯಮ ವಿರೋಧವನ್ನು ಪ್ರದರ್ಶಿಸಿ, ಮಹಾಪರಾಧಿಗಳಾದರು. ಅವರು ನರಕದಲ್ಲಿರ ಬೇಕಾಯಿತು. ಇಷ್ಟೆಲ್ಲವೂ ಮಾನವನು ಭೂಮಿಗೆ ಬರುವ ಮುನ್ನವೇ ನಡೆದಿತ್ತು.

ಮಾನವನ ಸೃಷ್ಟಿ

ಸುಮನಸರಲ್ಲಿ ಒಂದು ಪಾಲು ನಿಯಮಾತಿಕ್ರಮಣದ ಫಲವಾಗಿ ನರಕದಲ್ಲಿರಬೇಕಾಗಿ ಬಂದಿತಷ್ಟೆ. ಮೋಕ್ಷದಲ್ಲಿ ತೆರಪಾದ ಅವರ ಸ್ಥಾನಗಳಿಗೆ ಇತರರನ್ನು ತರಲು ಭಗವಂತನು ಮಹದಾನಂದಪಟ್ಟನು. ಆಗ ಮಾನವನ ಸೃಷ್ಟಿಯಾಯಿತು. ಮಾನವನು ಸುಮನಸರಿಗಿಂತ ಭಿನ್ನ ರೀತಿಯವನು. ಅವರು ಶುದ್ಧ ಅಮೂರ್ತ ಸ್ವರೂಪರಾದರೆ ಇವನು ಪಂಚಭೂತಮಯ ಜಡದೇಹದವನು. ಮಾನವನ ಸೃಷ್ಟಿಯ ಮುನ್ನ ವಿಶ್ವದ ಸೃಷ್ಟಿ ಆಯಿತು.

ಬೈಬಲಿನ ಪ್ರಥಮ ಗ್ರಂಥವಾದ 'ಉತ್ಪತ್ತಿ' ಯಲ್ಲಿ ವಿಶ್ವದ ರಚನೆ ಯನ್ನು ಕೊಟ್ಟಿದೆ. ಅದರ ಪ್ರಕಾರ ಭಗವಂತನು ಈ ಜಗತ್ತನ್ನೂ ಅದ ರೊಳಗಿರುವ ಸಮಸ್ತ ಸಸ್ಯಪ್ರಾಣಿ ಮೊದಲಾದುವುಗಳನ್ನೂ ಷಷ್ಠ ಅವಧಿ ಗಳಲ್ಲಿ ಸೃಷ್ಟಿಸಿದನು. ಆ ಪ್ರತಿಯೊಂದು ಅವಧಿಯು ಅದೆಷ್ಟು ದೀರ್ಘ ವಾಗಿದೆಯೆಂಬುದನ್ನು ಅಲ್ಲಿ ತಿಳಿಸಲಿಲ್ಲ. ಆ ವಿವಿಧ ಅವಧಿಗಳಲ್ಲಿ ಜಗತ್ತು

ಅವಸ್ಥಾಂತರವನ್ನು ಪಡೆದು ಮಾನವನ ಜೀವನಕ್ಕೆ ಯೋಗ್ಯವಾದ ತಾಣ ವಾಯಿತು.

ಬೈಬಲಿನಲ್ಲಿ ಹೇಳಿರುವಂತೆ ಆದಮನೆಂಬವನು ಪ್ರಪ್ರಥಮ ವ್ಯಕ್ತಿಯು. ಪಂಚಭೂತಮಯವಾದ ಜಡದೇಹವಿದ್ದರೂ ಆತನು ಸಮಸ್ತ ಪ್ರಾಣಿವರ್ಗಗಳಲ್ಲಿ ಶ್ರೇಷ್ಠನು. ಅದಕ್ಕೆ ಕಾರಣವೂ ಇದೆ. ಭಗವಂತನು ಆಗಿನ ಸರ್ವೋತ್ಕೃಷ್ಟ ಪ್ರಾಣಿಯನ್ನು ಆರಿಸಿ ಮಾನವನನ್ನು ನಿರ್ಮಿಸಿದ ನೆಂಬ ತತ್ವವನ್ನು ನಾವು ಒಪ್ಪಬಹುದು ಅಥವಾ ನಿರಾಕರಿಸಬಹುದು. ವಿಕಸನದ ವಾದ (Theory of Evolution) ಅಥವಾ ತನ್ನ ನವೀನ ವಾತಾವರಣಗಳಿಗೆ ಅನುಗುಣವಾಗಿ ಪ್ರಾಣಿ ಸಸ್ಯಗಳು ಹೊಂದಿಕೊಂಡು, ಹಿಂದಿನದರ ಆಧಾರದಿಂದ ಮುಂದಕ್ಕೆ, ಅಭಿವೃದ್ಧಿಗೆ ಹೋಗುವ ತತ್ವವನು ಕ್ರೈಸ್ತಮತವು ವಿರೋಧಿಸುವುದಿಲ್ಲ. ಆದರೆ ಭೂತಮಯ ದೃಗ್ಗೋಚರ ವಸ್ತು ವಿಷಯಗಳಿಗಿಂತಲೂ ಮೊದಲು, ಆ ಅನೇಕ ಸುಮನಸರಿಗಿಂತಲೂ ಪೂರ್ವದಲ್ಲಿ ಭಗವಂತನಿದ್ದನೆಂದೂ, ಆತನ ಬುದ್ಧಿವಂತಿಕೆಯೂ ಜ್ಞಾನವೂ ಆತನ ಪ್ರತಿರೂಪವಾಗಿ ಆತನಲ್ಲಿಯೇ ಆದಿಯಿಂದಲೇ ಇದ್ದಿತೆಂದೂ ಕ್ರೈಸ್ತಮತದ ಆದೇಶವಾಗಿದೆ. ಇತರ ಪ್ರಾಣಿಗಳಿಗೆ ಸದೃಶವಾದ, ಪ್ರಾಣ ಕ್ಕಿಂತ ಭಿನ್ನವಾದ ಆತ್ಮ (Soul) ವೆಂಬ ಅದೊಂದು ವಿಷಯವು ಮಾನವನಿಗಿರುವುದು ಭಗವತ್-ಸೃಷ್ಟಿಯ ಫಲವಾಗಿಯೇ. ಪಶುಪ್ರಾಣಿ ಗಳಲ್ಲಿಯೂ ಅಂತಹ ಆತ್ಮವೆಂಬುದಿದೆಯೆಂದು ಹೇಳುವವರಿರುವರಾದರೂ 'ಪ್ರಾಣಿಗಳ ಆತ್ಮ'ಕ್ಕೂ ಮಾನವನ ಆತ್ಮ'ಕ್ಕೂ ಇರುವ ಹಿರಿದಂತರವನ್ನು ಅವರು ನಿರಾಕರಿಸರು. ಪ್ರಾಣಿಗಳ ಆತ್ಮವು ಇಂದ್ರಿಯ ಜ್ಞಾನಕ್ಕಿಂತ ಮೇಲೇರಲಾರದು. ಆದರೆ ಮಾನವನ ಆತ್ಮವು ಇಂದ್ರಿಯ ಜ್ಞಾನಕ್ಕಿಂತ ಉನ್ನತಿಗೇರಿ, ವಾಸ್ತವಿಕತೆಯಿಂದ ಭಾವನಾ ಪ್ರಪಂಚಕ್ಕೆ, ದೃಗ್ಗೋಚರ ವಸ್ತುಗಳಿಂದ ವೇದಾಂತತತ್ವಗಳಿಗೆ, ಸೌಂದರ್ಯ, ಸತ್ಯ, ನ್ಯಾಯ, ನೈತಿಕಾ ಚರಣೆ ಮೊದಲಾದುವುಗಳಿಗೆ, ಇನ್ನೂ ಮೇಲೇರಿ ಭಗವಂತನ ಸನ್ನಿಧಾನಕ್ಕೆ ಹೋಗಬಲ್ಲುದು. ಪ್ರಾಣಿಗಳಿಂದ ಅದು ಸಾಧ್ಯವಿಲ್ಲದಿರುವಾಗ ಮಾನವನ ಆತ್ಮವೇ ಪ್ರಾಣಿಗಳಿಗೂ ಇದೆಯೆಂದು ಹೇಳಲು ಸಾಧ್ಯವಿಲ್ಲ. ಅದಕ್ಕಾಗಿ ಮಾನವನ ಆತ್ಮದಂತಿರುವ ಆತ್ಮಕ್ಕೆ ಆ ಹೆಸರನ್ನು ನೀಡಿರುವರು.

ಮಾನವನ ಆತ್ಮಕ್ಕೆ ಪ್ರಾಣಿಗಳ ಸ್ವಭಾವಗುಣಗಳೆಲ್ಲವೂ ಇವೆ. ಮಾತ್ರವಲ್ಲ ಕೆಲವು ವಿಶಿಷ್ಟತೆಗಳೂ ಇವೆ. ಹೀಗಾಗಿ ಅದೇ ನಿಜವಾದ ಆತ್ಮ. ಅದಕ್ಕೆ ಮರಣವಿಲ್ಲ. ಮನುಷ್ಯನು ಸತ್ತರೂ, ದೇಹವು ನಾಶವಾದರೂ ಆತ್ಮವು ಉಳಿಯುವುದು. ಅದು ಭಗವಂತನಲ್ಲಿ ಲೀನವಾಗುವುದಿಲ್ಲ.

ಹಿಂದೂಮತದ ಪ್ರಕಾರ ಆತ್ಮವು ಹಲವು ಜನ್ಮಾಂತರ ಸಂಬಂಧಗಳನ್ನು ಅನುಕ್ರಮವಾಗಿ ಪಡೆದು ಕೊನೆಗೊಂದು ದಿನ ಭವಬಂಧನದಿಂದ ಬಿಡುಗಡೆ (ಮುಕ್ತಿ) ಯನ್ನು ಹೊಂದಿ ಭಗವಂತನಲ್ಲಿ ಲೀನವಾಗುವುದು. ಆಮೇಲೆ ಆ ಆತ್ಮನ ವೈಯಕ್ತಿಕ ಅಸ್ತಿತ್ವವಿಲ್ಲ. ಈ ಲೋಕದಲ್ಲಿ 'ಅವನು, ಅವಳು, ಅವರು, ನೀವು, ನಾನು' ಮೊದಲಾದ ವೈಯಕ್ತಿಕತೆಗಳು ಅಳಿದು ಎಲ್ಲವೂ ಏಕೈಕ ಭಗವಂತನೇ ಆಗುವರು.

ಮಾನವನ ಆತ್ಮಕ್ಕೆ ಶ್ರೇಷ್ಠತೆಯು ಬರಲು ಕಾರಣವಿಲ್ಲದಿಲ್ಲ. ಬೈಬಲಿನ ಲೇಖಕನು ಮಾನವನ ಸೃಷ್ಟಿಯನ್ನು ಕುರಿತು ತಾನು ತಿಳಿದುಕೊಂಡ ವಿಷಯವನ್ನು–

"ನಮ್ಮ ಸ್ವರೂಪದಲ್ಲಿ, ನಮ್ಮ ಹೋಲಿಕೆಗೆ ಸರಿಯಾಗಿ ಮಾನವನನ್ನು ಸೃಷ್ಟಿಸೋಣ,... ಭಗವಂತನು ತನ್ನ ಸ್ವಂತ ರೂಪದಲ್ಲಿ ಮಾನವನನ್ನು ಸೃಷ್ಟಿಸಿದನು; ಭಗವದ್ರೂಪದಲ್ಲಿ ಆತನನ್ನು ಆತನು ಮಾಡಿದನು" (ಉತ್ಪತ್ತಿ : ೧-೨೬, ೨೭)

ಎಂದು ತಿಳಿಸುವನು. ಆ ಮಾತುಗಳಲ್ಲಿ ಮಾನವನ ಆತ್ಮದ ಹಿರಿಮೆಯು ವ್ಯಕ್ತವಾಗುತ್ತದೆ. ಅದರಲ್ಲಿಯೇ ಭಗವಂತನ ಪ್ರೇಮದ ಅಗಾಧತೆಯೂ ಸ್ಪಷ್ಟವಾಗುತ್ತದೆ. ಆತ್ಮವು ಅಲೌಕಿಕ ವಿಷಯವು; ಐಹಿಕ ಸ್ವಭಾವ ಬಾಹಿರವಾದುದು; ದೇಹವು ಅದರ ತಾತ್ಕಾಲಿಕ ಸ್ಥಾನವು. ಆ ಆತ್ಮಕ್ಕೆ ಸ್ಮರಣೆ, ಬುದ್ಧಿ, ಮನಸ್ಸುಗಳೆಂಬ ತ್ರಿವಿಧಗಳಾದ ಅಂತರಿಂದ್ರಿಯಗಳಿವೆ. ಅವುಗಳ ಸಹಾಯದಿಂದ ಮನುಷ್ಯನು ತನ್ನ ಸ್ವೇಚ್ಛಾಪ್ರವೃತ್ತಿಯನ್ನು ಕಾರ್ಯರೂಪದಲ್ಲಿ ತರುವನು; ಅದೇ ಆತನ ಸ್ವಾತಂತ್ರ್ಯದ ಮೂಲ. ಈ ಮನೋಸ್ವಾತಂತ್ರ್ಯ ... ವರ್ಗವೂ, ಸಸ್ಯಜಾತಿಯೂ, ಭಗವಂತನ ನಿಯಮ...

ವಿಲ್ಲದೆ ಜೀವಿಸುವುವು. ಮನುಷ್ಯನಿಗೆ ಮಾತ್ರ ಭಗವನ್ನಿಯಮಗಳನ್ನು ಪಾಲಿಸುವ ಕರ್ತವ್ಯವಿದೆ.

ಇಹಲೋಕದಲ್ಲಿ ನಾವು ಅನೇಕ ವಸ್ತು ವಿಷಯಗಳನ್ನು ಕಾಣುವೆವು. ಮಾನವನ ದೃಷ್ಟಿಯಲ್ಲಿ ಅವೆಲ್ಲವೂ ಆತನಿಗಿಂತ ಕೆಳಗಿನವು. ಆದರೂ ಅವುಗಳಲ್ಲಿ ಪ್ರತಿಯೊಂದೂ, ಪ್ರತಿಯೊಂದು ಅವಯವವೂ ಕೂಡ, ತತ್ವದ ಖನಿಯಾಗಿದೆ. ವ್ಯಕ್ತಿಯೊಬ್ಬನ ಕೈಯ ಬೆರಳುಗಳು ಕೂಡ ಏಕರೀತಿಯ ವಲ್ಲ. ಪ್ರತಿಯೊಂದರ ರೇಖೆಗಳು ಕೂಡ ವೈವಿಧ್ಯವನ್ನು ಪಡೆದಿವೆ ಯೆಂಬುದನ್ನು ಸಾಮುದ್ರಿಕವನ್ನು ಬಲ್ಲವರು ಹೇಳುವರು. ಮಾನವ ನೊಬ್ಬನ ತಲೆಯ ಕೂದಲುಗಳಲ್ಲಿ ಕೂಡ ಒಂದು ಇನ್ನೊಂದರಂತಿಲ್ಲ ಹಾಗಿರುವಾಗ ಆತ್ಮವೆಂಬುದು ಅದೆಂತಹ ತತ್ವದ ಆಗರವಾಗಿರಬಹುದು !

ನಮ್ಮ ಸುತ್ತಲೂ ಹಲವು ಬಗೆಯ ಜೀವಗಳನ್ನು ನಾವು ನೋಡಿರು ವೆವು. ಅವುಗಳಲ್ಲಿ ಪರಿಪೂರ್ಣತೆಯ ತರತಮ ಭೇದಗಳನ್ನು ನಾವು ತಿಳಿಯ ಬಹುದು. ಅತ್ಯಂತ ಕನಿಷ್ಠತರವಾದ ಸಸ್ಯಜೀವಕ್ಕಿಂತ ಅತ್ಯಂತ ಶ್ರೇಷ್ಠತರದ ಮಾನವ ಜೀವದವರೆಗೆ ಹಲವು ವಿಧಗಳನ್ನು ನಾವು ಕಲ್ಪಿಸಬಹುದು. ಮಾತ್ರವಲ್ಲ, ಮಾನವ ಜೀವಕ್ಕಿಂತಲೂ ಮಿಗಿಲಾದ ಜೀವವೂ ಇರಲೇ ಬೇಕು. ನಾವು ಕಾಣುವ ಪ್ರತಿಯೊಂದರಲ್ಲಿಯೂ ಮಾನವಜೀವಿಯಿಂದ ಕಲ್ಪಿಸಲಾಗದ ವ್ಯವಸ್ಥೆಗೆ ಕಾರಣವಾದ ಜಾಣ್ಮೆಯ ಲಕ್ಷಣಗಳು ತೋರುತ್ತವೆ. ಹಾಗಿರುವಾಗ ಆ ಶ್ರೇಷ್ಠವಾದ ಜಾಣ್ಮೆಗೆ ಅನುಗುಣವಾದ ಅದೊಂದು ಮನವಿರಬೇಕು. ಒಂದು ಜೀವವಿರಬೇಕು; ಆ ಜೀವವು ಮಾನವಜೀವಕ್ಕಿಂತ ಅದೆಷ್ಟೋ ಮಿಗಿಲು—ಅವನ್ನೇ ನಾವು ಭಗವಂತ ನೆನ್ನುವುದು. ಈ ದೈವಿಕಜೀವನವನ್ನು ಪರಿಪೂರ್ಣವಾಗಿ ಮಾನವನು ಪಡೆಯಲಾರನು. “ಅವರಲ್ಲಿ ಜೀವವಿರುವಂತೆಯೂ ಅದೂ ಸಮೃದ್ಧಿ ಯಾಗಿರುವಂತೆಯೂ ನಾನು ಬಂದೆನು” (ಯೋಹಾನ ೧೦, ೧೦)

ಎಂದು ಯೇಸುವು ಹೇಳಿದ ಮಾತನ್ನು ನಾವೀಗ ಸಮನ್ವಯ ಗೊಳಿಸಬಹುದು.

ಮಾನವನ ಪತನ

ಬೈಬಲಿನ 'ಉತ್ಪತ್ತಿ' (Genesis) ಗ್ರಂಥವಿಭಾಗದಲ್ಲಿ ಆದಿ ಮಾನವನಿಗೆ ಸಹಚರಿಯಾಗಿ ಈವಾ ಎಂಬ ಸ್ತ್ರೀಯನ್ನು ಭಗವಂತನು ಆದಮನ ಪಕ್ಕಾಸ್ಥಿಯೊಂದರ ಸಂಬಂಧದಿಂದ ಸೃಷ್ಟಿಸಿದನೆಂದು ಹೇಳಿದೆ. ಹಾಗೆ ಪುರುಷನ ಅಸ್ಥಿಯೊಂದರ ಸಂಬಂಧದಿಂದ ರಚಿಸಲ್ಪಟ್ಟುದರಿಂದ ಸ್ತ್ರೀಗೆ 'ಕಳತ್ರ' ಎಂಬ ಹೆಸರು ಬಂದಿರಬಹುದು. ಕಳ ಎಂಬುದಕ್ಕೆ ಮೂಲದಿಂದ ತೆಗೆಯುವಿಕೆ, ಪಿಂಗಡಿಸುವಿಕೆ ಎಂಬ ಅರ್ಥವಿದೆ. ತ್ರ ಎಂಬುದು ರಕ್ಷಣಾರ್ಥವನ್ನು ಸೂಚಿಸುವುದು. ಮೂಲ ಆದಮನಿಂದ ತೆಗೆದು ಸೃಷ್ಟಿಸಲ್ಪಟ್ಟ ಕಾರಣ ಆತನಿಂದ ಆಕೆಯು ರಕ್ಷಿಸಲ್ಪಡುವವಳು. ಆ ಆದಿ ದಂಪತಿಗಳು ಯಾವಬಗೆಯ ಕೊರತೆಯನ್ನನುಭವಿಸದೆ, ಸುಖ ದಿಂದಲೂ ಸಂತೋಷದಿಂದಲೂ ಭೂಸ್ವರ್ಗವೆಂಬ ಅನ್ವರ್ಥನಾಮವನ್ನು ಪಡೆದ ನಂದನವನದಲ್ಲಿ ಸತತ ವಿನೋದಿಸುತಿದ್ದರು. ನಮಗಿರುವಂತೆ ಅವರಿಗೊಂದು ದೇಹವೂ ಅಮರವಾದ ಆತ್ಮವೂ ಇದ್ದುವಾದರೂ ನಾವು ತಿಳಿಯದ ಅನೇಕ ವರಪ್ರಸಾದಗಳು ಅವರಿಗಿದ್ದುವು. ಅವರಲ್ಲಿ ಭಗವತ್-ಜೀವವು ಅಧಿಕ ಪ್ರಮಾಣದಲ್ಲಿತ್ತು. ಅದರಿಂದಾಗಿ ಆ ಆದಿ ದಂಪತಿ ಗಳು ಭಗವಂತನ ಸ್ವೀಕಾರಕ್ಕೆ ಯೋಗ್ಯರಾಗಿದ್ದರು. ಸ್ವರ್ಗಲೋಕದಲ್ಲಿ ಪತನಗೊಂಡ ಸೈತಾನ ಹಾಗೂ ಆತನ ಸಹಚರರಿಂದ ತೆರವಾದ ಸ್ಥಾನ ಗಳನ್ನು ಅವರು ಪಡೆಯಲಿದ್ದರು. ಮೃತ್ಪಿಂಡ ಮಾನವನ ಉನ್ನತಿಗೆ, ಆತನ ಸಹಜ ಸ್ವಭಾವವನ್ನು ಮೀರಿದ ಆ ಮಹಾ ವರಪ್ರಸಾದ ಗಳನ್ನೂ ಅನೇಕಾನೇಕ ಉಪಪ್ರಸಾದಗಳನ್ನೂ ಭಗವಂತನು ಕರುಣಿ ಸಿದ್ದನು. ಭಗವಂತನ ಸಾಮೀಪ್ಯವನ್ನು—ಸಮಾನತೆಯಲ್ಲ—ಆತನು ಪಡೆದಿದ್ದನು. ಈ ಎಲ್ಲ ವರಪ್ರಸಾದಗಳನ್ನು 'ಪವಿತ್ರೀಕರಣದ ವರ' (Sanctifying Grace) ವೆಂದು ಕರೆಯಬಹುದು. ಇಷ್ಟೇ ಮಾತ್ರ ವಲ್ಲ, ನಿಶ್ಚಿತ ಕಾಲಾವಧಿಯತನಕ ಐಹಿಕ ನಂದನವನದಲ್ಲಿ ವಿಹರಿಸಿ, ಸಶರೀರರಾಗಿ ಅಮರತ್ವ ಪಡೆದಾಗ ಸ್ವರ್ಗಭಾಗ್ಯವನ್ನು ಅವರಿಗೆ ಆಶ್ವಾಸಿಸ ಲಾಗಿತ್ತು. ಕೇವಲ ಸೃಷ್ಟಿಯಾದ ಮಾನವನು ಭಗವಂತನ ಪುತ್ರನಾಗಿ

ಸ್ವೀಕರಿಸಲ್ಪಟ್ಟಿದ್ದನು. ಆದರೆ ಈ ಎಲ್ಲ ಸೌಭಾಗ್ಯ ಸಂಪತ್ತು ಆ ದಂಪತಿಗಳಿಗೂ ಅವರ ಸಂತಾನಕ್ಕೂ ಒಂದು ನಿಯಮದ ಮೇಲೆ ಆಶ್ವಾಸಿಸಲಾಗಿತ್ತು.

ಆದಿ ದಂಪತಿಗಳು ಭೂಸ್ವರ್ಗದಲ್ಲಿ ವಿನೋದಿಸುತ್ತಿದ್ದರು. ಬೈಬಲ್ ತಿಳಿಸುವಂತೆ ಅವರಿಗೆ ಯಾವ ಬಗೆಯ ಎಡರು-ತೊಡರುಗಳಿದ್ದಿಲ್ಲ. ಕೈಗೆಟಕುವ ಹಾಗಿದ ಹಣ್ಣುಗಳಿದ್ದ ಫಲವೃಕ್ಷಗಳಿದ್ದುವು. ರೋಗ, ದಾರಿದ್ರ್ಯ, ಕಷ್ಟ ಮೊದಲಾದುವು ಅವರಲ್ಲಿದ್ದಿಲ್ಲ. ನಿಸರ್ಗವು ಪರಿಪೂರ್ಣವಾಗಿ ಅವರ ಅಧೀನವಾಗಿತ್ತು. ಅವರು ಸರ್ವ ಸ್ವತಂತ್ರರೆನಿಸಿದ್ದರೂ ಒಂದು ನಿಯಮವನ್ನು ಪಾಲಿಸಬೇಕಾಗಿತ್ತು. ನಂದನ ವನದಲ್ಲಿ ಅನೇಕ ಫಲವೃಕ್ಷಗಳೂ, ಲತೆಗಳೂ ಇದ್ದುವು. ಫಲಗಳಿಗೂ, ಪುಷ್ಪಗಳಿಗೂ ಕೊರತೆಯಿದ್ದಿಲ್ಲ. ಆದರೆ ಭಗವಂತನು ನಿರ್ದೇಶಿಸಿದ ಫಲವೃಕ್ಷವೊಂದಿತ್ತು. ಅದರ ಫಲವನ್ನು ಅವರು ತಿನ್ನಬಾರದಾಗಿತ್ತು. ಅದರ ಫಲಭುಂಜನದಿಂದ ಅವರ ಸ್ಥಾನವು ಮುರಿದುಹೋಗಲಿತ್ತು. ಭಗವಂತನ ನಿಯಮದ ಅತಿಕ್ರಮಣವಾಗುತ್ತಿದ್ದುದರಿಂದ ಪತನವು ಫಲವಾಗಲಿತ್ತು. ಅವರಿಗೆ ಅಧೋಗತಿಯು ಬರಲಿತ್ತು. ಅವರಿಗೆ ಮರಣವು ಬರುತ್ತಿತ್ತು. ಭಗವಂತನು ನೀಡಿದ ಆ ಶ್ರೇಷ್ಠ ವರಗಳೆಲ್ಲವೂ ಕಳೆದುಹೋಗಲಿದ್ದುವು. ಆದಿದಂಪತಿಗಳು ಅದಕ್ಕಾಗಿ ಆ ಫಲವನ್ನು ಮುಟ್ಟುತ್ತಿರಲಿಲ್ಲ. 'ಜ್ಞಾನ' ವೃಕ್ಷ—ಸರಿ ತಪ್ಪುಗಳನ್ನು ತಿಳಿಯುವಂತೆ ಮಾಡುವ ಮರವೆಂದು ಅದನ್ನು ಅವರು ಹೆಸರಿಸಿದ್ದರು.

ಸೈತಾನನು ತನ್ನ ಪತನದಿಂದ ಸ್ವಾಗತವನ್ನು ಕಳೆದುಕೊಂಡಿದ್ದನು. ಆದರೆ ತನ್ನ ಹಾಗೂ ತನ್ನ ಪಕ್ಷದವರ ಸ್ಥಾನಗಳನ್ನು ತನ್ನ ಸ್ಥಿತಿಗಿಂತಲೂ ಕೀಳಾದ ವ್ಯಕ್ತಿಗಳಿಂದ ಮಾನವನಿಂದ ಪುನಃ ಭರ್ತಿಮಾಡುವ ಭಗವಂತನ ಯೋಜನೆಯನ್ನು ತಿಳಿದನು. ತಾನು ಕಳೆದುಕೊಂಡ ಆ ಪದವನ್ನು ಮಾನವನೂ ಪಡೆಯದಂತೆ ಸೃಷ್ಟಿಯ ಪಿತನೂ ತನುದ ರಾಜನೂ ಆದ ಆತನೂ ಯುಕ್ತ ಹಂಚಿಕೆಯೊಂದನ್ನು ಹೂಡಿದನು. ತನ್ನ ಯೋಜನೆಗೆ ಅನುಗುಣವಾಗಿ ಆದಿದಂಪತಿಗಳಿಗೆ ಭಗವಂತನಿತ್ತ ಆದೇಶದಲ್ಲಿ ವಿಷಯ ಬೀಜವೊಂದನ್ನು ಕಂಡುಕೊಂಡನು. ಅದನ್ನೇ ಆಧಾರವಾಗಿಟ್ಟುಕೊಂಡು

ಕುಹಕವೃತ್ತಿಯಿಂದ ನಿಷೇಧಿಸಿದ ವೃಕ್ಷದ ಫಲಗಳನ್ನು ತಿನ್ನುವಂತೆ ಮಾಡಿ ಭಗವನ್ನಿಯಮಾತಿಕ್ರಮಣವನ್ನು ಮಾಡಿಸಲು ನಿಶ್ಚಯಿಸಿದನು. ಆತನು ಸರ್ಪದ ರೂಪದಲ್ಲಿ ಈವಾಳ ಮುಂದೆ ಬಂದು, ಮಾನವಭಾಷೆಯಲ್ಲಿ ಸಂಭಾಷಿಸುತ್ತ ಈವಾಳ ರೂಪವನ್ನು ಹೊಗಳಿದನು. ಹೊಗಳಿಕೆಗೆ ಉಬ್ಬುವ ಸ್ತ್ರೀಜಾತಿಯ ಈವಾಳು ಸೈತಾನನ ಬಲೆಯಲ್ಲಿ ಬಿದ್ದಳು. ಸಾಮಾನ್ಯ ಉರಗಜಾತಿಗೆ ಮಾನವ ಶಕ್ತಿಗಳು ಆವಿರ್ಭವಿಸಲು ಕಾರಣವನ್ನು ಕೇಳಿದಳು. ನಾಗರೂಪದ ಸೈತಾನನಿಗೂ ಅದೇ ಬೇಕಾಗಿತ್ತು. ಆಕೆಯನ್ನು ನಿಷೇಧಿಸಿದ ಫಲವೃಕ್ಷದ ಬಳಿಗೊಯ್ದು ಸಾಮಾನ್ಯ ನಾಗನು ನಾಗರಾಜನೂ ಮಾನುಷಶಕ್ತಿ ಶ್ರೀಮಂತನೂ ಆಗುವಂತೆ ಮಾಡಿದ 'ದಿವ್ಯವೃಕ್ಷ'ವೆಂಬು ಅದನ್ನು ಹೊಗಳಿದನು. ಅಲ್ಲದೆ ಸಾಮಾನ್ಯ ಸ್ತ್ರೀಯಾದ ಆಕೆಯು ದೇವಸ್ತ್ರೀಯಾಗುವಳೆಂದೂ, ಅಮರತ್ವವನ್ನು ಪಡೆಯುವಳೆಂದೂ ತರ್ಕಬದ್ಧವಾಗುವ ರೀತಿಯಲ್ಲಿ ಬಿತ್ತರಿಸಿದನು. ಮರಣವು ಬಾರದೆಂದೂ, ಆದರೆ ಅದು ಬರಲೇಬೇಕಾದರೆ ಒಂದು ಸ್ವಭಾವವನ್ನು ಕಳೆದು ನವೀನವಾದ ಇನ್ನೊಂದು ಸ್ವಭಾವವನ್ನು ಪಡೆಯುವಾಗ ಮಾತ್ರವೆಂದೂ ತಿಳಿಸಿ ಆಕೆಯನ್ನು ಒಡಂಬಡಿಸಿದನು. ಸರ್ಪದ ಮಾತಿನಲ್ಲಿ ವಿಶ್ವಾಸವಿಟ್ಟು ಆಕೆಯು ಆ ಹಣ್ಣನ್ನು ತಿಂದಳು, ತನ್ನ ಪತಿಗೂ ತಿನ್ನಿಸಿದಳು. ಭಗವನ್ನಿಯಮದ ಉಲ್ಲಂಘನವು ಪೂರ್ಣವಾಯಿತು. ಅದೇ ಮಾನವನ ಪ್ರಥಮ ಪತನ.

ಪತನದ ಪರಿಣಾಮ

ಆದಿದಂಪತಿಗಳು ಅಖಿಲ ಮಾನವಕೋಟಿಯ ಮೂಲಪುರುಷರು. ಅವರು ಪಡೆದ ಸೌಲಭ್ಯಗಳೂ ವರಪ್ರಸಾದಗಳೂ ಅವರ ಸಂತತಿಗೂ ಬರಲಿದ್ದುವು. ಆದರೆ ಹಾಗೆ ಬರುವಂತೆ ಮಾಡಲು ಪಾಲಿಸಬೇಕಾಗಿದ್ದ ನಿಯಮದಲ್ಲಿ ಅವರು ಜಾರಿದರು. ಆ ನಿಯಮೋಲ್ಲಂಘನೆಯ ದುಷ್ಪರಿಣಾಮದಲ್ಲಿ ಆ ದಂಪತಿಗಳು ಎಲ್ಲ ವಿಶೇಷ ಪ್ರಸಾದಗಳನ್ನು ತಮ್ಮ ಸಂತತಿಗೂ ನೀಡಲು ಅಸಮರ್ಥರಾದರು ಮಾತ್ರವಲ್ಲ ತಮ್ಮ ಸ್ವಂತ ಉಪಯೋಗಕ್ಕೆ ಕೂಡ ಬಳಸಲು ಇಲ್ಲದಷ್ಟು ಅವನತಿಯನ್ನು ಪಡೆದರು.

ಅವರಿಗೂ ಅವರ ಸಂತತಿಗೂ ಮರಣವು ಬಂದಿತು. ಸ್ವರ್ಗದ್ವಾರವು ಮುಚ್ಚಿತು.

ಮರಣವು ಪತನದ ಪರಿಣಾಮವು. ಅದು ದೈಹಿಕವಾಗಿಯೂ ಆತ್ಮಿಕವಾಗಿಯೂ ಬಂದಿತು. ಮರಣದೊಡನೆ ಅನೇಕ ದೈಹಿಕ ಹಾಗೂ ನೈತಿಕ ಅನಾಹುತಗಳು ಆಗಮಿಸಿದುವು. ಪಾಶವೀಶಕ್ತಿಗಳ ಪ್ರಾಬಲ್ಯವು ವಿವೇಕ ಮೊದಲಾದ ಸತ್-ಶಕ್ತಿಗಳ ಪರಾಜಯಕ್ಕಾಗಿ ಹೆಣಗಾಡತೊಡಗಿತು. ದೈಹಿಕಯಾತನೆ, ಮಾನಸಿಕ ಉದ್ವಿಗ್ನತೆ, ರೋಗ, ದಾರಿದ್ರ್ಯ ಮೊದಲಾದುವುಗಳೊಡನೆ ಮಾನವನನ್ನು ಪಶುವಿಗಿಂತಲೂ ಹೀನಸ್ಥಿತಿಗೆ ಸೆಳೆಯುವ ಅನೇಕಾನೇಕ ದುಸ್ಥಿತಿಗಳು ಬಂದುವು. ಆತ್ಮಿಕ ಮರಣವೂ ಬಂದಿತೆಂದು ಹೇಳಬಹುದು. ಆದರೆ ಆತ್ಮದ ಪ್ರಕೃತಿಗನುಗುಣವಾಗಿ ದೈಹಿಕ ಮರಣದಂತಹ ಮರಣವನ್ನು ಭಗವಂತನು ನೀಡಲಿಲ್ಲ. ತನ್ನ ಸಹಜ ಸ್ವಭಾವಕ್ಕಿಂತ ಮೇಲಾಗಿರುವ ವರಪ್ರಸಾದಗಳನ್ನು ಅದು ಕಳೆದುಕೊಂಡಿತು. ಆ ಭಗವತ್ ಜೀವನನ್ನು ಅದು ಕಳೆದುಕೊಂಡಿತು. ಹೀಗೆ ಮಾನವನು ಹೀನದೆಸೆಗೆ ಬಂದನು. ಆ ಆದಿ ದಂಪತಿಗಳ ಪತನವು ನಮ್ಮ ಪತನವೂ ಆಗಿಹೋಯಿತು. ಅವರು ಪಡೆದ ದುಷ್ಪರಿಣಾಮುಗಳನ್ನು ನಾವು ಪಡೆದೆವು. ಕ್ರೈಸ್ತರು ಈ ಪತನದ ದುಷ್ಪರಿಣಾಮುಗಳನ್ನು ಮೂಲ ಪಾತಕ ಅಥವಾ ಜನ್ಮಪಾತಕ (Original Sin) ವೆಂದು ಕರೆಯುವರು.

ಭಗವಂತನ ದಯೆಯೇ ಮಾನವನ ಭರವಸೆ

ಪತನದ ದುಷ್ಪರಿಣಾಮುಗಳು ಫಲಭಕ್ಷಣದ ಉತ್ತರಕ್ಷಣದಲ್ಲಿಯೇ ತೋರಿದುವು. ಆದಿ ದಂಪತಿಗಳಲ್ಲಿ ನವೀನ ಜ್ಞಾನೋದಯವಾಯಿತು. 'ಸರಿ–ತಪ್ಪು'ಗಳನ್ನರಿಯುವ ವಿವೇಕವು ವೃದ್ಧಿಯಾಯಿತು. ಅವರಲ್ಲಿ ಲಜ್ಜೆ ಮೊದಲಾದ ವಿಷಯಗಳು ಮೊಳೆತುವು. ಜಾಯಾಪತಿಗಳಾದ ಅವರು ತಾವು ನಗ್ನರಾಗಿರುವುದರಿಂದ ಲಜ್ಜಿತರಾದರು. ಹಸುರೆಲೆಗಳನ್ನು ನಡುವಿಗೆ ಕಟ್ಟಿಕೊಂಡರು. ಅವರಲ್ಲಿ ಅನೇಕ ಕಟುಭಾವನೆಗಳು ಆವಿರ್ಭವಿಸಿದುವು. ಪರಸ್ಪರ ದೋಷಾರೋಪಣೆಗೆ ತೊಡಗಿದರು. ಒಂದು ಮಾತಿನಲ್ಲಿ ಹೇಳುವುದಾದರೆ ಉದಾತ್ತಗುಣಗಳ ಸ್ಥಾನದಲ್ಲಿ ಷಡ್ವೈರಿಗಳ

ತಾಂಡವನೃತ್ಯಕ್ಕೆ ತೊಡಗಿದುವು. ಅಂದಿನಿಂದ "ಜಗತ್ತಿನಲ್ಲಿ ಮಾನವನ ಬಾಳುವೆಯು ಒಂದು ಕಾಳಗವಾಗಿದೆ." (ಜೋಲು ೭-೧)

ಆದಿ ದಂಪತಿಗಳು ಫಲಭಕ್ಷಣದಿಂದ ನಿಯಮಾತಿಕ್ರಮಣವನ್ನು ಮಾಡಿದರು. ಅವರಿಬ್ಬರೂ ಆ ವಿಕ್ರಿಯೆಗೆ ಕಾರಣಭೂತರಾಗಿ ತರ್ಕ-ವಿತರ್ಕಗಳಿಂದ ಪರಸ್ಪರ ಸಾಧಿಸುತ್ತಿರುವಾಗ ಭಗವಂತನ ಸಾಕ್ಷಾತ್ಕಾರದ ಅರಿವಾಯಿತು. ಅವರಿಬ್ಬರೂ ಭಯಗೊಂಡು ವೃಕ್ಷಗಳೆಡೆಯಲ್ಲಿ ಅಡಗಿದರು. ಆದರೆ ಭಗವಂತನು ಅದರ ಕಾರಣವನ್ನು ವಿಚಾರಿಸಲು ಆತನು ತಾನು ಭಯಗೊಂಡುದೆಂಬುದನ್ನು ತಿಳಿಸಿದನು. ಭಗವಂತನು ಇನ್ನೂ ಪ್ರಶ್ನಿಸಲು ತಾನು ಈವಾಳಿಂದ ವಂಚಿತನಾಗಿ ಫಲವನ್ನು ತಿಂದನೆಂದು ಆತನೂ, ಈವಾಳನ್ನು ವಿಚಾರಿಸಲು ಅಕೆಯು ಸರ್ಪದಿಂದ ಮೋಸಗೊಳಿಸಲ್ಪಟ್ಟವಳೆಂದೂ ತಮ್ಮ ಅತಿಕ್ರಮಣದ ದೋಷವನ್ನು ಇನ್ನೊಬ್ಬರ ಮೇಲೆ ಹೊರಿಸಿದರು. ಆದರೆ ಭಗವಂತನು ಸರ್ವವನ್ನೂ ತಿಳಿದವನು. ವ್ಯಕ್ತಿಯ ಅಪರಾಧವನ್ನು ಯುಕ್ತ ರೀತಿಯಲ್ಲಿ ನಿಷ್ಕರ್ಷಿಸಿ, ತದನುಗುಣವಾದ ಶಿಕ್ಷೆಯನ್ನು ನೀಡುವುದು ಧರ್ಮವು. ಭಗವಂತನೂ ಅದನ್ನು ಅನುಸರಿಸಿಯೇ ಆದಿ ದಂಪತಿಗಳನ್ನು ಪ್ರಶ್ನಿಸಿದುದೆಂದು ಬೈಬಲಿನ ಲೇಖಕನು ಆ ರೀತಿಯಲ್ಲಿ ಕಥಿಸಿರಬಹುದು. ಎಲ್ಲರಿಗೂ ಭಗವಂತನು ಶಿಕ್ಷೆಯನ್ನಿತ್ತನು. ನಾಗ ರೂಪದ ಸೈತಾನನಿಗೆ, "ಸ್ತ್ರೀಗೂ ನಿನಗೂ, ನಿನ್ನ ವಂಶಕ್ಕೂ ಆಕೆಯ ವಂಶಕ್ಕೂ ವೈರವನ್ನು ಹಾಕುವೆನು. ಆಕೆಯು ನಿನ್ನ ತಲೆಯನ್ನು ಮೆಟ್ಟುವಳು. ಆಕೆಯ ಪಾದದೆಡೆಗಾಗಿ ನೀನು ಕಾಯುತ್ತಿರುವೆ." (ಉತ್ಪತ್ತಿ ೩-೧೫) ಎಂದನು. ಅನಂತರ ಈವಾಳನ್ನು ಉದ್ದೇಶಿಸಿ-

"ನಿನ್ನ ದುಃಖಗಳನ್ನೂ ಗರ್ಭಧಾರಣೆಯನ್ನು ವೃದ್ಧಿಗೊಳಿಸುವೆನು. ದುಃಖದಿಂದಲೇ ನೀನು ಮಕ್ಕಳನ್ನು ಪಡೆಯುವೆ; ನೀನು ಪತಿಯ ಅಧಿಕಾರದೊಳಗಿರುವೆ; ಆತನು ನಿನ್ನ ಮೇಲೆ ಸ್ವಾಮ್ಯವನ್ನು ಪಡೆಯುವನು" (ಉತ್ಪತ್ತಿ ೩-೧೬) ಎಂದೂ, ಆದಮನನ್ನು ಸಂಬೋಧಿಸಿ,

"ನಿನ್ನ ಪತ್ನಿಯ ಮಾತನ್ನಾಲಿಸಿ, ನೀನು ತಿನ್ನಲಾಗದೆಂದು ನಾನು ನಿಷೇಧಿಸಿದ ಫಲವನ್ನು ತಿಂದುದರಿಂದ ನಿನ್ನ ಕಾರ್ಯದಿಂದ ಜಗತ್ತು ಶಪಿಸಲ್ಪಡಲಿ; ನಿನ್ನ ಜೀವನದ ಎಲ್ಲ ದಿನಗಳಲ್ಲಿಯೂ ನಿನ್ನ ಶ್ರಮ

ಹಾಗೂ ಕಾರ್ಯಗಳ ಫಲವಾಗಿ ನೀನು ಉಣ್ಣಲಿರುವೆ; ಅದು ನಿನಗೆ ಮುಳ್ಳುಕಂಟಿಗಳನ್ನು ತಂದೊಡ್ಡುವುದು. ಜಗತ್ತಿನ ಮೂಲಿಕೆಗಳನ್ನು ನೀನು ತಿನ್ನುತ್ತಲಿರುವೆ; ಯಾವ ಮಣ್ಣಿನಿಂದ ನೀನು ತೆಗೆಯಲ್ಪಟ್ಟಿರುವೆಯೋ ಅದೇ ಮಣ್ಣಿಗೆ ಹೋಗುವ ತನಕ ನಿನ್ನ ಆಹಾರವನ್ನು ನಿನ್ನ ಮುಖದ ಬೆವರಿನಲ್ಲಿ ತಿನ್ನಲಿರುವೆ. ನೀನು ಧೂಳಿಯಾಗಿರುವೆ, ಅದೇ ಧೂಳಿಗೆ ನೀನು ಹಿಂತಿರುಗುವೆ" (ಉತ್ಪತ್ತಿ ೩-೧೭-೧೯) ಎಂದನು.

ಪತನಗೊಂಡ ಮಾನವನಲ್ಲಿ ನಿರಂತರವಾದ ಒಳತೋಟಿಯೊಂದಿದೆ. ಆತನ ದೇಹದ ವಿವಿಧ ಅವಯುವಗಳು ಒಂದು ಕಡೆಗೆ ಎಳೆಯುವಾಗ ಮನವು ತದ್ವಿರುದ್ಧವಾದ ದೆಸೆಗೆ ಸೆಳೆಯುವುದು. ಮನವು ಭಗವತ್-ಸನ್ನಿಧಾನದತ್ತ ನಮ್ಮನ್ನು ಕರೆಯುತ್ತಿದೆ; ಆದರೆ ದೇಹವು ಅಲ್ಪ, ಅಸ್ಥಿರ ವಿಷಯಗಳ ಭೋಗದತ್ತ ಸರಿಯುತ್ತದೆ. ಯಾವ ವಸ್ತು ಎಷ್ಟಿದ್ದರೂ ತೃಪ್ತಿಯೆಂಬುದಿಲ್ಲ! ಆದರೆ ಭಗವಂತನ ಪ್ರೇಮವೂ ದಯೆಯೂ ನಮ್ಮನ್ನುಳಿಸಲು ಮುಂದೆ ಬಂದಿತು. ದಯಾಸಾಗರನಾದ ಆತನು ಮಾನವನನ್ನು ಉದ್ಧರಿಸಲು ರಕ್ಷಕನನ್ನು ಕರುಣಿಸುವ ವಾಗ್ದಾನ ಮಾಡಿದನು. ಪಾತಕವೆಂಬುದು ಭಗವನ್ನಿಯಮವನ್ನು ತಿಳಿದೂ ಮಾಡುವುದರಿಂದ ಲಭಿಸುವುದು.

"ಆದಮನಿಂದಲೇ ಪಾತಕವೂ, ಪಾತಕದಿಂದ ಮರಣವೂ ಲೋಕದಲ್ಲಿ ಸೇರಿದುವು. ಪಿತ್ರಾರ್ಜಿತವಾದ ಆ ಪಾತಕದಲ್ಲಿ ನಾವೆಲ್ಲರೂ ಭಾಗಸ್ಥರಾದುದರಿಂದ ಮರಣವು ನಮ್ಮೆಲ್ಲರಲ್ಲಿಯೂ ವ್ಯಾಪಿಸಿತು" (ರೋಮನರಿಗೆ ೫-೧೨).

ಮೃತ್ಪಿಂಡ ಮಾನವನು ಭಗವಂತನ ನಿಯಮೋಲ್ಲಂಘನದಿಂದಾಗಿ ಆತನ ಮಹತ್ವಕ್ಕೆ ಅವಮಾನವೆಸಗಿದನು. ಆ ಅಪರಾಧಕ್ಕೆ ಯುಕ್ತ ಪರಿಹಾರವನ್ನು ಮಾನವನು ನೀಡಲರಿಯನು. ಕೇವಲ ಸೃಷ್ಟಿಯಾದ ಮನುಷ್ಯನು ಸೃಷ್ಟಿಕರ್ತನಿಗೆ ಅದಾವ ಬಗೆಯಲ್ಲಿ ಪರಿಹಾರವನ್ನು ನೀಡುವನು? ಮಹಾರಾಜನೊಬ್ಬನನ್ನು ಸಾಂತ್ವನಗೊಳಿಸಲು ದರಿದ್ರನಿಂದ ಸಾಧ್ಯವಾಗದು; ಮಹಾರಾಜನ ಸಮೀಪವರ್ತಿಯೋ, ಆತ್ಮೀಯನೋ ಅಥವಾ ಪ್ರಭಾವಶಾಲಿ ವ್ಯಕ್ತಿಯೋ ಆ ಕಾರ್ಯವನ್ನು ಮಾಡುವನು,

ಹಾಗಾದರೆ, ವಿಶ್ವವನ್ನೇ ಸೃಷ್ಟಿಸಿದ ಭಗವಂತನಿಗೆ ಮುಕ್ತ ಪರಿಹಾರ ವನ್ನು ನೀಡಲು ಭಗವದ್ ವ್ಯಕ್ತಿಯೇ ಬರಬೇಕಾಗುತ್ತದೆ. ಹಾಗೆಯೇ ಆಯಿತು. "ವಿಶ್ವಾಸವನ್ನು ಹೊಂದಿರುವರು ನಾಶವಾಗದೆ, ಅನಂತ ಜೀವನನ್ನು ಪಡೆಯುವಂತೆ ತನ್ನ ಏಕಮಾತ್ರ ಪುತ್ರನನ್ನು ನೀಡುವಷ್ಟು ಭಗವಂತನು ಲೋಕವನ್ನು ಪ್ರೀತಿಸಿದನು. (ಯೋಹಾನ ೩, ೧೫-೧೬)" ಇದನ್ನು ಮುಂದೆ ನೋಡಲಿರುವೆವು.

೪. ಯೇಸುವೇ ವಾಗ್ದತ್ತ ರಕ್ಷಕನು

ಪುರುಷತ್ರಯೈಕ ಭಗವಂತ

ಕ್ರೈಸ್ತರು ಏಕಮಾತ್ರ ಭಗವಂತನ ಆರಾಧಕರೆಂದು ನಾವು ಹೇಳಿರುವೆವು. ಆದಿಮಾನವನ ಪತನದ ದುಷ್ಫಲವನ್ನು ನೀಗಲು, ಭಗವಂತನಿಗೆ ಯುಕ್ತ ಪರಿಹಾರವನ್ನು ನೀಡಲು ಭಗವತ್-ಪುತ್ರನೇ ಬರಬೇಕಾಯಿತೆಂದು ಹೇಳಿದೆವು. ಆದುದರಿಂದ ಒಬ್ಬನಿಗಿಂತ ಅಧಿಕ ಮಂದಿ ಭಗವಂತರಿರುವರೆಂದು ತಿಳಿಯಲೆಡೆಯಿದೆ. ಈ ವಿರೋಧಾಭಾಸವನ್ನು ನಿವಾರಿಸಿ, ಸ್ಪಷ್ಟಗೊಳಿಸಬೇಕಾಗಿದೆ. ಅದು ಸುಲಭವೇನಲ್ಲ. ಭಗವಂತನ ಪರಮಶ್ರೇಷ್ಠತೆಯನ್ನು, ಅಪರಿಮಿತತೆಯನ್ನು ಇತಿಮಿತಿಗಳಿಂದ ಪರಿವೇಷ್ಟಿತವಾದ ನಮ್ಮ ಮನಸ್ಸು ಅರಿಯದು. ಅದರೂ ಸ್ವಲ್ಪ ಪರಿಚಯವನ್ನು ನೀಡಬೇಕಾಗಿದೆ.

ಭಗವಂತನನ್ನು ಸರ್ವಸಂಪೂರ್ಣತೆಯನ್ನು ವ್ಯಕ್ತಗೊಳಿಸುವ ಅನೇಕ ಅನ್ವರ್ಥನಾಮಗಳಿಂದ ನಾವು ಸ್ತುತಿಸುವೆವು. ಅವುಗಳೊಡನೆ ಮಾನವ ಸಂಬಂಧಗಳನ್ನು ವ್ಯಕ್ತಗೊಳಿಸುವ ಹೆಸರುಗಳನ್ನೂ ಬಳಸುವೆವು. ಹೀಗೆ 'ಮೋಕ್ಷದ ಪಿತ', 'ಸ್ವರ್ಗಲೋಕದ ತಂದೆ' ಮೊದಲಾದುವುಗಳನ್ನು ಆಸ್ತಿಕ ಮತಗಳೆಲ್ಲವೂ ಸರ್ವಸಾಮಾನ್ಯವಾಗಿ ಪ್ರಯೋಗಿಸುತ್ತವೆ. 'ತಂದೆ, ಪಿತ' ಎಂದು ಕರೆಯಲ್ಪಡಲು ಆತನ ಸೃಷ್ಟಿಶಕ್ತಿಯೇ ಕಾರಣವು. ಸೃಷ್ಟಿಯ ಫಲವಾಗಿ ಅಸ್ತಿತ್ವದಲ್ಲಿ ಬಂದ ನಾವು ಆತನನ್ನು ಆ ರೀತಿ ಕರೆಯುವುದು ವಿಹಿತವಾಗಿದೆ. ಗಾಂಧೀಜಿಯವರನ್ನು 'ಜನಾಂಗದ ಪಿತ' 'ಬಾಪೂ' ಎಂದು ಕರೆಯುವಂತೆ ಭಗವಂತನನು ಸಂಬೋಧಿಸುವುದು ಹೆಚ್ಚು ಸಮಂಜಸವಾಗಿದೆ.

ಆದರೆ ಕ್ರೈಸ್ತರು ನೈಜಾರ್ಥದಲ್ಲಿಯೂ ಭಗವಂತನನ್ನು ಪಿತನೆನ್ನುವರು. ಭಗವಂತನಿಗೆ 'ಪುತ್ರ'ನೊಬ್ಬನಿರುವುದರಿಂದ ನೈಜಾರ್ಥದಲ್ಲಿ ಭಗವತ್ ಪಿತನು ಆಗುವನು. ಪಿತ, ಸುತ ಎಂದು ಎರಡು ಹೆಸರುಗಳು

ಬಂದುದರಿಂದ ಭಗವಂತರು ಅಧಿಕ ಸಂಖ್ಯೆಯಲ್ಲಿರುವರೆಂದು ತಿಳಿಯಬಾರದು. ಆದರೆ ಒಬ್ಬನೇ ಭಗವಂತನಲ್ಲಿ ಪಿತ, ಸುತ, ಪವಿತ್ರಾತ್ಮರೆಂಬ ಪುರುಷತ್ರಯ ವಿದೆ. ಇದೊಂದು ಕ್ರೈಸ್ತರ ಮಹಾರಹಸ್ಯವು. ಯೇಸುಕ್ರಿಸ್ತನೇ ಅದನ್ನು ಬಹಿರಂಗಗೊಳಿಸಿದವನು. ಈ ಪುರುಷತ್ರಯವು ಭಗವತ್-ತ್ರಯವೆಂದು ತಿಳಿಯಬಾರದು. ಏಕಮೇವ ಜೀವಂತ ಭಗವಂತನಲ್ಲಿ ಮೂವರು ದೈವಿಕ ಪುರುಷರಿರುವರೆಂದು ಮಾತ್ರ ತಿಳಿಯಬೇಕು.

ಮಾನವ ಪುರುಷ (Person) ಮತ್ತು ಮಾನವ ಸ್ವಭಾವ (Nature) ಗಳು ಒಂದೇ ವಿಚಾರವನ್ನು ತಿಳಿಸವು. ಅವೆರಡೂ ಪ್ರತ್ಯೇಕ ಅರ್ಥವಿರುವ ಪದಗಳು. ಸ್ಪಷ್ಟವಾಗಿ ಅವನ್ನು ವಿವರಿಸಲರಿಯದವರೂ ಅವುಗಳ ವ್ಯತ್ಯಾಸಗಳನ್ನು ನಿರ್ದೇಶಿಸಬಲ್ಲರು. "ಓ ಅಲ್ಲಿ ಏನಿದೆ?" ಎಂದು ತೋರಿಸಿ ಮಗುವೊಂದನ್ನು ವಿಚಾರಿಸಿದಾಗ ಅದು "ಒಬ್ಬ ಮನುಷ್ಯನು", "ಒಂದು ದನ", "ಒಂದು ಮರ" ಎಂದು ಅಲ್ಲಿರುವ ವಸ್ತುವಿನ ಸ್ವಭಾವ ಅಥವಾ ಪ್ರಕೃತಿಯನ್ನು ಹೇಳುವುದು. ಅದೇ ಮಗು ವಿನೊಡನೆ, "ಅವನು ಯಾರು?" ಎಂದು ಕೇಳಿದರೆ, ಅದು "ಅವನು ಸುಕುಮಾರನು" ಎಂದು ಗುರುತಿಸುತ್ತ ಮನುಷ್ಯರಲ್ಲಿ ಒಬ್ಬನನ್ನು ಪ್ರತ್ಯೇಕಿಸಿ ಹೇಳುವುದು. ಕೇವಲ ಮಗುವಾದರೂ ವಸ್ತುವಿನ ಜಾತಿ ಯಿಂದ ಆ ಜಾತಿಯಲ್ಲಿರುವ ವೈಯಕ್ತಿಕತೆಯನ್ನು ನಿರ್ದೇಶಿಸಬಲ್ಲುದು. ಹೀಗೆ ಬುದ್ಧಿಶಕ್ತಿ ಹಾಗೂ ಇಚ್ಛಾಶಕ್ತಿಗಳಿಂದ ಕೂಡಿ, ಮಾನವ ದೇಹವೂ ಮಾನವ ಆತ್ಮವೂ ಇದ್ದು ತನ್ನ ಕಾರ್ಯಗಳಿಗೆ ತಾನೇ ಉತ್ತರವಾದಿತ್ವ ವನ್ನು ಹೊತ್ತುಕೊಂಡ ಮಾನವ ವ್ಯಕ್ತಿಯನ್ನು ಮಾನವ ಪುರುಷನೆಂದು ಹೇಳುವೆವು. ಹೀಗೆ ಸ್ವಭಾವ ಹಾಗೂ ಪುರುಷತ್ವಗಳ ಅಂತರವನ್ನು ಅರಿತ ನಾವು 'ಪುರುಷತ್ರಯೈಕ ಭಗವಂತ'ನೆಂಬ ತತ್ವದ ರಹಸ್ಯವನ್ನು ತಿಳಿಯಬಲ್ಲೆವು.

ಭಗವಂತನು ದೇಹರಹಿತನೂ ಅಮೂರ್ತನೂ ಆಗಿರುವುದರಿಂದ ಆ ಪುರುಷತ್ರಯವು ದೇಹವೊಂದರಲ್ಲಿ ನೆಲೆಯಾಗಿಲ್ಲ. ಆ ಪುರುಷತ್ರಯದ ಪ್ರತಿಯೊಬ್ಬ ಪುರುಷನೂ ದೈವಿಕತ್ವದಲ್ಲಿ ಲೀನವಾದ ದೈವಿಕಶಕ್ತಿ ಸಮಾನತೆ ಯನ್ನು ಪಡೆಯುವನು. ಭಗವಂತನ ಅಪರಿಮಿತ ಪವಿತ್ರತೆಯ ಕಾರಣ

ದಿಂದ ಆ ಮೂವರೂ ದೈವಿಕ ಪುರುಷರು ಸತ್ವ (Essence), ತತ್ವ (Substance) ಹಾಗೂ ಸ್ವಭಾವ (Nature)ಗಳ ಪರಿಪೂರ್ಣ ಹಾಗೂ ಅತ್ಯುನ್ನತ ಏಕತ್ವದಲ್ಲಿಯೂ ಆನಂದಮಯ ಸಮನ್ವಯ ದಲ್ಲಿಯೂ ಇರುವರು. ದೈವಿಕ ಸೌಭಾಗ್ಯ; ಅಪರಿಮಿತ ಮಟ್ಟದ ಸಂಪೂರ್ಣ ಸ್ನೇಹತ್ವದ ಆನಂದ; ಧನ್ಯತೆ.

ಆದುದರಿಂದಲೇ ಕಥೋಲಿಕರು ಯಾವುದಾದರೊಂದು ಕಾರ್ಯ ವನ್ನು ಆರಂಭಿಸುವಾಗ ಅಥವಾ ಕೊನೆಗೊಳಿಸುವಾಗ ಶಿಲುಬೆಯ ಚಿಹ್ನೆ ಯನ್ನು ಮಾಡುತ್ತ, "ಪಿತನ ಮತ್ತು ಸುತನ ಪವಿತ್ರಾತ್ಮನ ನಾಮದಲ್ಲಿ ತಥಾಸ್ತು" ಎಂದು ಹೇಳುವರು. ಈ ಶಿಲುಬೆಯ ಚಿಹ್ನೆಯಲ್ಲಿ ಹಾಗೂ ಆ ನುಡಿಯಲ್ಲಿ ಕ್ರಿಸ್ತನ ತತ್ವಗಳ ಸ್ಮರಣೆಯಾಗುವುದು.

ಏಕತ್ವ-ತ್ರಿತ್ವಗಳ ಗೂಢ ಸಂಯೋಗ

ಈ ಪುರುಷತ್ರಯವನ್ನು ಭಗವತ್ ಪಿತ (God the Father) ನೆಂದೂ, ಭಗವತ್ ಸುತ (God the son) ಭಗವತ್-ಪವಿತ್ರಾತ್ಮ (God the Holy Ghost) ಎಂದೂ ಕರೆಯಲು ಯೇಸುಕ್ರಿಸ್ತನು ಹೇಳಿರುವನು. ಈ ಏಕತ್ವ–ತ್ರಿತ್ವಗಳ ನಿಗೂಢ ಸಂಯೋಗದಲ್ಲಿ ಪಿತನು ಜೀವವೆಂದೂ ಸುತನು ಸತ್ಯವೆಂದೂ ಪವಿತ್ರಾತ್ಮನು ಸ್ನೇಹವೆಂದೂ ಅನ್ವಯ ಗೊಳಿಸಿರುವರು. ಈ ತ್ರಿತ್ವವನ್ನು ನಾವರಿಯಲು ತ್ರಿಕೋಣವೊಂದನ್ನು ಸ್ಮರಿಸಬಹುದು. ತ್ರಿಕೋಣಕ್ಕೆ ಪ್ರತ್ಯೇಕವಾದ ಮೂರು ಕೋಣಗಳೂ ಪ್ರತ್ಯೇಕವಾದ ಮೂರು ಬಾಹುಗಳೂ ಇವೆ. ಆದರೂ ತ್ರಿಕೋಣವು ಒಂದು ಮಾತ್ರ. ಅದು ಅಸ್ತಿತ್ವದಲ್ಲಿರಬೇಕಾದರೆ ಆ ಮೂರು ಬಾಹುಗಳೂ ಇರಬೇಕು. ಅವೇ ಆ ಮೂರು ಕೋಣಗಳನ್ನುಂಟುಮಾಡುವವು. ತ್ರಿಕೋಣವೊಂದೇ ಆದರೂ ಅವು ಪ್ರತ್ಯೇಕವಾದ ಅಂಗಗಳು.

ಇನ್ನೂ ದೃಷ್ಟಾಂತವೊಂದರಿಂದ ನಾವು ವಿಶದಗೊಳಿಸಬಹುದು: ನಾನು ಒಬ್ಬನೇ ಆಗಿರುವೆನೆಂಬುದು ಎಲ್ಲರೂ ತಿಳಿದಿರುವ ವಿಚಾರ. ನನ್ನಲ್ಲಿ ಇಬ್ಬರು ಅಥವಾ ಅಧಿಕ ಮಂದಿಗಳ ಸಮನ್ವಯವಿಲ್ಲ. ಆದರೂ ನನ್ನನ್ನು 'ನನ್ನ ಸತ್ವ ಅಥವಾ ಆತ್ಮ'ವೆಂದೂ 'ನನ್ನ ಜಾಣ್ಮೆ ಅಥವಾ ಬುದ್ಧಿ

ವಂತಿಕೆ ' ಎಂದೂ, ' ನನ್ನ ಇಚ್ಛೆ ಅಥವಾ ಪ್ರವೃತ್ತಿ 'ಯೆಂದು ಮೂರು ರೂಪದಲ್ಲಿ ಹೇಳಬಹುದು. ಈ ಮೂರೂ ವಿಷಯಗಳು ನಾನೊಬ್ಬನೇ ಆಗಿರುವೆನು.

ಭಗವಂತನು ಅನಾದಿ–ಅನಂತನೂ, ಅಪರಿಮಿತ ಶಕ್ತಿ ಧೀಮಂತನೂ ಆಗಿರುವನು. ಆತನ ಜಾಣ್ಮೆಯೇ ಪುತ್ರನು, ನನ್ನ ಮನಸ್ಸಿನಲ್ಲಿ ಉದ್ಭವಿಸಿದ ಭಾವನೆಯು ನಾನು ಬಹಿರಂಗಗೊಳಿಸುವವರೆಗೆ ಮನಸ್ಸಿನ ಭಾಗವಾಗಿಯೇ ಉಳಿಯುವುದು. ಆದರೂ ಮನಸ್ಸಿನಿಂದ ಪ್ರತ್ಯೇಕವಾದ ವಿಷಯವದು. ಭಗವಂತನು ಅನಾದಿ–ಅನಂತನೂ ಅಪರಿಮಿತನೂ ಆಗಿರುವಂತೆ ಆತನ ಜಾಣ್ಮೆಯೂ ಅನಾದಿ–ಅನಂತವೂ ಅಪರಿಮಿತವೂ ಆಗಿರುವುದು. ಈ ಭಗವತ್ ಪುತ್ರನನ್ನು ' ನುಡಿ ' ' ಪದ 'ಎಂದು ಬೈಬಲಿನಲ್ಲಿ ಕರೆದಿವೆ.

ಆದಿಯಲ್ಲಿ ನುಡಿಯಿತ್ತು ; ನುಡಿಯು ಭಗವಂತನೊಡನಿತ್ತು ; ಆ ನುಡಿಯು ಭಗವಂತನಾಗಿತ್ತು." (ಯೋಹಾನ ೧–೧)

ಈ ನುಡಿ ಪದವು ಭಗವತ್ ಪುತ್ರನ ಸ್ಥಾನವನ್ನು ವಿಶದಗೊಳಿಸುತ್ತದೆ. ನನ್ನ ಮನಸ್ಸಿನ ಭಾವನೆಯು ನನ್ನಲ್ಲಿ ಉದ್ಭವವಾದುದು ನನ್ನ ಪುತ್ರನೆನ್ನಬಹುದು. ಅದು ಬಾಹ್ಯ ಪ್ರಪಂಚಕ್ಕೆ ಬಹಿರಂಗಗೊಳ್ಳುವವರೆಗೆ ನನ್ನ ಮನಸ್ಸಿನ ಭಾಗವೇ ಆದರೂ ಪ್ರತ್ಯೇಕವಾದ ವಿಷಯವಾಗಿದೆ. ಅದನ್ನು ಮನಸ್ಸಿನಿಂದ ಪ್ರತ್ಯೇಕಿಸಬಹುದು. ಹೀಗೆಯೇ ಭಗವತ್ ಪಿತನೂ ಭಗವತ್ ಸುತನೂ ಪ್ರತ್ಯೇಕ ಪುರುಷರೆಂದು ತಿಳಿಯಬೇಕಾಗುತ್ತದೆ.

ಭಗವಂತನು ಏಕಮೇವ ಜೀವಂತ ದೇವ. ಆತನಲ್ಲಿ ಅನುಕ್ರಮವಾಗಲಿ, ಪರಂಪರೆಯಾಗಲಿ ಇಲ್ಲ. ಜೀವವಾದ ಪಿತನು ತನ್ನ ಜಾಣ್ಮೆಯಾದ ಪುತ್ರನನ್ನು ಅತಿಯಾಗಿ ಸಂಬಂಧಿಸಿಕೊಂಡಿರುವನು. ಪಿತ-ಸುತರೊಳಗೆ ಯಾವ ಬಗೆಯ ವ್ಯತ್ಯಾಸಗಳೂ ಇಲ್ಲ. ಅವರಿಬ್ಬರೂ ಒಂದೇ ವಿಷಯದ ಎರಡುಮುಖಗಳು ಎನ್ನಬಹುದು. ಪಿತನು ಅನಾದಿ–ಅನಂತನಾಗಿರುವಂತೆ ಸುತನೂ ಆಗಿರುವನು. ಈ ಅನ್ಯೋನ್ಯ ಸಂಬಂಧವನ್ನು, ಪಿತ-ಸುತರ ಬಾಂಧವ್ಯವನ್ನು ಭಗವತ್ ಪ್ರೇಮ(ಸ್ನೇಹ)ವೆಂದು ಕರೆಯಬಹುದು. ಅದೇ ಭಗವತ್ ಪವಿತ್ರಾತ್ಮನೆಂಬ ತೃತೀಯ ಪುರುಷನು. ಪಿತ-ಸುತರ

ಸಂಬಂಧವು ಅನಾದಿ–ಅನಂತವಾದುದು. ಅಂತೆಯೇ ಪವಿತ್ರಾತ್ಮನೂ ಅನಾದಿ-ಅನಂತನೂ ಅಪರಿಮಿತನೂ ಆಗಿರುವನು.

ಈ ತ್ರಿಯೈಕತ್ವದ ಸರ್ವಪರಿಪೂರ್ಣತೆಯನ್ನು ಇನ್ನೊಂದು ದೃಷ್ಟಾಂತದಿಂದ ಸಮರ್ಥಿಸಬಹುದು. ಭಗವಂತನ ಅಪಾರತೆಯನ್ನು ಯಾವ ಬಗೆಯ ದೃಷ್ಟಾಂತದಿಂದಲೂ ಸಮರ್ಪಕವಾಗಿ ಸಮರ್ಥಿಸಲು ಸಾಧ್ಯವಿಲ್ಲವೆಂಬುದನ್ನು ಈ ಮೊದಲೇ ತಿಳಿದಿರುವೆವು. ಆದರೂ ಈ ಜಡ ದೇಹದಲ್ಲಿ ನಮ್ಮಿಂದ ಸಾಧ್ಯವಾಗುವಷ್ಟು ಆ ಅಮೂರ್ತವೂ ಸತ್-ಚಿತ್-ಆನಂದನೂ, ಶುದ್ಧನಿಷ್ಕಲರೂಪನೂ ಆದ ಭಗವಂತನನ್ನು ಕುರಿತು ವಿವೇಚಿಸಬಹುದು.

A ಎಂಬುವನಿಗೆ B ಎಂಬ ಮಗನಿರುವನು. A ಯು ತಂದೆಯಾಗ ಬೇಕಾದರೆ B ಯು ಮಗನಾಗಬೇಕು. ಯಾವ ಕಾಲದಲ್ಲಿ B ಯು ಮಗನಾಗಿ ಜನಿಸಿದನೋ ಅದೇ ಕಾಲದಲ್ಲಿ A ಯು ತಂದೆಯಾದನು. ಅಂದರೆ ಅವರಿಬ್ಬರ ಸಂಬಂಧವು ಏಕಕಾಲದಲ್ಲಿಯೇ ಅಸ್ತಿತ್ವದಲ್ಲಿ ಬಂತು. ಹೀಗೆ ಆ ತಂದೆ, ಆ ಮಗ, ಮತ್ತು ಅವರೊಳಗಿನ ಆ ಸಂಬಂಧವು ಏಕಕಾಲದಲ್ಲಿಯೇ ಉಂಟಾದುವು. B ಯು ಜನಿಸದಿರುತಿದ್ದರೆ A ಯು ತಂದೆಯೆನಿಸುತ್ತಿರಲಿಲ್ಲ, ಮಾತ್ರವಲ್ಲ ಅವರೊಳಗಿನ ಸಂಬಂಧವೂ ಇರುತ್ತಿರಲಿಲ್ಲ. ಭಗವಂತನಲ್ಲಿರುವ ಪುರುಷತ್ರಯರು ಏಕಕಾಲದಲ್ಲಿ ಅಸ್ತಿತ್ವದಲ್ಲಿರುವರು. A,Bಗಳು ಶುದ್ಧ ದೇಹಗಳು. ಅವರೊಳಗೆ ಹರೆಯದ ಅಂತರವಿದೆ. ಭಗವಂತನು ಅನಾದಿ–ಅನಂತನು, ಆತನಲ್ಲಿ ವಯಸ್ಸು ಎಂಬುದಿಲ್ಲ.

ಈ ಪುರುಷತ್ರಯದ ರಹಸ್ಯವನ್ನು ಸರಿಯಾಗಿ ಇತ್ಯರ್ಥಿಸಲು ಹಿಂದಿನನವರೂ ಸಾಧಿಸಿದರು. ಕ್ರೈಸ್ತ ಸನ್ಯಾಸಿಗಳಲ್ಲಿ ಅಗುಸ್ತೀನನೆಂಬವನು ವಿಶಿಷ್ಟ ಮಹತ್ವವುಳ್ಳವನು. ಆಫ್ರಿಕದ ಸನ್ಯಾಸಿಯೆಂಬ ಅನ್ವರ್ಥ ನಾಮವು ಅವನಿಗಿತ್ತು. ಕ್ರಿಸ್ತಮತದ ವಿವಿಧ ತತ್ವಗಳನ್ನು ಆಳವಾಗಿ ಅಭ್ಯಸಿಸಿ, ತನ್ನ ಅನುಭವವನ್ನು ಭಕ್ತ ಜನರಲ್ಲಿ ವಿಶದಗೊಳಿಸುತಿದ್ದನು. ' ದೇವರೆಷ್ಟು ? " ಎಂದು ಚಿಕ್ಕ ಮಗುವೊಂದನ್ನು ವಿಚಾರಿಸಿದರೆ ಅದು " ಒಬ್ಬನು ಮಾತ್ರ " ಎಂಬ ಉತ್ತರ ಇಂದಿನಂತೆ ಹಿಂದೆಯೂ ಬರುತಿತ್ತು. " ಅದನ್ನು ಯಾವ ಆಧಾರದಿಂದ ಹೇಳುವೆ ? " ಎಂದು ಪ್ರಶ್ನಿಸಿದರೆ,

"ಭಗವಾನ್ ಯೇಸುಕ್ರಿಸ್ತನು ಹೇಳಿರುವನು" ಎಂಬ ಉತ್ತರವೂ ಬರುವುದು.

ಆದರೆ ಅಗಸ್ತೀನನಿಗೆ ಆಳವಾಗಿ ತಿಳಿಯಲು ಬಯಕೆಯುಂಟಾಯಿತು. ಪವಿತ್ರ ಗ್ರಂಥಗಳನ್ನೂ ಪಂಡಿತರ ವ್ಯಾಖ್ಯಾನಗಳನ್ನೂ ನೋಡಿಕೊಂಡನು. ತತ್ವ ಹಾಗೂ ತರ್ಕಬದ್ಧವಾಗಿ ಏಕದೇವನಲ್ಲಿ ಪುರುಷತ್ರಯದ ರಹಸ್ಯವನ್ನು ಸ್ಫುಟಗೊಳಿಸಲು ಪ್ರಯತ್ನಿಸುತಿದ್ದನು. ಹಾಗೆಯೇ ಯೋಚನಾ ಮಗ್ನನಾದ ಅವನು ಸಮುದ್ರದಂಚಿನಲ್ಲಿ ಸಂಧ್ಯಾಕಾಲದಲ್ಲಿ ತಿರುಗಾಡುತ್ತಿದ್ದನು. ಅವನಿಗಿಂತ ತುಸು ದೂರದಲ್ಲಿ ಎಳೆಯ ಬಾಲಕನೊಬ್ಬನು ಮರಳಲ್ಲಿ ಆಡುತ್ತಿದ್ದನು. ಮರಳಲ್ಲಿ ಗುಳಿಯೊಂದನ್ನು ತೋಡಿ, ಚಿಪ್ಪುಮೀನಿನ ಚಿಪ್ಪಿನಿಂದ ಸಮುದ್ರದ ನೀರನ್ನು ಅದಕ್ಕೆರೆಯುತಿದ್ದನು. ಅಗಸ್ತೀನನು ಮುದ್ದು ಮೊಗದ ಆ ಬಾಲಕನ ಲೀಲೆಯಲ್ಲಿ ಸೇರಿಹೋದನು. ಆತನನ್ನು ಏನು ಮಾಡುವನೆಂದು ವಿಚಾರಿಸಿದನು. "ಸಮುದ್ರದನೀರನ್ನು ಗುಳಿಗೆರೆದು ಅದನ್ನು ಬರಿದುಗೊಳಿಸುವೆನು" ಎಂಬ ಉತ್ತರ ಬಂತು. "ಅದು ಸಾಧ್ಯವೇ?" ಅಗಸ್ತೀನನು ಕೇಳಿದನು. ನಗುಮೊಗದಿಂದ ಆ ಬಾಲಕನು, "ನಾನಾದರೂ ಈ ವಿಸ್ತಾರ ಸಮುದ್ರದ ನೀರನ್ನು ಈ ಗುಳಿಯಲ್ಲಿ ತುಂಬಿಸಬಲ್ಲೆನು-ಆದರೆ ನಿನ್ನಿಂದ ಮಾತ್ರ ಏಕದೇವನ ಪುರುಷತ್ರಯದ ರಹಸ್ಯವನ್ನು ಸಮಗ್ರವಾಗಿ ತಿಳಿಯಲು ಸಾಧ್ಯವಿಲ್ಲ!" ಎಂದು ಉತ್ತರ ವಿತ್ತನು. ಪುರುಷತ್ರಯೈಕತೆಯ ರಹಸ್ಯವು ಅಷ್ಟು ಗೂಢವಾಗಿದೆ!

ಯೇಸುವು ದ್ವಿತೀಯ ಭಗವತ್ ಪುರುಷನು

"ಆದಿಯಲ್ಲಿ ನುಡಿಯಿತ್ತು; ಆ ನುಡಿಯು ಭಗವಂತನಲ್ಲಿತ್ತು; ಆ ನುಡಿಯು ಭಗವಂತನಾಗಿತ್ತು" (ಯೋಹಾನ ೧-೧)

"ಆ ನುಡಿಯು ಮಾಂಸವಾಯಿತು; ಮತ್ತು ನಮ್ಮೊಡನೆ ಜೀವಿಸಿತು" (ಯೋಹಾನ ೧-೧೪)

"ಪಿತ ಸುತ ಪವಿತ್ರಾತ್ಮ ಎಂಬ ಮೂವರು ಸಾಕ್ಷ್ಯವನ್ನೀಯುು

ವವರು ಪರಲೋಕದಲ್ಲಿದ್ದಾರೆ. ಈ ಮೂವರೂ ಒಂದೇ ಆಗಿದ್ದಾರೆ" (ಯೋಹಾನ ೫-೭)

ಯೇಸುಕ್ರಿಸ್ತನು ಬಹಿರಂಗದಲ್ಲಿ ಸಾಮಾನ್ಯರಂತೆಯೇ ಇದ್ದನು. ನಮ್ಮ ರೂಪವನ್ನು ಧರಿಸಿ ನಮ್ಮ ಬಂಧುವಾದನು. ಹೀಗಾಗಿ ಭಗವಂತನನ್ನು 'ನಮ್ಮ ಪಿತ'ನೆಂದು ಕರೆಯುವುದು ಎಲ್ಲ ವಿಧಗಳಲ್ಲಿಯೂ ಸಮಂಜಸವಾಗಿದೆ. ಶುದ್ಧಮಾನವ ಸ್ವಭಾವವನ್ನು ಪಡೆದ ಯೇಸುಕ್ರಿಸ್ತನಲ್ಲಿ ಆತನ ಭಗವತ್-ಸ್ವಭಾವವು ತಿಲದ ಮರೆಯ ತೈಲದಂತೆ ಇದ್ದಿತು.

ಜಗತ್ತಿನ ರೂಪವನ್ನು ಬದಲಾಯಿಸಿದ ಮಹಾಪುರುಷರಲ್ಲಿ ಯೇಸುಕ್ರಿಸ್ತನು ಅಗ್ರಗಣ್ಯನು. ಆತನು ನೀಡಿರುವ ಸಂದೇಶವು ಜಗತ್ತಿನ ಪ್ರತಿಯೊಂದು ಮೂಲೆಗೂ ಹೋಗಿದೆ. ಆದರೆ ಯೇಸುವಿಗೆ ಕ್ರಿಸ್ತನೆಂಬ ಹೆಸರು ಆತನ ಜೀವಮಾನದಲ್ಲಿ ಬಂದಿರಲಿಲ್ಲ. ಕ್ರಿಸ್ತನೆಂದರೂ ಮೆಸ್ಸೀಯನೆಂದರೂ ಅರ್ಥವೊಂದೇ. ತೈಲಾಭ್ಯಂಗದಿಂದ ಪವಿತ್ರನಾದವನೆಂದು ಅದರ ಅರ್ಥ. ಯೆಹೂದ್ಯರಲ್ಲಿ ರಾಜರನ್ನೂ ಪುರೋಹಿತ (ಯಾಜಕ) ರನ್ನೂ ಪ್ರವಾದಿಗಳನ್ನೂ ಪವಿತ್ರ ತೈಲಲೇಪನದಿಂದ ಭಗವಂತನ ವರಪ್ರಸಾದವನ್ನು ಪಡೆಯುವಂತಹ ಜನರನ್ನಾಗಿ ಮಾಡುತ್ತಿದ್ದರು. ಯೇಸುವು ಕ್ರಿಸ್ತನೆಂದು ಮೂರೂ ರೀತಿಗಳಲ್ಲಿ ಅನ್ವಯಿಸಲ್ಪಡುತ್ತಾನೆ. ಈ ಕುರಿತು ಮುಂದೆ ವಿವೇಚಿಸಬಹುದು.

ಯೇಸುವು ಜನಿಸುವ ಮೊದಲೇ ಆತನ ಹೆಸರನ್ನು ಆತನ ತಾಯಿ ಮರಿಯಳಿಗೆ ಭಗವಂತನು ತನ್ನ ದೂತನ ಮೂಲಕ ತಿಳಿಸಿದ್ದನು.

"ಇದೋ ನೀನು ನಿನ್ನ ಉದರದಲ್ಲಿ ಗರ್ಭವನ್ನು ತಾಳುವೆ ಮತ್ತು ಪುತ್ರನನ್ನು ಪಡೆಯುವೆ; ಆತನ ಹೆಸರನ್ನು ಯೇಸುನೆಂದು ನೀನು ಕರೆಯುವೆ" (ಲೂಕ ೧-೩೧)

ಅದೇ ರೀತಿಯಲ್ಲಿ ಮರಿಯಳ ಪತಿ ಯೋಸೆಫನಿಗೂ ದೂತನು ತಿಳಿಸಿದ್ದನು. "ಆತನ ಹೆಸರನ್ನು ಯೇಸುವೆಂದು ಕರೆ. ಆತನು ಜನರನ್ನು ಅವರ ಪಾತಕಗಳಿಂದ ರಕ್ಷಿಸುವನು" (ಮತ್ತಾಯ ೧-೨೧)

ಹೀಗೆ ಯೇಸುವು ಹುಟ್ಟುವ ಮುಂಚಿತವಾಗಿ ಆತನ ಹೆಸರೂ ಅದರ ಔಚಿತ್ಯವೂ ತಿಳಿಸಲ್ಪಟ್ಟಿತ್ತು.

ಯೆಹೂದ್ಯರು ಭಗವಂತನನ್ನು ಯೆಹೊವಾ ಅಥವಾ ಯೆಹೆವಾ ಎಂದು ಕರೆಯುತಿದ್ದರು. ರಕ್ಷಕ (Savior) ನೆಂದು ಅದರ ಅರ್ಥ. ಅದು ಹೀಬ್ರೂಭಾಷೆಯಲ್ಲಿ ಯೆರೂವಾ ಎಂದಾಯಿತು. ನಾವು ಅದನ್ನು ಯೇಸು ಎನ್ನುವೆವು. ಆದುದರಿಂದ ಯೇಸುಕ್ರಿಸ್ತನೆಂದರೆ 'ರಕ್ಷಕನಾದ ಪವಿತ್ರ ಪುರುಷ'ನೆಂದು ತಿಳಿಯಬೇಕಾಗುತ್ತದೆ. ಯೇಸು ಎಂಬ ಹೆಸರಿನ ಔಚಿತ್ಯ ವನ್ನು ಕ್ರೈಸ್ತ ಶ್ರೀ ಸಭೆಯು ಹಲವು ವಿಧಗಳಲ್ಲಿ ವಿಶದಗೊಳಿಸಿದೆ.

"ಅದುವೆ ಕಾರಣಕ್ಕಾಗಿ ಭಗವಂತನು ಆತನನ್ನು ಉನ್ನತಿಗೇರಿಸಿ ದನು, ಮತ್ತು ಎಲ್ಲ ಹೆಸರುಗಳಿಗಿಂತಲೂ ಮೇಲಾದ ಹೆಸರನ್ನು ಕೊಟ್ಟನು. ಆದುದರಿಂದ ಸ್ವರ್ಗದ, ಭೂಮಿಯ ಮತ್ತು ಪಾತಾಳದಲ್ಲಿರುವ ಪ್ರತಿ ಯೊಂದು ವ್ಯಕ್ತಿಯೂ ಆ ಯೇಸು ನಾಮಕ್ಕೆ ಮಂಡಿಯೂರಿ ಎರಗಬೇಕು" (ಫಿಲಿಪ ೨-೯,೧೦)

ಕ್ರಿ. ಪೂ. ೭೫೦-೭೦೦ ರ ಮಧ್ಯಭಾಗದಲ್ಲಿ ಗ್ರಂಥ ರಚನೆಮಾಡಿದ ಇಸಾಯಸ್ ಎಂಬ ಪ್ರವಾದಿಯು ತನ್ನ ಭವಿಷ್ಯದ್ವಾಣಿಯಲ್ಲಿ ಹೇಳಿದ ವಿಚಾರವನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ.

"ಇದೊ ಕನ್ಯೆಯೊಬ್ಬಳು ಬಸುರಿಯಾಗುವಳು; ಮತ್ತು ಪುತ್ರ ನನ್ನು ಪಡೆಯುವಳು; ಮತ್ತು ಆತನ ಹೆಸರನ್ನು ಎಮ್ಮಾನುವೆಲ್ ಎಂದು ಕರೆಯುವಳು" (ಇಸಾಯಸ್ ೭-೧೪)

ಎಮ್ಮಾನುವೆಲ್ ಎಂದರೆ 'ಭಗವಂತನು ನಮ್ಮೊಡನೆ' ಎಂದು ಅರ್ಥ. ಅದೇ ಪ್ರವಾದಿಯು:

"ಆತನ ಸ್ವಾತ್ಮವೇ ಪಟ್ಟ ಶ್ರಮವನ್ನು ಆತನು ಕಾಣುವನು ಮತ್ತು ತೃಪ್ತನಾಗುವನು. ಆ ನನ್ನ ನೀತಿವಂತ ಸೇವಕನು ಅನೇಕರ ಹಿತ ಸಾಧಕ ನಾಗುವನು. ಆತನು ಅವರ ಅಪರಾಧಗಳನ್ನು ಹೊತ್ತುಕೊಳ್ಳುವನು. ಆದುದರಿಂದ ಅನೇಕರನ್ನು ಆತನಿಗೆ ಕೊಡುವೆನು. ಆತನು ಬಲಿಷ್ಠರ ಸೊತ್ತುಗಳನ್ನು ವಿಭಜಿಸುವನು; ಆತನು ತನ್ನನ್ನು ಸಾಯುವವರೆಗೂ ನೀಡಿದುದರಿಂದ, ನೀಚರಲ್ಲಿ ಗಣಿಸಲ್ಪಡುವನು. ಅನೇಕರ ಪಾತಕಗಳನ್ನು ಆತನು ಹೊತ್ತುಕೊಳ್ಳುವನು ಮತ್ತು ಅತಿಕ್ರಮಣಕಾರರಿಗಾಗಿ ಪ್ರಾರ್ಥಿ ಸುವನು." (ಇಸಾಯಸ್ ೫೩, ೧೧-೧೨)

ಹೀಗೆ ಹಲವುಸಲ ಭಗವತ್ ದ್ವಿತೀಯ ಪುರುಷನೇ ಯೇಸುವೆಂದೂ ಆತನು ಮಾನವ ಕುಲದ ಉದ್ಧಾರಕ್ಕಾಗಿ ಜನಿಸಿದವನೆಂದೂ ತಿಳಿಯುವಂತೆ ಮಾಡಿದ ಭವಿಷ್ಯದ್ವಾಣಿಗಳಿವೆ.

ಅಗ್ರದೂತನ ಸಾಕ್ಷ್ಯ

ಯೇಸುಕ್ರಿಸ್ತನು ಜನಿಸುವ ನಾಲ್ಕುನೂರೈವತ್ತು ವರ್ಷಗಳ ಹಿಂದೆ ಮಲಾಕಿ ಎಂಬ ಪ್ರವಾದಿಯು ಕ್ರಿಸ್ತನು ಜನಿಸುವ ಮುನ್ನ ಆತನ ದೂತನು ಆತನ ಆಗಮನವನ್ನು ಜನತೆಗೆ ತಿಳಿಸುತ್ತ, ನೀತಿಮಾರ್ಗವನ್ನು ಪ್ರಚಾರ ಮಾಡುವನೆಂದು ತಿಳಿಸಿದ್ದನು.

“ಇದೋ ನನ್ನ ದೂತನನ್ನು ನಾನು ಕಳುಹಿಸುವೆನು. ಆತನು ನನಗಿಂತ ಮೊದಲೇ ಮಾರ್ಗವನ್ನು ಸರಿಗೊಳಿಸುವನು” (ಮಲಾಕಿ ೩-೧) ಈ ದೂತನು ಕ್ರಿಸ್ತನಿಗಿಂತ ಮುಂಚಿತವಾಗಿಯೇ ಆತನ ಕಾರ್ಯ ಸಿದ್ಧತೆಯನ್ನು ಮಾಡುವಂಥವನು. ಆತನನ್ನು ಅಗ್ರದೂತ, ಮುಂಬಿಗ (Precursor) ಎಂದು ಕರೆದಿದೆ. ಆತನು ಯೋಹಾನನೆಂಬವನೆಂದು ಬೈಬಲ್ ಹೇಳುತ್ತದೆ.

ಯೆರೂಸಲೇಮ್ ನಗರದ ಪಶ್ಚಿಮಕ್ಕೆ ಅಯಿನ್ ಕರಿಮ್ ಎಂಬ ಹಳ್ಳಿಯಿದೆ. ಅಲ್ಲಿ ಯೋಹಾನನು ಜನಿಸಿದನು. ಜಾಕರಿಯನೆಂಬವನು ಆತನ ತಂದೆ. ಎಲಿಜಬೆತಳು ಆತನ ತಾಯಿ. ಅಯಿನ್ ಕರಿಮದ ಸಮೀಪದಲ್ಲಿ ಬಂಜರು ಪ್ರದೇಶವೊಂದಿದೆ. ಅದನ್ನು ಯೋಹಾನನ ಮರುಭೂಮಿಯೆನ್ನುವರು. ಈ ಮರುಭೂಮಿಯಲ್ಲಿ ಒಂದು ಗವಿಯಿದೆ. ಗವಿಯಲ್ಲಿ ಕಲ್ಲಿನಿಂದಲೇ ಕೊರೆದ ಪೀಠವೊಂದಿದೆ; ಮಂಚವಾಗಿ ಬಳಸಬಹುದಾದಷ್ಟು ದೊಡ್ಡದಿದೆ ಅದು. ಗವಿಗೆ ಸಮೀಪದಲ್ಲಿ ಒಂದು ಸಿಹಿನೀರಿನ ಒರತೆಯಿದೆ. ಇಲ್ಲಿಯೇ ಯೋಹಾನನು ಎಳವೆಯಿಂದ ಯೌವನಕ್ಕೆ ಕಾಲಿಟ್ಟನೆಂದೂ, ಕ್ರಿಸ್ತನ ಆಗಮನಕ್ಕೆ ಸಿದ್ಧತೆಗಳನ್ನು ಮಾಡುವ ಮುನ್ನ ಅಲ್ಲಿಯೇ ಧ್ಯಾನಮಗ್ನನಾಗಿ ಭಗವದನುಗ್ರಹವನ್ನು ಪಡೆದನೆಂದೂ ಹೇಳಿಕೆಗಳಿವೆ.

ಯೋಹಾನನು ಆತನ ಮುಪ್ಪಿನ ತಂದೆ ತಾಯಿಗಳ ಮಗನು. ಜಾಕರಿಯನೂ ಆತನ ಪತ್ನಿ ಎಲಿಜಬೆತಳೂ ಮಕ್ಕಳ ಮುಖವನ್ನು

ಕಾಣಲು ಬಹುವಾಗಿ ಹಂಬಲಿಸುತ್ತಿದ್ದರು. ಜಾಕರಿಯನಿಗೆ ಎಂಭತ್ತರ ಗಡಿಯಲ್ಲಿ ಯೆರೂಸಲೇಮಿನ ಮಹಾದೇವಾಲಯದ ಪೂಜೆಯನ್ನು ಮಾಡುವ ಸರದಿಯು ಬಂತು. ಅವಧಿಯ ಕೊನೆಯ ದಿನ ಭಗವತ್-ದೂತನು ಪ್ರತ್ಯಕ್ಷನಾಗಿ ಕ್ರಿಸ್ತನ ಮುಂಬಿಗನಾಗುವ ಮಗನೊಬ್ಬನು ಜನಿಸುವನೆಂದು ತಿಳಿಸಿದನು. ಆದರೆ ಮುಪ್ಪನ್ನು ಮುಂದಿಟ್ಟು ಜಾಕರಿಯನು ಅದನ್ನು ನಂಬಲಿಲ್ಲ. ಅದಕ್ಕಾಗಿ ಮಗನ ಜನನದವರೆಗೆ ಆತನು ಮೂಕನಾಗಿರುವಂತೆ ಶಿಕ್ಷಿಸಲ್ಪಟ್ಟನು. ಮಗನ ನಾಮಕರಣದ ಸಮಯದಲ್ಲಿ ಆತನ ಹಿರಿಮೆಯನ್ನು ಅವನು ಬಣ್ಣಿಸಿ ಅನತಿಕಾಲದಲ್ಲಿಯೇ ಸತ್ತನು. ಯೋಹಾನನ ತಾಯಿಯೂ ಆತನ ಎಳವೆಯಲ್ಲಿಯೇ ಅಗಲಿದಳು. ತಬ್ಬಲಿಯಾದ ಯೋಹಾನನು ವಿರಕ್ತನಾಗಿ ತಪೋನಿರತನಾದನು.

ಭಗವತ್ ನಿಶ್ಚಿತವಾದ ತನ್ನ ಕಾರ್ಯವನ್ನು ಪೂರ್ಣಗೊಳಿಸಲು ಸರ್ವರೀತಿಗಳಲ್ಲಿಯೂ ಯೋಹಾನನು ಸಿದ್ಧನಾಗಿದ್ದನು. ಮದ್ಯವನ್ನಾಗಲಿ, ಮಾದಕ ಫಲಗಳನ್ನಾಗಲಿ ಅವನು ಸೇವಿಸುತ್ತಿರಲಿಲ್ಲ. ಆತನ ಜೀವಮಾನದಲ್ಲಿ ಆತನಿಗೆ ಕೇಶವಪನವಾಗಿರಲಿಲ್ಲ. ಶುದ್ಧ ಸಾತ್ವಿಕ ಜೀವನದಿಂದ ತೃಪ್ತನಾಗದೆ ಆತನು ವನ್ಯಮಧು ಮೊದಲಾದ ವನೋತ್ಪತ್ತಿಗಳನ್ನು ಮಾತ್ರ ಸೇವಿಸುತ್ತ ಸರ್ವೇಂದ್ರಿಯಗಳನ್ನೂ ಸ್ವಾಧೀನತೆಗೆ ತಂದುಕೊಂಡನು. ಹೀಗೆ ಜಿತೇಂದ್ರಿಯನಾದ ಯೋಹಾನನು ಚರ್ಮಾಂಬರನಾಗಿ ಒಂಟೆಯ ಕೂದಲಿನ ಕಂಬಳಿಯನ್ನು ಉತ್ತರೀಯವಾಗಿ ಮಾಡಿ ತನ್ನ ಭಗವತ್-ಸೂಚಿತ ಕಾರ್ಯವನ್ನು ಪೂರೈಸುವುದಕ್ಕಾಗಿ ಯೋರ್ದಾನ ನದಿಯಂಚಿಗೆ ಬಂದನು. ಅಲ್ಲಿ ತನ್ನ ಸಮರ್ಥ ವಾಕ್ಸರಣಿಯಿಂದ ಜನರಲ್ಲಿ ನವೀನ ಜಾಗೃತಿಯೊಂದನ್ನುಂಟುಮಾಡಿದನು. ಪ್ರತಿಯೊಬ್ಬನೂ ತನ್ನ ಆಧ್ಯಾತ್ಮಿಕ ಜೀವನದ ಹಳ್ಳತಿಟ್ಟುಗಳನ್ನು ಸರಿಗೊಳಿಸಿ ನೀತಿಯ ರಂಗಸ್ಥಳವನ್ನು ಮಾಡಲು ಹಿತಸೂಚನೆಗಳನ್ನು ಯಾವ ಬಗೆಯ ಸಂಕೋಚವೂ ಇಲ್ಲದೆ ನೀಡತೊಡಗಿದನು. ಜನರು ಆತನ ಬೋಧನೆಯಿಂದ ಸನ್ಮಾರ್ಗ ಪ್ರವೃತ್ತಿಯನ್ನು ಕೈಗೊಂಡರು. ಆ ನಿರ್ಧಾರದ ಬಾಹ್ಯಚಿಹ್ನೆಯಾಗಿ, ದೀಕ್ಷಾಬದ್ಧತೆಯಾಗಿ, ನದಿಯ ನೀರಿನಲ್ಲಿ ಮೀಹವನ್ನು ಕೈಕೊಳ್ಳಲು ಅವರು ಸಿದ್ಧರಾದರು. ಅವನಲ್ಲಿ ಆ 'ಜ್ಞಾನಸ್ನಾನ'ವನ್ನು ಪಡೆಯ

ವುದಕ್ಕಾಗಿ ಬರುವ ಜನರು ದಿನದಿಂದ ದಿನಕ್ಕೆ ಹೆಚ್ಚಾದರು. ಜನರೂ ಯೋಹಾನನಲ್ಲಿ ವಿಶ್ವಾಸವನ್ನೂ ಗೌರವವನ್ನೂ ತಳೆದರು. ಆತನು ಮಹಾ ಪ್ರವಾದಿಯೆನಿಸಿದನು.

ಯೆಹೂದ್ಯ ಜನತಾ ನಾಯಕರಲ್ಲಿ ಕುತೂಹಲವೆದ್ದಿತು. ಪ್ರಾಚೀನ ಗ್ರಂಥಗಳಲ್ಲಿ ನಿರ್ದೇಶಿಸಿದ ರಕ್ಷಕನು ಜನಿಸುವ ಕಾಲದ ಲಕ್ಷಣಗಳು ತೋರುತ್ತಿದ್ದುವು. ಯೋಹಾನನೇ ಆ ರಕ್ಷಕನಾಗಿರಬಹುದೆಂದು ಊಹೆ ಯೊಂದು ಹರಡಿತ್ತು. ಅದಕ್ಕಾಗಿ ಜನತಾ ನಾಯಕರ ಪ್ರತಿನಿಧಿಗಳು ಯೋಹಾನನಲ್ಲಿ ಪ್ರಸ್ತಾಪಿಸಿದರು. ಅದನ್ನು ಉತ್ತರಿಸುತ್ತ, "ನಾನು ನೀರಿನಿಂದ ಜ್ಞಾನಸ್ನಾನವನ್ನು ನೀಡುತ್ತೇನೆಂಬುದು ನಿಜ ; ನನಗಿಂತಲೂ ಶ್ರೇಷ್ಠತರನಾದವನು ಬರಲಿದ್ದಾನೆ. ಆತನ ಪಾದರಕ್ಷೆಗಳ ಕಟ್ಟುಗಳನ್ನು ಕಳಚುವಷ್ಟೂ ನಾನು ಯೋಗ್ಯನಲ್ಲ. ಆತನು ಪವಿತ್ರಾತ್ಮನಿಂದಲೂ ಅಗ್ನಿಯಿಂದಲೂ ನಿಮಗೆ ಜ್ಞಾನಸ್ನಾನವನ್ನೀಯುವನು" (ಲೂಕ ೩-೧೬) ಎಂದನು. ಹೀಗಿರಲು ಒಂದು ದಿನ ಯೇಸುವೂ ಜನಸಾಮಾನ್ಯ ರೊಡನೆ ದೀಕ್ಷಾಸ್ನಾನಕ್ಕಾಗಿ ಯೋಹಾನನಲ್ಲಿಗೆ ಬಂದನು. ಸಂಬಂಧಿಕ ರಾಗಿದ್ದರೂ ಅವರಿಬ್ಬರಿಗೂ ಪರಸ್ಪರ ಪರಿಚಯವಿರಲಿಲ್ಲ. ಯೋಹಾನನು ಎಳವೆಯಲ್ಲಿಯೇ ವೈರಾಗ್ಯವನ್ನು ಪಡೆದು ವನವಾಸದಲ್ಲಿದ್ದನು. ಆದರೆ ಯೇಸುವು ತನ್ನ ತಾಯಿಯೊಡನೆ ಜೀವಿಸುತಿದ್ದನು. ಹಾಗಿದ್ದರೂ ಯೇಸುವೇ ಕ್ರಿಸ್ತನೆಂದು ತಿಳಿದ ಯೋಹಾನನು ದೀಕ್ಷೆಯ ಸ್ನಾನವ ನ್ನೀಯಲು ನಿರಾಕರಿಸಿದನು ಮಾತ್ರವಲ್ಲ, ಯೇಸುವಿನಿಂದ ತಾನೇ ಅದನ್ನು ಬಯಸಿದನು. ಆದರೆ ಯೇಸುವು ಯೋಹಾನನನ್ನು ಒಡಂಬಡಿಸಿ, ಜ್ಞಾನ ಸ್ನಾನವನ್ನು ಪಡೆದನು. ಸ್ನಾನದ ಬಳಿಕ ಆತನು ನೀರಿನಿಂದ ಮೇಲೆದ್ದು ಪ್ರಾರ್ಥಿಸುತ್ತಿರುವಾಗ ಭಗವತ್-ಪವಿತ್ರಾತ್ಮನು ಪಾರಿವಾಳದ ರೂಪ ದಲ್ಲಿ ಯೇಸುವಿನ ಮೇಲ್ಗಡೆ ನಿಂತನು. ಗಗನಭಾಷಿತವೊಂದು ಕೇಳಿ ಸಿತು :

"ನೀನು ನನ್ನ ಪ್ರೀತಿಯ ಪುತ್ರನು ; ನಿನ್ನನ್ನು ನಾನು ಮೆಚ್ಚಿರು ನೆನು" (ಲೂಕ ೩-೨೨)

ಆ ಒಂದು ಕ್ಷಣದಲ್ಲಿ ಪುರುಷತ್ರಯೈಕ ಭಗವಂತನ ದರ್ಶನವಾಯಿತು. ಅದನ್ನು ಕಂಡ ಜನರು ಚಕಿತರಾದರು. ಯೋಹಾನನು ಸಂತಸದಿಂದ ರೋಮಾಂಚಗೊಂಡನು.

ಯೋಹಾನನು ಯುದೇಯಾದಲ್ಲಿ ಸರ್ವಜನಾದರಣೀಯ ವ್ಯಕ್ತಿಯಾಗಿದ್ದನು. ಯೆಹೂದ್ಯ ಶಾಸ್ತ್ರಿಗಳಿಗೂ ಯಾಜಕರಿಗೂ ಆತನ ನಿಜವಾದ ಪರಿಚಯವು ಬೇಕಾಯಿತು. ಅದಕ್ಕಾಗಿ ಅವರು ಆತನನ್ನು ವಿಚಾರಿಸಿದರು. ಉತ್ತರವನ್ನೀಯುತ್ತ ಯೋಹಾನನು, "ನಾನು ಕ್ರಿಸ್ತನಲ್ಲ" (ಯೋಹಾನ ೧-೨೦) ಎಂದನು. ಅವರು ತೃಪ್ತರಾಗಲಿಲ್ಲ. ಯೋಹಾನನು ಕ್ರಿಸ್ತನು ನೀಡಬಹುದಾದ ಜ್ಞಾನಸ್ನಾನವನ್ನು ನೀಡುತ್ತಿದ್ದನು. ಹೀಗಾಗಿ ಅದನ್ನು ಸೂಚಿಸುತ್ತ ಅವರು ವಿವರವನ್ನು ಬಯಸಿದರು. ಪ್ರತ್ಯುತ್ತರವಾಗಿ—

"ಇಸಾಯಸ್ ಪ್ರವಾದಿಯು ಸೂಚಿಸಿದ ಸ್ವಾಮಿಯ ಮಾರ್ಗವನ್ನು ಸೇರಗೊಳಿಸಿರೆಂದು ಅರಣ್ಯದಲ್ಲಿ ಹೇಳುವ ವನಸ್ವರವೇ ನಾನು" ಎಂದೂ, (ಯೋಹಾನ ೧-೨೩)

"ನಾನು ನೀರಿನಿಂದ ಜ್ಞಾನಸ್ನಾನವನ್ನೀಯುವೆನು. ಆದರೆ ನಿಮ್ಮ ಮಧ್ಯದಲ್ಲಿ ನೀವು ತಿಳಿಯದವನೊಬ್ಬನು ನಿಂತಿರುವನು. ನನಗಿಂತಲೂ ಶ್ರೇಷ್ಠನಾದ, ನನ್ನ ಅನಂತರ ಆಗಮಿಸುವವನು ಅವನೇ. ಆತನ ಪಾದರಕ್ಷೆಗಳನ್ನು ಕಳಚಲೂ ನಾನು ಅಯೋಗ್ಯನು" (ಯೋಹಾನ ೧: ೨೬-೨೭)

ಎಂದೂ ಉತ್ತರವಿತ್ತನು. ಅವರು ಇನ್ನೂ ಪ್ರಶ್ನಿಸಿದ ವಿಚಾರಗಳನ್ನು ಬೈಬಲಿನಲ್ಲಿ ಹೇಳಿಲ್ಲ. ಆದರೆ ಮರುದಿನ ಯೇಸುವು ತನ್ನಲ್ಲಿಗೆ ಬರುವುದನ್ನು ಯೋಹಾನನು ನೋಡಿದನು. ತನ್ನ ಸನಿಯದಲ್ಲಿ ನೆರೆದ ಜನರನ್ನುದ್ದೇಶಿಸಿ, ಬೆರಳೆತ್ತಿ ತೋರಿಸುತ್ತ, "ಭಗವಂತನ ಕುರಿಮರಿಯನ್ನು ನೋಡಿರಿ ; ಜಗತ್ತಿನ ಪಾತಕವನ್ನು ನೀಗಿಸುವವನನ್ನು ಕಾಣಿರಿ. ನನಗಿಂತಲೂ ಶ್ರೇಷ್ಠನಾದವನೊಬ್ಬನು ಆಗಮಿಸುವನೆಂದು ಹೇಳಿದ್ದೆನಷ್ಟೆ ! ಆತನು ನನಗಿಂತಲೂ ಪೂರ್ವದಲ್ಲಿದ್ದನು. ನಾನಾತನನ್ನು ಅರಿತಿರಲಿಲ್ಲ, ಆದರೆ ಆತನನ್ನು ಇಸ್ರೇಲದಲ್ಲಿ ಪ್ರಕಟಿಸಲು, ನೀರಿನ ಜ್ಞಾನಸ್ನಾನವನ್ನು ಕೊಡಲು ನಾನು ಬಂದೆನು.— ಪಾರಿವಾಳದ ರೂಪದಲ್ಲಿ ಚಿತ್‌ಶಕ್ತಿ

(Spirit) ಯು ಸ್ವರ್ಗಲೋಕದಿಂದ ಆತನ ಮೇಲೆ ಬರುವುದನ್ನು ನಾನು ಕಂಡಿರುವೆನು. ನನಗಾತನ ಪರಿಚಯವಿರಲಿಲ್ಲ. ಆದರೆ ನೀರಿನ ಜ್ಞಾನ-ಸ್ನಾನವನ್ನೀಯಲು ನನ್ನನ್ನಿಲ್ಲಿಗೆ ಕಳುಹಿಸಿದಾತನು, ಯಾವಾತನ ಮೇಲೆ ಚಿತ್‌ಶಕ್ತಿ(Spirit)ಯು ಇಳಿದು ನಿಂತಿರುವುದನ್ನು ನೀನು ಕಾಣುವೆಯೋ ಆತನೇ ಆ ಪವಿತ್ರಾತ್ಮನಿಂದ ಜ್ಞಾನಸ್ನಾನವನ್ನೀಯುವವನು ಎಂದು ನನಗೆ ಹೇಳಿರುವನು. ನಾನು ನೋಡಿದೆನು, ಆದುದರಿಂದ ಈತನೇ ಭಗವತ್-ಪುತ್ರನೆಂದು ನಾನೇ ಸಾಕ್ಷ್ಯವನ್ನೀಯುತ್ತೇನೆ" (ಯೋಹಾನ ೧-೨೯-೩೪)

ಅದರ ಮಾರನೆಯ ದಿನ ಯೇಸುವನ್ನು ಕಂಡು ಯೋಹಾನನು ತನ್ನ ಬಳಿಯಲ್ಲಿದ್ದ ಯೋಹಾನ–ಆಂದ್ರೇಯರೆಂಬಿಬ್ಬರು ಶಿಷ್ಯರಿಗೆ ಯೇಸುವನ್ನು ಕ್ರಿಸ್ತನೆಂದು ತೋರಿಸಿ ಆತನನ್ನು ಅನುಸರಿಸಲು ಸೂಚಿಸಿದನು. ಇವರಿಬ್ಬರೂ ಯೇಸುವನ್ನು ಹಿಂಬಾಲಿಸಿದರು. ಅವರು ಆತನ ದ್ವಾದಶ ಶಿಷ್ಯರಲ್ಲಿ–ದೇವಪ್ರೇಷಿತರಲ್ಲಿ ಇಬ್ಬರಾಗಿರುವರು.

(ಇಲ್ಲಿ ಇಬ್ಬರು ಯೋಹಾನರಿದ್ದಾರೆ. ಒಬ್ಬನು ಸ್ನಾನಿತ ಯೋಹಾನನು–ಯೇಸುವಿಗಿಂತ ಆರು ತಿಂಗಳಷ್ಟು ಹಿರಿಯನು. ಇವನೇ ಅಗ್ರದೂತ ತಪಸ್ವಿ, ಪ್ರವಾದಿಯು. ಹೇರೋದನೆಂಬವನು ತನ್ನ ಪ್ರೇಯಸಿಯ ತೃಪ್ತಿಗಾಗಿ ಅವನನ್ನು ಕೊಂದನು. ಇನ್ನೊಬ್ಬನು ಯೇಸುವಿಗಿಂತಲೂ ಕಿರಿಯನು. ಆತನು ಯೇಸುವಿನ ಶಿಷ್ಯನು. ಯೇಸುವು ಸತ್ತ ಬಳಿಕ ಸುಮಾರು ಎಪ್ಪತ್ತು ವರ್ಷಗಳಷ್ಟು ಬದುಕಿದನು. ಇವನೇ ಯೇಸುವಿನ ಸುವಾರ್ತೆಯನ್ನು ಬರೆದವನು.)

ಯೇಸುವಿನ ಸಮರ್ಥ ವಾಗ್ಧೋರಣೆ

ಯೇಸುವು ಮಾನವ ಕುಲದ ಉದ್ಧಾರಕ್ಕಾಗಿ ಜನಿಸಿದ ಕ್ರಿಸ್ತನೆಂದೂ ಭಗವತ್-ಪುರುಷನೆಂದೂ ತಿಳಿಯಲು ಬಾಹ್ಯಸಾಕ್ಷಿಗಳಲ್ಲಿ ಕೆಲವನ್ನು ನೋಡಿದೆವು. ಇನ್ನು ಆ ಯೇಸುವು ತನ್ನ ಮಾತುಗಳ ರೀತಿಯಿಂದ ಮಾತ್ರವಲ್ಲ ಸಂಪೂರ್ಣತೆಯ ಜೀವನ ಕ್ರಮದಿಂದ ತಾನು ಮನುಷ್ಯ ಮಾತ್ರವಲ್ಲವೆಂದು ತೋರಿಸಿದ ಬಗೆಯನ್ನು ತಿಳಿಯಬೇಕಾಗಿದೆ. ನಜರೇತಿನ ಯೇಸುವು ಪುರೋಹಿತ ಕುಲದಲ್ಲಾಗಲಿ, ವಿದ್ವಾಂಸನ ಪುತ್ರನೆಂದಾಗಲಿ

ಜನಿಸಿರಲಿಲ್ಲ. ಸಾಮಾನ್ಯ ಜನತೆಗೆ ಆತನು ಬಡಗಿ ಯೋಸೇಫನ ಹಾಗೂ ಮರಿಯಳ ಪುತ್ರನಾಗಿದ್ದನು-ಬಡಗಿಯಾಗಿದ್ದನು. ಹಾಗಿದ್ದರೂ ತನ್ನ ಮೂವತ್ತು ವರ್ಷದ ಹರೆಯದಲ್ಲಿ ಶಾಸ್ತ್ರಿಗಳೊಡನೆ ಧರ್ಮಸೂತ್ರಗಳಲ್ಲಿ ತರ್ಕಮಾಡುವಷ್ಟು ಸಮರ್ಥ ವಾಕ್-ಸಂಪತ್ತನ್ನು ಪಡೆದಿದ್ದನು—ಆತನು ಹನ್ನೆರಡು ವರ್ಷ ಪ್ರಾಯದಲ್ಲಿಯೇ ದೇವಾಲಯದಲ್ಲಿ ಧರ್ಮಸೂತ್ರ ಸಮನ್ವಯವಾಗಿ ಪ್ರಾಚೀನ ಗ್ರಂಥಗಳ ಜಟಿಲ ಪ್ರಶ್ನೆಗಳನ್ನು ಬಿಡಿಸಿದ ಘಟನೆಯನ್ನು ಸುವಾರ್ತೆಯ ಲೇಖಕನು ಬರೆದಿರುವನು.

ಯೇಸುವು ದೋಷಮಯ ಧರ್ಮೋಪದೇಶವನ್ನು ನೀಡುವನೆಂದು ಸಮರ್ಥಿಸಲು, ಆತನಲ್ಲಿ ಅಪರಾಧ ಮಂಡನಕ್ಕೆ ಬಾಹ್ಯಸಾಕ್ಷಿಗಳನ್ನು ಅನ್ವಯಗೊಳಿಸಲು ಆತನ ವೈರಿವರ್ಗವು ಹಲವು ವಚನ ಪಾಶಗಳನ್ನು ಇರಿಸಿದ್ದರು. ಅದೆಲ್ಲವನ್ನೂ ಆತನು ಯಾವ ಬಗೆಯಲ್ಲಿಯೂ ಲಕ್ಷಿಸದೆ ತನ್ನ ವಾಕ್‌ಪ್ರವಾಹದಿಂದ ಅವುಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದನು. ಆದರೆ ಅಂದಿನ ಧರ್ಮಸೂತ್ರಗಳ ವ್ಯಾಖ್ಯಾನ ನೀಡುವಾಗ ತನ್ನ ಸ್ವಂತ ಅಧಿಕಾರದಿಂದ "ನಾನು ಹೇಳುತ್ತೇನೆ" ಎಂದು ನವೀನಾರ್ಥದಲ್ಲಿ ವಿಶದಗೊಳಿಸುತ್ತಿದ್ದನು.

"ನಾನು ನಿಯಮವನ್ನಾಗಲಿ, ಪ್ರವಾದಿಗಳ ಬೋಧನೆಗಳನ್ನಾಗಲಿ ನಾಶಮಾಡಲು ಬಂದವನೆಂದು ತಿಳಿಯದಿರಿ; ನಾನು ನಾಶಮಾಡಲು ಬಂದವನಲ್ಲ, ಆದರೆ ಪೂರ್ಣಗೊಳಿಸುವುದಕ್ಕಾಗಿ ಮಾತ್ರ." (ಮತ್ತೇಯ ೫-೧೭)

"ನೀನು ಕೊಲ್ಲಬಾರದು" ಮತ್ತು ಕೊಂದವನು ನೀತಿಗೆ ಬಾಧ್ಯಸ್ಥನಾಗುವನು- ಎಂದು ಪ್ರಾಚೀನ ಜನರಿಗೆ ಹೇಳಿರುವುದನ್ನು ನೀವು ಕೇಳಿರುವಿರಿ. ಆದರೆ ತನ್ನ ಸಹೋದರನಲ್ಲಿ ಕೋಪಗೊಂಡ ಪ್ರತಿಯೊಬ್ಬನೂ ನೀತಿಗೆ ಬಾಧ್ಯಸ್ಥನಾಗುವನೆಂದು ನಾನು ಹೇಳುತ್ತೇನೆ" (ಮತ್ತೇಯ ೫-೨೧, ೨೨)

"ನೀನು ವ್ಯಭಿಚಾರವನ್ನೆಸಗಬಾರದು" ಎಂದು ಪ್ರಾಚೀನ ಜನರಿಗೆ ಹೇಳಿರುವುದನ್ನು ನೀವು ಕೇಳಿರುವಿರಿ; ಆದರೆ ಯಾವಾತನು ಕಾಮದಿಂದ ಸ್ತ್ರೀಯೊಬ್ಬಳನ್ನು ನೋಡುವನೋ ಆತನು ಆಗಲೇ ತನ್ನ ಹೃದಯದಲ್ಲಿ

ಆಕೆಯಲ್ಲಿ ವ್ಯಭಿಚಾರಗೈದನೆಂದು ನಾನು ಹೇಳುತ್ತೇನೆ" (ಮತ್ತೇಯ ೫–೨೮)

"ತನ್ನ ಪತ್ನಿಯನ್ನು ತ್ಯಜಿಸುವವನು ಆಕೆಗೊಂದು ಬಿಡುಗಡೆಯ ಪತ್ರವನ್ನು ಕೊಡಬೇಕೆಂದು ಕೂಡ ಹೇಳಿರುವುದಷ್ಟೆ! ಆದರೆ ವ್ಯಭಿಚಾರದ ಕಾರಣದ ಹೊರತು ತನ್ನ ಪತ್ನಿಯನ್ನು ತ್ಯಜಿಸುವ ಪ್ರತಿಯೊಬ್ಬನೂ ಆಕೆಯು ವ್ಯಭಿಚಾರವನ್ನೆಸಗಲು ಕಾರಣನಾಗುತ್ತಾನೆ, ಮತ್ತು ತ್ಯಜಿಸಲ್ಪಟ್ಟ ಸ್ತ್ರೀಯನ್ನು ವಿವಾಹವಾಗುವವನೂ ವ್ಯಭಿಚಾರವನ್ನೆಸಗುತ್ತಾನೆಂದು ನಾನು ಹೇಳುತ್ತೇನೆ" (ಮತ್ತೇಯ ೫,೩೧-೩೨)

"ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಎಂದು ಹೇಳಿರುವುದನ್ನು ನೀವು ಕೇಳಿರುವಿರಿ. ಆದರೆ ಕೇಡನ್ನುಂಟುಮಾಡುವವನನ್ನು ತಡೆಯಬಾರದೆಂದೂ, ಅದರ ಬದಲು ,ನಿಮ್ಮ ಬಲಕೆನ್ನೆಗೆ ಹೊಡೆದರೆ ಎಡಕೆನ್ನೆಯನ್ನು ಕೂಡ ತೋರಿಸಬೇಕೆಂದೂ ಮತ್ತು ಯಾರಾದರೊಬ್ಬರು ನ್ಯಾಯಸ್ಥಾನಕ್ಕೆ ನಿಮ್ಮನ್ನೆಳೆದು ನಿಮ್ಮ ಹೊರ ಅಂಗಿಯನ್ನು ಕೊಂಡಾಗ ನಿಮ್ಮ ಒಳ ಅಂಗಿಯನ್ನೂ ಆತನು ಪಡೆಯಲೆಂದೂ ... ನಾನು ಹೇಳುತ್ತೇನೆ." (ಮತ್ತೇಯ ೫–೩೮-೪೦)

"ನಿಮ್ಮ ನೆರೆಯುವನನ್ನು ಪ್ರೀತಿಸಿರಿ, ವೈರಿಯನ್ನು ದ್ವೇಷಿಸಿರಿ, ಎಂದು ಹೇಳಿರುವುದನ್ನು ನೀವು ಕೇಳಿರುವಿರಿ. ಆದರೆ ನಿಮ್ಮ ವೈರಿಗಳನ್ನು ಪ್ರೀತಿಸಬೇಕೆಂದೂ, ನಿಮ್ಮನ್ನು ದ್ವೇಷಿಸುವವರಿಗೆ ಹಿತವನ್ನು ಮಾಡಬೇಕೆಂದೂ ನಿಮ್ಮನ್ನು ಹಿಂಸಿಸುವ ಮತ್ತು ಅಪಚಾರ ಮಾಡುವವರಿಗಾಗಿ ಪ್ರಾರ್ಥಿಸಬೇಕೆಂದೂ ನಾನು ಹೇಳುತ್ತೇನೆ" (ಮತ್ತೇಯ ೫,೪೩-೪೪)

ಹೀಗೆ ನವೀನಾರ್ಥದಿಂದ ಹಿಂದಿನ ಸೂತ್ರಗಳನ್ನು ವಿಶದಗೊಳಿಸುವಾಗ ಆತನ ಮಾತುಗಳನ್ನು ಆಲಿಸಿದವರು ಸಹಿಸದಾದರು. ಸಾಮಾನ್ಯ ವ್ಯಕ್ತಿಯಾದವನು ವಿವಿಧ ತತ್ವ ಹಾಗೂ ನಿಯಮಗಳ ಅರ್ಥವನ್ನು ಕೊಡಲರಿಯನಷ್ಟೆ. ಅಂದಿನ ಸಮಾಜ ನಾಯಕರೂ ವಿರೋಧಿಸಿದರು. ಮೇಲೆ ಕೊಟ್ಟ ಮಾತುಗಳಿಂದ ಯೇಸುವಿನ ಸ್ಥಾನದ ಅರಿವಾಗುತ್ತದೆ: ಆತನು ಮಹಾತ್ಮನಾಗಿರಬೇಕು ಅಥವಾ ಅತ್ಯಂತ ನಿಕೃಷ್ಟ ವ್ಯಕ್ತಿಯಾಗಿರಬೇಕು– ಎರಡೂ ಪರಮಾವಧಿಯಾಗಿ. ಯೇಸುವನ್ನು ಅತ್ಯಂತ ನಿಕೃಷ್ಟ

ವ್ಯಕ್ತಿಯಾಗಿ ಪರಿಗಣಿಸಲು ನಾವು ಅಥವಾ ಇನ್ನಾರೂ ಸಿದ್ಧರಿಲ್ಲ, ಆದುದರಿಂದ ಆತನು ಮಹಾತ್ಮನೇ ಸರಿ.

ಯೇಸುವಿನ ಅಲೌಕಿಕ ವಚನಗಳು

ಯೇಸುಕ್ರಿಸ್ತನು ಮನುಷ್ಯ ಮಾತ್ರನಾಗಿರದವನು ಉಚ್ಚರಿಸಬಹುದಾದ ಮಾತುಗಳನ್ನು ಅನೇಕ ಸಂದರ್ಭಗಳಲ್ಲಿ ಹೊರಗೆಡಹಿರುವನು. ಅಂತಹ ಮಾತುಗಳಲ್ಲಿ ಪಾರಮಾರ್ಥಿಕ ವಿಚಾರಗಳು ತುಂಬಿ ಹರಿಯುತ್ತವೆ. ಕೆಲವು ವಚನಗಳನ್ನು ಇಲ್ಲಿ ಸಂಗ್ರಹಿಸಿದೆ :

ಯೇಸುವು ತನ್ನ ಇಷ್ಟರಿಗೆ ಹಿತವಾದವನ್ನು ನೀಡುವಾಗ ಹೇಳಿದುದು: "ಜಗತ್ತಿನಲ್ಲಿ ಯಾರನ್ನೂ ನಿಮ್ಮ ಪಿತನೆಂದು ಕರೆಯದಿರಿ; ಏಕೆಂದರೆ ಸ್ವರ್ಗದಲ್ಲಿರುವವನೊಬ್ಬನೇ ನಿಮ್ಮ ಪಿತನು. ನೀವು ಸ್ವಾಮಿಗಳೆಂದು ಕರೆಯಲ್ಪಡದಿರಿ-ಏಕೆಂದರೆ ಕ್ರಿಸ್ತನೊಬ್ಬನೇ ನಿಮ್ಮ ಸ್ವಾಮಿಯು" (ಮತ್ತೇಯ ೨೩,೯-೧೦)

ಯೆಹೂದ್ಯರು ವ್ಯಭಿಚಾರಿಣಿಯೊಬ್ಬಳನ್ನು ಯೇಸುವಿನ ಬಳಿಗೆ ತಂದಿದ್ದರು. ಯೆಹೂದ್ಯರ ನಿಯಮದ ಪ್ರಕಾರ ಆಕೆಯನ್ನು ಕಲ್ಲುಗಳಿಂದ ಹೊಡೆದು ಕೊಲ್ಲಬೇಕಾಗಿತ್ತು. ಆದರೆ ರೋಮ್ ಸರಕಾರದ ನಿಯಮದ ಪ್ರಕಾರ ಮರಣದಂಡನೆಯನ್ನು ಕೊಡುವ ಅಧಿಕಾರವು ಅವರಿಗಿದ್ದಿಲ್ಲ. ಯೇಸುವು ನಿರಪರಾಧಿಯಾದವನು ಮೊದಲ ಕಲ್ಲನ್ನೆಸೆಯುವಂತೆ ಸೂಚಿಸಿದನು. ಅವರೆಲ್ಲರೂ ಜಾರಿದರು. ಆಕೆಗೆ ಹಿತಬೋಧನೆಯನ್ನು ಕೊಟ್ಟು ತನ್ನ ಇಷ್ಟರೊಡನೆ :

"ನಾನೇ ಲೋಕದ ಪ್ರಕಾಶವಾಗಿರುವೆನು. ನನ್ನನ್ನು ಹಿಂಬಾಲಿಸುವವನು ಅಂಧಕಾರದಲ್ಲಿ ನಡೆಯುವುದಿಲ್ಲ, ಆದರೆ ಜೀವಪ್ರಕಾಶವನ್ನು ಪಡೆಯುವನು" (ಯೋಹಾನ ೮-೧೨)

ಎಂದನು. ಇದೇ ರೀತಿ ವಿವಿಧ ಸಂದರ್ಭಗಳಲ್ಲಿ

"ನಾನೇ ಆ ಮಾರ್ಗವೂ ಆ ಸತ್ಯವೂ ಆ ಜೀವಪ್ರಾಣವೂ ಆಗಿರುವೆನು. ನನ್ನಿಂದ ಹೊರತು, ಪಿತನೆಡೆಗೆ ಯಾರೂ ಬರಲಾರರು" (ಯೋಹಾನ ೧೪-೬)

"ಚೌರ್ಯಕ್ಕಾಗಿ, ಕೊಲೆಗಾಗಿ ಮತ್ತು ವಿನಾಶಕ್ಕಾಗಿ ಹೊರತು ಚೋರನು ಬರಲಾರನು; ಆದರೆ ಅವರಲ್ಲಿ (ಜನರಲ್ಲಿ) ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ನಾನು ಬಂದಿರುವೆನು" (ಯೋಹಾನ ೧೦-೧೦)

"ನಾನೇ ಪುನರುತ್ಥಾನವೂ ಜೀವವೂ ಆಗಿರುವೆನು; ನನ್ನಲ್ಲಿ ವಿಶ್ವಾಸವಿಟ್ಟವನು ಸತ್ತಿದ್ದರೂ ಬದುಕುವನು; ಜೀವಿಸುತ್ತ ಯಾರು ನನ್ನಲ್ಲಿ ವಿಶ್ವಾಸವಿಡುತ್ತಾನೋ ಅವನು ಎಂದಿಗೂ ಸಾಯನು" (ಯೋಹಾನ ೧೧, ೨೫-೨೬)

"ಪಿತನನ್ನು ಅಥವಾ ಮಾತೆಯನ್ನು ನನಗಿಂತಲೂ ಅಧಿಕವಾಗಿ ಅದಾವನು ಪ್ರೀತಿಸುವನೋ ಅವನು ನನಗೆ ಯೋಗ್ಯನಾಗಿಲ್ಲ; ಪುತ್ರನನ್ನು ಅಥವಾ ಪುತ್ರಿಯನ್ನು ನನಗಿಂತಲೂ ಅಧಿಕವಾಗಿ ಪ್ರೀತಿಸುವವನೂ ನನಗೆ ಯೋಗ್ಯನಾಗಿಲ್ಲ" (ಮತ್ತೀಯ ೧೦-೩೭)

"ಪುತ್ರನಲ್ಲಿ ವಿಶ್ವಾಸ ಪಡೆದವನು ಅನಂತಜೀವನವನ್ನು ಪಡೆಯುವನು; ಆದರೆ ಪುತ್ರನಲ್ಲಿ ವಿಶ್ವಾಸ ಪಡೆಯದವನು ಜೀವನವನ್ನು ಕಾಣಲಾರನು; ಆದರೆ ಭಗವಂತನ ಕ್ರೋಧವು ಆತನ ಮೇಲೆ ಬರುವುದು" (ಯೋಹಾನ ೩-೩೬)

"ನಾನವರಿಗೆ ಅನಂತ ಜೀವನವನ್ನು ನೀಡುವೆನು: ಅವರು ಎಂದಿಗೂ ನಾಶವಾಗರು" (ಯೋಹಾನ ೧೦-೨೮)

"ನಾನೂ ಪಿತನೂ ಒಂದೇ ಆಗಿರುವೆವು" (ಯೋಹಾನ ೧೦-೩೦)

ಈ ಮಾತನ್ನು ಹೇಳಿದಾಗ ಯೆಹೂದ್ಯ ನಾಯಕರಿಂದ ಪ್ರೇರಿತ ಜನರು ಯೇಸುವನ್ನು ಹೊಡೆಯಲು ಕಲ್ಲುಗಳನ್ನೆತ್ತಿದರು. ಯೇಸುವು ಕಾರಣವನ್ನು ವಿಚಾರಿಸಲು ಯೆಹೂದ್ಯರು–

"ಭಗವನ್ನಿಂದೆಗಾಗಿ ಹೊರತು ಒಳ್ಳೆ ಕಾರ್ಯಕ್ಕಾಗಿ ನಿನಗೆ ನಾವು ಕಲ್ಲೆಸೆಯಲಾರೆವು. ಕೇವಲ ಮನುಷ್ಯನಾದ ನೀನು ಭಗವಂತನೆಂದು ಹೇಳಿಕೊಳ್ಳುವೆಯೆಂದು ಮಾತ್ರ!" (ಯೋಹಾನ ೧೦-೩೩) ಎಂದು ಉತ್ತರವಿತ್ತರು.

"ನಾನು ಭಗವತ್ ಪುತ್ರನಾಗಿರುವೆನು. ನನ್ನ ಪಿತನ ಕಾರ್ಯ

ಗಳನ್ನು ನಾನು ಮಾಡುವುದಿಲ್ಲವಾದರೆ ನನ್ನನ್ನು ನಂಬದಿರಿ" (ಯೋಹಾನ ೧೦, ೩೬-೩೭)

"ಪಿತನು ನನ್ನಲ್ಲಿಯೂ ನಾನು ಪಿತನಲ್ಲಿಯೂ ಇರುವುದನ್ನು ನೀವು ನಂಬುವುದಿಲ್ಲವೇ? ನಿಮ್ಮೊಡನೆ ನಾನಾಡಿದ ಮಾತುಗಳಲ್ಲಿ ನನ್ನನ್ನೇ ಕುರಿತು ನಾನಾಡಿಲ್ಲ. ಆದರೆ ನನ್ನಲ್ಲಿ ಲೀನವಾಗಿರುವ ಪಿತನು ಕಾರ್ಯಗಳೆಲ್ಲವನ್ನು ಮಾಡಿರುವನು." (ಯೋಹಾನ ೧೪-೧೦)

"ನಾನು ಭಗವಂತನಿಂದ ಬಂದಿರುವೆನೆಂದು ನೀವು ನಂಬಿರುವುದರಿಂದಲೂ ನೀವು ನನ್ನನ್ನು ಪ್ರೀತಿಸಿರುವುದರಿಂದಲೂ ಪಿತನೇ ನಿಮ್ಮನ್ನು ಪ್ರೀತಿಸುತ್ತಿರುವನು." (ಯೋಹಾನ ೧೬-೨೭)

ಹೀಗೆ ಯೇಸುವು ತಾನು ಭಗವಂತನೆಂದು ಹಲವು ಸಲ ಹೇಳಿಕೊಂಡಿರುವನು. ಲೋಕದ ಯಾವ ಮಹಾತ್ಮನೇ ಆಗಿರಲಿ, ಅಥವಾ ಧರ್ಮ ಸಂಸ್ಥಾಪಕನೇ ಆಗಿರಲಿ, ತಾನು ಭಗವಂತನೆಂದು ಹೇಳಿಕೊಳ್ಳಲಿಲ್ಲ. ಇತರರು ಹೇಳಿರಬಹುದಾದರೂ ಅವರು ಅದನ್ನು ನಿರಾಕರಿಸಿರುವರು. ಈ ಒಂದು ವಿಚಾರವನ್ನು ಯೇಸುವು ಸ್ಪಷ್ಟವಾಗಿ ಜನತೆಯ ಮುಂದೆ ಸಾರಿದ್ದನು. ಅದನ್ನರಿತುಕೊಂಡು ಯೆಹೂದ್ಯ ಯಾಜಕರೇ ಮೊದಲಾದವರು ಆತನ ಮರಣವನ್ನು ಬಯಸಿದರು.

ನೀತಿ ಸಭೆಯ ಮುಂದೆ

ಯೆಹೂದ್ಯರಲ್ಲಿ ಎಪ್ಪತ್ತೆರಡು ಮಂದಿ ಹಿರಿಯರ ಸಭೆಯೊಂದಿತ್ತು. ಹಿರಿ ಯಾಜಕ (High Preist) ನು ಅದರ ಅಧ್ಯಕ್ಷ. ಈ ನೀತಿ ಸಭೆಯನ್ನು 'ಸೆನ್ಹೆಡ್ರಿನ್' ಎಂದು ಅವರು ಕರೆಯುತ್ತಿದ್ದರು. ಅಪರಾಧಿಯಾದವನ ಅಪರಾಧವನ್ನು ಸ್ಪಷ್ಟಗೊಳಿಸಲು ಪ್ರತಿಯೊಂದು ವಿಚಾರದಲ್ಲಿಯೂ ಸಂಪೂರ್ಣವಾಗಿ ಒಪ್ಪಿಕೊಳ್ಳುವ ಸಾಕ್ಷಿಗಳು ಇಬ್ಬರಾದರೂ ಇರದೆ ಹೋದರೆ ಅಪರಾಧವು ರುಜುವೆನಿಸುತ್ತಿರಲಿಲ್ಲ. ಮಾತ್ರವಲ್ಲ, ಆ ಎಪ್ಪತ್ತೆರಡು ಮಂದಿಗಳಲ್ಲಿ ಕನಿಷ್ಠಪಕ್ಷ ಇಬ್ಬರಾದರೂ ವ್ಯಕ್ತಿಯಲ್ಲಿ ನಿರ್ದೋಷತ್ವವನ್ನು ವ್ಯಕ್ತಗೊಳಿಸದೆ ಹೋದರೆ ಅಪರಾಧಿಯು ಬಿಡುಗಡೆಯಾಗುತ್ತಿತ್ತು. ಎಲ್ಲ ಸದಸ್ಯರೂ ಒಮ್ಮತದಿಂದ ದಂಡನೆಯನ್ನು ಸಾರಿದರೆ, ಅಪ

ರಾಥಿಗೆ ದಯೆಯನ್ನು ತೋರಿಸಲಿಲ್ಲವೆಂದೂ ಕೇವಲ ಕಾಠಿನ್ಯವನ್ನೇ ಪ್ರದರ್ಶಿಸಿದರೆಂದೂ ತಿಳಿಯಲಾಗುತ್ತಿತ್ತು.

ಯೇಸುವಿಗೆ ಮರಣದಂಡನೆಯು ಹಿರಿಯ ಯಾಜಕರಿಂದ ಮೊದಲೇ ನಿಶ್ಚಯಿಸಲ್ಪಟ್ಟಿತ್ತು. ಹಿಂದಿನ ಹಿರಿಯ ಯಾಜಕ ಅನ್ನಾಸ್, ಆಗಿನ ಹಿರಿಯ ಯಾಜಕ ಕಾಯ್‌ಫಾಸ್ ಮೊದಲಾದವರು ಯೇಸುವಿನ ದ್ವಾದಶ ಶಿಷ್ಯರಲ್ಲೊಬ್ಬನಾದ ಯೂದಾಸನೊಡನೆ ಒಳಸಂಚನ್ನು ಕೈಕೊಂಡು ಮಧ್ಯರಾತ್ರಿಯಲ್ಲಿ ನೀತಿಸಭೆಯನ್ನು ಒಟ್ಟುಗೂಡಿಸಿ ಯೇಸುವನ್ನು ಬಂಧಿಸಿ ನೀತಿಸಭೆಯ ಮುಂದಿರಕ್ಕೆ ತಂದಿದ್ದರು.

ಯುಕ್ತ ಪ್ರಮಾಣವಚನ ಸ್ವೀಕಾರದ ಬಳಿಕ ಸಾಕ್ಷಿಗಾರರೊಬ್ಬರನ್ನು ಸಭೆಯ ಮುಂದೆ ಕರೆಸಿದರು. ಯೇಸುವು ತಾನು ಸತ್ತ ಮೂರನೆಯ ದಿನ ಪುನರುತ್ಥಾನಗೊಳ್ಳುವೆನೆಂದು ಹೇಳಿದ ಮಾತನ್ನೆ ಅಪರಾಧವನ್ನಾಗಿ ಹೇಳಲಾಯಿತು.

"ಕೈಗಳಿಂದ ರಚಿತವಾದ ಈ ದೇಗುಲವನ್ನು ನಾನು ನಾಶ ಮಾಡುವೆನು ಮತ್ತು ಕೈಗಳಿಂದ ರಚಿತವಾಗಿರದ ದೇಗುಲವನ್ನು ಕಟ್ಟುವೆನು" (ಮಾರ್ಕ್ ೧೪-೫೮)

"ಈ ದೇಗುಲವನ್ನು ನಾಶಗೊಳಿಸಿರಿ-ಮೂರೇದಿನಗಳಲ್ಲಿ ನಾನದನ್ನು ರಚಿಸುವೆನು." (ಯೋಹಾನ, ೨-೧೯)

ಭಗವಂತನ ಈ ದೇಗುಲವನ್ನು ನಾಶಪಡಿಸಲೂ ಮೂರುದಿನಗಳ ಅನಂತರ ಅದನ್ನು ಪುನಃ ನಿರ್ಮಿಸಲೂ ನಾನು ಸಮರ್ಥನಿರುವೆನು." (ಮತ್ತೇಯ ೨೬-೬೧)

ಇಂತಹ ರೀತಿಯ ಸಮಾನತೆಯುಳ್ಳ ಸಾಕ್ಷ್ಯಗಳು ಇಂದಿನ ವ್ಯವಹಾರಗಳಲ್ಲಿ ಸ್ವೀಕೃತವಾಗುವವಾದರೂ ಯೆಹೂದ್ಯರ ನಿಯಮದ ಪ್ರಕಾರ ಪರಿಪೂರ್ಣ ಏಕರೂಪತೆಯಿರದೆ ಅವು ಸ್ವೀಕೃತವಾಗವು. ಹೀಗಾಗಿ ಆ ಅಪರಾಧವನ್ನು ಬಿಟ್ಟುಬಿಡಬೇಕಾಯಿತು. ಇನ್ನೊಂದನ್ನು ಮುಂದೆ ತಂದರು.

ಯೇಸುವು ಪವಾಡಗಳನ್ನು ಮಾಡಿ ದೀನದಲಿತರ ಸ್ನೇಹವನ್ನು ಸಂಪಾದಿಸಿದ್ದನು. ಯೆಹೂದ್ಯರ ಪವಿತ್ರವಾದ 'ಸಬ್ಬತ್' (ಶನಿವಾರ) ದಿನದಲ್ಲಿಯೂ ಜನರ ದುಃಖವನ್ನು ಪರಿಹರಿಸಲು ಆತನು ಪವಾಡಗಳನ್ನು

ಮಾಡಿದ್ದನು. ನಾಯಕರು ಪವಾಡದಿಂದ ಪ್ರಯೋಜನ ಪಡೆದ ವ್ಯಕ್ತಿಗಳನ್ನೂ ಸಾಕ್ಷ್ಯಕ್ಕಾಗಿ ತಂದಿದ್ದರು. ಆದರೆ ಸಾಕ್ಷಿಗಳು ಮಾತ್ರ ಯೇಸುವಿನಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತ, ಇತರ ವಿಷಯಗಳಲ್ಲಿ ಉದಾಸೀನ ಭಾವವನ್ನು ತಾಳಿದರು. ಆದುದರಿಂದ ಈ ರೀತಿಯಲ್ಲಿಯೂ ಅಪರಾಧ ಮಂಡನವು ಅಸಾಧ್ಯವಾಗಿ ಹೋಯಿತು

ಅನ್ನಾಸ–ಕಾಯಫಾಸರ ಕಾರ್ಯವು ಅಪೂರ್ಣವಾಗುವ ಲಕ್ಷಣಗಳು ತೋರಿದುವು. ನಿಯಮದ ಪ್ರಕಾರ ವಿಚಾರಣೆಯ ಕಾಲವೂ ಮುಗಿಯುತ್ತ ಬಂದಿತ್ತು. ನೀತಿಸಭೆಯ ಎಪ್ಪತ್ತೆರಡು ಜನರಲ್ಲಿ ಅರಿಮತೇಯದ ಯೋಸೆಫನೂ ಮತ್ತು ನಿಕೊದೆಮುಸ್ ಎಂಬವನೂ ಯೇಸುವಿನ ಬಳಿಗೊಮ್ಮೆ ಬಂದು ಆತನಲ್ಲಿ ವಿಶ್ವಾಸವನ್ನು ತಾಳಿದ್ದರು. ನಿಕೊದೆಮುಸನು ಯೇಸುವಿನಲ್ಲಿ ಅಪರಾಧ ಮಂಡನವು ಕಷ್ಟಸಾಧ್ಯವಾಗುತ್ತಿದ್ದುದನ್ನು ಕಂಡು ನಿರಪರಾಧಿಯಾಗಿ ಬಿಡುಗಡೆಗೊಳಿಸುವ ನಿಲುಮೆಯನ್ನು ತಂದನು.

ಅಷ್ಟರಲ್ಲಿ ಕಾಯಫಾಸನು ಸ್ವರವೇರಿಸಿ, ಯೇಸುವನ್ನುದ್ದೇಶಿಸಿ, "ನೀನು ಭಗವತ್ ಪುತ್ರನಾದ ಕ್ರಿಸ್ತನಾಗಿರುವಿಯೊ ಎಂದು ಹೇಳಬೇಕೆಂದು ಸರ್ವಶಕ್ತನಾದ ಜೀವಂತ ಭಗವಂತನ ನಾಮದಲ್ಲಿ ನಿನ್ನನ್ನು ಕೇಳುತ್ತೇನೆ" ಎಂದನು. ವಿಚಾರಣೆಯ ಕಾಲದಲ್ಲಿ ಉಸಿರೆತ್ತದ ಯೇಸುವು ತನ್ನ ಪಿತನ ಆಣೆಯಿಟ್ಟು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟನು : "ನೀನು ಹೇಳುವಂತೆ ನಾನಾಗಿರುವೆನು"

ಅದೇ ವಿಚಾರದಲ್ಲಿ ಕಾಯಫಾಸನು ಇನ್ನೂ ಮೂರುಬಾರಿ ಪ್ರಶ್ನಿಸಿದನು. ಯೇಸುವು ತಾನು ಕ್ರಿಸ್ತನೆಂದೂ ಭಗವತ್-ಪುತ್ರನೆಂದೂ ಸ್ಪಷ್ಟವಾಗಿ ಒಪ್ಪಿಕೊಂಡನು. ಅದುವೆ ಮಹಾಪರಾಧವಾಗಿ ಸ್ವೀಕರಿಸಲ್ಪಟ್ಟಿತು. ಸಭೆಯೇ ಸಾಕ್ಷ್ಯವನ್ನಿತ್ತಿತು. ಮರಣವು ವಿಧಿಸಲ್ಪಟ್ಟಿತು.

ಮುಂದೆ ಪ್ರತಿಯೊಬ್ಬ ಸದಸ್ಯನೂ ತನ್ನ ಮತವನ್ನು ನೀಡಬೇಕಾಯಿತು. ಯೇಸುವಿನ ಸ್ನೇಹವನ್ನು ಯಾಚಿಸಿ ಬಂದವರಿಬ್ಬರೂ ಯೇಸುವಿಗೆ ಮರಣದಂಡನೆಯು ವಿಹಿತವಲ್ಲವೆಂದರು. ಅದು ನ್ಯಾಯಪೂರ್ಣವೇ ಆಯಿತು. (ಅವರಿಬ್ಬರೂ ಈಗಿನವರಂತೆ ಚಾಣಾಕ್ಷರಿರಲಿಲ್ಲ.

ಅವರೂ ಮರಣದಂಡನೆಗೆ ಅನುಮತಿ ನೀಡಿರುತ್ತಿದ್ದರೆ ಅಖಿಲ ನೀತಿ ಸಭೆಯು ಏಕಪಕ್ಷೀಯವಾಗುತ್ತಿತ್ತು. ಮೋಸೆಯ ನಿಯಮದಂತೆ ಯೇಸುವು ಬಿಡುಗಡೆಯಾಗುತ್ತಿದ್ದನು.) ಯೇಸುವಿಗೆ ಮರಣವು ಯುಕ್ತ ವೆಂದು ಸಾರಿದರು. ಆದರೆ ಮರಣದಂಡನೆಯನ್ನೀಯುವ ಅವರ ಅಧಿಕಾರ ವನ್ನು ರೋಮಕ ಸರಕಾರವು ಅಪಹರಿಸಿತ್ತು. ಹೀಗಾಗಿ ಅವರು ಯೇಸು ವನ್ನು ಗವರ್ನರ್ ಪಿಲಾತನ ಬಳಿಗೊಯ್ದರು. ಮುಂದಿನ ವಿಚಾರವನ್ನು ಈ ಹೊತ್ತಗೆಯ ಆದಿಯಲ್ಲಿ ನೋಡಿರುವೆವು.

ಯೇಸುವಿನ ಭವಿಷ್ಯದ್ವಚನಗಳು

ಭವಿಷ್ಯವನ್ನು ಸ್ಫುಟಗೊಳಿಸುವುದರಲ್ಲಿ ಭಾರತೀಯ ಜ್ಯೋತಿಷ್ಕರು ಅದ್ವಿತೀಯ ಸಾಧನೆಯನ್ನು ಮಾಡುತ್ತ ಬಂದಿರುವರು. ಸ್ವಭಾವ ಸಿದ್ಧವಾಗಿ ಬರಬಹುದಾದ ಘಟನೆಗಳನ್ನು ಮುಂದಾಗಿ ಹೇಳುವುದು ಅದೇನು ಕಷ್ಟದ ಕೆಲಸವಲ್ಲ. ಆದರೆ ಭಗವಂತನ ಸ್ವಾಧಿಕಾರದಲ್ಲಿರಬಹು ದಾದ ವಿಷಯಗಳನ್ನು ಮಾನವನು ಸ್ಪಷ್ಟವಾಗಿ ಹೇಳಲರಿಯನು. ಆತನು ಊಹಿಸಿ ಮಾತ್ರ ತಿಳಿಯಬಹುದು. ಆದರೆ ಅನೇಕ ಸಲ ಭಗವಂತನಿಗೆ ಮಾತ್ರ ತಿಳಿದಿರಬಹುದಾದ ಘಟನೆಗಳ ವಿವರಗಳನ್ನು ಕೂಡ ಮಾನವನು ಬಹಿರಂಗಗೊಳಿಸಿರುವುದನ್ನು ಇತಿಹಾಸವು ಸಮರ್ಥಿಸುತ್ತದೆ. ಆ ವ್ಯಕ್ತಿ ಗಳಿಗೆ ಭಗವಂತನು ತಿಳಿಸಬೇಕು ಅಥವಾ ಅವರು ಭಗವತ್ ಪುರುಷರೇ ಆಗಿರಬೇಕೆಂದು ಕ್ರೈಸ್ತಮತದ ಬೋಧನೆಯಾಗಿದೆ.

ಯೇಸುವು ಮನುಷ್ಯ ಮಾತ್ರನಲ್ಲವೆಂಬುದನ್ನು ಆಂತರಿಕ ಬಾಹ್ಯ ಸಾಕ್ಷ್ಯಗಳ ಮೂಲಕ ವಿವೇಚಿಸಿಕೊಂಡಿರುವೆವು. ಇನ್ನು ಆತನು ತನ್ನ ದೈವತ್ವವನ್ನು ಸಮರ್ಥಿಸಲು ಪ್ರಕಟಿಸಿದ ಭವಿಷ್ಯವಿಷಯಗಳಲ್ಲಿ ಕೆಲವನ್ನು ತಿಳಿಯಬೇಕಾಗಿದೆ.

ಯೇಸುವು ಯೆರೂಸಲೇಮ್ ನಗರದ ದೇವಾಲಯದ ವಿನಾಶವನ್ನು ವಿವರವಾಗಿ ಪ್ರಕಟಿಸಿದನು. ಆದರೆ ಆಗಿನ ಯೆಹೂದ್ಯ ಜನತೆಯಾಗಲಿ, ಜನತಾನಾಯಕರಾಗಲಿ ಅದನ್ನೊಪ್ಪಲಿಲ್ಲ. ಯೆರೂಸಲೇಮಿನಲ್ಲಿ ಯೆಹೂ ದ್ಯರ ಪ್ರಸಿದ್ಧ ದೇವಾಲಯವಿತ್ತು. ಅವರ ಪ್ರಸಿದ್ಧ ರಾಜ ಸೊಲೊಮೊನನು

ಅದನ್ನು ಮೊತ್ತಮೊದಲು ನಿರ್ಮಿಸಿದ್ದನು. ಆದರೆ ಮುಂದೆ ಎರಡುಬಾರಿ ಅದು ವೈರಿವರ್ಗದಿಂದ ಕೆಡವಲ್ಪಟ್ಟಿತು. ಆಮೇಲೆ ಆಗಿನ ನವೀನ ವಸ್ತು ವಿಷಯುಗಳಿಂದ ರಚಿಸಲ್ಪಟ್ಟ ಆ ದೇವಾಲಯವು ಚಿರಸ್ಥಾಯಿಯಾಗಿ ಉಳಿಯುವುದೆಂದೇ ಆಗಿನವರ ಹೇಳಿಕೆಯಾಗಿತ್ತು. ಯೇಸುವು ಸೂಚಿಸಿದ ಭವಿಷ್ಯದ್ವಚನವು ಕ್ರಿಸ್ತನ ಮರಣದ ಮೂವತ್ತೇಳು ವರ್ಷಗಳ ತರು ವಾಯ (ಕ್ರಿ. ಶ. ೭೦ರಲ್ಲಿ) ಪೂರ್ಣವಾಯಿತು. ಟೈಟಸ್ ಎಂಬವನು ಸೇನಾಸಮೇತನಾಗಿ ಯೆರೂಸಲೇಮ್ ನಗರವನ್ನು ಸ್ವಾಧೀನಪಡಿಸಿ, ನಗರ ವನ್ನೂ ದೇವಾಲಯುವನ್ನೂ ನೆಲಸಮ ಮಾಡಿಸಿದನು. ಯೆಹೂದ್ಯರನ್ನು ಒಂದೆಡೆ ಸೇರಿಸಲು ಕೇಂದ್ರವೊಂದು ಇಲ್ಲವಾಯಿತು. ಅಂದಿನಿಂದ ಅವರು ತಮ್ಮದೊಂದು ಸ್ವತಂತ್ರ ರಾಷ್ಟ್ರವನ್ನು ನಿರ್ಮಿಸಲು ಪಟ್ಟ ಸಾಧನೆಗಳು ಯುಕ್ತ ಫಲವನ್ನು ನೀಡಲಿಲ್ಲ. ಮಾತ್ರವಲ್ಲ ಯೇಸುವಿನ ಭವಿಷ್ಯದ್ವಚನ ವನ್ನು ಅಸತ್ಯಗೊಳಿಸಲು ರೋಮಕ ಚಕ್ರವರ್ತಿ ಜೂಲಿಯನನು ದೇವಾ ಲಯುವನ್ನು ಪುನಃ ನಿರ್ಮಿಸಲು ಆಜ್ಞೆಯಿತ್ತನು. ಆದರೆ ಆತನ ಪ್ರತಿಯೊಂದು ಪ್ರಯತ್ನವೂ ಭೂಕಂಪ ಮತ್ತು ಬೆಂಕಿಯಿಂದ ಹಾಳಾ ಯಿತು. ಇಂದಿಗೂ ಆ ದೇವಾಲಯುವನ್ನು ನಿರ್ಮಿಸಿಲ್ಲ.

ಯೇಸುವು ತನ್ನ ಕೊನೆಯ ದಿನಗಳ ವಿವಿಧ ವಿಷಯುಗಳನ್ನು ಮುಂದಾಗಿಯೇ ತಿಳಿಸಿದ್ದನು. ಆತನ ಶಿಷ್ಯ ಯೂದಾಸನು ವೈರಿವರ್ಗ ದೊಡನೆ ಮಾಡಿದ ವಂಚನೆ, ತನ್ನ ಹಿರಿಯ ಶಿಷ್ಯ ಹಾಗೂ ಮುಂದಿನ (ಪ್ರಥಮ ಜಗದ್ಗುರು) ನಾಯಕ ಪೇತ್ರನ, ಯೇಸುವಿನ ಪರಿಚಯುವನ್ನು ನಿರಾಕರಿಸಿದುದು, ಯೆಹೂದ್ಯರು ತನ್ನನ್ನು ರೋಮಕ ಸರಕಾರದ ವಶಕ್ಕೊಪ್ಪಿ ಸಿದುದು, ತನಗಿತ್ತ ವಿವಿಧ ಶಿಕ್ಷೆಗಳ ಹಾಗೂ ಅಪಹಾಸ್ಯದ ವಿವರಗಳು, ಕೊನೆಯದಾಗಿ ಸತ್ತ ಮೂರನೆಯ ದಿನ ತನ್ನ ಭವ್ಯ ಪುನುರುತ್ಥಾನ ಮೊದಲಾದುವುಗಳನ್ನು ಸ್ಪಷ್ಟವಾಗಿ ಅವನು ಪ್ರಕಟಿಸಿದನು

"ಮಾನವ ಪುತ್ರನು ಅನೇಕ ವಿಷಯುಗಳಲ್ಲಿ ಕಷ್ಟಪಡುವನು. ಹಿರಿಯುರಿಂದಲೂ, ಹಿರಿಯ ಯಾಜಕರಿಂದಲೂ (ಪವಿತ್ರ ಗ್ರಂಥ) ಲೇಖಕ (Scribe) ರಿಂದಲೂ ತ್ಯಜಿಸಲ್ಪಡುವನು; ಆತನು ಕೊಡಲ್ಪಡುವನು ಮತ್ತು ಮೂರು ದಿನಗಳಲ್ಲಿ ಪುನಃ ಏಳುವನು." (ಮಾರ್ಕ ೮-೩೧)

ಯೇಸುವು ತನ್ನ ಯಾತನಾಮಯ ಕೊನೆ ಗಳಿಗೆಗಳನ್ನು ವಿವರಿಸಿ, ಶಿಷ್ಯರೆಲ್ಲರೂ ತನ್ನನ್ನು ಅಗಲುವ ವಿಚಾರವನ್ನು ಹೇಳಿದಾಗ, ಪೇತ್ರನು

"ಸ್ವಾಮಿ, ಸೆರೆಮನೆ ಮರಣಗಳೆರಡಕ್ಕೂ ನಿಮ್ಮೊಡನೆ ಬರಲು ನಾನು ಸಿದ್ಧನಿದ್ದೇನೆ." (ಲೂಕ ೨೨-೩೩) ಎಂದನು. ಅದಕ್ಕುತ್ತರವಾಗಿ ಯೇಸುವು

"ಪೇತ್ರನೇ, ನನ್ನನ್ನು ಬಲ್ಲೆಯೆಂಬುದನ್ನು ನೀನು ಮೂರು ಬಾರಿ ನಿರಾಕರಿಸುವ ತನಕ ಇಂದು ಕೋಳಿಯು ಕೂಗದು–ಎಂದು ನಿನಗೆ ನಾನೇ ಹೇಳುತ್ತೇನೆ" (ಲೂಕ ೨೨–೩೪) ಎಂದು ಆತನ ನಿರಾಕರಣೆಯನ್ನು ಮುಂಚಿತವಾಗಿ ತಿಳಿಸಿದನು.

ಯೇಸುವು ಪವಾಡ ಪುರುಷನು

ಪವಾಡ (Miracles) ಗಳನ್ನು ಭಗವಂತನ ಸೃಷ್ಟಿಕಾರ್ಯದ ವಿಸ್ತರಣವೆನ್ನಬಹುದು. ಅವು ನಿಸರ್ಗಪೂರಿತ ನಿಯಮಗಳನ್ನು ತಟಸ್ಥ ಗೊಳಿಸಿ, ಮಾಡಿದ ಅಸಾಮಾನ್ಯ ಘಟನೆಗಳು. ಆದುದರಿಂದ ಭಗವಂತ, ಸರ್ವಶಕ್ತ ಸೃಷ್ಟಿ ಶಕ್ತಿಯ ಆವಿಷ್ಕಾರದ ಅಗತ್ಯವಿದೆ. ಆತನು ಮಾತ್ರ ಸೃಷ್ಟಿ ನಿಯಮಗಳನ್ನು ಶಿಥಿಲಗೊಳಿಸಬಲ್ಲನು ಅಥವಾ ವಿಸ್ತರಿಸಬಲ್ಲನು. ಆದರೆ ಚಿರಂತನ ಸತ್ಯವೇ ಆದ ಭಗವಂತನು ದೋಷಮಯ ತತ್ವದ ಪ್ರತಿ ಪಾದನೆಗೆ ಅದಾವ ರೀತಿಯಲ್ಲಿಯೂ ಪವಾಡಗಳ ಮೂಲಕ ಸಹಕರಿಸನೆಂಬ ವಿಚಾರವನ್ನು ನಾವು ತಿಳಿಯಬೇಕು.

ಯೇಸುವು ಅನೇಕ ಬಗೆಯ ಪವಾಡಗಳನ್ನು ಮಾಡಿರುವನು. ದೀನ ದಲಿತರ ಹಿತಕ್ಕಾಗಿ ಆತನು ರೋಗಗಳನ್ನು ನಿವಾರಿಸಿದನು. ದೆವ್ವ ಹಿಡಿ ದವರನ್ನು ಸರಿಗೊಳಿಸಿದನು. ಕುಷ್ಠರೋಗಿಗಳನ್ನು ಮಾತ್ರವಲ್ಲ ಕುರುಡ, ಕಿವುಡ, ಮೂಕ, ಹೆಳವರನ್ನು ಯಾವ ಬಗೆಯ ಔಷಧದ ಪ್ರಯೋಗ ವನ್ನೂ ಮಾಡದೆ, ಕೇವಲ ತನ್ನೊಂದು ಮಾತಿನ ಬಲದಿಂದ ಗುಣ ಪಡಿಸಿದನು. ಆತನ ವಾಗಮೃತವನ್ನು ಸವಿಯಲು ನೆರೆದ ಹಲವು ಸಾವಿರ ಮಂದಿಯನ್ನು ಎರಡು ಬಾರಿ ಒಬ್ಬನಿಗೆ ಸಾಕಾಗುವಷ್ಟಿದ್ದ ಕೇವಲ ಕೆಲವೇ ರೊಟ್ಟಿಗಳಿಂದ ತೃಪ್ತಿಗೊಳಿಸಿದನು. ಜಾಲಗಾರರಾದ

ಆತನ ಶಿಷ್ಯರು ಇಡೀರಾತ್ರಿ ಯಾವ ಬಗೆಯ ಮೀನೂ ಸಿಗದೆ ಖಿನ್ನ ಮನಸ್ಕರಾಗಿದ್ದಾಗ ಯುಕ್ತ ತಾಣವೊಂದರಲ್ಲಿ ಬಲೆ ಬೀಸಿ, ಹೇರಳ ಮೀನು ಸಿಗುವಂತೆ ಮಾಡಿದನು. ಭಯಂಕರ ಬಿರುಗಾಳಿಯನ್ನು ತನ್ನ ಅಧಿಕಾರವಾಣಿಯಿಂದ ಶಾಂತಗೊಳಿಸಿದನು. ಸತ್ತವರನ್ನು, ಹೂಳಲ್ಪಟ್ಟವರನ್ನು ಪುನರ್ಜೀವ ಮಾಡಿದನು. ಆತನು ಹಲವು ಸಲ ತನ್ನ ಹಸ್ತದ ಸ್ಪರ್ಶದಿಂದ ರೋಗಿಗಳನ್ನು ಗುಣಪಡಿಸಿರುವನಾದರೂ ಕೆಲವು ಸಲ ರೋಗಿಯನ್ನು ನೋಡದೆ ಗುಣಪಡಿಸಿದುದೂ ಉಂಟು. ಹೀಗೆ ಯೇಸುವು ತಾನು ಜೀವನ ಮರಣಗಳ ಸ್ವಾಮಿಯೆಂದು ತನ್ನ ಪವಾಡಗಳ ಮೂಲಕ ಸ್ಪಷ್ಟಗೊಳಿಸಿದನು.

ಯೇಸುವು ತಾನು ದೈಹಿಕ ರೋಗಗಳನ್ನು ಉಪಶಮನಗೊಳಿಸುವ ದೈವಿಕ ವೈದ್ಯನು ಮಾತ್ರವಲ್ಲ ಪಾಪಮಯ ಜೀವನದಿಂದ ಆಧ್ಯಾತ್ಮಿಕ ಜೀವವನ್ನು ಕಳೆದುಕೊಂಡ ಆತ್ಮಗಳ ಶುದ್ಧೀಕರಣಕ್ಕಾಗಿ ಬಂದ ಭಗವಂತನೆಂದು ಹಲವು ಸಲ ತೋರಿಸಿಕೊಟ್ಟನು. ಅನೇಕ ರೋಗಿಗಳ ರೋಗವನ್ನು ಗುಣಪಡಿಸುವ ಮುನ್ನ ಆತನ ಪಾತಕಗಳನ್ನು ಕ್ಷಮಿಸುತ್ತಿದ್ದನು. ಪಾತಕಗಳನ್ನು ಕ್ಷಮಿಸುವ ಅಧಿಕಾರವು ತನಗಿದೆಯೆಂದು ತೋರಿಸಲು ಆತನು ಪವಾಡಗಳನ್ನು ಮಾಡಿ ಸ್ಪಷ್ಟಪಡಿಸಿದ ಹಲವು ದೃಷ್ಟಾಂತಗಳನ್ನು ಸುವಾರ್ತೆಗಳ ಲೇಖಕರು ಕೊಟ್ಟಿರುವರು: ಅವುಗಳಲ್ಲೊಂದನ್ನು ತಿಳಿಯಬಹುದು:

ಯೇಸುವು ಕಾಫರ್ನಾವುಮ್ ಎಂಬಲ್ಲಿದ್ದನು. ಆತನು ಪ್ರವೇಶಿಸಿದ್ದ ಮನೆಗೆ ಅನೇಕರು ಬಂದರು. ಮನೆಯೊಳಗೆ ಹೋಗಲು ದಾರಿಯಿದ್ದಿಲ್ಲ. ನೆರೆದವರಿಗೆ ಯೇಸುವು ಧರ್ಮಪ್ರಚಾರವನ್ನು ಮಾಡತೊಡಗಿದನು. ಅಷ್ಟರಲ್ಲಿ ಪಾರ್ಶ್ವವಾಯು (Palsy) ರೋಗದ ವ್ಯಕ್ತಿಯನ್ನು ಆತನ ಸಂಬಂಧಿಕರು ಮನೆಯ ಮುಂದೆ ಎತ್ತಿಕೊಂಡು ತಂದರು. ಆದರೆ ಮನೆಯೊಳಗೆ ಹೋಗಲು ಸಾಧ್ಯವಿಲ್ಲದುದನ್ನು ಕಂಡು, ಅವರು ಮನೆಯ ಮಾಡನ್ನು ಏರಿ, ಅಲ್ಲೊಂದು ಪ್ರವೇಶದ್ವಾರವನ್ನು ಕೊರೆದು ರೋಗಿಯನ್ನು ಆತನ ಹಾಸಿಗೆಯೊಡನೆ ಯೇಸುವಿನ ಸಮೀಪಕ್ಕಿಳಿಸಿದರು.

"ಯೇಸುವು ಅವರ ನಂಬಿಕೆಯನ್ನು ಕಂಡು ಪಾರ್ಶ್ವವಾಯು ರೋಗಿಗೆ, "ಮಗನೇ, ನಿನ್ನ ಪಾತಕಗಳನ್ನು ಕ್ಷಮಿಸಲಾಗಿದೆ" ಎಂದನು.

ಅಲ್ಲಿ ಪವಿತ್ರ ಗ್ರಂಥ ಲೇಖಕರಲ್ಲಿ (Scribes) ಕೆಲವರು ಕುಳಿತಿದ್ದರು. ಅವರು ತಮ್ಮೊಳಗೆ 'ಇವನು ಅದೇಕೆ ಹೀಗೆ ನುಡಿಯುವನು ? ಅವನು ದೇವನಿಂದೆ ಮಾಡಿರುವನು ! ಭಗವಂತನ ಹೊರತು ಅದಾರು ಪಾತಕಗಳನ್ನು ಕ್ಷಮಿಸಬಹುದು ?" ಎಂದರು." (ಮಾರ್ಕ ೨, ೫-೭)

ಯೇಸುವಿಗೆ ಅವರ ಮಾತುಗಳು ಕೇಳಿಸದಿದ್ದರೂ ಇಂಗಿತದ ಅರ್ಥವಾಯಿತು. ಅವನು ಅವರೊಡನೆ, ' ನೀವು ಹಾಗೇಕೆ ಯೋಚಿಸುವಿರಿ ?' 'ನಿನ್ನ ಪಾತಕಗಳನ್ನು ಕ್ಷಮಿಸಲಾಗಿದೆ' ಅಥವಾ 'ಎದ್ದೇಳು, ನಿನ್ನ ಹಾಸಿಗೆಯನ್ನು ಎತ್ತಿಕೊಂಡು ನಿನ್ನ ಮನೆಗೆ ಹೋಗು' ಎಂಬವುಗಳಲ್ಲಿ ಯಾವುದು ಸುಲಭ ? ಆದರೂ ಮಾನವ ಪುತ್ರನಿಗೆ ಪಾತಕಗಳನ್ನೂ ಕ್ಷಮಿಸುವ ಅಧಿಕಾರವು ಈ ಜಗತ್ತಿನಲ್ಲಿದೆಯೆಂದು ತೋರಿಸುವುವಕ್ಕಾಗಿ.

"ಎದ್ದೇಳು, ನಿನ್ನ ಹಾಸಿಗೆಯನ್ನೆತ್ತಿಕೊಂಡು ನಿನ್ನ ಮನೆಗೆ ನಡೆ" ಎಂದನು. ರೋಗಿಯು ಹಾಗೆಯೇ ಮಾಡಿದನು.

ತಾನು ಅದೇಕೆ ಪವಾಡಗಳನ್ನು ಮಾಡುತ್ತಿದ್ದುದೆಂದು ಯೇಸುವೇ ಹೇಳಿರುವನು :

"'ನಾನು ಭಗವತ್ ಪುತ್ರನಾಗಿರುವೆನು' ಎಂದು ನಾನು ಹೇಳಿದುದಕ್ಕೆ 'ನೀನು ದೇವನಿಂದೆಯನ್ನು ಮಾಡಿರುವೆ' ಎಂದು ಹೇಳುತ್ತೀರಲ್ಲ : ನಾನು ನನ್ನ ಪಿತನ ಕಾರ್ಯಗಳನ್ನು ಮಾಡುವುದಿಲ್ಲವಾದರೆ ನನ್ನನ್ನು ನಂಬಬೇಡಿರಿ. ಆದರೆ ನಾನು ಹಾಗೆ ಮಾಡುತ್ತೇನಾದರೆ ಮತ್ತು ನನ್ನನ್ನು ನಂಬಲು ನೀವು ಇಚ್ಛಿಸುವುದಿಲ್ಲವಾದರೆ, ಪಿತನು ನನ್ನಲ್ಲಿಯೂ ನಾನು ಪಿತನಲ್ಲಿಯೂ ಇರುವೆನೆಂದು ನೀವು ತಿಳಿಯುವುದಕ್ಕಾಗಿಯೂ, ನಂಬುವುದಕ್ಕಾಗಿಯೂ–ನನ್ನ ಕಾರ್ಯಗಳನ್ನು ನಂಬಿಕೊಳ್ಳಿರಿ" (ಯೋಹಾನ ೧೦, ೩೭-೩೮)

ಯೇಸುವಿನ ಮಹಾಪವಾಡ

ಯೆಹೂದ್ಯ ನಾಯಕರು ತಮ್ಮ ಸಂಕುಚಿತ ಸ್ವಾರ್ಥದಿಂದ ಪ್ರೇರಿತರಾಗಿ ದೀನ ದಲಿತರ ಹಿತಕ್ಕಾಗಿ ಸತತ ಶ್ರಮಿಸುತ್ತಿದ್ದ ತಮ್ಮವನೇ ಆದವ

ನನ್ನು ಶಿಲುಬೆಯ ದುರ್ಮರಣಕ್ಕೆ ಗುರಿಪಡಿಸಿದರು. ಯೇಸುವು ಚೋರರ ಮಧ್ಯದಲ್ಲಿ ಚೋರಾಗ್ರಣಿಯಂತೆ ಅತ್ಯಂತ ನಿಕೃಷ್ಟ ರೀತಿಯಲ್ಲಿ ವಧಿಸಲ್ಪಟ್ಟನು. ಯೆಹೂದ್ಯ ಯಾಜಕರೂ ಹಿರಿಯರೂ ಆತನು ಸಾಯುವುದನ್ನು ನೋಡಿ, ತಮ್ಮ ಶತ್ರುವಿನ ಮರಣದಲ್ಲಿ ಸಂತೋಷವನ್ನು ಪಡೆದರು. ತಮ್ಮ ಶ್ರೇಷ್ಠತೆಯನ್ನು ಪ್ರಶ್ನಿಸುವವರಿಗೆ ಅದುವೆ ದುರ್ಗತಿಯೆಂದು ಅವರು ಪ್ರಕಟಿಸುವಂತಾಯಿತು.

ಅಲ್ಲಿದ್ದ ಸೈನಿಕರೂ ಯೇಸುವಿನ ಅಂತ್ಯವನ್ನು ನೋಡಿದರು. ಮರಣ ದಂಡನೆಯನ್ನು ಕೃತಿಗಿಳಿಸುವುದರಲ್ಲಿ ಅವರದು ಪಳಗಿದ ಕೈ. ಯೇಸುವು ಸತ್ತರೂ ಆತನ ಇಬ್ಬದಿಗಳಲ್ಲಿ ಶಿಲುಬೆಗೇರಿಸಿದ ಚೋರರ ಪ್ರಾಣವಿನ್ನೂ ಉಳಿದಿತ್ತು. ಅವರು ಆದಷ್ಟು ಬೇಗ ಸಾಯುವಂತೆ ಅವರ ಕೈಕಾಲುಗಳ ಎಲುಬುಗಳನ್ನು ಬಡಿದು ಮುರಿದರು. ಯೇಸುವಿನ ಬಳಿಗೆ ಬಂದಾಗ ಅವನು ಮೊದಲೇ ಸತ್ತಿದ್ದುದು ಅವರಿಗೆ ಸ್ಪಷ್ಟವಾಯಿತು. ಆತನ ಎಲುಬುಗಳನ್ನು ಮುರಿಯುವ ಹವ್ಯಾಸಕ್ಕೆ ಅವರು ಹೋಗಲಿಲ್ಲ. ಆದರೂ ಆತನು ಸಂಪೂರ್ಣವಾಗಿ ಸತ್ತಿರುವನೆಂದು ರುಜುಗೊಳಿಸಲು, ಮರಣದಲ್ಲಿ ಇರಬಹುದಾದ ಯಾವ ಬಗೆಯ ಸಂಶಯವನ್ನು ಕೊನೆಗೊಳಿಸಲು ಸೈನಿಕನೊಬ್ಬನು ತನ್ನ ಭರ್ಜಿಯಿಂದ ಯೇಸುವಿನ ಪಕ್ಕವನ್ನು ಬಲವಾಗಿ ತಿವಿದನು. ಹೃದಯವನ್ನು ಛೇದಿಸಿದುದರಿಂದ ಅದರೊಳಗಿನ ತುಸು ರಕ್ತವೂ ಮಾಂಸವೂ ಹೊರಬಂದುವು. ಆತನಿಗೆ ಮರಣಶಾಸನವಿತ್ತ ಪಿಲಾತನೂ ಸೈನಿಕರನ್ನು ವಿಚಾರಿಸಿ ಮರಣವನ್ನು ತಿಳಿದುಕೊಂಡನು. ಕೊನೆಗೆ ಯೇಸುವಿನ ಗೆಳೆಯರು, ಸೆನ್ಹೆಡ್ರಿನ್ ಸಭೆಯ ಸದಸ್ಯರು—ಅರಿಮತೇಯದ ಯೋಸೆಫ್ ಮತ್ತು ನಿಕೊದೆಮುಸ್—ಎಂಬುವರು ಪಿಲಾತನ ಅನುಮತಿಯನ್ನು ಪಡೆದು ಯೇಸುವಿನ ಜಡ ದೇಹವನ್ನು ಶಿಲುಬೆಯಿಂದ ಕೆಳಗಿಳಿಸಿ, ಮೀಯಿಸಿ, ಸುಗಂಧದ್ರವ್ಯಗಳನ್ನು ಲೇಪಿಸಿ, ಸಂಪ್ರದಾಯದ ಪ್ರಕಾರ ಬಟ್ಟೆಗಳಿಂದ ಹೊದಿಸಿ, ನಿಕೊದೆಮುಸ್ ತನಗಾಗಿ ಸಿದ್ಧಮಾಡಿಕೊಂಡಿರಿಸಿದ್ದ ಶಿಲಾಗೋರಿಯೊಂದರಲ್ಲಿಟ್ಟು, ಅದನ್ನು ಮುಚ್ಚುವ ಶಿಲಾ ಫಲಕದಿಂದ ಭದ್ರಗೊಳಿಸಿದರು. ಈ ಅಂತ್ಯಕ್ರಿಯೆಗೆ ಯೇಸುವಿನ ಮಾತೆ ಮರಿಯಳೂ, ಶಿಷ್ಯ ಯೋಹಾನನೂ, ಇತರ ಹೆಂಗಸರಿಬ್ಬರೂ ಸಹಕರಿ

ಸಿದ್ದರು. ಯೇಸುವಿನ ಉಳಿದ ಶಿಷ್ಯರೆಲ್ಲರೂ ಭಯದಿಂದ ಅಡಗಿದ್ದರು. ಯೇಸುವು ಸತ್ತನು ಮಾತ್ರವಲ್ಲ ಆತನ ದೇಹವನ್ನು ಹೂಳಿದುದೂ ಆಯಿತು. ಅವಾಗಲೇ ಯೆಹೂದ್ಯ ಯಾಜಕವೃಂದಕ್ಕೆ ಯೇಸುವಿನ ಮಾತೊಂದು ನೆನಪಿಗೆ ಬಂದಿತು. ಹಲವು ಸಂದರ್ಭಗಳಲ್ಲಿ ಆ ಮಾತನ್ನು ಆತನು ನುಡಿದಿದ್ದನು. ತನ್ನನ್ನು ಕೊಲ್ಲುವರೆಂದೂ ಮೂರನೆಯ ದಿನ ತಾನು ಪುನರುತ್ಥಾನಗೊಳ್ಳುವೆನೆಂದೂ ಮೊತ್ತಮೊದಲು ತನ್ನ ಶಿಷ್ಯರಿಗೆ ಮಾತ್ರ ತಿಳಿಸಿದರೂ, ಕೊನೆಕೊನೆಗೆ ತನ್ನ ಗೆಳೆಯರಿಗಲ್ಲದೆ ವೈರಿಗಳಿಗೂ ಬಹಿರಂಗ ಗೊಳಿಸಿದ್ದನು. ಯೆರೂಸಲೇಮ್ ಮಹಾ ದೇವಾಲಯವನ್ನು ಸಂದರ್ಶಿಸಿ ದಾಗ ಭಗವದಾರಾಧನೆಗಾಗಿ ಮೀಸಲಾಗಿಟ್ಟ ಆ ಪವಿತ್ರ ಮಂದಿರವು ವ್ಯಾಪಾರದ ಬೀಡಾಗಿದ್ದುದನ್ನು ಕಂಡು ಯೇಸುವು ಸಹಿಸದಾದನು. ವ್ಯಾಪಾರಿಗಳ ವಸ್ತುಗಳನ್ನು ಮಾತ್ರವಲ್ಲ ಅವರ ಹಣಕಾಸುಗಳ ತಟ್ಟೆ ಗಳನ್ನೂ ಕೆಡವಿ, ಪಕ್ಷಿಪ್ರಾಣಿವರ್ಗವನ್ನು ಅಲ್ಲಿಂದ ಹೊರಗೊಯ್ಯುವಂತೆ ಮಾಡಿ, ಕೈಯಲ್ಲಿ ಬೆತ್ತವೊಂದನ್ನು ಹಿಡಿದು ಆ ವ್ಯಾಪಾರಿಗಳೆಲ್ಲರನ್ನೂ ಹೊಡೆದೋಡಿಸಿದ್ದನು. ಯೇಸುವಿನ ಈ ಕೃತ್ಯದಿಂದ ಹಿರಿಯ ಯಾಜಕ ಅನ್ನಾಸ್—ಕಾಯ್‌ಫಾಸರ ಕೈವಾಡದಲ್ಲಿದ್ದ ಆ ವ್ಯಾಪಾರಿಗಳಿಗೆ ಧನ ನಷ್ಟವೂ ಮಾನನಷ್ಟವೂ ಏಕಕಾಲದಲ್ಲಿ ಒದಗಿದುವು. ಅವೆರಡರಿಂದ ನೊಂದು ಅವರು ಯೇಸುವು ಆ ರೀತಿಯಲ್ಲಿ ವರ್ತಿಸಲು ಆತನಿಗಿರುವ ಪದವಿ ಯಾವುದೆಂದು ಪ್ರಶ್ನಿಸಿದರು. ಆ ಯೇಸುವು ತನ್ನನ್ನೇ ತೋರಿಸುತ್ತ, ' ಈ ದೇಗುಲವನ್ನು ನಾಶಗೊಳಿಸಿರಿ, ನಾನದನ್ನು ಮೂರು ದಿನಗಳಲ್ಲಿ ಪುನಃ ಸ್ಥಾಪಿಸುವೆನು ” ಎಂದನು. ಆ ಮಾತುಗಳನ್ನೇ ಆತನಲ್ಲಿ ಅಪರಾಧ ಮಂಡನಕ್ಕೆ ಬಳಸಿದ್ದರು. ಆದರೆ ಯೇಸುವಿನ ಮರಣದ ಬಳಿಕ ಆ ಮಾತುಗಳು ಪುನಃ ನೆನಪಿಗೆ ಬಂದುವು. ಯೇಸುವು ಬಹುಬಗೆಯ ಪವಾಡಗಳನ್ನು ಮಾಡಿದುದನ್ನು ಅವರು ನೋಡಿದ್ದರು. ಆದರೆ ಈಗ ಆತನು ಪರಿಪೂರ್ಣವಾಗಿ ಕೊಲ್ಲಲ್ಪಟ್ಟುದರಿಂದ ಜೀವಂತ ಸ್ಥಿತಿಯನ್ನು ಪಡೆಯಲಾರನೆಂದು ಅವರು ತಿಳಿದಿದ್ದರು. ಆದರೆ ಆತನ ಶಿಷ್ಯರು ಆತನ ದೇಹವನ್ನು ಸಮಾಧಿಯಿಂದ ಅಪಹರಿಸಿ, ಆತನು ಪುನರುತ್ಥಾನಗೊಂಡಿರುವ ನೆಂದು ಪ್ರಕಟಿಸಬಹುದೆಂದು ಅವರು ಊಹಿಸಿದರು. ನೇರವಾಗಿ ರಾಜ್ಯ

ಪಾಲ ಪಿಲಾತನಲ್ಲಿಗೆ ಹೋಗಿ, ವಿಷಯವನ್ನು ವಿಶದಗೊಳಿಸಿ, ಸಮಾಧಿಗೆ ಮುದ್ರೆಯನ್ನೊತ್ತಿ, ಬಲವಾದ ಸೈನಿಕ ಕಾವಲನ್ನು ಇರಿಸಿದರು. ಯೇಸುವಿನ ಮಾತು ಸುಳ್ಳಾಗುವಂತೆ ಯತ್ನಿಸಿದರು.

ಶನಿವಾರವು ಸಬ್ಬತ್ ದಿನ. ಅದಾವ ಬಗೆಯ ಘಟನೆಗಳೂ ನಡೆಯಲಿಲ್ಲ. ಯೇಸುವಿನ ಸಮಾಧಿಯ ಬಳಿಗೆ ಯಾವ ಮನುಷ್ಯನೂ ಸುಳಿಯಲಿಲ್ಲ. ಸೂರ್ಯನು ಮುಳುಗಿದನು. ಕತ್ತಲಾಯಿತು; ಮಧ್ಯ ರಾತ್ರಿಯಾಯಿತು, ರವಿವಾರವು ಬಂತು. ಕಾವಲು ಸೈನಿಕರು ಮೈಯೆಲ್ಲ ಕಣ್ಣಾಗಿ, ಕಿವಿಯಾಗಿ ಪ್ರತಿಯೊಂದು ಸದ್ದನ್ನೂ ಪರೀಕ್ಷಿಸಿ, ದೇಹದ ಅಪಹರಣಕ್ಕಾಗಿ ಯಾರೂ ಬಾರದಂತೆ--ಸುಳಿಯದಂತೆ ನೋಡುತ್ತಿದ್ದರು. ಆದರೆ ಸೂರ್ಯೋದಯಕ್ಕೆ ಒಂದು ಜಾವವಿರುವಾಗ ಸಮಾಧಿಯ ಬಳಿ ಪ್ರಭೆಯೊಂದು ತೋರಿತು. ಗಗನದಾಚೆಯಿಂದ ದೇಹ ಜ್ಯೋತಿಯೊಂದು ಸಮಾಧಿಯೆಡೆಗೆ ಬಂತು. ಕಾವಲುಗಾರರಲ್ಲಿ ಭಯದ ಲಕ್ಷಣಗಳು ತೋರಿದುವು. ಅವರು ತಮ್ಮ ಆಯುಧಗಳನ್ನೆತ್ತಿ ರಕ್ಷಣೆಯ ಕಾರ್ಯವನ್ನು ನಿರ್ವಹಿಸಲು ಪ್ರಯತ್ನಿಸುತ್ತಿರುವಾಗ, ಆ ದೇಹದ ಜ್ಯೋತಿಯು ಬಹು ಭಾರವಾಗಿದ್ದ ಶಿಲಾ ಫಲಕವನ್ನು ಕ್ಷಣಾರ್ಧದಲ್ಲಿ ಅತ್ತ ಉರುಳಿಸಿ ಅದರ ಮೇಲೆ ಕುಳಿತುಕೊಂಡಿತು. ಅಷ್ಟರಲ್ಲಿ ಭೂಮಿಯದುರಿತು. ಯೇಸುವು ದಿವ್ಯ ಪ್ರತಿಭೆಯಿಂದ ಪುನರುತ್ಥಾನಗೊಂಡನು. ಶಿಲುಬೆಯು ಗೆದ್ದಿತು. ಕಾವಲುಗಾರರು ಭಯದಿಂದ ತತ್ತರಿಸಿಹೋದರು. ಆಯುಧಗಳನ್ನೆತ್ತಿಕೊಳ್ಳಲು ಅವರಿಂದಾಗದೆ ನೆಲದ ಮೇಲೆ ಬೋರಲು ಬಿದ್ದುಕೊಂಡರು. ಪುನರುತ್ಥಾನಗೊಂಡ ಯೇಸುವು ಸಮಾಧಿಯನ್ನು ಬಿಟ್ಟು ತೆರಳಿದನು; ಆದರೆ ಆ ದೇಹ ಜ್ಯೋತಿಯು ಅಲ್ಲಿಯೇ ಕುಳಿತಿತ್ತು.

ಸೈನಿಕರು ಪರಿಸ್ಥಿತಿ ಶಾಂತವಾದೊಡನೆ ಧೈರ್ಯವನ್ನು ಪಡೆದು ನೇರವಾಗಿ ಯಾಜಕವೃಂದದೆಡೆಗೆ ಧಾವಿಸಿದರು. ರಾಜ್ಯಪಾಲ ಪಿಲಾತನಲ್ಲಿ ಸತ್ಯಸ್ಥಿತಿಯನ್ನರುಹಲು ಅವರು ಅಂಜಿದರು. ಯಾಜಕ ವೃಂದವು ಅವರ ಬಾಯಿಯನ್ನು ಚಿನ್ನದಿಂದ ಬಿಗಿದು, ಬಹು ಸಂಖ್ಯೆಯಲ್ಲಿ ಯೇಸುವಿನ ಶಿಷ್ಯರು ಬಂದು ತಾವು ಮಲಗಿದ್ದಾಗ ಯೇಸುವಿನ ದೇಹವನ್ನು ಅಪಹರಿಸಿದರೆಂಬ ಹೇಳಿಕೆಯನ್ನು ಅವರಿಂದ ಕೊಡಿಸಿದರು. ಸತ್ಯವನ್ನು ಮುಚ್ಚಲಾಯಿತು.

ಯೇಸುವಿನ ದೇಹಕ್ಕೆ ಯುಕ್ತ ಗೌರವವನ್ನು ನೀಡಲು ಶುಕ್ರವಾರ ಸಂಪರ್ಕಸಿಗದ ಮಗ್ದಲೇನ ಮರಿಯಾ, ಮರಿಯ ಸಲೋಮೆ, ಹಾಗೂ ಯೋಆನ್ನಾ ಎಂಬ ಮೂವರು ಸ್ತ್ರೀಯರು ಸುಗಂಧ ದ್ರವ್ಯಗಳ ಸಮೇತ ಯೇಸುವಿನ ಸಮಾಧಿಯೆಡೆಗೆ ಬಂದರು; ಕಾವಲುಗಾರರಿದ್ದಿಲ್ಲ. ಸಮಾಧಿಯ ಶಿಲಾಫಲಕವು ಉರುಳಿಸಲ್ಪಟ್ಟು ಅಪರಿಚಿತನೊಬ್ಬನು ಅದರ ಮೇಲೆ ಕುಳಿತಿದ್ದನು. ಸಮಾಧಿಯಲ್ಲಿ ಯೇಸುವಿನ ದೇಹವಿಲ್ಲದುದನ್ನು ಕಂಡು ಅವರಿಗೆ ಗಾಬರಿಯಾಯಿತು. ಅಪರಿಚಿತನು ಯೇಸುವಿನ ಪುನರುತ್ಥಾನವನ್ನು ತಿಳಿಸಿದನು.

ಯೇಸುವಿನ ಶಿಷ್ಯರು ಸೆನೆಕಲ್ (Cenacle) ಎಂಬ ಮಂದಿರದಲ್ಲಿ ಅಡಗಿದ್ದರು. ದ್ವಾರಗಳನ್ನೂ ಕಿಟಕಿಗಳನ್ನೂ ಮುಚ್ಚಿದ್ದರು. ತಮ್ಮ ಸ್ವಾಮಿಯನ್ನು ಕೊಂದಂತೆ ವೈರಿಗಳು ತಮ್ಮನ್ನೂ ಕೊಲ್ಲಬಹುದೆಂದು ಅವರೆಲ್ಲರೂ ಭಯಗೊಂಡಿದ್ದರು. ಆಗ ಅವರೆಲ್ಲರೂ ಇದ್ದಂತೆ ಯೇಸುವು ಅವರ ಮಧ್ಯದಲ್ಲಿ ನಿಂತು, " ಶಾಂತಿಯು ನಿಮಗಿರಲಿ " ಎಂದನು. ಅವರ ಭಯವು ಹೆಚ್ಚಾಯಿತು. ಯೇಸುವು ಅವರನ್ನು ಸಾಂತ್ವನಗೊಳಿಸುತ್ತ, ಅವರೊಡನೆ ಆತ್ಮೀಯತೆಯಿಂದ ಮಾತಾಡಿದನು ; ಅವರೊಡನೆ ಉಂಡು, ತಿಂದು, ತಾನು ದೆವ್ವವಲ್ಲವೆಂದು ತೋರಿಸಿಕೊಟ್ಟನು. ಅವರೆಲ್ಲರಿಗೆ ಆನಂದವಾಯಿತು. ತಮ್ಮ ಸ್ವಾಮಿಯೂ ಗುರುವೂ ಆದ ಯೇಸುವು ತನ್ನ ಮಾತಿನಂತೆ ಪುನರುತ್ಥಾನಗೊಂಡುದನ್ನು ಅವರು ನಂಬಲೇಬೇಕಾಯಿತು.

ಪುನರುತ್ಥಾನಗೊಂಡ ಯೇಸುವನ್ನು ಶಿಷ್ಯರೆಲ್ಲರೂ ನೋಡಿದರಷ್ಟೆ ! ಅವರಲ್ಲಿ ತೋಮಸನಿರಲಿಲ್ಲ (ಈ ತೋಮಸನೇ ಕ್ರಿಸ್ತ ಸಂದೇಶವನ್ನು ಭಾರತಕ್ಕೆ ತಂದವನೆಂದು ಹಿಂದೆಯೇ ಹೇಳಿರುವುದನ್ನು ಇಲ್ಲಿ ಸ್ಮರಣೆಗೆ ತರಬಹುದು) ಆದುದರಿಂದ ತೋಮಸನು ಬಂದೊಡನೆ ಶಿಷ್ಯರು ಆ ಆನಂದದ ಒಸಗೆಯನ್ನರುಹಿದರು. ಆಗ ತೋಮಸನು, " ಆತನ ಹಸ್ತಗಳ ಗಾಯಗಳಲ್ಲಿ ಬೆರಳುಗಳನ್ನೂ, ಎದೆಯ ಗಾಯದಲ್ಲಿ ಹಸ್ತವನ್ನೂ ಹಾಕಿ ಪರೀಕ್ಷಿಸದೆ ನಾನದನ್ನು ನಂಬುವುದಿಲ್ಲ ", ಎಂದು ವಾದಿಸಿದನು.

ಸ್ವಲ್ಪ ಸಮಯದಲ್ಲಿಯೇ ಯೇಸುವು ಪ್ರತ್ಯಕ್ಷನಾದನು. ಆತನು ತೋಮಸನನ್ನು ಕರೆದು ತನ್ನ ಹಸ್ತಗಳ ಗಾಯಗಳಲ್ಲಿ ಆತನ ಬೆರಳು

ಗಳನ್ನೂ ತನ್ನ ಎದೆಯ ಗಾಯದಲ್ಲಿ ಆತನ ಹಸ್ತವನ್ನೂ ಹಾಕಿಸಿ ಪರೀಕ್ಷಿಸುವಂತೆ ಮಾಡಿ, ನಂಬುವಂತೆ ಮಾಡಿದನು. ತೋಮಸನು, "ನನ್ನ ಸ್ವಾಮಿ ನನ್ನ ಭಗವಂತ" ಎಂದು ಹೇಳುತ್ತ ಯೇಸುವನ್ನು ವಂದಿಸಿದನು. ಆಗ ಯೇಸುವು,

"ತೋಮಸನೇ, ನೀನು ನನ್ನನ್ನು ನೋಡಿದುದರಿಂದ ನಂಬಿದೆ. ನನ್ನನ್ನು ನೋಡದೆ ನಂಬುವವರು ಧನ್ಯರು" (ಯೋಹಾನ ೨೧-೨೯) ಎಂದನು. ತೋಮಸನ ಪರೀಕ್ಷೆಯಿಂದ ನಮಗೆ ಯೇಸುವಿನ ಪುನರುತ್ಥಾನದ ಸತ್ಯವು ವಿಶದವಾಯಿತು. ಯೇಸುವು ಪುನರುತ್ಥಾನದ ಬಳಿಕ ನಾಲ್ವತ್ತು ದಿನಗಳವರೆಗೆ ಶಿಷ್ಯರನ್ನು ಮುಂದಿನ ಕಾರ್ಯಕ್ಕೆ ಸಿದ್ಧಮಾಡಿದನು. ನಾಲ್ವತ್ತನೆಯ ದಿನ ಅವರೆಲ್ಲರನ್ನೂ ಮರಿಯಳನ್ನೂ ಇನ್ನೂ ಅನೇಕರನ್ನೂ ಬೆತಾನಿಯಾಕ್ಕೆ ಕರೆದು ಅವರೆಲ್ಲರಿಗೂ ಹಿತವಚನವನ್ನು ಸುರಿ, ಅವರು ನೋಡುತ್ತಿದ್ದಂತೆ ಸಶರೀರನಾಗಿ ಮೇಲಕ್ಕೆ ಏರಿದನು; ತುಸುಹೊತ್ತಿನಲ್ಲಿ ಆತನು ಕಾಣದಾದನು. ಇದೇ ಯೇಸುವಿನ ದಿವಾರೋಹಣ.

ಯೇಸುವು ಪುನರುತ್ಥಾನದಿಂದ ತಾನು ಕ್ರಿಸ್ತನೆಂದೂ ಭಗವತ್ ಪುರುಷನೆಂದೂ ಸ್ಪಷ್ಟಪಡಿಸಿದನು. ಸತ್ಯವು ಶಿಲುಬೆಗೆ ಜಡಿಯಲ್ಪಟ್ಟಿತಾದರೂ ಅದು ಜಯಿಸಿತು. ಕ್ರಿಸ್ತನ ಮರಣದವರೆಗೆ ಶಿಲುಬೆಯು ನಿಕೃಷ್ಟವಸ್ತುವಾಗಿತ್ತು. ಆದರೆ ಅಂದಿನಿಂದ ಅದು ಕ್ರೈಸ್ತರ ಬಾಹ್ಯಚಿಹ್ನೆ, ಪವಿತ್ರ ವಸ್ತುವಾಯಿತು. ಕ್ರಿಸ್ತನಿಂದ ಪತನಗೊಂಡ ಮಾನವನ ರಕ್ಷಣೆಯಾಯಿತು—ಅದನ್ನು ನಾವು ತಿಳಿಯಬೇಕಾಗಿದೆ.

೫ ಶ್ರೇಷ್ಠತಮ ಜೀವನ

ಉನ್ನತ ಮೇಲು ಹಂತಿ

ತಂದೆಯಂತೆ ಮಗ, ಗುರುವಿನಂತೆ ಶಿಷ್ಯ-ಎಂಬಿವೇ ಮೊದಲಾದ ಗಾದೆಗಳು ಕಿರಿಯರು ಉನ್ನತ ಮಟ್ಟಕ್ಕೇರಬೇಕಾದರೆ ಹಿರಿಯರು ತಮ್ಮ ಉನ್ನತ ಮಟ್ಟದ ಮೇಲು ಹಂತಿಯನ್ನಿಡಬೇಕೆಂಬುದನ್ನು ಸೂಚಿಸುವುವು. ಈ ಮೇಲು ಹಂತಿಯು ಐಹಿಕ ವಿಷಯಗಳಲ್ಲಿ ಮಾತ್ರವಲ್ಲ ಆಧ್ಯಾತ್ಮಿಕ ವಿಷಯಗಳಲ್ಲಿಯೂ ಪರಿಪೂರ್ಣವಾಗಿರುವಂತೆ—ಅನುಸರಿಸುವವರ ಮಟ್ಟವೂ ಇರುವುದೆಂದು ಎಲ್ಲರೂ ಹೇಳುವರು. ಸದ್ವರ್ತನೆಯ ಸಾವಿರ ಸೂತ್ರಗಳನ್ನು ಕಂಠಪಾಠ ಮಾಡಿಸಿ ಜೀವನದ ರೀತಿಯನ್ನು ಉನ್ನತಿಗೇರಿಸಲು ಪ್ರಯತ್ನಿಸುವುದಕ್ಕಿಂತ ಪ್ರತ್ಯಕ್ಷ ಪ್ರದರ್ಶನದ ತನ್ನ ಒಂದು ಮೇಲು ಹಂತಿ ಉತ್ತಮ. ಮಾನವ ವ್ಯಕ್ತಿಗಿಂತ ಕೆಳಗಿನ ಸ್ವಭಾವವುಳ್ಳ ಪಶು ಪ್ರಾಣಿಗಳೂ ಬುದ್ಧಿಶೂನ್ಯ ಪಕ್ಷಿಗಳೂ ತಮ್ಮ ಮರಿಗಳಿಗೆ ಜೀವನದ ರೀತಿಯ ಸೂತ್ರಗಳನ್ನು ಹೇಳಿಕೊಡುವುದಿಲ್ಲ–ಆದರೆ ತಾವು ಮಾಡುತ್ತವೆ, ಮಾಡಿ ತೋರಿಸುತ್ತವೆ. ಅವು ಅನುಸರಿಸುತ್ತವೆ. ಹೀಗಿರುವಾಗ ಬುದ್ಧಿ, ವಿವೇಕ, ಇಚ್ಛೆ ಮೊದಲಾದ ಆತ್ಮ ಶಕ್ತಿಗಳನ್ನು ಪಡೆದ ಮಾನವನಿಗೆ ಮಾತ್ರ ಕೇವಲ ಮಾಡುವುದನ್ನು ನೋಡಿದರೆ ಸಾಲದು; ಆತನಿಗೆ ಹೇಳುವುದೂ ಅಗತ್ಯ–ಆಮೇಲೂ ಆತನು ನಿಯಮಾತಿಕ್ರಮಣದಿಂದ ಕೆಳಗಿಳಿಯುವನು !

ಭಗವಾನ್ ಯೇಸುಕ್ರಿಸ್ತನು ದ್ವಿವಿಧ ಕಾರ್ಯವನ್ನು ಮಾಡಲು ಬಂದವನು. ಆದಿ ಮಾನವನ ಪತನದಿಂದ ದುರ್ಗತಿಗೊಳಗಾದ ಮಾನವ ಕುಲವನ್ನು ಉದ್ಧರಿಸುವುದಕ್ಕಾಗಿ ಭಗವತ್ ಪಿತನಿಗೆ ಯುಕ್ತ ಪರಿಹಾರವನ್ನು ನೀಡುವುದು ಮೊದಲನೆಯದು. ಮಾನವನು ತನ್ನ ರಕ್ಷಣೆಯ ಮಾರ್ಗವನ್ನು ಅನುಸರಿಸಲು ಯುಕ್ತ ಮೇಲು ಹಂತಿಯನ್ನು ನೀಡುವುದು

ಎರಡನೆಯದು. ಆತನು ಶಿಲುಬೆಯ ಮೇಲೆ ಸಂರಕ್ಷಣಾದಾಯಕವಾದ ಮರಣವನ್ನು ಸ್ವೀಕರಿಸಿ, ತನ್ನ ದೇಹದ ಕೊನೆಯ ರಕ್ತ ಬಿಂದುವನ್ನೂ ಸುರಿಸಿ ಮೊದಲನೆಯ ಕಾರ್ಯವನ್ನು ಪೂರ್ತಿಗೊಳಿಸಿದ ವಿಚಾರವನ್ನು ತಿಳಿದಿರುವೆವು. ತಾನು ಸಾಯುವ ಮುನ್ನ ಯೇಸುವೇ, "ನಾನು ಭೂಮಿಯಿಂದ ಮೇಲಕ್ಕೆತ್ತಲ್ಪಟ್ಟನಾದರೆ ಎಲ್ಲ ವಸ್ತುಗಳನ್ನೂ ನನ್ನೆಡೆಗೆ ಸೆಳೆಯುವೆನು" (ಯೋಹಾನ ೧೨-೩೨) ಎಂದು ಹೇಳಿದ್ದನು. ಅದು ಯುಕ್ತವಾದ ಮಾತು. ಭಗವಂತನೂ ಮಾನವನೂ ಪ್ರತ್ಯೇಕವಾದ ಮಟ್ಟದಲ್ಲಿರುವರು. ಅವೆರಡನ್ನೂ ಸಂಧಿಸುವುದಕ್ಕಾಗಿ ಯೇಸುವು ಶಿಲುಬೆಯ ಮರಣವನ್ನು ಪಡೆದನು.

ಇನ್ನು ಎರಡನೆಯ ವಿಚಾರವಾಗಿ ನಾವು ವಿವೇಚಿಸಬೇಕಾಗಿದೆ. ಭಗವಾನ್ ಯೇಸುಕ್ರಿಸ್ತನು ಮೂವತ್ತಮೂರು ವರ್ಷಗಳಷ್ಟು ಕಾಲ ತನ್ನ ಜೀವನವನ್ನು ಮರ್ತ್ಯಲೋಕದಲ್ಲಿ ಸವೆಸಿದನೆಂದು ನಾವು ತಿಳಿದಿರುವೆವು. ಆ ಅವಧಿಯಲ್ಲಿ ಕೇವಲ ಮೂರು ವರ್ಷಗಳಷ್ಟು ಕಾಲ ಆತನು ತನ್ನ ಪಿತನ ಕಾರ್ಯವಾದ ಧರ್ಮಪ್ರಚಾರವನ್ನು ಮಾಡಿದನು. ಭಗವಂತನ ಸಂದೇಶವನ್ನು, ಪ್ರೇಮಮಯ ಪಿತನ ಅನುಗ್ರಹ ಮಾರ್ಗವನ್ನು ಜನತೆಯಲ್ಲಿ ಒಡಮೂಡಿಸಿದನು. ಕೊನೆಯ ಮೂರು ತಾಸುಗಳಷ್ಟು ಕಾಲ ಭಗವತ್-ಪಿತನಿಗೆ ಪರಿಹಾರವಾಗಿ, ಭೂಮಿಯಿಂದ ಎತ್ತಲ್ಪಟ್ಟ ಶಿಲುಬೆಯ ಮೇಲೆ ತೂಗಾಡುತ್ತ ಕೊನೆಯ ರಕ್ತದ ಬಿಂದುವನ್ನೂ ಸುರಿಸಿ ಪ್ರಾಣ ಬಿಟ್ಟನು. ಆದರೆ ತನ್ನ ಜೀವನದ ಮೂವತ್ತು ವರ್ಷಗಳಷ್ಟು ಕಾಲ ಸಾಮಾನ್ಯ ಜೀವನವನ್ನು ಸಾಗಿಸುತ್ತ, ವಿಧೇಯತೆ, ಸರಳತೆ, ಕಾರ್ಯ ಸಹಕಾರ ಮೊದಲಾದುವುಗಳಲ್ಲಿ ಮಾರ್ಗದರ್ಶನವನ್ನು ಮಾಡಿರುವನು. ಮೂವತ್ತು ವರ್ಷಗಳಷ್ಟು ಕಾಲದ ಪ್ರತ್ಯಕ್ಷ ಜೀವನದ ಮೇಲು ಹಂತಿ, ಮೂರುವರ್ಷಗಳಷ್ಟು ಕಾಲದ ಧರ್ಮೋಪದೇಶ, ಕೊನೆಯ ಮೂರು ತಾಸುಗಳಷ್ಟು ಕಾಲದ ಸಂರಕ್ಷಣಾದಾಯಕ ಪರಿಹಾರ—ಇವುಗಳನ್ನು ನಾವು ಗಮನಿಸಬೇಕು.

ಪ್ರೇಮದ ಆದರ್ಶ

ಭಗವಂತನೇ ಪ್ರೇಮಸ್ವರೂಪಿಯಾಗಿರುವುದರಿಂದ ಭಗವಾನ್ ಯೇಸು ಕ್ರಿಸ್ತನು ಪ್ರೇಮದ ಆದರ್ಶವನ್ನು ನೀಡಬೇಕಾದುದು ಅನಿವಾರ್ಯ. ಆತನು ಬೋಧಿಸಿದ ಧರ್ಮದ ತತ್ವವು ಪ್ರೇಮದ ತಳಹದಿಯ ಮೇಲಿದೆ. ಒಮ್ಮೆ ನಿಯಮಗಳ ಪಂಡಿತನೊಬ್ಬನು ಯೇಸುವಿನಲ್ಲಿ ಅತ್ಯಂತ ಶ್ರೇಷ್ಠವಾದ ನಿಯಮವಾವುದೆಂದು ವಿಚಾರಿಸಿದನು. ಪ್ರತ್ಯುತ್ತರವನ್ನು ಕೊಡುತ್ತ ಯೇಸುವು,

"ನಿನ್ನ ಸ್ವಾಮಿಯಾದ ಭಗವಂತನನ್ನು ಸಂಪೂರ್ಣ ಹೃದಯದಿಂದಲೂ, ಪರಿಪೂರ್ಣ ಆತ್ಮದಿಂದಲೂ, ಸರ್ವಶಕ್ತಿಯಿಂದಲೂ, ಪೂರ್ಣ ಮನಸ್ಸಿನಿಂದಲೂ ಪ್ರೀತಿಸಬೇಕು ಮತ್ತು ನಿನ್ನನ್ನು ನೀನು ಪ್ರೀತಿಸುವಂತೆ ನಿನ್ನ ನೆರೆಯವನನ್ನು ಪ್ರೀತಿಸಬೇಕು" (ಲೂಕ ೧೦–೨೭) ಎಂದನು. ಇನ್ನೊಮ್ಮೆ ಪವಿತ್ರ ಗ್ರಂಥಲೇಖಕ (Scribe) ನೊಬ್ಬನು ಯೇಸುವು ಎಲ್ಲ ಪ್ರಶ್ನೆಗಳನ್ನೂ ಉತ್ತರಿಸುವುದನ್ನು ಕಂಡು ಸರ್ವಶ್ರೇಷ್ಠವಾದ ನಿಯಮವಾವುದೆಂದು ಪ್ರಶ್ನಿಸಿದನು. ಕೂಡಲೇ ಯೇಸುವು ಉತ್ತರ ವೀಯುತ್ತ,

"ಎಲೈ ಇಸ್ರೇಯೇಲ್ ಕೇಳು; ನಿನ್ನ ಸ್ವಾಮಿಯಾದ ಭಗವಂತನನ್ನು ನಿನ್ನ ಸಂಪೂರ್ಣ ಹೃದಯದಿಂದಲೂ, ಪರಿಪೂರ್ಣ ಆತ್ಮದಿಂದಲೂ, ಪೂರ್ಣ ಮನಸ್ಸಿನಿಂದಲೂ ಸರ್ವ ಶಕ್ತಿಯಿಂದಲೂ ನೀನು ಪ್ರೀತಿಸಬೇಕು–ಇದುವೆ ಶ್ರೇಷ್ಠವಾದ ನಿಯಮವು. ಎರಡನೆಯದೂ ಅದರಷ್ಟೇ ಇರುವುದು. ನೀನು ನಿನ್ನನ್ನು ಪ್ರೀತಿಸುವಂತೆ ನಿನ್ನ ನೆರೆಯವನನ್ನು ಪ್ರೀತಿಸು. ಇವುಗಳನ್ನು ಮೀರಿದ ನಿಯಮಗಳೇ ಇರುವುದಿಲ್ಲ" (ಮಾರ್ಕ್ ೧೨,೨೯–೩೧) ಎಂದನು. ಯೇಸುವು ಸಾಯುವ ಮುನ್ನಿನ ದಿನ ತನ್ನ ಶಿಷ್ಯರೆಲ್ಲರೂ ತಮ್ಮತಮ್ಮಲ್ಲಿ ತರತಮಸ್ಥಾನಗಳನ್ನು ಕಲ್ಪಿಸಿಕೊಳ್ಳುತ್ತ ಚರ್ಚಿಸುವುದನ್ನು ತಿಳಿದು ನಡುವಿಗೊಂದು ಉತ್ತರೀಯವನ್ನು ಬಿಗಿದು ಜಲಪಾತ್ರೆಯನ್ನೂ ಹರಿವಾಣವನ್ನೂ ಎತ್ತಿಕೊಂಡು ಪೇತ್ರನಿಂದ ಯೂದಾಸನ ತನಕ ತನ್ನ ದ್ವಾದಶ ಶಿಷ್ಯರ ಕಾಲುಗಳನ್ನು ತೊಳೆದನು. ತೊಳೆಯಲು ಬಿಡದ ಪೇತ್ರನನ್ನು ತನ್ನೊಂದು ಮಾತಿನಿಂದ ಒಡಂಬಡಿಸಿದನು. ಅನಂತರ,

"ನಾನೇನು ಮಾಡಿರುವೆನೆಂದು ತಿಳಿದಿರುವಿರಾ? ನನ್ನನ್ನು ಗುರುವೆಂದೂ, ಸ್ವಾಮಿಯೆಂದೂ ನೀವು ಸಂಬೋಧಿಸುವಿರಿ; ನಾನು ಹಾಗೆಯೇ ಆಗಿರುವುದರಿಂದ ನೀವೆನ್ನುವುದು ಯುಕ್ತವಾಗಿದೆ. ನಾನು ನಿಮ್ಮ ಸ್ವಾಮಿಯೂ, ಗುರುವೂ ಆಗಿಯೂ ನಿಮ್ಮ ಪಾದಗಳನ್ನು ತೊಳೆದಿರುವೆನು. ಹಾಗಿರುವಾಗ ನೀವೂ ಒಬ್ಬರೊಬ್ಬರ ಪಾದಗಳನ್ನು ತೊಳೆಯಬೇಕು. ನಾನು ನಿಮಗೆ ಮಾಡಿದಂತೆ ನೀವೂ ಕೂಡಾ ಮಾಡಬೇಕೆಂದು ನಿಮಗೊಂದು ಆದರ್ಶವನ್ನು ನಾನು ಕೊಟ್ಟಿರುವೆನು..........ನಿಮಗೆ ನವೀನವಾದೊಂದು ನಿಯಮವನ್ನು ಕೊಡುತ್ತೇನೆ, ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು. ನಾನು ನಿಮ್ಮನ್ನು ಪ್ರೀತಿಸಿದಂತೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಬೇಕು. ನೀವು ಒಬ್ಬರನ್ನೊಬ್ಬರು ಪ್ರೀತಿಸಿದರೆ, ನೀವು ನನ್ನ ಶಿಷ್ಯರೆಂದು ಎಲ್ಲ ಮನುಷ್ಯರೂ ತಿಳಿಯುವರು." (ಯೋಹಾನ ೧೩, ೧೨-೧೫,೩೪) ಎಂದು ಅದರ ಔಚಿತ್ಯವನ್ನು ವಿಶದಗೊಳಿಸಿದನು.

ಆ ಪ್ರೇಮವು ಶುದ್ಧವಾಗಿರಬೇಕು, ಸಾತ್ವಿಕವಾಗಿರಬೇಕು. ನಮ್ಮ ಪ್ರೇಮಕ್ಕೆ ಪ್ರತಿಯಾಗಿ ಕೇವಲ ಪ್ರೇಮವನ್ನು–ನಿಷ್ಕಾಮ ಪ್ರೇಮವನ್ನು ಮಾತ್ರ ಬಯಸಬೇಕು. ದಾನವೀಯುವಾಗ ಬಲಗೈ ಕೊಟ್ಟುದನ್ನು ಎಡಗೈ ತಿಳಿಯುವಂತಿರಬಾರದು. ಮಿತ್ರರನ್ನು ಪ್ರೀತಿಸಿ ವೈರಿಗಳನ್ನು ದ್ವೇಷಿಸುವುದು ಮಾನವನ ಸಾಮಾನ್ಯ ಪ್ರವೃತ್ತಿ. ಆದರೆ ಯೇಸುವು ವೈರಿಗಳನ್ನೂ ಪ್ರೀತಿಸಬೇಕೆಂಬ ಉದಾತ್ತ ಧ್ಯೇಯವನ್ನು ಪ್ರದರ್ಶಿಸಿರುವನು. ಮಾನವ ಜನಾಂಗದವರಿಂದ ಪರಿತ್ಯಜಿಸಲ್ಪಟ್ಟವರನ್ನು ಆತ್ಮೀಯತೆಯಿಂದ ನೋಡಬೇಕಾದುದು ಮುಖ್ಯ. ವರ್ಣಭೇದವೆಂಬುದು ಯೇಸುವಿನ ಸೂತ್ರಕ್ಕೆ ವಿರೋಧವಾದ ವಿಷಯವು. ಅದನ್ನು ಸೂಚಿಸುತ್ತ "ಅದಾವುದನ್ನು ಅಲ್ಪರಾದ ನನ್ನವರಿಗೆ ನೀವು ಮಾಡಿರುವಿರೊ ಅದನ್ನು ನನಗೇ ಮಾಡಿದಂತೆ ನಾನು ತಿಳಿಯುವೆನು" (ಮತ್ತೇಯ ೨೫ : ೪೫) ಎಂದು ಆತನು ಹೇಳಿರುವನು.

ವೈರಿಗಳನ್ನು ಪ್ರೀತಿಸಬೇಕೆಂದು, ನಿರಪರಾಧಿಯಾದ ತನ್ನನ್ನು ಶಿಲುಬೆಯ ಮೇಲೇರಿಸಿದಾಗಲೂ ಮರೆಯಲಿಲ್ಲ. ಆ ತನ್ನ ಯಾತನಾಮಯ ಕೊನೆಗಾಲದಲ್ಲಿ ವೈರಿಗಳು ತನ್ನನ್ನು ನಿಂದಿಸುವುದನ್ನು ಕಂಡು

“ ಪಿತನೇ ಅವರನ್ನು ಕ್ಷಮಿಸು ; ಅವರೇನು ಮಾಡುತ್ತಿರುವರೆಂದು ಅವರರಿಯರು ” (ಲೂಕ ೨೨-೩೪)

ಎಂದು ಭಗವತ್ ಪಿತನಲ್ಲಿ ಪ್ರಾರ್ಥಿಸಿದನು—ಹೀಗೆ ತನ್ನ ಹಿಂಸಕರನ್ನು ಮನಃಪೂರ್ವಕವಾಗಿ ಕ್ಷಮಿಸಿದ ಘಟನೆಯು ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ಗಾಂಧೀಜಿಯವರೂ ಈ ವಿಶಿಷ್ಟ ಘಟನೆಯಿಂದ ತಮ್ಮ ಜೀವನವನ್ನು ರೂಪಿಸಿಕೊಂಡರು.

ಬಡವರ ಬಂಧು

ಪುರುಷತ್ರಯ್ಯೈಕ ಭಗವಂತನ ದ್ವಿತೀಯ ಪುರುಷನಾದ ಭಗವತ್-ಪುತ್ರನೇ ಯೇಸುವೆಂಬ ಹೆಸರಿನಿಂದ ಜಗತ್-ರಕ್ಷಕನಾಗಿ ಜನಿಸಿದನೆಂಬುದನ್ನು ನಾವು ತಿಳಿದಿರುವೆವು. ಯೇಸುವು ಮಾನವನಾಗಿ ಹುಟ್ಟುವಾಗಲೂ, ಅನಂತರವೂ ಬಡತನದಲ್ಲಿಯೇ ಇದ್ದನು. ಭಗವತ್-ಪುರುಷನಾದ ಆತನು ಶ್ರೀಮಂತಕುಲದಲ್ಲಾಗಲೀ, ಆಗಿನ ಬಲಾಢ್ಯ ರಾಜವಂಶದಲ್ಲಾಗಲೀ ಜನಿಸುವುದು ಅಸಾಧ್ಯವಾಗಿರಲಿಲ್ಲ. ಆದರೂ ಆತನು ಬಡವರ ಬಂಧುವಾಗಿ ಬಡವರಲ್ಲಿ ಜನಿಸಿದನು.

“ ಬಡತನದ ಮನೋಭಾವವಿರುವವರೇ ಧನ್ಯರು, ಏಕೆಂದರೆ ಮೋಕ್ಷರಾಜ್ಯವು ಅವರದು ” (ಮತ್ತೇಯ ೫-೩)

ಈ ಮಾತಿನಿಂದ ಯೇಸುವು ಶ್ರೀಮಂತಿಕೆಯನ್ನು ನಿಂದಿಸುತ್ತಾನೆಂದು ತಿಳಿಯಬಾರದು. ಶ್ರೀಮಂತಿಕೆಯಿಂದ ಜನರು ಐಹಿಕ ಸುಖಭೋಗಗಳನ್ನು ಸುಲಭವಾಗಿ ಪಡೆಯಬಲ್ಲರು ; ಜನತೆಯ ಗೌರವವನ್ನು ಪಡೆಯುವರು ; ರಾಷ್ಟ್ರದ ಬಲವು ಅವರ ಕೈಯಲ್ಲಿರುವುದು ; ನೈತಿಕ ಸೂತ್ರಾರ್ಥಗಳನ್ನು ತಮಗೆ ಬೇಕಾದಂತೆ ಪರಿವರ್ತಿಸಬಹುದು. ಶ್ರೀಮಂತಿಕೆಯ ವಿರೋಧಿಗಳೂ ಬಡತನವನ್ನು ಬಯಸುವುದಿಲ್ಲ ; ಶ್ರೀಮಂತರು ಅವರಿಗೆ ಬೇಡ ; ಅವರ ಧನವು ಬೇಕಾಗಿದೆ. ಹೀಗೆ ಇಂದಿನ ಬಡವರು ನಾಳೆಯ ಶ್ರೀಮಂತರೆನಿಸುವರು — ಅಂತೂ ಆ ಪರಿವರ್ತನೆಯು ಕ್ರಾಂತಿಯ ಹೆಸರಲ್ಲಿ ಮುಂದುವರಿಯುತ್ತದೆ. ಇಂದಿನ ಸಮತಾವಾದಿಗಳೂ ಈ

ವಿಚಾರಕ್ಕೆ ಹೊರತಾಗಿಲ್ಲ. ಆದುದರಿಂದಲೇ ಯೇಸುವು ಬಡತನದ ಮನೋಭಾವವಿರುವವರೇ ಧನ್ಯರೆಂದು ಹೇಳಿರುವನು. ಶ್ರೀಮಂತರೂ ಆ ಮನೋಭಾವವನ್ನು ತಳೆಯಬಹುದು. ಇರಲಿ.

ಯೇಸುವು ಯೆಹೂದ್ಯರ ಪ್ರಸಿದ್ಧ ರಾಜ ದಾವೀದನ ವಂಶದಲ್ಲಿ ಜನಿಸಿದನು. ಯೇಸುವು ಅರಸ ದಾವೀದನಿಗಿಂತ ಇಪ್ಪತ್ತೆಂಟನೆಯ ತಲೆಮಾರಿನವನು. ಕೌಟುಂಬಿಕ ಉನ್ನತಿ-ಅವನತಿಗಳ ಪರಿಣಾಮವಾಗಿ ಯೇಸುವು ಜನಿಸುವಾಗ ಆತನ ಹಿರಿಯರು ಸಾಮಾನ್ಯರ ಸ್ಥಿತಿಗೆ ಬಂದಿದ್ದರು. ಪ್ರಾಚೀನ ಇತಿಹಾಸಕಾರರು ತಿಳಿಸುವಂತೆ ಎರಡು ಕೋಣೆಗಳಿದ್ದ ಮನೆಯೊಂದರಲ್ಲಿ ತನ್ನ ಜೀವಮಾನದ ಹೆಚ್ಚಿನ ಕಾಲವನ್ನು ಯೇಸುವು ಕಳೆದನು. ಜನನ ಕಾಲದಲ್ಲಿಯೂ ಆತನು ವಿಶೇಷತ್ವಗಳನ್ನು ಪ್ರದರ್ಶಿಸಲಿಲ್ಲ. ಸಾಮಾನ್ಯ ಶಿಶುವಿನಂತೆಯೇ ಆತನು ಮರಿಯಳ ಜಠರದಲ್ಲಿದ್ದನು. ಮರಿಯಳು ತುಂಬಿದ ಬಸುರಿಯಾಗಿದ್ದಾಗ ರೋಮಕ ಚಕ್ರವರ್ತಿ ಸೀಜರ್ ಅಗಸ್ಟಸನ ಜನಗಣತಿಯ ರಾಜಾಜ್ಞೆಯು ಪ್ರಕಟವಾಯಿತು. ಮರಿಯಳೂ ಆಕೆಯ ಪತಿ ಯೋಸೇಫನೂ ಆಜ್ಞಾಪಾಲನೆಗಾಗಿ ತಮ್ಮ ಕುಲದ ಮೂಲ ಸ್ಥಾನವಾದ ಬೆತ್ಲೆಹೇಮಿಗೆ ಹೋದರು. (ಹೇರೋದನು ಯುದೇಯಾದ ಸಾಮಂತ ರಾಜನಾಗಿದ್ದನು. ರೋಮಕ ಸರಕಾರವು ತಮ್ಮ ಜನತೆಯಿಂದ ಬರಬೇಕಾದ ಕರಸಂಗ್ರಹವು ಪರಿಪೂರ್ಣವಾಗಬೇಕೆಂದು—ಅದೂ ಸೀರಿಯಾದ ರಾಜಪಾಲ ಸಿರೆನಸ್ (ಕ್ವಿರಿನಿಯಸ್) ಎಂಬುವನು ಅತ್ಯಂತ ಕಟು ಸೂತ್ರಗಳ ಸಮೇತ ಉಪಕ್ರಮಕ್ಕೆ ತರಬೇಕೆಂದು ವಿಧಿಸಿತ್ತು).

ಮರಿಯ—ಯೋಸೇಫರಂತೆ ಆ ಕುಲದ ಅನೇಕರು ಅಲ್ಲಿಗೆ ಬಂದಿದ್ದರು. ಅಲ್ಲಿದ್ದ ಛತ್ರಗಳಲ್ಲಿ ಅವರಿಗೆ ಆಶ್ರಯವು ಸಿಗಲಿಲ್ಲ. ಬಡವರನ್ನು ಉಪಚರಿಸಿದಾಗ ಸಿಗುವ ಪ್ರತಿಫಲವು ಅಲ್ಪವಾಗಿರುವುದರಿಂದಲೂ, ಮರಿಯಳ ದೈಹಿಕಸ್ಥಿತಿಯ ಪ್ರಕಾರ ಆಕೆಯ ಪ್ರಸವ ಕಾಲವು ಸನ್ನಿಹಿತವಾದುದೆಂದು ತಿಳಿದುಹೋದುದರಿಂದಲೂ, ಅವರು ಬರುವಾಗ ತಡವಾದುದರಿಂದಲೂ ಛತ್ರಗಳೊಡೆಯರು ಆಶ್ರಯವನ್ನು ನಿರಾಕರಿಸಿದರೆಂದು ತಿಳಿದು ಬರುತ್ತದೆ. ಛತ್ರದಲ್ಲಿ ಆಶ್ರಯವನ್ನು ಪಡೆಯದಿದ್ದರೂ ಸಮೀಪದ ಗವಿಯೊಂದರಲ್ಲಿ ಆಶ್ರಯವನ್ನು ಪಡೆದರು. ಅದು ಮರಿಯಳ ಪ್ರಸವ ಕಾಲಕ್ಕೆ

ಯುಕ್ತ ತಾಣವಾಯಿತು. ಆ ಗವಿಯಲ್ಲಿ ಅದೂ ಚಳಿಗಾಲದ ಮಧ್ಯ ರಾತ್ರಿಯಲ್ಲಿ ಯೇಸುವು ಜನಿಸಿದನು.

ಭಗವತ್ ವ್ಯಕ್ತಿಯ ಭವ್ಯತೆಯೆಲ್ಲಿ? ಗುಡ್ಡದ ಬದಿಯ ಗವಿಯೊಂದು ಆತನ ಅರಮನೆ, ಗೋವುಗಳು ನೀರು ಕುಡಿಯುವ ಮರಿಗೆಯೇ ತೊಟ್ಟಿಲು, ಗೋದಳಿಯೇ ಸಿಂಹಾಸನವು; ಮರಿಯಳು ತಂದಿದ್ದ ಹರಕು ಬಟ್ಟೆಗಳೇ ರಾಜ ವಸನಗಳು, ಒಣ ಹುಲ್ಲು ಹಾಸಿಗೆಯು, ಗವಿಯಲ್ಲಿ ಕಟ್ಟಿಹಾಕಿದ ಪಶುಗಳೇ ಜೊತೆಗಾರರು—ಇಂತಹ ಬಡತನದಲ್ಲಿ ಜನಿಸಿದ ಶಿಶು ಭಗವಾನ್ ಯೇಸು ಕ್ರಿಸ್ತನು.

"ಎಲ್ಲ ಜನಾಂಗಗಳೂ ಆತನನ್ನು ಆರಾಧಿಸುವರು, ಆತನ ಸಾಮ್ರಾಜ್ಯಕ್ಕೆ ಕೊನೆಯಿರದು"

ಆದರೂ

"ತನ್ನ ಸ್ವಜನರಲ್ಲಿ ಆತನು ಬಂದನು; ಆದರೆ ಅವರು ಆತನನ್ನು ಸ್ವೀಕರಿಸಲಿಲ್ಲ" (ಯೋಹಾನ ೧–೧೧)

ಇದೇ ಭಗವಂತನ ಲೀಲೆಯು: ಅದೇ ನಮ್ಮೆಲ್ಲರ ಮಹದಾನಂದದ ಮೂಲವು. ಅಂದಿನ ಆ ಮಧ್ಯರಾತ್ರಿಯಲ್ಲಿ ಕ್ರಿಸ್ತಶಕವು, ರಕ್ಷಣೆಯ ಮಾರ್ಗವು, ಜೀವದ ಪ್ರಕಾರವು ಆವಿರ್ಭವಿಸಿತು.

ಮರಿಯಳಿಗೆ ಸುಖಪ್ರಸವವಾಗಿತ್ತು. ಸಾಮಾನ್ಯ ಸ್ತ್ರೀಯರಿಗಿರ ಬಹುದಾದ ಪ್ರಸವ ವೇದನೆಗಳಿರಲಿಲ್ಲವೆಂದೂ ಬಾಣಂತಿಯಾದ ಆಕೆಯು ಉತ್ಸಾಹದಿಂದಲೇ ಇದ್ದಳೆಂದೂ ತಾನು ಹಡೆದ ಮಗುವನ್ನು ತಾನೇ ಮೊತ್ತಮೊದಲು ವಂದಿಸಿದಳೆಂದೂ ಪ್ರಾಚೀನ ಜಾನಪದ ಹೇಳಿಕೆಗಳಿವೆ.

ಆದರೆ ಆ ಕಾಲದಲ್ಲಿ ಗವಿಯಿಂದ ತುಸು ದೂರದಲ್ಲಿ ತಮ್ಮ ಕುರಿ ಮಂದೆಗಳನ್ನು ರಕ್ಷಿಸುತ್ತಿದ್ದ ಕುರುಬರು ಗಗನಮಾರ್ಗವಾಗಿ ಪ್ರಕಾಶವೊಂದು ಚಲಿಸುವುದನ್ನು ಕಂಡು ಅಂಜಿದರು. ಅಷ್ಟರಲ್ಲಿ ಗಗನಮಾರ್ಗದಲ್ಲಿಯೇ ನಿಂತು ಅವರನ್ನು ಕರೆಯುವ ದಿವ್ಯ ವ್ಯಕ್ತಿಯೊಬ್ಬನನ್ನು ನೋಡಿದರು. ಆತನು ಅಭಯವನ್ನು ನೀಡುತ್ತ ಜಗದ್ರಕ್ಷಕನು ಜನಿಸಿರುವನೆಂದೂ ಆತನನ್ನು ಅವರು ಸಂದರ್ಶಿಸಬಹುದೆಂದೂ ಹೇಳಿ ಮಗುವಿನ ಪರಿಚಯವನ್ನು ಕೊಟ್ಟನು. ಆಗ–

"ನಾಕದಲ್ಲಿ ದೇವರಿಗೆ ಆನಂದವಿರಲಿ.

ಲೋಕದಲ್ಲಿ ಸುಜನರಿಗೆ ಶಾಂತಿಯೈತರಲಿ" (ಲೂಕ ೨, ೧೪)

ಎಂಬ ಸುಮಧುರ ಗೀತವೂ ಕೇಳಿಸಿತು. ಇನ್ನು ತಡೆಯಲು ಅವರಿಂದಾಗಲಿಲ್ಲ. ತಮ್ಮ ಕಾಣಿಕೆಗಳೊಡನೆ ಹೊರಟು ಶಿಶುವನ್ನು ನೋಡಿ ವಂದಿಸಿದರು. ಹಟ್ಟಿಯಾದ ಗವಿಯಲ್ಲಿ ಹುಟ್ಟಿದ ಭಗವತ್-ಕುಮಾರನಿಗೆ ಕುರುಬರೇ ಮೊದಲನೆಯ ಭಕ್ತರಾದರು. ಕುರುಬರೆಂದರೆ ಕುರಿಗಳನ್ನು ರಕ್ಷಿಸುವವರೆಂದೂ ಮರೆ ಮೋಸಗಳನ್ನರಿಯದ ಸರಳಹೃದಯದವರೆಂದೂ ಭಿನ್ನಾರ್ಥಗಳೆರಡು ರೂಢಿಯಲ್ಲಿವೆ. ನಿಷ್ಕಲ್ಮಷ ಕುಮಾರನನ್ನು ಸರಳಹೃದಯದವರು ಸಂದರ್ಶಿಸುವುದು ಯುಕ್ತವಾಗಿದೆ.

ಅಂದು ಕುರುಬರು ಕೇಳಿದ ಆ ಗೀತ, ಸುಜನರಿಗೆ ಶಾಂತಿಯನ್ನು ತರುವಂತಹ ವಿಷಯದ ಆವಿರ್ಭಾವವಾಗಿತ್ತು. ಆ ಶಾಂತಿಯು ಸಿಗಬೇಕಾದರೆ ನಾವು ಸುಜನರಾಗಬೇಕು—ಸದಿಚ್ಛೆಯ ಜನರಾಗಬೇಕು. ಯೇಸುವು ಶಾಂತಿಯನ್ನು ನೀಡಲು ಬಂದವನು. ಆತನ ತತ್ವಗಳನ್ನು ಅನುಸರಿಸುವವನು ಶಾಶ್ವತ ಶಾಂತಿಯನ್ನು ಪಡೆಯುವನು. ಈ ಜೀವನವು ಕೊನೆಗೊಂಡಾಗ ಚಿರಶಾಂತಿಯನ್ನು ನಾವು ಬಯಸುತ್ತೇವೆ—ಸದಿಚ್ಛೆಯುವರಾದಾಗ ಆ ಚಿರಶಾಂತಿಯು ನಮಗೆ ಸಿಗುವುದು.

ಯೇಸುವು ಜನಿಸಿ ಒಂದೆರಡು ತಿಂಗಳಾದಾಗ ಮೂವರು ಪೌರ್ವಾತ್ಯ ಪಂಡಿತರು ಯೆಹೂದ್ಯ ರಾಜಕುಮಾರನ ವಂದನೆಗಾಗಿ ಬಂದರು. ಜ್ಯೋತಿಷದಲ್ಲಿ ಅವರು ವಿದ್ವಾಂಸರಾಗಿದ್ದರು. ಗಗನಮಂಡಲದಲ್ಲಿ ದಿವ್ಯಜ್ಯೋತಿಯ ಆವಿರ್ಭವವನ್ನು ಅವಲೋಕಿಸಿದ ಅವರು ಅದರ ಮಾರ್ಗದರ್ಶನದಿಂದ ಯೆರೂಸಲೇಮ್ ನಗರದವರೆಗೆ ಬಂದರು. ಆದರೆ ಮುಂದೆ ಮೋಡಗಳು ಕವಿದಾಗ ಆ ಜ್ಯೋತಿಯು ಅವರಿಗೆ ಕಾಣಿಸಲಿಲ್ಲ. ಹೀಗಾಗಿ ಯೆಹೂದ್ಯ ಅರಸ, ಹೇರೋದನನ್ನು ವಿಚಾರಿಸಿದರು. ತನ್ನ ಮಹತ್ವಾಕಾಂಕ್ಷೆಗೆ ವಿರೋಧಿಗಳೆಂದು ತೋರಿದ ತನ್ನ ಪತ್ನಿ-ಪುತ್ರರ ಸಮೇತ ಅನೇಕ ರಾಜಸಂಬಂಧಿಗಳನ್ನು ಕೊಲೆಗೈದ ಆತನು ವಿದ್ವಾಂಸರ ಮಾತಿನಿಂದ ಗಾಬರಿಗೊಂಡನು. ಆದರೂ ಅದನ್ನು ತಿಳಿಯಗೊಡದೆ ಪ್ರಾಚೀನ ಗ್ರಂಥಾವಲೋಕನವನ್ನು ಮಾಡಿಸಿ ಆ

ಪಂಡಿತರನ್ನು ಬೆತ್ಲೆಹೇಮಿಗೆ ಕಳುಹಿಸಿದನು. ಅವರು ಶಿಶು ಯೇಸುವನ್ನು ಕಂಡು–

"ಸಾಷ್ಟಾಂಗ ನಮಸ್ಕಾರ ಮಾಡಿ, ತಮ್ಮ ಕೋಶಗಳನ್ನು ತೆರೆದು ಚಿನ್ನವನ್ನೂ ಧೂಪವನ್ನೂ ರಕ್ತಬೋಳವನ್ನೂ ಕಾಣಿಕೆಗಳಾಗಿ ಸಮರ್ಪಿಸಿದರು" (ಮತ್ತಾಯ ೨, ೧೧).

ಸಾಷ್ಟಾಂಗ ನಮಸ್ಕಾರವು ಭಗವಂತನೊಬ್ಬನಿಗೆ ಮಾತ್ರ ವಿಾಸಲಾದ ಸರ್ವಾರ್ಪಣಭಾವದ ಬಾಹ್ಯಚಿಹ್ನೆ. ಮಾತ್ರವಲ್ಲ ಆ ಪಂಡಿತರು ಕಾಣಿಕೆಯಾಗಿ ಅರ್ಪಿಸಿದ ವಿಷಯಗಳೂ ಯೇಸುವಿನ ಗುಣಲಕ್ಷಣಗಳನ್ನು ಬಹಿರಂಗ ಜಗತ್ತಿಗೆ ವಿಶದಪಡಿಸುತ್ತವೆ. ಧೂಪದಿಂದ ಆತನು ಭಗವಂತನೆಂದೂ, ಚಿನ್ನದಿಂದ ರಾಜಾಧಿರಾಜನೆಂದೂ, ರಕ್ತಬೋಳದಿಂದ ಯಾತನಾಮಯ ಮಾನವನೆಂದೂ ತೋರಿಸಿದರೆಂದು ಪಂಡಿತರು ತಿಳಿಸುತ್ತಾರೆ. ಆ ಪಂಡಿತರು ಕಾಣಿಕೆಗಳಿಂದ ಮರೀಯಾ—ಯೋಸೇಫರ ಬೆತ್ಲೆಹೇಮ್ ವಾಸವು ಹಿತಕರವಾಗಿತ್ತೆಂದೂ ಹೇಳುತ್ತಾರೆ.

ಯೇಸುವು ಜನಿಸಿದ ಮೇಲೂ ಮರೀಯ ಯೋಸೇಫರ ಜೀವನಕ್ರಮದಲ್ಲಿ ಮಹತ್ವದ ವ್ಯತ್ಯಾಸಗಳೇನೂ ಆಗಲಿಲ್ಲ. ಬೆತ್ಲೆಹೇಮಿನಿಂದ ಐಗುಪ್ತಕ್ಕೂ, ಅಲ್ಲಿಂದ ನಜರೇತಿಗೂ ಅವರು ಹೋಗಬೇಕಾಯಿತು. ಯೋಸೇಫನು ಮರಗೆಲಸವನ್ನು ಮಾಡುತ್ತ ಕುಟುಂಬದ ರಕ್ಷಣೆಯ ಭಾರವನ್ನು ಹೊತ್ತಿದ್ದನು. ಮರೀಯಳೂ ಗೃಹಕೃತ್ಯವನ್ನು ನೆರವೇರಿಸಿ, ಮಿಕ್ಕ ಕಾಲದಲ್ಲಿ ನೂತು, ನೇದು ಸಹಕರಿಸುತ್ತಿದ್ದಳು. ಪ್ರಾಯ ಬಂದಾಗ ಯೇಸುವೂ ಮರಗೆಲಸವನ್ನು ಕಲಿತನು. ಅಕ್ಷರಾಭ್ಯಾಸವನ್ನೂ ಮಾಡಿದನು. ಯೋಸೇಫನ ಮರಣದ ಬಳಿಕ ತಾನೇ ದುಡಿದು ತನ್ನ ತಾಯಿಯ ರಕ್ಷಣೆಯನ್ನು ಮಾಡಿದನು. ಮಹಾತ್ಮನು ವೃತ್ತಿಯೂ ಗೌರವದಾಯಕವೆಂದು ತೋರಿಸಿದನು.

ಯೇಸುವು ಶಿಲುಬೆಯ ಮೇಲೆ ತೂಗುತ್ತಿದ್ದಾಗ, ಅಂದಿನ ರೂಢಿಯಂತೆ, ಸೈನಿಕರು ಅಪರಾಧಿ ಯೇಸುವಿನ ವಚನಗಳನ್ನು ತಮ್ಮೊಳಗೆ ಹಂಚಿಕೊಂಡರು. ಆದರೆ,

"ಆತನ ನಿಲುವಂಗಿಗೆ ಹೊಲಿಗೆಯಿರಲಿಲ್ಲ. ಮೇಲಿನಿಂದ ಅಖಂಡವಾಗಿ ಅದು ನೇಯಲಾಗಿತ್ತು. ಅದನ್ನು ಕಂಡು ಅವರು 'ನಾವಿದನ್ನು ಹರಿಯುವುದು ಬೇಡ, ಚೀಟು ಹಾಕಿ ಯಾರಿಗೆ ಬರುವುದೋ ನೋಡೋಣ' ಎಂದು ಮಾತಾಡಿಕೊಂಡರು" (ಯೋಹಾನ. ೧೯, ೨೩-೨೪)

ಆ ನಿಲುವಂಗಿಯನ್ನು ಮರೀಯಳೇ ಮಾಡಿಕೊಟ್ಟಿರಬೇಕೆಂದು ಈಗಿನವರು ಶೋಧಿಸಿರುವರು. ತನ್ನ ತಾಯಿಯೇ ಮಾಡಿದ ವಸನಗಳನ್ನು ಧರಿಸುವವನು ಬಡವನೆಂಬುದರಲ್ಲಿ ಸಂದೇಹವಿಲ್ಲ. ಯೇಸುವು ನಿತ್ಯವೂ ಬಡತನದಲ್ಲಿದ್ದನು. ಬಡವರ ಉದ್ಧಾರಕ್ಕಾಗಿ ಅನೇಕ ಪವಾಡಗಳನ್ನು ಮಾಡಿದನು. ಆದರೆ ಅರಸ ಹೇರೋದ ಅಂತಿಪಾಸನಲ್ಲಿ ತುಟಿ ಕೂಡಾ ತೆರೆಯಲಿಲ್ಲ.

ನ್ಯಾಯಕ್ಕೆ ವಿಧೇಯನು

ಸರ್ವೇಶ್ವರನೇ ಸಮಸ್ತಾಧಿಕಾರದ ಮೂಲವು. ನಮ್ಮ ಹಿರಿಯರೂ ಸರಕಾರವೂ ಸಮಾಜನಾಯಕರೂ ತಮ್ಮ ಅಧಿಕಾರವ್ಯಾಪ್ತಿಯನ್ನು ಆತನಿಂದಲೇ ಪಡೆಯುವರು. ಹಾಗಿದ್ದರೂ ಆ ಅಧಿಕಾರಿಗಳು ತಮ್ಮ ನಿಯಮಿತಾಧಿಕಾರವನ್ನು ಮೀರಿದ ಆಣತಿಯನ್ನು ನಮಗಿತ್ತಾಗಲೂ ನಾವು ವಿಧೇಯರಾಗಬೇಕೆಂದು ಯಾರೂ ಹೇಳಲಾರರು. ನ್ಯಾಯಪೂರ್ಣ ಆಜ್ಞಪ್ತಿಗಳನ್ನು ಮಾತ್ರ ಪಾಲಿಸುವ ಕರ್ತವ್ಯವು ನಮ್ಮದು.

ಯೇಸುವು ಭಗವಂತನು ಮಾತ್ರವಲ್ಲ ಪರಿಪೂರ್ಣ ಮಾನವನೂ ಅಹುದು, ಭಗವಂತನಾಗಿ ಸಕಲ ಸ್ಥಿರ-ಚರ ವಸ್ತುವಿಷಯಗಳ ಕರ್ತೃವೂ ಪಾಲಕನೂ—ಆದಿಯೂ ಅಂತ್ಯವೂ ಆಗಿರುವನು. ಆದರೂ ಮಾನವನಾಗಿ ನಮ್ಮಂತೆ ಇಹದಲ್ಲಿದ್ದು ಮರೀಯಾ-ಯೋಸೇಫರಿಗೆ ವಿಧೇಯನಾಗಿದ್ದನು.

ಯೇಸುವು ಹನ್ನೆರಡು ವರ್ಷ ಪ್ರಾಯದಲ್ಲಿ ಯೆರೂಸಲೇಮ್ ಮಹಾದೇವಾಲಯದ ವಾರ್ಷಿಕೋತ್ಸವಕ್ಕಾಗಿ ಹೋಗಿದ್ದನು. ದೇವಾಲಯದಲ್ಲಿ ಪುರುಷ-ಸ್ತ್ರೀಯರಿಗೆ ಪ್ರತ್ಯೇಕವಾದ ಸ್ಥಳವಿದ್ದಿತು. ಮಕ್ಕಳು ಮಾತ್ರ ಎರಡೂ ಕಡೆಗಳಲ್ಲಿರಬಹುದು. ಉತ್ಸವದ ಬಳಿಕ ಮರೀಯಾ-ಯೋಸೇಫರು ತಮ್ಮ ಛತ್ರಕ್ಕೆ ಬಂದಾಗ ಯೇಸುವು ಇರಲಿಲ್ಲ. ಕೂಡಲೇ ಅವರು ಆತನ

ಶೋಧನೆಗೆ ಹೊರಟರು. ಮೂರನೆಯ ದಿನದವರೆಗೆ ಎಲ್ಲಾ ಕಡೆಗಳಲ್ಲಿ ಹುಡುಕಿದ ಆ ದುಃಖಿತರು ಕೊನೆಗೆ ದೇವಾಲಯಕ್ಕೆ ಬಂದರು. ಅಲ್ಲಿ ಪಂಡಿತರೊಡನೆ ತರ್ಕಮಾಡುತ್ತಿದ್ದ ಯೇಸುವನ್ನು ಕಂಡು, ಮರೀಯಾಳು ತಾವಿಬ್ಬರೂ ಆತನನ್ನು ಹುಡುಕುತ್ತಿದ್ದ ವಿಚಾರವನ್ನು ತಿಳಿಸಿದಳು. ಅದಕ್ಕುತ್ತರವಾಗಿ ಯೇಸುವು,

"ನೀವು ಅದೇಕೆ ನನ್ನನ್ನು ಹುಡುಕುತ್ತಿದ್ದುದು ; ನಾನು ನನ್ನ ಪಿತನ ಕಾರ್ಯದಲ್ಲಿರಬೇಕೆಂದು ನೀವು ತಿಳಿದಿರಲಿಲ್ಲವೇ ?" ಆದರೂ ಅವನು ಅವರಲ್ಲಿ ಹೇಳಿದ ಮಾತು ಅವರಿಗೆ ಅರ್ಥವಾಗಲಿಲ್ಲ. ಅವನು ಅವರೊಡನೆ ಹೋಗಿ, ನಜರೇತಿಗೆ ಬಂದು ಅವರಿಗೆ ವಿಧೇಯನಾಗಿದ್ದನು" (ಲೂಕ ೨, ೪೯-೫೧)

ಅಹುದು, ಆತನು ಲೌಕಿಕ ವ್ಯಕ್ತಿಗಳಿಗಿಂತಲೂ ಅಧಿಕವಾಗಿ ಭಗವಂತನ ನಿಯಮಗಳನ್ನು ಪಾಲಿಸುವವನಾಗಿದ್ದನು. ಆದುದರಿಂದಲೇ ಮಾನವ ಹಿರಿಯರ ಅನುಮತಿಯನ್ನು ಪಡೆಯದೆ ಆತನು ದೇವಾಲಯದಲ್ಲಿ ಉಳಿದನು. ಅದರ ಆಧಾರದಿಂದಲೋ ಎಂಬಂತೆ ಮುಂದೆ ಯೇಸುವಿನ ಶಿಷ್ಯರು,

"ಮಾನವರಿಗಿಂತಲೂ ಹೆಚ್ಚಾಗಿ ಭಗವಂತನಿಗೆ ನಾವು ವಿಧೇಯರಾಗಿರಬೇಕು" (ಕಾರ್ಯಗಳು ೫, ೨೯)

ಎಂದು ತಮ್ಮ ಪ್ರಚಾರಕಾರ್ಯವನ್ನು ಸಮರ್ಥಿಸುತ್ತ ನುಡಿದರು.

ಯೇಸುವು ನ್ಯಾಯವಾದ ರಾಜಕೀಯಾಧಿಕಾರಕ್ಕೂ ಪರಿಪೂರ್ಣ ವಿಧೇಯನಾಗಿದ್ದನು. ಯೆಹೂದ್ಯರಲ್ಲಿ ಕೆಲವರು ಆತನ ಬೋಧನೆಯಲ್ಲಿ ದೋಷಗಳನ್ನು ಶೋಧಿಸುತ್ತಿದ್ದರು. ಆದರೆ ಅವರು ಸಫಲರಾಗಿರಲಿಲ್ಲ. ಅದಕ್ಕಾಗಿ ಉಭಯಸಂಕಟವನ್ನು ತಂದೊಡ್ಡುವ ಸಂದರ್ಭವೊಂದನ್ನು ಅವರು ಮುಂದೆ ತಂದರು. ಆ ಕಾಲದಲ್ಲಿ ಯೆಹೂದ್ಯರು ರೋಮಕ ಸಾಮ್ರಾಜ್ಯದ ಭಾಗವಾಗಿದ್ದರು. ರೋಮಕ ಸರಕಾರಕ್ಕೆ ಅವರು ಆದಾಯ ತೆರಿಗೆಯಲ್ಲದೆ, ತಲೆಗಂದಾಯನ್ನೂ ನೀಡಬೇಕಾಗಿತ್ತು. ಪರಮತೀಯ ಸರಕಾರಕ್ಕೆ, ಅದೂ ಕರಸಂದಾಯ ಮಾಡುವುದು ಶ್ರೇಷ್ಠ ಜನಾಂಗವೆಂಬ ಅಭಿಮಾನವನ್ನು ತಳೆದ ಯೆಹೂದ್ಯರಿಗೆ ಅತ್ಯಂತ ಕಟುವಾದ ವಿಷಯವೆನಿಸಿತ್ತು. ಆದರೂ ನಿರ್ವಾಹವಿಲ್ಲದೆ ಕೊಡುತ್ತಿದ್ದರು. ಆ ಕರಸಂಗ್ರ

ಹಾಧಿಕಾರಿಗಳನ್ನು ಪಾತಕಿಗಳೆಂದೇ ಕರೆಯುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ "ಸೀಜರನಿಗೆ ಕಪ್ಪವನ್ನು ನೀಡುವುದು ನ್ಯಾಯಸಮ್ಮತವೋ" ಎಂದು ಅವರು ಪ್ರಶ್ನಿಸಿದರು.

ಪ್ರಶ್ನೆಯ ಇಂಗಿತವು ಯೇಸುವಿಗೆ ತಿಳಿಯಿತು ಆತನು ಸರಿಯೆಂದು ಉತ್ತರವಿತ್ತರೆ ಆತನು ಯೆಹೂದ್ಯರ ದಾಸ್ಯಕ್ಕೆ ಅನುಕೂಲನೆಂದಾಗುವುದು. ಸರಿಯಲ್ಲವೆಂದರೆ ಆತನು ಅಧಿರಾಜನಿಗೆ ವಿರೋಧಿಯೆನಿಸುವನು. ಅದಕ್ಕಾಗಿ ಕರಸಂದಾಯದ ಯುಕ್ತ ನಾಣ್ಯವೊಂದನ್ನು ಅವರಿಂದಲೇ ಪಡೆದು, ಅದನ್ನು ಅವರಿಗೆ ತೋರಿಸುತ್ತ, ಅದರಲ್ಲಿರುವ ಬಿಂಬವಾರದೆಂದು ಪ್ರಶ್ನಿಸಿದನು. ಅದು ಸೀಜರನದಾಗಿತ್ತು. ಅವರು ಅಂತೆಯೇ ತಿಳಿಸಿದರು. ಆಗಯೇಸುವು,

"ಸೀಜರನ ವಸ್ತುಗಳನ್ನು ಸೀಜರನಿಗೂ, ಭಗವಂತನವುಗಳನ್ನು ಭಗವಂತನಿಗೂ ಕೊಡಿರಿ" (ಮತ್ತೇಯ ೨೨, ೨೧),

ಎಂದು ಉತ್ತರವಿತ್ತು ಅವರ ಬಾಯಿ ಮುಚ್ಚಿಸಿದನು. ಮುಂದೆ ಯೇಸುವನ್ನು ದಂಡಿಸಲು ಪಿಲಾತನಲ್ಲಿಗೆ ಒಯ್ದಿದ್ದರಷ್ಟೆ! ವಿಚಾರಣೆ ಮಾಡಿದಾಗ ಯೇಸುವಿನಲ್ಲಿ ಅಪರಾಧವೊಂದೂ ಸಿಗಲಿಲ್ಲ. ಆದರೆ ಯಾಜಕ ವೃಂದದಿಂದ ಪ್ರೇರಿತ ಜನಸ್ತೋಮವು ಆತನಿಗೆ ಶಿಲುಬೆಯ ಮರಣವನ್ನು ವಿಧಿಸಬೇಕೆಂದು ಕೂಗುತ್ತಿತ್ತು. ಆಗ ಪಿಲಾತನು ಯೇಸುವಿನೊಡನೆ ಆತನ ಸ್ಥಳವನ್ನು ವಿಚಾರಿಸಿದನು ; ಯೇಸುವು ತುಟಿ ತೆರೆಯಲಿಲ್ಲ. ಆಗ ಪಿಲಾತನು, "ನೀನು ನನ್ನೊಡನೆ ಮಾತಾಡುವುದಿಲ್ಲವೇ? ನಿನ್ನನ್ನು ಶಿಲುಭೆಗೇರಿಸಲೂ ಅಥವಾ ಬಿಡುಗಡೆಗೊಳಿಸಲೂ ನನಗೆ ಅಧಿಕಾರವಿದೆಯೆಂದು ನೀನು ತಿಳಿದಿಲ್ಲವೇ" ಎಂದನು. ಯೇಸುವು ಉತ್ತರವೀಯುತ್ತ,

"ನಿನಗೆ ಮೇಲಿನಿಂದ ಕೊಡಲ್ಪಡದಿರುತ್ತಿದ್ದರೆ, ನನ್ನ ಮೇಲೆ ನಿನಗಾವ ಅಧಿಕಾರವೂ ಇರಲಾರದು" (ಯೋಹಾನ ೧೯, ೧೧),

ಎಂದನು. ಆದುದರಿಂದಲೇ ಪಾವ್ಲನು

"ಹಿರಿಯಧಿಕಾರಕ್ಕೆ ಪ್ರತಿಯೊಬ್ಬನೂ ವಿಧೇಯನಾಗಿರಲಿ; ಭಗವಂತನಿಂದಲ್ಲದ ಅಧಿಕಾರವೆಂಬುದಿಲ್ಲ; ಇರುವರಾದರೂ ಭಗವಂತನಿಂದಲೇ ಅಧಿಕಾರವನ್ನು ಪಡೆದಿರುವರು" (ರೋಮ ೧೩-೧)

ಎಂದು ಹೇಳಿರುವನು.

ಸಕಲಗುಣಸಂಪನ್ನ

ಭಗವಾನ್ ಯೇಸುಕ್ರಿಸ್ತನು ಜನಪ್ರಿಯನಾಗಲು ಆತನ ಜೀವನ ಕ್ರಮವೇ ಕಾರಣವಾಗಿತ್ತು. ಆತನು ಬೋಧಿಸಿದ ಧರ್ಮಸಾಮ್ರಾಜ್ಯದ ಸೂತ್ರಗಳು ಕೇವಲ ನೈತಿಕಸೂತ್ರಗಳಲ್ಲ; ಅವುಗಳನ್ನೂ ಮೀರಿ ಉನ್ನತ ಮನೋಭಾವನೆಯನ್ನು ಪ್ರತಿ ಮಾನವನಲ್ಲಿ ಹುಟ್ಟುವಂತೆ ಮಾಡ ಬಲ್ಲವು. ಆ ಧರ್ಮಸಾಮ್ರಾಜ್ಯದ ಮೂಲಸೂತ್ರಗಳು ಯೆಹೂದ್ಯರು ಪ್ರಾಚೀನಕಾಲದಿಂದಲೂ ಅನುಸರಿಸಿ ಬರುತ್ತಿದ್ದ, ಪ್ರತಿ ಜನಾಂಗದ ಪ್ರತಿ ಯೊಬ್ಬನ ಹೃದಯದಲ್ಲಿ ಹುದುಗಿರುವ ದಶಭಗವನ್ನಿಯಮಗಳೆನಿಸುವ ನೈತಿಕಸೂತ್ರಗಳೇ ಆದರೂ, ಯೇಸುವು ಅವುಗಳಿಗಿಂತಲೂ ಬಿಗಿಯಾದ, ಆಚರಣೆಯಲ್ಲಿ ಕಟುವೆನಿಸುವ ಅಷ್ಟಸೂತ್ರಗಳನ್ನು ಬೋಧಿಸಿದನು. ಅವು ಗಳನ್ನು ಅಷ್ಟವಿಧ ಧನ್ಯತೆಗಳ: (Beatitudes) ಎನ್ನುವರು.

ಈ ಕ್ರಾಂತಿಕಾರಕ ಸೂತ್ರಗಳನ್ನು ಯೇಸುಕ್ರಿಸ್ತನು ತನ್ನ ದ್ವಾದಶ ಶಿಷ್ಯರನ್ನು ಆರಿಸಿದ ಬಳಿಕ, ಅವರನ್ನೊಂದು ಪರ್ವತದ ಮೇಲಕ್ಕೊಯ್ದು ವಿವರಿಸಿದನು. ಅಹುದು, ಆ ಸೂತ್ರಗಳು ಹಿಂದಿನ ಮನೋಭಾವನೆಗಳನ್ನು ಪರಿವರ್ತಿಸುವಷ್ಟು ಪ್ರಬಲವಾಗಿವೆ. ಅವುಗಳ ಅನುವರ್ತನೆಯಿಂದ ಮಾತ್ರವೇ ಮಾನವನು ಈ ಜಗತ್ತಿನಲ್ಲಿ ಸುಖವನ್ನೂ, ತೃಪ್ತಿಯನ್ನೂ ಪಡೆಯಬಲ್ಲನು. ಹಾಗೆಂದು ಐಹಿಕ ಸಂಕಷ್ಟಗಳು, ನಷ್ಟಗಳು, ಅಶಾಂತಿ ಮೊದಲಾದುವುಗಳು ಬಾರವೆಂದು ಯೇಸುವು ಹೇಳಲಿಲ್ಲ. ಆದರೆ ಅವೆಲ್ಲವೂ ಬಂದರೂ ವ್ಯಕ್ತಿಯು ಮಾತ್ರ ತನ್ನ ನಿಶ್ಚಿತಕಾರ್ಯದಲ್ಲಿ ಮನಃಸ್ಥೈರ್ಯ ವನ್ನು ಪಡೆಯುವನು. ಮಾನವನು ಸ್ವಾಭಾವಿಕವಾಗಿಯೇ ಸುಖಾಭಿ ಲಾಷಿಯು. ಆದರೆ ವಿನಾಶದ ಕಡೆಗೊಯ್ಯುವ ಮಾರ್ಗಗಳು ಹಲವು; ಆನಂದದೆಡೆಗೊಯ್ಯುವ ಮಾರ್ಗಗಳು ಅಗಲ ಕಿರಿದು, ಕೆಲವು. ಯೇಸುವು ಬೋಧಿಸಿದ ಅಷ್ಟಸೂತ್ರಗಳು ಆನಂದದೆಡೆಗೊಯ್ಯುವ ಅಗಲ ಕಿರಿ ದಾಗಿಯೂ, ಕ್ಲಿಷ್ಟಕರವಾಗಿಯೂ ಇರುವಂತಹ ಮಾರ್ಗಗಳು:

"ಬಡತನದ ಮನೋಭಾವವುಳ್ಳವರೇ ಧನ್ಯರು; ಅಂತಹವರದು ಮೋಕ್ಷರಾಜ್ಯವಾಗಿದೆ,

"ದೀನರಾದವರೇ ಧನ್ಯರು ; ಅವರು ಭೂಮಿಯನ್ನು ಪಡೆಯುವರು ;

" ಅಳುವವರೇ ಧನ್ಯರು ; ಅವರು ಸಂತಯಿಸಲ್ಪಡುವರು ;

" ನೀತಿಗಾಗಿ ಹಸಿವವರೂ ಬಾಯಾರುವವರೂ ಧನ್ಯರು ; ಅವರೇ ತೃಪ್ತಿಪಡೆಯುವರು ;

" ಕರುಣಾಮಯಿಗಳೇ ಧನ್ಯರು ; ಅವರು ಕರುಣೆಯನ್ನು ಪಡೆಯುವರು ;

" ಪರಿಶುದ್ಧ ಹೃದಯದವರೇ ಧನ್ಯರು ; ಅವರು ಭಗವಂತನನ್ನು ಕಾಣುವರು ;

" ಶಾಂತಿಸಾಧಕರೇ ಧನ್ಯರು ; ಅವರು ಭಗವಂತನ ಮಕ್ಕಳೆಂದು ಕರೆಯಲ್ಪಡುವರು ;

" ನೀತಿಗಾಗಿ ನಿಷ್ಠುರತೆಗಳನ್ನು ಸಹಿಸುವವರೇ ಧನ್ಯರು ; ಅಂತಹವರದೇ ಮೋಕ್ಷರಾಜ್ಯವು " (ಮತ್ತಾಯ ೫, ೩-೧೦)

ಈ ಕ್ರಾಂತಿಕಾರಕ ಸೂತ್ರಗಳನ್ನು ವಿಶದಗೊಳಿಸಿದ ಬಳಿಕ ಯೇಸುವು " ನಾನು ನಿಯಮಗಳನ್ನಾಗಲಿ, ಪ್ರವಾದಿಗಳ ಬೋಧನೆಗಳನ್ನಾಗಲಿ ನಾಶಮಾಡಲು ಬಂದವನೆಂದು ತಿಳಿಯದಿರಿ ; ನಾನು ನಾಶಮಾಡಲು ಬಂದವನಲ್ಲ, ಆದರೆ ಪೂರ್ಣಗೊಳಿಸುವುದಕ್ಕಾಗಿ ಮಾತ್ರ " (ಮತ್ತಾಯ ೫, ೧೭) ಎಂದು ವಿಸ್ಮಯಗೊಂಡ ಶಿಷ್ಯರನ್ನು ಎಚ್ಚರಿಸಿದನು. ಅಂತಹ ಸೂತ್ರಗಳನ್ನು ತನ್ನ ಜೀವಮಾನದಲ್ಲಿ ನಿತ್ಯವೂ ಉಪಕ್ರಮದಲ್ಲಿ ತಂದುಕೊಂಡುದರಿಂದ ಯೇಸುವು ಸದ್ಗುಣಸಂಪನ್ನನೆನಿಸಿದನು.

ಇಲ್ಲಿ ವಿಶಿಷ್ಟವಾದೊಂದು ಘಟನೆಯನ್ನು ವಿವೇಚಿಸಬೇಕಾಗಿದೆ. ಒಂದು ದಿನ ಯೇಸುವಿನಲ್ಲಿ ಅಪರಾಧವನ್ನು ಶೋಧಿಸಲು ಬಂದ ಕೆಲವರು ಯೇಸುವಿನ ಬಳಿಗೆ ವ್ಯಭಿಚಾರಿಣಿಯೊಬ್ಬಳನ್ನು ಎಳೆದು ತಂದರು. ಮಹಾಪ್ರವಾದಿ ಮೋಸೆಯ ನಿಯಮದ ಪ್ರಕಾರ ಅಂತಹ ಸ್ತ್ರೀಯನ್ನು ಕಲ್ಲೆಸದು ಕೊಲ್ಲಬೇಕಾಗಿತ್ತು. ಆದರೆ ಈ ನಿಯಮವು ಕಾಲಕ್ರಮದಲ್ಲಿ ದಾಂಪತ್ಯ ವಿಚ್ಛೇದನದಲ್ಲಿ ಪರಿವರ್ತನೆ ಹೊಂದಿತ್ತು. ಮಾತ್ರವಲ್ಲ, ಕೊಲ್ಲುವ ಅಧಿಕಾರವು ಯೆಹೂದ್ಯರ ನೀತಿ ಸಭೆಯಿಂದ ತೆಗೆಯಲ್ಪಟ್ಟಿತ್ತು. ಯೇಸುವನ್ನು ಪರೀಕ್ಷಿಸಲು ಅವರು " ಈಕೆಯು ವ್ಯಭಿಚಾರಮಾಡಿರುವಳು ;

ಅಂತಹ ಅಪರಾಧಿಗಳನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಸೆಯು ವಿಧಿಸಿರುವನು ; ನೀನೇನು ಹೇಳುವೆ ?" ಎಂದು ಪ್ರಶ್ನಿಸಿದರು.

ಯೇಸುವು ಅವರ ಇಂಗಿತವನ್ನರಿತನು. ಮೋಸೆಯ ನಿಯಮದಂತೆ ಆಚರಿಸಬೇಕೆಂದು ಹೇಳಿದರೆ, ಯೇಸುವು ಕಠೋರಹೃದಯದವನೆಂದೂ ರೋಮಕ ಸರಕಾರದ ನಿಯಮವಿರೋಧಿಯೆಂದೂ ರುಜುವಾಗುವುದು. ಆಕೆಯನ್ನು ಕ್ಷಮಿಸಬೇಕೆಂದು ಹೇಳಿದಾಗ, ಮೋಸೆಯ ನಿಯಮಕ್ಕೆ, ಯೆಹೂದ್ಯ ಧರ್ಮಕ್ಕೆ ವಿರೋಧಿಯೆಂದೂ, ಅನೈತಿಕತೆಗೆ ಪ್ರಚೋದಕನೆಂದೂ ಸ್ಪಷ್ಟವಾಗಿ, ಆತನ ಕೀರ್ತಿಯು ಮಸುಳುವುದೆಂದೂ ಅವರು ಊಹಿಸಿದ್ದರು. ಆದುದರಿಂದ ಯೇಸುವು " ನಿಮ್ಮಲ್ಲಿ ಪಾತಕವಿರದವನು ಮೊದಲನೆಯ ಕಲ್ಲನ್ನೆಸೆಯಲಿ " ಎಂದು ಹೇಳುತ್ತಾ ತಾನು ಕುಳಿತಲ್ಲಿ ನೆಲದಮೇಲೆ ಗೀಚುತ್ತಾ ಇದ್ದನು. ಬಂದ ಜನರು ತಾವೊಬ್ಬೊಬ್ಬರೆ ಅಲ್ಲಿಂದ ಜಾರಿದರು. ಕೊನೆಗೆ ಆ ಸ್ತ್ರೀಯೂ ಯೇಸುವೂ ಮಾತ್ರ ಅಲ್ಲೀ ಉಳಿದರು. ಯೇಸುವು ಆಕೆಯನ್ನುದ್ದೇಶಿಸಿ, " ಸ್ತ್ರೀಯೇ ನಿನ್ನನ್ನಿಲ್ಲಿ ತಂದವರೆಲ್ಲಿ ಹೋದರು ? ಅವರು ನಿನಗೆ ಕಲ್ಲೆಸೆಯಲಿಲ್ಲವೇ ?" ಎಂದು ಕೇಳಿದನು. ಆಕೆಯು ಇದ್ದ ಸ್ಥಿತಿಯನ್ನು ಹೇಳಿದಳು. ಆಗ ಯೇಸುವು ಆಕೆಯನ್ನು ಕ್ಷಮಿಸಿ, ಆಕೆಯು ಇನ್ನು ಮುಂದೆ ಪರಿಶುದ್ಧ ಚಾರಿತ್ರಳಾಗಬೇಕೆಂದು ಹಿತಬೋಧೆಯನ್ನಿತ್ತು ಕಳುಹಿಸಿದನು. ಮುಂದೆ ಆಕೆಯು ಯೇಸುವಿನ ಶಿಷ್ಯಳಾದಳು. ಅದೊಂದು ಸಂದರ್ಭದಲ್ಲಿ ಸುಗಂಧದ್ರವ್ಯಗಳನ್ನು ತಂದು ಆತನ ಪಾದಗಳಿಗೆ ಲೇಪಿಸಿ, ತನ್ನ ಪ್ರತ್ಯುಪಕಾರ ಭಾವನೆಯನ್ನು ವ್ಯಕ್ತಪಡಿಸಿದಳು.

ಯೇಸುವು ಹೀಗೆಯೇ ಪಾತಕಿಗಳ ಹಾಗೂ, ವಿಧರ್ಮಿಯರ ಗೆಳೆತನದಲ್ಲಿದ್ದುದನ್ನು ಕಂಡು ಯಾಜಕವೃಂದದವರೂ ಇತರ ಕರ್ಮಠ ಯೆಹೂದ್ಯರೂ ಸಹಿಸದಾದರು. ಆಗ ಯೇಸುವು " ರೋಗಿಗೆ ವೈದ್ಯನ ಅಗತ್ಯವಿರುವಷ್ಟು ನಿರೋಗಿಗೆ ಇಲ್ಲ " ಎಂದು ಉತ್ತರವಿತ್ತು ಅವರ ಬಾಯಿಬಿಗಿಸಿದನು.

ಯೇಸುವು ಸಾಮಾನ್ಯವಾಗಿ ಬಹಿರಂಗವಾಗಿಯೇ ಬೋಧಿಸುತ್ತಿದ್ದನಾದರೂ ತನ್ನ ಶಿಷ್ಯರಿಗೆ ಪ್ರತ್ಯೇಕವಾದ ಬೋಧನೆಯನ್ನು ನೀಡು

ತ್ತಿದ್ದನು. ತನ್ನ ಜೀವಮಾನದಲ್ಲಿ ಪೂರ್ಣಗೊಳ್ಳಲಾಗದ ವಿಷಯಗಳನ್ನು ಮರಣೋತ್ತರದಲ್ಲಿ, ಪುನರುತ್ಥಾನದ ಬಳಿಕ ಪೂರ್ತಿಗೊಳಿಸಿದನು. ಅದುವೆ ಆತನ ಧರ್ಮಸಾಮ್ರಾಜ್ಯವು. ಆತನಲ್ಲಿ ವಿಶ್ವಾಸವನ್ನು ಪಡೆದವರು ಆ ಸಾಮ್ರಾಜ್ಯದ ಪ್ರಜೆಗಳು. ಅದು ಆಧ್ಯಾತ್ಮಿಕ ಸಾಮ್ರಾಜ್ಯವು–ಅದುವೆ ಕ್ರೈಸ್ತಮತವು.

೬ ಕ್ರೈಸ್ತಮತ

ಕ್ರಿಸ್ತನ ಮತದ ಹಿರಿಮೆ

ಯೇಸುವು ಅದೊಮ್ಮೆ ಮಹತ್ವದ ವಿಷಯವೊಂದನ್ನು ಬಹಿರಂಗಗೊಳಿಸಿದನು. ಜನಸಾಮಾನ್ಯರಿಗೆ ಅದರ ಅರ್ಥವಾಗದೆ ಹೋದುದರಿಂದ ಅವರು ತಮ್ಮೊಳಗೆ ಗೊಣಗಾಡತೊಡಗಿದರು. ಅದನ್ನರಿತು ಆತನು ಇನ್ನೂ ಆಳವಾದ ತತ್ವಗಳನ್ನು ವಿಶದಗೊಳಿಸಿದನು. ಆದರೆ ಯಥಾರ್ಥದಲ್ಲಿ ವಿಶ್ವಾಸವಿಲ್ಲದ ಅನೇಕರು ಯೇಸುವನ್ನು ಅಗಲಿಹೋದರು. ಕೊನೆಗೆ ಆತನ ದ್ವಾದಶ ಶಿಷ್ಯರು ಮಾತ್ರವೆ ಅಲ್ಲಿದ್ದರು. ಅವರನ್ನುದ್ದೇಶಿಸಿ "ನೀವೂ ಹೋಗುತ್ತೀರಾ?" ಎಂದು ಯೇಸುವು ಪ್ರಶ್ನಿಸಿದನು. ಸೀಮೋನ ಪೇತ್ರನು ಉತ್ತರಕೊಡುತ್ತ,

"ಸ್ವಾಮಿಯೇ, ಯಾರಲ್ಲಿಗೆ ನಾವುಗಳು ಹೋಗುವುದು? ನಿಮ್ಮಲ್ಲಿ ಅನಂತ ಜೀವದ ಮಾತುಗಳಿವೆ. ನೀವು ಭಗವತ್ ಪುತ್ರ ಕ್ರಿಸ್ತರೆಂದು ನಾವು ತಿಳಿಯುತ್ತೇವೆ ಮತ್ತು ನಂಬುತ್ತೇವೆ" (ಯೋಹಾನ ೬, ೬೯-೭೦)

ಎಂದನು. ಪೇತ್ರನ ಮಾತುಗಳು ಯಥಾರ್ಥವಾದುವುಗಳು. ಆ ಯೇಸುವು ಆತನೆಡೆಗೆ ಬಂದ ಪ್ರತಿಯೊಬ್ಬನಿಗೂ ಯುಕ್ತವಾದುದನ್ನು ನೀಡಬೇಕಾಗಿದೆ. ಏಕೆಂದರೆ,

"ನಾನು ಆ ಮಾರ್ಗವೂ ಆ ಸತ್ಯವೂ ಆ ಜೀವವೂ ಆಗಿರುವೆನು. ನನ್ನಿಂದ ಹೊರತು ಪಿತನೆಡೆಗೆ ಅದಾರೂ ಬರಲಾರರು" (ಯೋಹಾನ ೧೪, ೬)

ಎಂದು ಆತನೇ ಹೇಳಿರುವನು. ಮಾತ್ರವಲ್ಲ ತನ್ನ ತತ್ವಗಳ ಹಿರಿಮೆಯನ್ನು ತಿಳಿಸುತ್ತ,

"ಜನರೆದುರಲ್ಲಿ ಅದಾವನು ನನ್ನನ್ನು ಒಪ್ಪಿಕೊಳ್ಳುತ್ತಾನೋ ಆತನನ್ನು ಮೋಕ್ಷಲೋಕದಲ್ಲಿರುವ ನನ್ನ ಪಿತನೆದುರಲ್ಲಿ ಒಪ್ಪಿಕೊಳ್ಳುವೆನು; ಅದಾವನು ನನ್ನನ್ನು ಜನರೆದುರಲ್ಲಿ ನಿರಾಕರಿಸುತ್ತಾನೋ

ಆತನನ್ನು ಮೋಕ್ಷಲೋಕದ ನನ್ನ ಪಿತನೆದುರಲ್ಲಿ ನಾನೂ ನಿರಾಕರಿಸುವೆನು" (ಮತ್ತೀಯ ೧೦, ೩೨-೩೩)

ಎಂದು ಆತನು ವಿಶದಗೊಳಿಸಿರುವನು. ಅಹುದು ಅಷ್ಟು ಮಹತ್ವದ ಆತನ ತತ್ವಗಳನ್ನು ಉಪಕ್ರಮದಲ್ಲಿ ತರುವುದು ಸುಲಭಸಾಧ್ಯವಾದ ಕಾರ್ಯವಲ್ಲ. ಇದನ್ನು ಸೂಚಿಸುವುದಕ್ಕಾಗಿಯೇ ಆತನು,

"ನಾನು ಜಗತ್ತಿನಲ್ಲಿ ಶಾಂತಿಯನ್ನು ಬರಿಸಲು ಬಂದವನೆಂದು ತಿಳಿಯದಿರಿ; ನಾನು ಶಾಂತಿಯನ್ನು ನೀಡಲು ಬಂದವನಲ್ಲ- ಕತ್ತಿಯನ್ನು. ಏಕೆಂದರೆ ಮನುಷ್ಯನನ್ನು ತನ್ನ ಪಿತನ ವಿರೋಧವಾಗಿ, ಸೊಸೆಯನ್ನು ಅತ್ತೆಯ ವಿರೋಧವಾಗಿ, ಮಗಳನ್ನು ತನ್ನ ತಾಯಿಯ ವಿರೋಧವಾಗಿ ಮಾಡುವುದಕ್ಕಾಗಿಯೇ ಬಂದಿರುವೆನು" (ಮತ್ತೀಯ ೧೦, ೩೪-೩೫)

ಎಂದಿರುವನು. ಅಂದರೆ ಆತನ ತತ್ವಗಳ ಅನುಸರಣೆಯು ಮಹಾ ತ್ಯಾಗವನ್ನು ಬಯಸುವುದು. ಆ ತ್ಯಾಗವನ್ನು ಮಾಡುವಷ್ಟು ಧೀರತನವು ವ್ಯಕ್ತಿಯಲ್ಲಿಲ್ಲದೆ ಹೋದರೆ ಆತನು ಬಂಧುಗಳ, ಸಮಾಜದ, ತನ್ನ ಸ್ವಂತ ಮನೋಭಾವವನ್ನೂ ದಾಕ್ಷಿಣ್ಯವನ್ನೂ ಕಡೆಗಣಿಸಿ ಯೇಸುವಿನ, ಚಿರಂತನ ಸತ್ಯವೇ ಆದವನ ತತ್ವಗಳನ್ನು ಉಪಕ್ರಮದಲ್ಲಿ ತರಲಾರನು. ಆದುದರಿಂದಲೇ

"ಅದಾವನು ತನ್ನ ಪಿತ ಅಥವಾ ಮಾತೆಯನ್ನು ನನಗಿಂತಲೂ ಅಧಿಕವಾಗಿ ಪ್ರೀತಿಸುತ್ತಾನೋ ಅವನು ನನಗೆ ಯೋಗ್ಯನಲ್ಲ; ಮತ್ತು ಅದಾವನು ತನ್ನ ಪುತ್ರ ಅಥವಾ ಪುತ್ರಿಯನ್ನು ನನಗಿಂತಲೂ ಮಿಗಿಲಾಗಿ ಪ್ರೀತಿಸುತ್ತಾನೋ ಅವನೂ ನನಗೆ ಯೋಗ್ಯನಲ್ಲ" (ಮತ್ತೀಯ ೧೦, ೩೭)

ಎಂದು ಆತನು ಸ್ಪಷ್ಟಗೊಳಿಸಿರುವನು. ಆದುದರಿಂದ ಆತನ ಸೇವೆ ಮಾಡಲು, ಆತನು ಸೂಚಿಸಿದ ಸಂದೇಶವನ್ನು ಯಥಾರ್ಥದಲ್ಲಿ ಸ್ವೀಕರಿಸಿ, ಅನುವರ್ತಿಸಲು ಮಹಾತ್ಯಾಗವು ಅಗತ್ಯ. ಸತ್ಯಕ್ಕಾಗಿ ತ್ಯಾಗವು ಅಗತ್ಯವಾಗಿದೆ, ಅಸತ್ಯಕ್ಕಾಗಿ ಅಲ್ಲ.

ಯೇಸುವು ತನ್ನ ಮರಣದ ಮೊದಲೊಮ್ಮೆ ತನ್ನ ಸಂದೇಶವನ್ನು ಪ್ರಚಾರಮಾಡಲು ತನ್ನ ಎಪ್ಪತ್ತೆರಡು ಶಿಷ್ಯರನ್ನಾರಿಸಿ, ಎಲ್ಲೆಡೆಗೇಗೂ ಅವನು ಇಬ್ಬಿಬ್ಬರಂತೆ ಕಳುಹಿಸಿದನು. ಆ ಸಂದರ್ಭದಲ್ಲಿ,

"ನಿಮ್ಮನ್ನು ಆಲಿಸುವವನು ನನ್ನನ್ನಾಲಿಸುತ್ತಾನೆ; ನಿಮ್ಮನ್ನು ಅಲಕ್ಷಿಸುವವನು ನನ್ನನ್ನು ಅಲಕ್ಷಿಸುತ್ತಾನೆ; ನನ್ನನ್ನು ಅಲಕ್ಷಿಸುವವನು ನನ್ನನ್ನು ಕಳುಹಿಸಿದಾತನನ್ನು ಅಲಕ್ಷಿಸುತ್ತಾನೆ" (ಲೂಕ ೧೦, ೧೬) ಎಂದು ಹೇಳುತ್ತಾ ತನ್ನ ಸಂದೇಶದ ಉತ್ಕೃಷ್ಟತೆಯನ್ನು ಪ್ರತಿಪಾದಿಸಿದನು. ಯೇಸುವನ್ನು ಕಳುಹಿಸಿದಾತನು ಭಗವತ್ ಪಿತನೇ ಆಗಿರುವುದರಿಂದ ಆತನ ತತ್ವಗಳು ಭಗವಂತನೆಡೆಗೊಯ್ಯುವ ಮಾರ್ಗವೂ, ಪ್ರಕಾಶವೂ ಆಗಬೇಕಾಗಿವೆ. ಮಾತ್ರವಲ್ಲ ತನ್ನ ಪುನರುತ್ಥಾನದ ಬಳಿಕ ತನ್ನ ಶಿಷ್ಯರನ್ನು ಜಗತ್ತಿಗೆ ಕಳುಹಿಸುವಾಗ,

"ಅಖಿಲ ಜಗತ್ತಿಗೆ ನೀವು ಹೋಗಿರಿ, ಪ್ರತಿ ಜೀವಿಗೂ ಸಂದೇಶವನ್ನು ಬೋಧಿಸಿರಿ. ವಿಶ್ವಾಸಗೊಂಡು ಜ್ಞಾನಸ್ನಾನವನ್ನು ಪಡೆಯುವವನು ರಕ್ಷಿಸಲ್ಪಡುವನು, ವಿಶ್ವಾಸ ಹೊಂದದವನು ದಂಡಿಸಲ್ಪಡುವನು" (ಮಾರ್ಕ ೧೬, ೧೫-೧೬)

ಎಂದು ಹೇಳಿದನು. ಹೀಗೆ ಯೇಸುವಿನ ಸತ್ಯ ಮಾರ್ಗದಲ್ಲಿ ಸರ್ವ ಸಂಪೂರ್ಣ ವಿಶ್ವಾಸವನ್ನು ಪಡೆದ ಆತನ ಶಿಷ್ಯರು ಆ ಬೋಧೆಯನ್ನು ತಿರಸ್ಕರಿಸುವವರನ್ನೂ ವ್ಯತ್ಯಾಸಗೊಳಿಸುವವರನ್ನೂ ಸಹಿಸಲಿಲ್ಲ. ಈ ವಿಷಯವನ್ನು ಕುರಿತು ಪಾವ್ಲನು ಇನ್ನೂ ವಿಶದಗೊಳಿಸುತ್ತ,

"ನಾವು ಬೋಧಿಸಿದ ಸಂದೇಶದ ಬದಲು ಇನ್ನೊಂದೇ ಸಂದೇಶವನ್ನು ನಾವಾಗಲಿ, ಸ್ವರ್ಗಲೋಕದಿಂದ ಬಂದ ಸಮನಸನೇ ಆಗಲಿ ಬೋಧಿಸುವುದಾದರೆ ಅಂತಹವನು ಧಿಕ್ಕರಿಸಲ್ಪಟ್ಟವನು. ಏಕೆಂದರೆ, ಸಹೋದರರೇ, ನಾನು ಬೋಧಿಸಿದ ಸಂದೇಶವು ಮಾನವಿಕವಾದುದಲ್ಲವೆಂಬುದನ್ನು ನಿಮಗೆ ತಿಳಿಸಲಿಚ್ಛಿಸುತ್ತೇನೆ. ಯೇಸುಕ್ರಿಸ್ತನ ಪ್ರಕಾಶನದ ಹೊರತು ನಾನು ಅದನ್ನು ತಿಳಿದುಕೊಂಡುದಲ್ಲ, ಮಾತ್ರವಲ್ಲ ಯಾವ ಮನುಷ್ಯನಿಂದಲೂ ಪಡೆದುದಲ್ಲ" (ಗಾಲಾ ೧, ೮, ೨)

ಎಂದೂ, ತನ್ನ ಮೆಚ್ಚಿನ ಶಿಷ್ಯ ತಿಮೊತಿಗೆ ಕಳುಹಿಸಿದ ದ್ವಿತೀಯ ನಿರೂಪದಲ್ಲಿ,

"ನನ್ನಿಂದ ನೀನು ಕೇಳಿದ ಆ ಹಿತನುಡಿಗಳ ರೂಪವನ್ನು ವಿಶ್ವಾಸದಿಂದಲೂ, ಕ್ರಿಸ್ತನಾದ ಯೇಸುವಿನ ಪ್ರೇಮದಿಂದಲೂ ರಕ್ಷಿಸು. ನಮ್ಮಲ್ಲಿ

ಜೀವಿಸುವ ಆ ಪವಿತ್ರಾತ್ಮನ ಶಕ್ತಿಯಿಂದ ನಿನ್ನಲ್ಲಿ ಮುಡಿಪಾಗಿರಿಸಿದ ಆ ಶ್ರೇಷ್ಠ ವಿಷಯವನ್ನು ಉಳಿಸು" (೨ ತಿಮೊತಿ ೧, ೧೩-೧೪)
ಎಂದೂ ಹೇಳಿರುವನು.

ಶ್ರೀಸಭೆ

ಯೇಸುಕ್ರಿಸ್ತನ ಸಂದೇಶವನ್ನು ತಮ್ಮ ಜೀವನದಲ್ಲಿ ಅನುವರ್ತಿಸಿ ಕೊಳ್ಳುವವರೇ ಯೇಸುವು ಸಂಸ್ಥಾಪಿಸಿದ ಧರ್ಮಸಾಮ್ರಾಜ್ಯವೆಂದು ನಾವು ತಿಳಿದಿರುವೆವು. ಈ ಧರ್ಮಸಾಮ್ರಾಜ್ಯವೇ ಕ್ರೈಸ್ತರು ಶ್ರೀಸಭೆ (The Church) ಯೆಂಬ ಹೆಸರಿನಿಂದ ಸಂಬೋಧಿಸುವ ಧರ್ಮ ಸಂಸ್ಥೆಯು. ಯೇಸುವು ಪುನರುತ್ಥಾನಗೊಂಡ ಬಳಿಕ ತನ್ನ ಶಿಷ್ಯರನ್ನು ಸಂದರ್ಶಿಸಿ,

"ಮೋಕ್ಷದಲ್ಲಿಯೂ ಭೂಲೋಕದಲ್ಲಿಯೂ ಸರ್ವಾಧಿಕಾರವೂ ನನಗೆ ಕೊಡಲಾಗಿದೆ. ಆದುದರಿಂದ ನೀವು ಹೋಗಿ ಸರ್ವ ಜನಾಂಗಗಳಿಗೂ ಪಿತನ, ಪುತ್ರನ, ಪವಿತ್ರಾತ್ಮನ ಹೆಸರಲ್ಲಿ ಜ್ಞಾನಸ್ನಾನವನ್ನು ನೀಡಿ ಬೋಧಿಸಿರಿ, ನಾನು ನಿಮಗೆ ಆಜ್ಞಾಪಿಸಿದುದನ್ನೆಲ್ಲವನ್ನು ಅನುಸರಿಸಲು ಅವರಿಗೆ ಕಲಿಸಿರಿ, ನಾನು ಎಲ್ಲ ದಿನಗಳಲ್ಲಿಯೂ ಜಗದಂತ್ಯದವರೆಗೂ ಇದೋ ನಿಮ್ಮೊಡನಿರುವೆನು" (ಮತ್ತೇಯ ೨೮, ೧೮-೨೦)
ಎಂಬ ಆದೇಶವನ್ನು ಕೊಟ್ಟನು. ಆದುದರಿಂದ ಕ್ರಿಸ್ತನ ಸಂದೇಶವು ಅದಾವ ವ್ಯತ್ಯಾಸಗಳೂ ಉಂಟಾಗದೆ ಕೊನೆಯವರೆಗೂ ಉಳಿಯಬೇಕು. ಆ ಕಾರ್ಯವನ್ನು ಶ್ರೀಸಭೆಯು ಮಾಡುತ್ತದೆ.

ಶ್ರೀಸಭೆಯು ದೃಗೋಚರ ಸಂಸ್ಥೆಯು. ಭಗವತ್-ಪುರುಷನಿಂದ ಯುಕ್ತಾಧಿಕಾರವನ್ನು ಪಡೆದ ಶಿಕ್ಷಣ ಸಂಸ್ಥೆಯು. ಆ ಸಂಸ್ಥೆಯು ತನ್ನ ಅಧಿಕಾರದೊಳಗಿನ ವಿಷಯಗಳನ್ನು ಮಾತ್ರವೇ ಬೋಧಿಸಲು ಪ್ರತ್ಯೇಕಿಸಲ್ಪಟ್ಟಿದೆ ಎಂದು

"ನಾನು ನಿಮಗೆ ಆಜ್ಞಾಪಿಸಿದುದನ್ನೆಲ್ಲವನ್ನೂ ಅನುಸರಿಲು ಅವರಿಗೆ ಕಲಿಸಿರಿ" (ಮತ್ತೇಯ ೨೮, ೨೦)
ಎಂದೇ ಹೇಳಿದೆ ಮಾತ್ರವಲ್ಲ, ಆ ಸಂಸ್ಥೆಯೂ ಭದ್ರವಾದ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ.

"ನೀನು ಬಂಡೆಗಲ್ಲಾಗಿರುವೆ, ಈ ಬಂಡೆಗಲ್ಲಿನ ಮೇಲೆ ನನ್ನ ಶ್ರೀಸಭೆಯನ್ನು ನಾನು ರಚಿಸುವೆನು" (ಮತ್ತಾಯ ೧೬, ೧೮)
ಎಂದೂ ಯೇಸುವು ಪ್ರಥಮ ಜಗದ್ಗುರು ಪೇತ್ರನನ್ನು ಉದ್ದೇಶಿಸಿ ಹೇಳಿರುವುದೂ ವಿವೇಚಿಸತಕ್ಕ ವಿಷಯವಾಗಿದೆ.

ಸಮಸ್ತ ಕ್ರೈಸ್ತರಿಗೆ ಕ್ರಿಸ್ತನೊಬ್ಬನೇ ನಾಯಕನು. ಆತನು ಸಂಸ್ಥಾಪಿಸಿದ ಧರ್ಮಸಂಸ್ಥೆಯಾದ ಶ್ರೀಸಭೆಯು ಆತನ ದೇಹವೆಂದು ಪಾವ್ಲನು ಹೇಳಿರುವನು. ಅದರ ಮಸ್ತಕವಾದ ಯೇಸುವು ದೈವಿಕ ಪುರುಷನೂ, ಮಾನವ ವ್ಯಕ್ತಿಯೂ ಆಗಿರುವನು. ಆತನು ದೈವಿಕವಾಗಿರುವುದರಿಂದ ಆ ಸಂಸ್ಥೆಯೂ ದೈವಿಕಸಂಸ್ಥೆಯಾಯಿತು. ಮಾತ್ರವಲ್ಲ ಭಗವತ್ ಪವಿತ್ರಾತ್ಮನೇ ಆ ಸಂಸ್ಥೆಯ ಆಧಾರವಾಗಿರುವನು. ಆದುದರಿಂದಲೇ ಶ್ರೀಸಭೆಯು ದೈವಿಕಸಂಸ್ಥೆಯೊಂದಾಗಿರುವುದು. ಯೇಸುಕ್ರಿಸ್ತನು ಮಾನುಷಿಕ ವ್ಯಕ್ತಿಯೂ ಅಹುದು. ಅಲ್ಲದೆ ಆ ಸಂಸ್ಥೆಯ ಶ್ರೀಸಭೆಯ ಅವಯುವಗಳಾದ ಕ್ರೈಸ್ತರು ಶುದ್ಧಮಾನವರು. ಆದುದರಿಂದ ಆ ಸಂಸ್ಥೆಯೂ ಮಾನುಷಿಕ ಸಂಸ್ಥೆಯಾಗಿದೆ. ದೈವಿಕಶಕ್ತಿಯ ಸಮರ್ಥವಾದ ಅಸ್ತಿತ್ವದೊಡನೆ ಮಾನುಷಿಕ ದುರ್ಬಲತೆಯೂ ಕೂಡಿಕೊಂಡು ವಿಶಿಷ್ಟ ಗುಣಶಕ್ತಿಗಳ ಸಂಯೋಗವು ಶ್ರೀಸಭೆಯಲ್ಲಿದೆ. ಈ ಶ್ರೀಸಭೆಯು ಭಗವಂತನ ಹಾಗೂ ಭಗವತ್ ಪುತ್ರನ ಪರಿಚಯವನ್ನು ನಮಗೀಯುವುದು. ಅದರ ಮೂಲಕ ನಮ್ಮ ಅಪರಾಧಗಳು ಕ್ಷಮಿಸಲ್ಪಡುವುವು. ನಮ್ಮ ದುರ್ಬಲತೆಗಳನ್ನು ನೀಗಿ ಯುಕ್ತ ಶಕ್ತಿಶ್ರೀಯು ನಮಗೆ ಒದಗಿಸಲ್ಪಡುವುವು. ತಮೋಂಧಕಾರವು ಜ್ಞಾನಪ್ರಕಾರದಲ್ಲಿ, ಸತ್ಯಪ್ರಕಾರದಲ್ಲಿ ಪರಿವರ್ತನೆ ಹೊಂದುವುದು—ಆಧ್ಯಾತ್ಮಿಕವಾಗಿ ಸತ್ತವರು ಜೀವಂತವ್ಯಕ್ತಿಗಳಾಗುವರು. ಒಂದೇ ಮಾತಿನಲ್ಲಿ ಹೇಳುವುದಾದರೆ ಯೇಸುವು ಯಾವ ಕಾರ್ಯಕ್ಕಾಗಿ ಇಹಕ್ಕೆ ಬಂದನೋ ಆ ಕಾರ್ಯವು ಸರಿಯಾದ ರೀತಿಯಲ್ಲಿ ಮುಂದುವರಿಸಲ್ಪಡುವುದು. ಮಾನವವ್ಯಕ್ತಿಗೆ ಅಗತ್ಯವಾದ ಜೀವವು ಅದೂ ಸಮೃದ್ಧಿಯಾಗಿ ಬರುವುದು.

ಈ ಶ್ರೀಸಭೆಯು ಭಗವಾನ್ ಯೇಸುವಿನ ಪವಿತ್ರ ನಾಮದಲ್ಲಿ ಆತನ ಸಂದೇಶವನ್ನು ವಿಶದಗೊಳಿಸುವುದು. ಅದುವೆ ಆತನ ಸಂರಕ್ಷಣಾದಾಯಕ

ಮರಣದ ಮಹತ್ವಪೂರ್ಣವಾದ ವರಪ್ರಸಾದಗಳ ಕೋಶಾಧಿಕಾರಿಯು ಮಾತ್ರವಲ್ಲ ವಿತರಣಾಧಿಕಾರಿಯು. ಆದುದರಿಂದ ಶ್ರೀಸಭೆಯು ಕ್ರಿಸ್ತನ ಕಾರ್ಯದ ಫಲವಾಗಿದೆ.

ಶ್ರೀಸಭೆಯು ಯೇಸುವಿನ ತತ್ವಗಳನ್ನು ಆತನ ಪವಿತ್ರ ನಾಮದಲ್ಲಿ ಜಗತ್ತಿನ ಎಲ್ಲೆಡೆಗಳಿಗೂ ಬಿತ್ತರಿಸಿತು. ಅದರ ಭೋಧನೆಯನ್ನು ಎಲ್ಲರೂ ಗಮನಿಸಬೇಕಾಗಿದೆ. ಮಾತ್ರವಲ್ಲ ಪರಿಪೂರ್ಣವಾಗಿ ಸ್ವೀಕರಿಸಿ ಕೊಂಡು ಆಚರಣೆಯಲ್ಲಿ ತರಬೇಕಾಗಿದೆ. ಇದನ್ನು ಸೂಚಿಸುತ್ತ ಯೋಹಾನನು,

"ನಾವು ಭಗವಂತನಿಗೆ ಸಂಬಂಧಿಸಿದವರು. ಭಗವಂತನನ್ನು ಆಲಿಸುವವನು ನಮ್ಮನ್ನಾಲಿಸುತ್ತಾನೆ; ಭಗವಂತನಿಗಲ್ಲದವರು ನಮ್ಮನ್ನಾಲಿಸಲಾರನು" (I ಯೋಹಾನ ೪-೬)

ಎಂದು ಹೇಳಿರುವನು. ಮಾತ್ರವಲ್ಲ ಪರಿಪೂರ್ಣವಾಗಿ ಅನುಸರಿಸಬೇಕೆಂದು.

"ಯಾವನಾದರೊಬ್ಬನು ಧರ್ಮನಿಯಮಗಳೆಲ್ಲವನ್ನು ಪಾಲಿಸುತ್ತ, ಕೇವಲ ಒಂದನ್ನು ಬಿಟ್ಟುಕೊಂಡರೆ ಅವನು ಎಲ್ಲ ವಿಷಯಗಳಲ್ಲಿಯೂ ಅಪರಾಧಿಯಾಗುವನು" (ಯಾಕೋಬ ೨, ೧೦)

"ವಿಶ್ವಾಸಹೊಂದಿ ಜ್ಞಾನಸ್ನಾನವನ್ನು ಸ್ವೀಕರಿಸುವವನು ರಕ್ಷಿಸಲ್ಪಡುವನು; ವಿಶ್ವಾಸ ಹೊಂದದವನು ದಂಡಿಸಲ್ಪಡುವನು" (ಮಾರ್ಕ ೧೬, ೧೬)

ಎಂದು ಹೇಳಿರುವುದನ್ನೂ ನಾವು ಲಕ್ಷ್ಯಕ್ಕೆ ತರಬೇಕು. ಏಕೆಂದರೆ

"ನಿಮಗೆಲ್ಲರಿಗೂ ಭಗವಂತನೊಬ್ಬನೇ. ವಿಶ್ವಾಸವೂ ಒಂದೇ ಜ್ಞಾನಸ್ನಾನವೂ ಒಂದೇ. ಎಲ್ಲರಿಗೂ ತಂದೆಯಾಗಿರುವ ಭಗವಂತನೂ ಒಬ್ಬನೇ. ನಿಮ್ಮೆಲ್ಲರ ಮೇಲಿರುವವನೂ ನಿಮ್ಮೆಲ್ಲರ ಮೂಲಕ ಕಾರ್ಯವೆಸಗುವವನೂ ನಿಮ್ಮೆಲ್ಲರಲ್ಲಿ ಜೀವಿಸುವವನೂ ಅವನಾಗಿದ್ದಾನೆ" (ಎಫೆಸೆ ೧೪, ೫-೬)

ಎಂದು ಪಾವ್ಲನು ಸ್ಪಷ್ಟಪಡಿಸಿರುವನು.

ಮಾಧ್ಯಸ್ಥ—ಸಹಾಯಕ

ಕ್ರಿಸ್ತನು ಪೇತ್ರನೆಂಬ ಭದ್ರವಾದ ಬಂಡೆಗಲ್ಲಿನ ಮೇಲೆ ವಿರಚಿಸಿದ ಶ್ರೀಸಭೆಯ ಕುರಿತು ವಿವೇಚಿಸುವಾಗ ಅದನ್ನೊಂದು ದೇಹಕ್ಕೆ ಹೋಲಿಸಿಕೊಂಡು ಕ್ರಿಸ್ತನೇ ಅದರ ಮಸ್ತಕವೆಂದೂ,ಕ್ರೈಸ್ತರೆಲ್ಲರೂ ಅದರ ಅವಯವಗಳೆಂದೂ ಹೇಳುವಾಗಲೇ ಭಗವಾನ್ ಪವಿತ್ರಾತ್ಮನೇ ಅದರ ಆತ್ಮ (Soul)ವೆಂದು ನೋಡಿದೆವು. ಯೇಸುವು ತನ್ನ ಪುನರುತ್ಥಾನದ ಮೊದಲು ಅನೇಕ ಸಲ ಆಶ್ವಾಸಿಸಿದಂತೆ ಅನಂತರವೂ ಅವರು ತನ್ನ ಸತ್ಯದ ಸಂದೇಶವನ್ನು ಎಲ್ಲೆಡೆಗಳಲ್ಲಿಯೂ ಬಿತ್ತರಿಸುವಾಗ ವಿಪರೀತಾರ್ಥವಾಗದಂತೆ, ದೋಷಯುಕ್ತಬೋಧನೆಯನ್ನೀಯದಂತೆ ರಕ್ಷಿಸುವ ಸಹಾಯಕನನ್ನೊಬ್ಬನನ್ನು ಕರುಣಿಸುವ ಆಶ್ವಾಸನೆಯನ್ನಿತ್ತನು.

"ನಾನು ನನ್ನ ಪಿತನಲ್ಲಿ ಕೇಳಿಕೊಂಡರೆ, ಅತನು ನಿಮ್ಮಲ್ಲಿ ಸರ್ವದಾ ಒಡಗೂಡಿಕೊಳ್ಳುವಂತಹ ಇನ್ನೊಬ್ಬ ಮಧ್ಯಸ್ಥ (Paraclked)ನನ್ನು ಕಳುಹಿಸುವನು...ನನ್ನ ಹೆಸರಲ್ಲಿ ಪಿತನು ಕಳುಹಿಸುವ ಮಧ್ಯಸ್ಥನಾದ ಆ ಪವಿತ್ರಾತ್ಮನು ನಾನು ನಿಮಗೆ ಹೇಳಿರುವುದನ್ನೆಲ್ಲವನ್ನೂ ನಿಮಗೆ ಕಲಿಸುವನಲ್ಲದೆ ಎಲ್ಲ ವಿಷಯುಗಳನ್ನು ನಿಮ್ಮ ಅವಗಾಹನೆಗೆ ತರುವನು" (ಯೋಹಾನ ೧೪, ೧೬, ೨೬)

"ಆದುದರಿಂದ ನೀವು ಹೋಗಿ ಸರ್ವಜನಾಂಗಗಳಿಗೂ....ಬೋಧಿಸಿರಿ;.......ನಾನು ಎಲ್ಲ ದಿನಗಳಲ್ಲಿಯೂ ಜಗದಂತ್ಯದವರೆಗೂ ಇದೋ ನಿಮ್ಮೊಡನಿರುವೆನು" (ಮತ್ತೇಯ ೨೮,೧೦,೨೦)

ಆದುದರಿಂದಲೇ ಆತನ ತತ್ವಗಳು ಸಂಸ್ಥಾಪನೆಯ ಅಂದರೆ ಆತನ ಜೀವಮಾನಕಾಲದಲ್ಲಿದ್ದಂತೆ ಇಂದಿಗೂ ಉಳಿದಿವೆ. ಈ ಹತ್ತೊಂಬತ್ತು ನೂರು ವರ್ಷಗಳು ಕಳೆದುವು, ವೈಜ್ಞಾನಿಕ ಶೋಧನೆಗಳಿಂದಾಗಿ ಭೂಲೋಕದ ರೂಪವೇ ವ್ಯತ್ಯಾಸಗೊಂಡಿದೆ. ಆದರೆ ಯೇಸುವಿನ ತತ್ವಗಳು ಅಚ್ಚಳಿಯದೆ ಉಳಿದಿವೆ. ಯೇಸುವೆಂದ "ಆಕಾಶವೂ ಭೂಲೋಕವೂ ತೀರಿಹೋಗಬಹುದು, ಆದರೆ ನನ್ನ ನುಡಿಗಳು ತೀರಿಹೋಗವು" (ಲೂಕ ೨೨,೩೩) ಎಂಬ ಮಾತು ಬಿದ್ದುಹೋಗಲಿಲ್ಲ. ಯೇಸು ತಾನೇ ಆಶ್ವಾಸನೆ

ಯನ್ನಿತ್ತ ಪ್ರಕಾರ ಆತನು ಶ್ರೀಸಭೆಯಲ್ಲಿ ಅದರ ಮಸ್ತಕವಾಗಿರುವುದೂ, ಭಗವತ್-ಪವಿತ್ರಾತ್ಮನು ಅದರ ಆತ್ಮವಾಗಿರುವುದೂ ಕಾರಣವಾಗಿವೆ.

"ಪಿತನಲ್ಲಿಂದ ನಾನು ಕಳುಹಿಸುವ, ಪಿತನಿಂದ ಬರುವ ಆ ಪವಿತ್ರಾತ್ಮನು, ಮಧ್ಯಸ್ಥನು ಬಂದಾಗ ನನ್ನ ಸಂಬಂಧವಾಗಿ ಸಾಕ್ಷ್ಯವನ್ನು ಕೊಡುವನು" (ಯೋಹಾನ ೧೫, ೨೬)

ಹೀಗಾಗಿ ಅಂದು ಯೇಸುವೇ ಪ್ರತ್ಯಕ್ಷವಾಗಿ ಬೋಧಿಸಿದ ತತ್ವಗಳು ಯಾವ ಬಗೆಯಲ್ಲಿಯೂ ವ್ಯತ್ಯಾಸಗೊಳ್ಳಲಿಲ್ಲ. ಶ್ರೀಸಭೆಯು ಆ ವಿಚಾರದಲ್ಲಿ ವಹಿಸುವಷ್ಟು ಎಚ್ಚರವನ್ನು ಬೇರಾವ ವಿಷಯದಲ್ಲೂ ವಹಿಸುವುದಿಲ್ಲ. ಪಾವ್ಲನು ತನ್ನ ಶಿಷ್ಯ ತಿಮೊತಿಗೆ ಕಳುಹಿಸಿದ ನಿರೂಪಗಳಲ್ಲಿ,

"ನೀನು ನನ್ನಿಂದ ಕೇಳಿದುದನ್ನು ಇತರರಿಗೆ ಬೋಧಿಸಲು ಯೋಗ್ಯರೂ ವಿಶ್ವಾಸಪಾತ್ರರೂ ಆದವರನ್ನು ನಿಯಾಮಿಸು ...ನನ್ನ ಹಸ್ತಮುಂಡನದಿಂದ ನಿನ್ನಲ್ಲಿರುವ ಭಗವಂತನ ಕೃಪಾವರವನ್ನು ಹುರಿದುಂಬಿಸಬೇಕೆಂದು ನಿನಗೆ ಉಪದೇಶಿಸುತ್ತೇನೆ" (೨ ತಿಮೋತಿ ೨,೨; ೧,೬) ಎಂದೂ,

"ಯಾವ ಮನುಷ್ಯನ ಮೇಲೆಯೂ ಲಘುವಾಗಿ ಹಸ್ತಗಳನ್ನು ಮುಂಡಿಸದಿರು" (೧ ತಿಮೋತಿ ೫,೨೨) ಎಂಗೂ,

"ಪೌರೋಹಿತ್ಯದ ಹಸ್ತಗಳ ಮುಂಡನದಿಂದ, ಕಾಲಜ್ಞಾನವು ನಿನಗಿತ್ತ, ನಿನ್ನಲ್ಲಿರುವಂತಹ ಕೃಪಾವರವನ್ನು ಅಲಕ್ಷಿಸದಿರು" (೧ ತಿಮೋತಿ ೪,೧೪) ಎಂದೂ ಹೇಳಿರುವನು. ಈ ಹಸ್ತಮುಂಡನವು ಒಂದು ವಿಶಿಷ್ಟ ಕಾರ್ಯವಾಗಿದ್ದು ವಿಶೇಷ ಆಧ್ಯಾತ್ಮಿಕ ಶಕ್ತಿಯನ್ನು ವ್ಯಕ್ತಿಗೆ ನೀಡಬೇಕು. ಈ ಹಸ್ತಮುಂಡನವೆಂಬ ಕ್ರಿಯೆಯಿಂದ ವ್ಯಕ್ತಿಯು ತನ್ನ ಪದವಿಗೆ ಸಂಬಂಧಿಸಿದ ಸಕಲ ಕಾರ್ಯಗಳನ್ನು ನೆರವೇರಿಸಲು ಯುಕ್ತಸಾಮರ್ಥ್ಯವನ್ನು ಪಡೆಯುವನು. ಕ್ರೈಸ್ತ ಪರಿಭಾಷೆಯಲ್ಲಿ ಹೇಳುವುದಾದರೆ ಯೇಸುವು ಆಶ್ವಾಸನೆಯನ್ನಿತ್ತ ಪ್ರಕಾರ ಭಗವತ್ ಪವಿತ್ರಾತ್ಮನು ಕಾರ್ಯನಿರ್ವಹಣದಲ್ಲಿ ಸಹಾಯಕನಾಗಿ ವ್ಯಕ್ತಿಗಳ ಮೇಲೆ ಬರುವನು. ಆದುದರಿಂದ ಯೇಸುವು ಬೋಧಿಸಿದ ಆ ಸಂದೇಶದ ತತ್ವಗಳು ಇಂದಿನವರೆಗೆ ಅಚ್ಚಳಿಯದೆ ಉಳಿದಿವೆ. ಅದೇ ಪಾವ್ಲನು ಎಫೆಸುಸ್ ಎಂಬಲ್ಲಿ ಧರ್ಮ

ಪ್ರಚಾರವನ್ನು ಮಾಡಿ ಯುಕ್ತ ಧರ್ಮಾಧಿಕಾರಿಗಳನ್ನು ನಿಯಾಮಿಸಿ ವಿದಾಯಗೊಳ್ಳುವ ಸಂದರ್ಭದಲ್ಲಿ,

"ತನ್ನ ಸ್ವಂತ ರಕ್ತದಿಂದ ಪಡೆದುಕೊಂಡ ಭಗವಂತನ ಶ್ರೀಸಭೆಯನ್ನು ಆಳುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನು ಬಿಷಪರನ್ನಾಗಿ ಮಾಡಿರುವನು; ಆದುದರಿಂದ ನಿಮ್ಮನ್ನೂ ಸಕಲ ಜನತೆಯನ್ನೂ ಎಚ್ಚರದಿಂದ ನೋಡಿಕೊಳ್ಳಿರಿ" (ಕಾರ್ಯ ೨೦, ೨೮) ಎಂದೂ, ಕೊರಿಂತದವರಿಗೆ ಕಳುಹಿಸಿದ ನಿರೂಪದಲ್ಲಿ,

"ಭಗವಂತನಿಂದ ಕಳುಹಿಸಲ್ಪಟ್ಟು ನಿಮ್ಮಲ್ಲಿ ವ್ಯಾಪಿಸಿರುವ ಪವಿತ್ರಾತ್ಮನಿಗೆ ನಿಮ್ಮ ಶರೀರವು ದೇಗುಲವಾಗಿದೆಯೆಂಬುದು ನಿಮಗೆ ತಿಳಿದಿಲ್ಲವೇ? ಆದುದರಿಂದ ನೀವು ನಿಮ್ಮ ಸ್ವಂತ ಸೊತ್ತಲ್ಲ. ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದುದರಿಂದ ನಿಮ್ಮ ದೇಹದಲ್ಲಿ ಭಗವಂತನನ್ನು ಆನಂದಿಸುತ್ತ ಆತನನ್ನು ಪ್ರಕಟಿಸಿರಿ" (೧ ಕೊರಿಂತ ೬, ೧೯-೨೦) ಎಂದೂ ಹೇಳಿರುವುದರಿಂದ ಯೇಸುವಿನ ತತ್ವಗಳು ವಿರೂಪಗೊಳ್ಳದಂತೆ ಭಗವತ್ ಪವಿತ್ರಾತ್ಮನೇ ಶ್ರೀಸಭೆಯ ಆತ್ಮವಾಗಿ ಅದನ್ನು ನಡೆಸುತ್ತಾನೆ.

ಜೀವನ-ಮರಣಗಳ ಸಮಸ್ಯೆ

ಯೇಸುವಿನ ಸತ್ಯವನ್ನು ಕುರಿತು ಇಷ್ಟೆಲ್ಲವನ್ನೂ ಹೇಳಬೇಕಾಯಿತು. ಆತನು ಸತ್ಯವನ್ನು ಪಾಲಿಸುವುದಕ್ಕಾಗಿ, ಸತ್ಯದ ಸಂದೇಶವನ್ನು ಜನತೆಗೆ ನೀಡುವುದಕ್ಕಾಗಿ, ಆ ಮೂಲಕ ಪತನಗೊಂಡ ಮಾನವನನ್ನು ಉದ್ಧರಿಸಿ, ಸತ್ಯವನ್ನು ಪೂರ್ಣಗೊಳಿಸುವುದಕ್ಕಾಗಿ ಆತ್ಮಾರ್ಪಣವನ್ನು ಮಾಡಿದ ವಿಚಾರವನ್ನು ನಾವು ನೋಡಿದೆವು. ಆತನ ಶಿಷ್ಯರು ಆತನಲ್ಲಾಗಲಿ, ಆತನ ಬೋಧನೆಯಲ್ಲಾಗಲಿ ಅವಿಶ್ವಾಸವನ್ನು ತಳೆಯಲಿಲ್ಲ. ಮಾತ್ರವಲ್ಲ ತಾವು ಪಡೆದುದನ್ನು ಭಗವತ್-ಪವಿತ್ರಾತ್ಮನ ಸಹಾಯದಿಂದ ಕಿಂಚಿತ್ತಾದರೂ ನಷ್ಟವಾಗಿ ಹೋಗದಂತೆ ಎಚ್ಚರವನ್ನು ವಹಿಸಿದರು. ಅವರೆಲ್ಲರಿಗೂ ಆ ಸತ್ಯವು ಪವಿತ್ರತಮ ವಿಷಯವಾಗಿತ್ತು. ಜೀವನ-ಮರಣಗಳೆರಡನ್ನೂ ಹುಲ್ಲುಕಡ್ಡಿಯಾಗಿ ಎಣಿಸುವಷ್ಟು ಮಹತ್ವವನ್ನು ಅದಕ್ಕವರು ನೀಡಿದರು. ಅದಕ್ಕಾಗಿ ತಂದೆ-ತಾಯಂದಿರ, ಬಂಧು ಬಳಗದವರ ವಿರೋಧ

ವನ್ನೂ ಅವರು ಸಹಿಸಿದರು. ಆದುದರಿಂದ ಆ ಸತ್ಯದ ಸಂದೇಶವನ್ನು ನಿರಾಕರಿಸುವುದನ್ನೂ, ವಿರೋಧಿಸುವುದನ್ನೂ ಅವರೊಪ್ಪಲಿಲ್ಲ. ಪ್ರತಿ ಜನಾಂಗದ ಪ್ರತಿವ್ಯಕ್ತಿಗೂ ಅದನ್ನು ತಿಳಿಸುವ ಯೇಸುವಿನ ಆಣತಿಯು ಕಾರ್ಯರೂಪದಲ್ಲಿ ಬರುವಂತೆ ಮಾಡಲು ಅವರು ಸತತ ಸಾಧಿಸಿದರು. ಪವಿತ್ರಾತ್ಮನಿಂದ ತುಂಬಿದವರಾಗಿ ಅವರು ಅದರ ಪ್ರಚಾರದಲ್ಲಿ ಯಾವ ಬಗೆಯ ಆತಂಕಗಳನ್ನೂ ಲೆಕ್ಕಿಸದೆ ಮುಂದುವರಿದರು.

ಕ್ರೈಸ್ತಮತದ ನಿರ್ದಿಷ್ಟ ಆದೇಶಗಳು ಅನೇಕವಿವೆ. ಆ ಮತದ ಪ್ರಭಾವದಿಂದ ಮುಕ್ತನಾಗಿ ಅದರ ಆಶಯದಂತೆ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಆ ಮತದ ಅನುವರ್ತನೆಯಲ್ಲಿ ಮಾಡಬೇಕಾದ ತ್ಯಾಗಗಳು ಹಲವು. ಆದುದರಿಂದಲೇ ಅದಕ್ಕಾಗಿ ಎಷ್ಟೋ ಮಿತ್ರರ ವಿಯೋಗವಾಗಿವೆ; ಸಾವಿರಾರು ಕುಟುಂಬಗಳು ವಿಭಜನೆಗೊಂಡಿವೆ; ಈಗಲೂ ಹಾಗೆಯೇ ನಡೆಯುತ್ತದೆ; ಇನ್ನೂ ನಡೆಯುವುದು.

ಇದಕ್ಕೆ ಕಾರಣವಿಲ್ಲದಿಲ್ಲ: ಕ್ರೈಸ್ತಮತವು ನಿರ್ದಿಷ್ಟ ಆದೇಶಗಳನ್ನೀಯುತ್ತ ಸಂಪೂರ್ಣ ವಿಶ್ವಾಸವನ್ನೂ ಪರಿಪೂರ್ಣ ವಿಧೇಯತೆಯನ್ನು ಬಯಸುತ್ತದೆ. ತನ್ನ ಬೋಧನೆಗೆ ವಿರೋಧವಾದ ಮಾತ್ರವಲ್ಲ ವಿರೋಧವೆನಿಸಬಹುದಾದ ಸಕಲ ತತ್ವಗಳನ್ನೂ ಬಹಿರಂಗವಾಗಿ ಎದುರಿಸುತ್ತದೆ. ಮತದ್ರೋಹಿಗಳನ್ನೂ ಮತವಿಭ್ರಾಂತರನ್ನೂ ಬಹಿಷ್ಕರಿಸುತ್ತದೆ. ರಕ್ಷಣೆಯ ಮಾರ್ಗದಲ್ಲಿ ಸತ್ಯ ವಿಶ್ವಾಸಗಳನ್ನು ತುಂಬಿಸುತ್ತದೆ. ಅಂದು ಹತ್ತೊಂಬತ್ತು ನೂರು ವರ್ಷಗಳ ಹಿಂದೆ ಯೇಸುಕ್ರಿಸ್ತನಿಂದ ಪ್ರತ್ಯಕ್ಷವಾಗಿ ಅಧಿಕಾರವನ್ನು ಪಡೆದ ಶಿಷ್ಯರ ಸಾಲಿಗೆ ಅನುಕ್ರಮವಾಗಿ ಬಂದ ಎಲ್ಲ ಅಧಿಕಾರಿವರ್ಗದ ನ್ಯಾಯಪೂರ್ಣ ಆದೇಶ–ಉಪದೇಶಗಳನ್ನು ಅನುಸರಿಸಬೇಕೆಂದು ವಿಧಿಸುತ್ತದೆ.

ಹೀಗೆ ಆತ್ಮಾರ್ಪಣದ ಸಮೇತ ಅನೇಕ ತ್ಯಾಗಗಳನ್ನು ಬಯಸುವ ಕ್ರೈಸ್ತಮತವು ಜಗತ್ತಿನಲ್ಲಿ ಅತ್ಯಂತ ಸಂಖ್ಯಾಬಲವುಳ್ಳ ಮತವಾಗಿದೆ. ಜಗತ್ತಿನ ಯಾವ ಮೂಲೆಯಲ್ಲಾಗಲಿ, ಅತ್ಯುನ್ನತ ಪ್ರದೇಶದಿಂದ ಮೊದಲುಗೊಂಡು ಅತ್ಯಂತ ಆಳದವರೆಗೆ ಸಂಚಾರ ಮಾಡಿದ ಮತಗಳಲ್ಲಿ ಸರ್ವ ಪ್ರಥಮಸ್ಥಾನವನ್ನು ಅದು ಪಡೆಯುತ್ತದೆ. ಕ್ರೈಸ್ತರಿಲ್ಲದ ಸ್ಥಳ

ವಿಲ್ಲ. ಅವರ ಸಂಖ್ಯೆಯಲ್ಲಿ ಹೆಚ್ಚು ಕಡಮೆಯಿರಬಹುದು; ಅವರ ಧಾರ್ಮಿಕ ಮಟ್ಟವು ವಿವಿಧ ರೀತಿಯಲ್ಲಿರಬಹುದು; ಅನೇಕರು ಕ್ರಿಸ್ತನನ್ನು ಕೇವಲ ಹೆಸರಿನಲ್ಲಿ ತಿಳಿದಿರಬಹುದು ಅಷ್ಟೆ.

ಕ್ರೈಸ್ತೇತರ ಮತಗಳು

ಕ್ರೈಸ್ತಮತವು ಹಲವು ತ್ಯಾಗಗಳನ್ನು ಬಯಸುತ್ತದೆ ಎಂಬ ವಿಚಾರವನ್ನು ನಾವು ನೋಡಿದೆವು. ಆದರೂ ಅದು ಕೇವಲ ಕೆಲವು ಸೂತ್ರಗಳ ಅನುಸರಣೆಯಾಗಿಲ್ಲ. ಯೇಸುಕ್ರಿಸ್ತನ ತತ್ವಗಳನ್ನು ಅನ್ವಯಿಸಿ ಉದಾತ್ತ ಜೀವನವನ್ನು ನಡೆಸುವುದು ಸುಲಭಸಾಧ್ಯವಾದ ಕಾರ್ಯವಲ್ಲವಾದರೂ, ಹಾಗೆ ನಡೆಸಲು ಯುಕ್ತಮಾರ್ಗಗಳೂ ಇವೆ. ಮಿಂದವನಿಗೂ ಮಿಾಯದವನಿಗೂ ಅಂತರವು ಕಡಮೆಯೆಂದು ತೋರಬಹುದು. ಆದರೆ ಮಿಂದವನು ಸ್ವಚ್ಛಂದವೃತ್ತಿಗೆ ತಡೆಯೊಂದನ್ನು ಪಡೆದುಕೊಳ್ಳುತ್ತಾನೆ. ಎಲ್ಲ ಬಗೆಯ ಕಾರ್ಯಗಳನ್ನೂ ಅವನು ಮಾಡಲೊಪ್ಪನು; ಅಂತಹವುಗಳನ್ನು ಮಾಡಿದ ಬಳಿಕ ಪುನಃ ಅವನು ಮಿಾಯಬೇಕಾಗುತ್ತದೆ. ಆದರೆ ಮಿಾಯದವನಿಗೆ ಹಾಗಲ್ಲ; ತನಗೆ ಮಿಾಯಲಿದೆಯೆಂದು ಭಾವಿಸಿ, ಮಿಂದ ಬಳಿಕ ಮಾಡಲಾಗದ ಕಾರ್ಯಗಳನ್ನು ಮೊದಲೇ ಮಾಡುವನು. ಕ್ರೈಸ್ತ ಮತಾವಲಂಬಿಯನ್ನು ಮಿಂದವನಿಗೆ ಹೋಲಿಸಬಹುದು. ಅವನ ಜೀವನವು ಯೇಸುವು ಹಾಕಿಕೊಟ್ಟ ಉದಾತ್ತವಾದ ಆದರ್ಶವನ್ನು ಅನುಸರಿಸಬೇಕಾಗಿದೆ. ಸ್ವೇಚ್ಛಾಪ್ರವೃತ್ತಿಯ ಫಲವಾಗಿ ಅವನು ನ್ಯಾಯಮಾರ್ಗವನ್ನು ಬಿಟ್ಟು ವಾಮಮಾರ್ಗದಲ್ಲಿಳಿದಾಗ ಧರ್ಮತತ್ವವು ಅವನಿಗೆ ಸರಿದಾರಿಯನ್ನು ತೋರಿಸುವುದು. ಹೀಗೆ ಆತನ ಜೀವನದ ಪ್ರತಿಯೊಂದು ಕ್ಷಣವೂ ಧರ್ಮಾದೇಶದಿಂದ ಬಂಧಿತವಾಗಿದೆ. ಅದೇ ಆತನ ತ್ಯಾಗ.

ಈ ಲೋಕದಲ್ಲಿ ಬಾಳಿದ ಅಥವಾ ಸತ್ತುಹೋದ ಪ್ರತಿಯೊಬ್ಬನೂ ಸ್ವರ್ಗೀಯ ಪಿತನ ಬಳಿಗೆ ಹೋಗಬೇಕಾದರೆ ಸದಿಚ್ಛೆಯೊಂದು ಅವನಲ್ಲಿರಬೇಕು. ಅಂತಹ ಸದಿಚ್ಛೆಯಿಂದ ಕೂಡಿದವರು ಯೇಸುವಿನ ಪರಿಚಯವಿಲ್ಲದಿದ್ದರೂ ಸದ್ಗತಿಯನ್ನು ಹೊಂದುವರೆಂದು ಶ್ರೀಸಭೆಯು ಬೋಧಿಸುತ್ತದೆ. ಯೇಸುವು ಸಕಲ ಮಾನವವರ್ಗದ ಹಿತಕ್ಕಾಗಿ ಮಾಡಿದ ಸೇವೆಯು

ಫಲವಾಗಿ ಆತನ ಅನುಪಮ ಪ್ರೇಮಮಯ ಕರುಣೆಯಿಂದ ಪ್ರತಿಯೊಬ್ಬ ಮಾನವಜೀವಿಯೂ ಸದಿಚ್ಛೆಯಿಂದ ಕೂಡಿಕೊಂಡಾಗ ಆತನ ಕಾರ್ಯದ ಫಲವುಂಟಾಗುತ್ತದೆ.

ಆದುದರಿಂದ ಇತರ ಮತಾವಲಂಬಿಗಳು ತಮ್ಮ ಮತದ ಆದೇಶಗಳನ್ನು ನಿಷ್ಠೆಯಿಂದ ಪಾಲಿಸಬೇಕು. ಎಂದಿನವರೆಗೆ ಅವರಿಗೆ ತಮ್ಮ ಸ್ವಮತದ ಸತ್ಯತೆಯಲ್ಲಿ ಅವಿಶ್ವಾಸವು ಬರುವುದಿಲ್ಲವೋ ಅಂದಿನವರೆಗೆ ಅವರು ನ್ಯಾಯಮಾರ್ಗದಲ್ಲಿಯೇ ಇರುವರೆಂದು ತಿಳಿಯಬೇಕು. ಸ್ವಮತದಲ್ಲಿ ವಿಶ್ವಾಸವು ಮುಖ್ಯವಾದುದು. ಆ ವಿಶ್ವಾಸವನ್ನು ಹೊಂದಿದ ಮನುಷ್ಯನು ಆ ಮತದ ಆದೇಶಗಳಂತೆ ನಡೆಯುವುದಾದರೆ ಸಿಕ್ಕಬಹುದಾದ ಅಂತ್ಯವನ್ನು, ಮೋಕ್ಷವನ್ನು ಪಡೆಯುವುದರಲ್ಲಿ ಭರವಸೆಯಿಂದಿರಬೇಕು. ವಿಶ್ವಾಸ-ಭರವಸೆಗಳೇ ಮತದ ಮೂಲ. ಅವೆರಡರಲ್ಲೊಂದು ಇಲ್ಲದೆ ಹೋದರೂ ಮಾನವನು ಸರಿದಾರಿ ತಪ್ಪುವನು. ಇದನ್ನು ಕುರಿತು ಪಾವ್ಲನು,

" ಯಾವನು (ಕ್ರಿಸ್ತ) ನಿಯಮದ ಹೊರಗಿದ್ದು ಪಾತಕವನ್ನಾಚರಿಸಿರುವನೋ ಅವನು ನಿಯಮದ ಹೊರಗೆ ದಂಡಿಸಲ್ಪಡುವನು. ಆದರೆ ನಿಯಮವನ್ನು ತಿಳಿದು ಯಾರು ಪಾತಕವನ್ನಾಚರಿಸಿರುವರೋ ಅವರು ನಿಯಮಗಳ ಪ್ರಕಾರ ದಂಡಿಸಲ್ಪಡುವರು . ಆದುದರಿಂದ ನಿಯಮಗಳಿಲ್ಲದ ಕ್ರೈಸ್ತೇತರರು (Gentiles) ಸ್ವಾಭಾವಿಕವಾಗಿ ನಿಯಮಗಳ ವಿರೋಧವಾಗಿ ಆಚರಿಸುವಾಗ ಅವರು ನಿಯಮಗಳನ್ನು ಅರಿಯದಿರುವುದರಿಂದ, ಸ್ವಾಭಾವಿಕ ನಿಯಮಗಳೇ ಅನ್ವಯಿಸುವುವು " (ರೋಮನ್ ೨,೧೩,೧೪) ಎಂದು ವಿಶದಗೊಳಿಸಿರುವನು.

ಕ್ರೈಸ್ತಮತವೂ ದೇಶೀಯ ಸಂಸ್ಕೃತಿಗಳೂ

ಪ್ರತಿಯೊಂದು ಮತಕ್ಕೂ ಅದು ಹುಟ್ಟಿದ ದೇಶದ ಸಂಸ್ಕೃತಿಗೂ ಹತ್ತಿರದ ಸಂಬಂಧವಿದೆ. ಸಂಸ್ಕೃತಿಯನ್ನು ಮಾನವನು ತನ್ನ ಅಭ್ಯುದಯಕ್ಕಾಗಿ ಮಾಡಿದ ಸಾಧನೆಯೆನ್ನಬಹುದು. ಅದು ಕಲೆ, ಸಾಹಿತ್ಯ, ಜೀವನ ರೀತಿ, ಉಡುಗೆ-ತೊಡುಗೆ, ಆಚಾರ ವಿಚಾರಗಳಲ್ಲಿ

ಹೊರಕಾಣುವುದು. ಎಲ್ಲ ದೇಶಗಳ ಸಂಸ್ಕೃತಿಯೂ ಏಕರೂಪವಾಗಿಲ್ಲ; ಸಭ್ಯತೆಯಲ್ಲಿ ಮುಂದುವರಿದವರಲ್ಲಿ ಸೌಜನ್ಯತೆಯು ಕೊರತೆಯಿದೆ. ಸಭ್ಯರೆನಿಸಿದವರ ದೃಷ್ಟಿಯಲ್ಲಿ ಸೌಜನ್ಯತೆಯಲ್ಲಿ ಪಳಗಿದವರು ಕೇವಲ ಗ್ರಾಮೀಣರು. ಆದರೆ ಪ್ರತಿಯೊಂದು ದೇಶದ ಸಂಸ್ಕೃತಿಯಲ್ಲಿಯೂ ಯಾವುದೊ ಒಂದು ವಿಷಯವು, ಕಡಮೆಯಾಗಿದೆ. ಅದು ಸಂಸ್ಕೃತಿಯಲ್ಲಿ ದೋಷಯುಕ್ತವಾಗಿರುವುದನ್ನು ಸರಿಗೊಳಿಸುವುದು; ಅಪೂರ್ಣವಾಗಿರುವುದನ್ನು ಪೂರ್ಣಗೊಳಿಸುವುದು.

"ಹಿರಿಯಧಿಕಾರಕ್ಕೆ ಪ್ರತಿಯೊಬ್ಬನೂ ವಿಧೇಯನಾಗಿರಲಿ; ಏಕೆಂದರೆ ಭಗವಂತನಿಂದಲ್ಲದ ಅಧಿಕಾರವಿಲ್ಲ; ಇರುವವರೆಲ್ಲರೂ ಭಗವಂತನಿಂದ ಅಧಿಕಾರ ಪಡೆದಿರುವರು" (ರೋಮ್ ೧೩,೧)

ಕ್ರೈಸ್ತಮತವು ಭಾರತಕ್ಕೆ ಬಂದು ಹತ್ತೊಂಬತ್ತುನೂರು ವರ್ಷಗಳು ಸಂದುಹೋಗಿವೆ. ಭಾರತದ ಕ್ರೈಸ್ತರು ಭಾರತೀಯರೇ ಆಗಿ ಇಲ್ಲಿಯ ರಾಜರ, ಸರಕಾರದ ಜಯಾಪಜಯಗಳಲ್ಲಿ ಭಾಗವಹಿಸಿರುವರು. ಹಿಂದೂಮತಕ್ಕೂ ಕ್ರೈಸ್ತಮತಕ್ಕೂ ಹತ್ತಿರದ ಸಂಬಂಧವನ್ನು ತಿಳಿಯಬಹುದು. ಕ್ರೈಸ್ತರ ಧಾರ್ಮಿಕ ಕ್ರಿಯೆಗಳಲ್ಲಿ ಪ್ರಾಚೀನ ಲ್ಯಾಟಿನ್ (Latin) ಭಾಷೆಯು ಬಳಕೆಯಲ್ಲಿರುನಂತೆ, ಹಿಂದೂಮತದಲ್ಲಿ ಪ್ರಾಚೀನ ಸಂಸ್ಕೃತ ರೂಪವು ಬಳಕೆಯಲ್ಲಿದೆ. ಕ್ರೈಸ್ತರ ದಶ ಭಗವನ್ನಿಯಮಗಳಲ್ಲಿ, ತೃತೀಯ ನಿಯಮವೊಂದನ್ನುಳಿದು ಉಳಿದುವೆಲ್ಲವೂ ಹಿಂದೂಮತದಲ್ಲಿಯೂ ಪರಿಪೂರ್ಣ ಮಾನ್ಯವಾಗಿವೆ. ಪೌಲನು ಫಿಲಿಪ್ಪಿಯನ್ನರಿಗೆ ಬರೆದ ನಿರೂಪದಲ್ಲಿ ಹೇಳಿರುವ ಮಾತುಗಳನ್ನು ಗಮನಿಸಬೇಕು:

"ಯಾವುವೆಲ್ಲ ವಸ್ತುಗಳು ಸತ್ಯ, ಯಾವುವೆಲ್ಲವು ಗೌರವದಾಯಕ, ಯಾವುವೆಲ್ಲವು ನ್ಯಾಯಪೂರ್ಣ, ಯಾವುವೆಲ್ಲವು ಪವಿತ್ರ, ಯಾವುವೆಲ್ಲವು ಸುಂದರ, ಯಾವುವೆಲ್ಲವು ಸತ್ಕೀರ್ತಿದಾಯಕ, ಸುಗುಣಕ್ಕೆ ಸಂಬಂಧಿಸಿದುದು ಇದ್ದರೆ, ಸ್ತುತಿಯೊಂದು ಇದ್ದರೆ–ಅಂತಹ ವಿಷಯಗಳನ್ನು ಯೋಚಿಸಿರಿ" (ಫಿಲಿ ೪, ೮)

ಯಾವುದು ಹಿತವೋ, ಅದು ಎಲ್ಲಿಯಾದರೂ ಇರಬಹುದು. ಅದನ್ನು ಕ್ರೈಸ್ತಮತವು ಸ್ವೀಕರಿಸುತ್ತದೆ. ನ್ಯಾಯವಾದ ವಿಚಾರವನ್ನು

ನ್ಯಾಯವಾದ ರೀತಿಯಲ್ಲಿ ಮಾಡಿದಾಗ ಕ್ರೈಸ್ತಮತವು ತನ್ನ ಪರಿಪೂರ್ಣ ಸಹಕಾರವನ್ನೂ ಮಾನ್ಯತೆಯನ್ನೂ ನೀಡುತ್ತದೆ.

"ವಿಷಯಗಳಲ್ಲಿ ಏಕರೂಪತೆ, ಅಪ್ರಮುಖ ವಿಷಯಗಳಲ್ಲಿ ಸ್ವಾತಂತ್ರ್ಯ, ಎಲ್ಲ ವಿಷಯಗಳಲ್ಲಿ ಸೌಹಾರ್ದತೆ" (in certis unitas in dubis libertas, in omnibus caritas) ಎಂಬ ತತ್ವವನ್ನು ಕ್ರೈಸ್ತರು ಅನುಸರಿಸಬೇಕೆಂದು ಆಫ್ರಿಕದ ಸಂನ್ಯಾಸಿ ಅಗುಸ್ತೀನನು ಸಾರಿರುವನು. ಆದುದರಿಂದ ಕ್ರೈಸ್ತಮತವು ದೇಶೀಯ ಸಂಸ್ಕೃತಿಗಳಿಗೆ ವಿರೋಧಿಯಾಗಿಲ್ಲ. ಪ್ರತಿಯೊಂದು ಕಾಯಕವೂ ಜೀವನ ರೀತಿಯೂ ಆದರಲ್ಲಿ ಮನ್ನಣೆಯನ್ನು ಪಡೆಯುವುದು ; ದೇಶೀಯ ರೀತಿಗಳು ಕ್ರೈಸ್ತಮತದ ಮೂಲತತ್ವಗಳಿಗೆ ವಿರೋಧವಾಗಿರದ ಪಕ್ಷದಲ್ಲಿ ಅನುಸರಣೆಯಲ್ಲಿ ಬರುವಂತೆ ಮಾಡಲು ಕ್ರೈಸ್ತ ಶ್ರೀಸಭೆಯ ಆತಂಕವಿಲ್ಲ. ಇದನ್ನು ಕುರಿತು ಪಾವ್ಲನು,

"ಪ್ರತಿಯೊಬ್ಬ ಮನುಷ್ಯನೂ ತಾನು ಅಭ್ಯಸಿಸುವ ಜೀವನದ ರೀತಿಯಲ್ಲಿರಲಿ" (೧ ಕೊರಿಂತ ೭, ೨೦) ಎಂದಿರುವನು.

೭. ಕಥೋಲಿಕ ಪಂಥ

ಐಕ್ಯತೆಗಾಗಿ

ಭಗವಾನ್ ಯೇಸುಕ್ರಿಸ್ತನು ಸ್ಥಾಪಿಸಿದ ಕ್ರೈಸ್ತಮತವು ಸತ್ಯದ ತಳಹದಿಯ ಮೇಲೆ ನಿಂತಿದೆಯೆಂದೂ, ಶ್ರೀಸಭೆಯೇ ಸಮಸ್ತ ಕ್ರೈಸ್ತರ ಕೂಟವೆಂದೂ ನಾವು ತಿಳಿದಿರುವೆವು. ತಾನೇ ಸತ್ಯವೆಂದು ಸಾರಿದವನ ತತ್ವಗಳಿಗೆ ಭಿನ್ನಾರ್ಥಗಳೆರಡು ನಿಶ್ಚಯವಾಗಿಯೂ ಇರಲಾರವು. ಆದುದರಿಂದ ಯಾವುದಾದರೊಂದು ಮಾತಿನಲ್ಲಿ ಎರಡು ಭಿನ್ನಾರ್ಥಗಳನ್ನು ನಾವು ಕಲ್ಪಿಸಿಕೊಂಡರೆ, ಅವೆರಡೂ ಯೇಸುವಿನ ಭಾವನೆಗಳಾಗಲಾರವು. ಅಂದರೆ ಪ್ರತಿಯೊಂದು ವಿಷಯವೂ, ನುಡಿಯೂ ನಿಶ್ಚಿತಾರ್ಥವೊಂದನ್ನು ಮಾತ್ರ ಪಡೆಯಬೇಕಾಗಿದೆ.

ಯಾವುದೊಂದು ಸಂಸ್ಥೆ, ಧಾರ್ಮಿಕವಾಗಬಹುದು, ರಾಜಕೀಯವಾಗಬಹುದು, ಸಾಮಾಜಿಕವಾಗಬಹುದು–ಬಾಳಬೇಕಾದರೆ ಅದರ ಘಟಕ ಸದಸ್ಯರಲ್ಲಿ ಐಕ್ಯತೆಯಿರಬೇಕು. ಐಕ್ಯತೆಯಿರಲು ಹಾಗೆ ಐಕ್ಯಗೊಳಿಸುವ ವಿಷಯವಿರಬೇಕಾದುದು ಅನಿವಾರ್ಯವು. ಎಂದಿಗೆ ಆ ವಿಷಯ ವಿಶೇಷವು ಲೋಪಗೊಳ್ಳುವುದೋ ಅಂದಿಗೆ ಆ ಸಂಸ್ಥೆಯು ಶತಭಿನ್ನವಾಗಿ, ಅನತಿಕಾಲದಲ್ಲಿ ಅವನತಿಯನ್ನೈದುವುದು.

ಕ್ರಿಸ್ತನು ಸ್ಥಾಪಿಸಿದ ಧರ್ಮಸಂಸ್ಥೆಯಾದ ಶ್ರೀಸಭೆಯ ಮೂಲ ತತ್ವಗಳು ಇಂದಿನವರೆಗೆ ನಿತ್ಯನೂತನವಾಗಿಯೇ ಉಳಿದಿವೆ. ಮೂಲ ತತ್ವಗಳನ್ನು ವಿರೋಧಿಸಿದವರು ಆ ಮೂಲತತ್ವಗಳನ್ನು ವ್ಯತ್ಯಾಸಗೊಳಿಸಲು ಸಮರ್ಥರಾಗಲಿಲ್ಲ. ಆ ವಿರೋಧಿಗಳು ವಿರೋಧಿಗಳಾಗಿಯೇ ಉಳಿದರು. ಮೂಲಸಂಸ್ಥೆಯು ಆ ವಿರೋಧಿಗಳ ಪ್ರತಾಪಕ್ಕೆ ಬಗ್ಗಿ ನಿಯಮಗಳನ್ನು ಅರ್ಥಾತ್ ತತ್ವಗಳನ್ನು ಶಿಥಿಲಗೊಳಿಸಲು ಅಥವಾ ರೂಪಿಸಲು ಪ್ರಯತ್ನಿಸಲಿಲ್ಲ. ಸಂದರ್ಭವಶಾತ್ ಹಾಗೆ ಮಾಡಿರುತ್ತಿದ್ದರೆ ಸಂಸ್ಥಾಪಕ ಕ್ರಿಸ್ತನ ಸತ್ಯವು ಲೋಪವಾಗುತ್ತಿತ್ತು. ಆದರೆ ಹಾಗೆ ನಡೆಯ

ಲಿಲ್ಲ. ಭಗವಾನ್ ಪವಿತ್ರಾತ್ಮನ ಸಹಾಯದಿಂದ ಬಲಗೊಂಡು ಮುಂದು ವರಿಯಿತು. ಹೀಗೆ ಬಲಗೊಳ್ಳಲು ಐಕ್ಯತೆಯೇ ಕಾರಣವಾಯಿತು.

ಯೇಸುಕ್ರಿಸ್ತನೂ ತನ್ನ ಅನುಯಾಯಿಗಳಲ್ಲಿ ಐಕ್ಯತೆಯಿರಬೇಕೆಂದು ಭಗವಂತನಲ್ಲಿ ಮಾಡಿದ ಪ್ರಾರ್ಥನೆಯನ್ನು ನಾವು ನೋಡಿದರೆ ಹಿತವೆಂದು ತೋರುವುದು. ಆತನ ಮರಣದ ಮುನ್ನ ತನ್ನ ಹನ್ನೆರಡು ಮಂದಿ ಶಿಷ್ಯ ರೊಡನೆ ಪರ್ವಕಾಲದ ಮಹಾಭೋಜನವನ್ನು ಅವನು ಮಾಡಿದನು. ಅದುವೆ ಆತನ ಮರ್ತ್ಯಜೀವನದ ಕೊನೆಯ ಭೋಜನವು. ಭೋಜನಾರಂಭ ದಲ್ಲಿ ಹನ್ನೆರಡು ಮಂದಿ ಶಿಷ್ಯರಿದ್ದರೂ ಮಧ್ಯದಲ್ಲಿ ಯೂದಾಸನು ವಂಚನೆ ಗಾಗಿ ಹೊರಹೋಗಿದ್ದನು ; ಹಾಗಾಗಿ ಹನ್ನೊಂದು ಮಂದಿ ಅಲ್ಲಿದ್ದರು. ಭೋಜನಾನಂತರದಲ್ಲಿ ಏಸುವು ತನ್ನ ಶಿಷ್ಯರಿಗೆ ಬೇಕಾದ ಅತ್ಯಗತ್ಯದ ಬೋಧನೆಗಳನ್ನಿತ್ತನು. ಅನಂತರ ಅವರೆಲ್ಲರೂ ಐಕ್ಯದಿಂದಿರುವಂತೆ ಪಿತ ನಲ್ಲಿ ಪ್ರಾರ್ಥಿಸಿದನು. ಆ ಐಕ್ಯವು ಯಾವರೀತಿಯಲ್ಲಾಗಬೇಕೆಂದು ಆತನೇ ಸೂಚಿಸಿರುವನು :

“ಪಿತನೇ, ಆ ಗಳಿಗೆಯು ಬಂದಿದೆ. ನಿನ್ನ ಪುತ್ರನು ನಿನ್ನನ್ನು ಆನಂದಗೊಳಿಸುವಂತೆ, ಪುತ್ರನನ್ನು ಆನಂದಗೊಳಿಸು. ಆತನಲ್ಲಿ ನೀನು ಕೊಟ್ಟವರಿಗೆ ಅನಂತಜೀವವನ್ನು ಅವನು ನೀಡುವಂತೆ ಎಲ್ಲರ ಮೇಲೂ ಆತನಿಗೆ ಅಧಿಕಾರವನ್ನು ನೀನು ಕೊಟ್ಟಿರುವೆ. ನಿಜೈಕ ಭಗವಂತನಾದ ನಿನ್ನನ್ನೂ ನೀನು ಕಳುಹಿಸಿದ ಯೇಸುಕ್ರಿಸ್ತನನ್ನೂ ಅವರು ತಿಳಿಯುವುದೇ ಆ ಅನಂತಜೀವವಾಗಿದೆ. ಜಗತ್ತಿನಲ್ಲಿ ನಿನ್ನನ್ನು ನಾನು ಆನಂದಗೊಳಿಸಿರು ವೆನು. ನಾನು ಮಾಡಬೇಕೆಂದು ನೀನಿತ್ತ ಕಾರ್ಯವನ್ನು ನಾನು ಮುಗಿಸಿರುವೆನು. ಆದುದರಿಂದ ಲೋಕ ಸೃಷ್ಟಿಯ ಮೊದಲು ನಿನ್ನೊಡನೆ ನನಗಿದ್ದ ಆನಂದದಿಂದ, ಎಲೈ ಪಿತನೇ, ಈಗ ನನ್ನನ್ನು ಆನಂದಿಸು. ಜಗತ್ತಿನಿಂದ ನೀನು ನನಗಿತ್ತ ಮನುಷ್ಯರಲ್ಲಿ ನಿನ್ನ ಹೆಸರನ್ನು ನಾನು ಪ್ರಕಟಗೊಳಿಸಿರುವೆನು : ಅವರು ನಿನ್ನವರು ; ಅವರನ್ನು ನೀನೇ ನನ ಗಿತ್ತಿರುವೆ. ಅವರು ತಮ್ಮ ಮಾತನ್ನು ಪಾಲಿಸಿರುವರು. ನೀನು ನನಗಿತ್ತ ವಿಷಯಗಳೆಲ್ಲವೂ ನಿನ್ನಿಂದಲೇ (ಬಂದುವು) ಎಂದು ಅವರರಿತಿರುವರು. ನೀನು ನನಗಿತ್ತ ನುಡಿಗಳನ್ನು ನಾನವರಿಗೆ ಕೊಟ್ಟಿರುವೆನು. ಅವರು

ಅವನ್ನು ಸ್ವೀಕರಿಸಿರುವರು. ಮಾತ್ರವಲ್ಲ ನಾನು ನಿನ್ನಿಂದಲೇ ಬಂದವನೆಂದು ನಿಜವಾಗಿಯೂ ಅರಿತಿರುವರು. ನೀನೇ ನನ್ನನ್ನು ಕಳುಹಿಸಿದವನೆಂದು ಅವರು ನಂಬಿರುವರು; ಅವರಿಗಾಗಿ ನಾನು ಪ್ರಾರ್ಥಿಸುತ್ತೇನೆ. ಜಗತ್ತಿಗಾಗಿ ಅಲ್ಲ, ನೀನು ನನಗಿತ್ತವರಿಗಾಗಿ ನಾನು ಪ್ರಾರ್ಥಿಸುತ್ತೇನೆ. ಅವರು ನಿನ್ನವರೇ ಆಗಿರುವರು. ನನ್ನದೆಲ್ಲವೂ ನಿನ್ನದು; ನಿನ್ನದು ನನ್ನದು; ಅವುಗಳಿಂದಲೇ ನಾನು ಆನಂದಿಸಲ್ಪಡುವೆನು. ಈಗ ನಾನು ಲೋಕದಲ್ಲಿಲ್ಲ. ಇವರು ಲೋಕದಲ್ಲಿರುವರು. ನಾನು ನಿನ್ನಲ್ಲಿಗೆ ಬರುವೆನು. ಪವಿತ್ರ ಪಿತನೇ, ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗಿತ್ತ ಹೆಸರಲ್ಲಿ ಇವರನ್ನು ರಕ್ಷಿಸು. ನಾನು ಅವರೊಡನಿರುವಾಗ ನಿನ್ನ ಹೆಸರಲ್ಲಿ ಅವರನ್ನಿರಿಸಿಕೊಂಡೆನು. ನೀನು ನನಗಿತ್ತವರನ್ನು ನಾನಿರಿಸಿರುವೆನು. ಗ್ರಂಥವು ಪೂರ್ಣವಾಗುವಂತೆ ವಿನಾಶದ ಪುತ್ರನ ಹೊರತು ಅವರಲೊಬ್ಬನೂ ತಪ್ಪಿಹೋಗಲಿಲ್ಲ. ಈಗ ನಾನು ನಿನ್ನಲ್ಲಿಗೆ ಬರುವೆನು. ಅವರಲ್ಲಿ ನನ್ನ ಆನಂದವು ತುಂಬಿಕೊಳ್ಳುವಂತೆ ಈ ವಿಷಯಗಳನ್ನು ಲೋಕದಲ್ಲಿ ನಾನು ಆಡುತ್ತಿರುವೆನು. ಅವರಿಗೆ ನಿನ್ನ ನುಡಿಯನ್ನಿತ್ತಿರುವೆನು; ಲೋಕವು ಅವರನ್ನು ದ್ವೇಷಿಸಿದೆ. ನಾನು ಈ ಲೋಕದವನಲ್ಲದಿರುವಂತೆ ಅದರೂ ಈ ಲೋಕದವರಲ್ಲ. ಅವರನ್ನು ಲೋಕದಿಂದ ತೆಗೆಯಬೇಕೆಂದು ನಾನು ಪ್ರಾರ್ಥಿಸುವುದಿಲ್ಲ. ಆದರೆ ಕೇಡುಗಳಿಂದ ಅವರನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಲೋಕದವನಲ್ಲದಿರುವಂತೆ ಅವರೂ ಲೋಕದವರಲ್ಲ. ಅವರನ್ನು ಸತ್ಯದಲ್ಲಿ ಪ್ರತಿಷ್ಠೆಮಾಡು. ನಿನ್ನ ವಾಕ್ಯವೇ ಸತ್ಯವು. ನೀನು ನನ್ನನ್ನು ಲೋಕಕ್ಕೆ ಕಳುಹಿಸಿದಂತೆ ನಾನು ಅವರನ್ನು ಲೋಕಕ್ಕೆ ಕಳುಹಿಸಿದೆನು. ಇವರು ಸತ್ಯದಲ್ಲಿ ಪವಿತ್ರರಾಗಬೇಕೆಂದು ನನ್ನನ್ನು ನಾನೇ ಪವಿತ್ರಗೊಳಿಸಿದ್ದೇನೆ. ನಾನು ಅವರಿಗಾಗಿ ಮಾತ್ರ ಪ್ರಾರ್ಥಿಸುವುದಲ್ಲ; ಆದರೆ ಅವರ ಮಾತಿನ ಪ್ರಕಾರ ನನ್ನನ್ನು ನಂಬುವವರಿಗಾಗಿಯೂ ನಾನು ಪ್ರಾರ್ಥಿಸುತ್ತಿದ್ದೇನೆ. ಎಲೈ ಪಿತನೇ, ನೀನು ನನ್ನಲ್ಲಿ, ನಾನು ನಿನ್ನಲ್ಲಿರುವಂತೆ ಅವರೆಲ್ಲರೂ ಒಂದಾಗಬೇಕೆಂದು, ಅವರು ನಮ್ಮೊಡನೆ ಒಂದಾಗಬೇಕೆಂದು; ನನ್ನನ್ನು ನೀನು ಕಳುಹಿಸಿರುವೆಯೆಂದು ಲೋಕವು ನಂಬಬೇಕೆಂದು (ಪ್ರಾರ್ಥಿಸುತ್ತಿದ್ದೇನೆ). ನೀನು ನನಗಿತ್ತ ಆನಂದ

ವನ್ನು ನಾವು ಒಂದಾಗಿರುವಂತೆ ಅವರೂ ಒಂದಾಗಬೇಕೆಂದು ಅವರಿಗೂ ನಾನಿತ್ತಿರುವೆನು. ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲು ಅವರ ಐಕ್ಯತೆಯು ಪರಿಪೂರ್ಣವಾಗುವುದು. ಆದುದರಿಂದ ನೀನು ನನ್ನನ್ನು ಕಳುಹಿಸಿರುವೆಯೆಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸುವೆಯೆಂದೂ ಲೋಕಕ್ಕೆ ತಿಳಿಯಲಿ" (ಯೋಹಾನ ೧೭, ೧-೨೩)

ಯೇಸುವಿನ ಚರಮ ಆಕಾಂಕ್ಷೆಯು ತನ್ನ ಅನುಯಾಯಿಗಳಲ್ಲಿ ಐಕ್ಯತೆಯನ್ನು ತರುವುದೇ ಆಗಿತ್ತು. ಅದು ಭಗವತ್ ಪುತ್ರನಾದ ಯೇಸುವಿಗೂ ಭಗವತ್ ಪಿತನಿಗೂ ಇರುವಷ್ಟು ಸಂಪೂರ್ಣವಾಗಬೇಕು. ಆ ಐಕ್ಯತೆಯು ಉಳಿದರೆ ಆತನ ತತ್ವಗಳ ಐಕ್ಯತೆಯುಳಿಯುವುದೆಂದು ಆತನು ತಿಳಿದಿದ್ದನು. ಅದಕ್ಕಾಗಿ ಆತನು ಯುಕ್ತ ವ್ಯವಸ್ಥೆಯನ್ನೂ ಮಾಡಿದನು.

ವಿಶ್ವಾಸದ ಐಕ್ಯತೆ

ಕ್ರೈಸ್ತ ಧರ್ಮ ಸಂಸ್ಥೆಯು ಎರಡು ಸಾವಿರಗಳಷ್ಟು ದೀರ್ಘಾವಧಿಯಲ್ಲಿ ತನ್ನ ತತ್ವಗಳನ್ನು ಬದಲಾಯಿಸಿಲ್ಲ. ಇದಕ್ಕೆ ಐಕ್ಯತೆಯೇ ಕಾರಣವೆಂದು ನೋಡಿದೆವು. ಈ ಐಕ್ಯತೆಯನ್ನು ಎರಡು ವಿಧಗಳಾಗಿ ವಿಭಜಿಸಬಹುದು: ೧ ಐಕ್ಯತೆಗೆ ಸಾಧನ. ೨ ಐಕ್ಯತೆಯ ವಿಧಾನ. ಇವೆರಡನ್ನೂ ಭಗವಾನ್ ಯೇಸುಕ್ರಿಸ್ತನು ತನ್ನ ಶ್ರೀಸಭೆಗೆ ನೀಡಿರುವನು. ಈ ವಿಚಾರವನ್ನೂ ನಾವು ಪರಿಶೀಲಿಸುವೆವು.

ಮನೋಬಲವೇ ಬಲ ಹೊರತು ದೇಹಬಲ, ಧನಬಲ, ಅಧಿಕಾರ ಬಲಗಳು ದುರ್ಬಲವಿಷಯಗಳೆಂದು ತಿಳಿದ ಯೇಸುವಿನ ಶಿಷ್ಯರು ತಮ್ಮ ಗುರುವಿನ ಹಿತೋಕ್ತಿ ಹಾಗೂ ಮಾರ್ಗದರ್ಶನದಿಂದ ಆತನ ಬೋಧನೆಯಲ್ಲಿ ಪರಿಪೂರ್ಣ ವಿಶ್ವಾಸವನ್ನು ತಳೆದರು. ಬಹಿರಂಗವಾಗಿ ಕ್ರೈಸ್ತರು ವಿವಿಧದೇಶ – ಜನಾಂಗಗಳಿಗೆ ಸೇರಿಹೋದರೂ ಅಂತರ್ಯದಲ್ಲಿ ಅವರು ಆಸ್ತಿಕರು; ಯೇಸುವಿನ ತತ್ವಗಳನ್ನು ತಮ್ಮ ನಿತ್ಯಜೀವನದಲ್ಲಿ ಬಳಸುವವರು. ಇದಕ್ಕೆ ಯೇಸುವಿನ ಬೋಧನೆಯಲ್ಲಿ ಅವರು ಪಡೆದ ವಿಶ್ವಾಸವೇ ಕಾರಣವಾಗಿದೆ. ಆದುದರಿಂದ ಎಂದಿನವರೆಗೆ ಅವರಲ್ಲಿ ಅವಿಶ್ವಾಸವು ಸುಳಿಯುವುದಿಲ್ಲವೋ ಅಂದಿನವರೆಗೆ ಅವರು ಒಂದಾಗಿರುವರು,

ಯೇಸುವಿನ ತತ್ವಗಳಲ್ಲಿ ವಿಶ್ವಾಸವಿಟ್ಟು ಅವುಗಳನ್ನು ತನ್ನ ಜೀವನದಲ್ಲಿ ಪ್ರತಿಬಿಂಬಿಸಲು ಪ್ರಯತ್ನಿಸುವವನೇ ಕ್ರೈಸ್ತನು. ಆದರೆ ವಿಶ್ವಾಸ ಹೊಂದಿದವನು ಸ್ವತಂತ್ರನೆನಿಸುವನು.

"ಯಾವನಾದರೊಬ್ಬನು ಧರ್ಮ ನಿಯಮಗಳೆಲ್ಲವನ್ನೂ ಪಾಲಿಸುತ್ತ ಕೇವಲ ಒಂದನ್ನು ಬಿಟ್ಟುಕೊಂಡರೆ ಅವನು ಎಲ್ಲ ವಿಷಯಗಳಲ್ಲಿಯೂ ಅಪರಾಧಿಯಾಗುವನು" (ಯಾಕೋಬ ೨,೧೦)

"ನಿಮಗೆಲ್ಲರಿಗೂ ಭಗವಂತನೊಬ್ಬನೇ. ವಿಶ್ವಾಸವೂ ಒಂದೇ. ಜ್ಞಾನ ಸ್ನಾನವೂ ಒಂದೇ. ಎಲ್ಲರಿಗೂ ಪಿತನಾಗಿರುವ ಭಗವಂತನೂ ಒಬ್ಬನೇ. ನಿಮ್ಮೆಲ್ಲರ ಮೇಲಿರುವವನೂ ನಿಮ್ಮೆಲ್ಲರ ಮೂಲಕ ಕಾರ್ಯವೆಸಗುವವನೂ ನಿಮ್ಮೆಲ್ಲರಲ್ಲಿ ಜೀವಿಸುವವನೂ ಅವನಾಗಿದ್ದಾನೆ." (ಎಫೆಸ್ ೧೪, ೫-೬)

ಕ್ರೈಸ್ತರಲ್ಲಿ ಹಲವು ಪಕ್ಷಗಳಿವೆ. ಈ ಹಲವು ಪಕ್ಷಗಳಲ್ಲಿ ಕಥೋಲಿಕ ಪಂಥವು ಇತರ ಎಲ್ಲ ಪಕ್ಷಗಳಿಗಿಂತಲೂ ಸಂಖ್ಯಾಬಲದಲ್ಲಿಯೂ ಐಕ್ಯತೆಯಲ್ಲಿಯೂ ಮಿಗಿಲಾಗಿದೆ. ಕಥೋಲಿಕರಲ್ಲಿ ಇರುವಂತಹ ಏಕರೂಪತೆಯು ಇತರ ಯಾವ ಪಕ್ಷದಲ್ಲಿಯೂ ಇರುವುದಿಲ್ಲ.

ಧರ್ಮ ಸಂಸ್ಥಾಪಕ ಯೇಸುಕ್ರಿಸ್ತನು ಇದನ್ನು ಕುರಿತು ಹೇಳಿರುವುದನ್ನು ವಿವೇಚಿಸಿಕೊಂಡಾಗ ವಿಶ್ವಾಸದ ಐಕ್ಯತೆ-ಪರಿಪೂರ್ಣವಾಗಿ ವಿಶ್ವಾಸವು ಅದೆಷ್ಟು ಅಗತ್ಯವೆಂಬ ವಿಚಾರವು ಸ್ಫುಟವಾಗುತ್ತದೆ.

"ನನ್ನ ಈ ಮಾತುಗಳನ್ನು ಕೇಳಿ. ಅವುಗಳಂತೆ ಮಾಡುವ ಪ್ರತಿಯೊಬ್ಬನನ್ನು ಬಂಡೆಕಲ್ಲಿನ ಮೇಲೆ ಮಂದಿರದ ರಚನೆಯನ್ನು ಮಾಡುವ ಬುದ್ಧಿವಂತ ಮನುಷ್ಯನಿಗೆ ಹೋಲಿಸಬಹುದು. ಜಡಿಮಳೆ ಸುರಿದು, ಹಿರಿನೆರೆ ಬಂದು, ಬಿರುಗಾಳಿ ಬೀಸಿ, ಮಂದಿರವನ್ನು ಬಡಿದರೂ ಭದ್ರವಾದ ಬಂಡೆಕಲ್ಲಿನ ಮೇಲೆ ರಚಿತವಾಗಿರುವುದರಿಂದ ಅದು ಕುಸಿಯಲಿಲ್ಲ. ಆದರೆ ನನ್ನ ಈ ಮಾತುಗಳನ್ನು ಕೇಳಿಯೂ ಮಾಡದವನು ಮಳಲ ಮೇಲೆ ಮಂದಿರದ ರಚನೆಯನ್ನು ಮಾಡಿದ ತಿಳಿಗೇಡಿ ಮನುಷ್ಯನಂತಿರುವನು. ಜಡಿಮಳೆ ಸುರಿದು, ಹಿರಿನೆರೆ ಬಂದು, ಬಿರುಗಾಳಿ ಬೀಸಿ, ಮಂದಿರವನ್ನು

ಬಡಿದಾಗ ಅದು ಕುಸಿಯುವುದು ಮಾತ್ರವಲ್ಲ ನಷ್ಟವೂ ಹಿರಿದಾಗುವುದು" (ಮತ್ತೇಯ ೭, ೨೪–೨೭)

ಯೇಸುವಿನ ಸಾಮ್ಯವು ಆತನ ತತ್ವಗಳ ಹಿರಿಮೆಯನ್ನೂ ಅವುಗಳಲ್ಲಿರಬೇಕಾದ ವಿಶ್ವಾಸದ ಗರಿಮೆಯನ್ನೂ ತಿಳಿಸುತ್ತವೆ. ಮೇಲಿನ ಮಾತುಗಳನ್ನು ಮುಂದೆ ನಿರ್ದೇಶಿಸುವ ಸಂದರ್ಭಗಳೊಡನೆ ಸಮನ್ವಯಗೊಳಿಸಬೇಕಾಗಿದೆ.

ಆ ಎರಡು ಸಂದರ್ಭಗಳು

ಮೊದಲನೆಯದು ಯೇಸುವಿನ ಧರ್ಮಪ್ರಚಾರಕಾರ್ಯದ ಆರಂಭದಲ್ಲಿ ನಡೆಯಿತು. ಯೇಸುವು ತನ್ನ ಶಿಷ್ಯರನ್ನಾರಿಸುವುದರಲ್ಲಿ ತೊಡಗಿದ್ದನು. ಆಂದ್ರೇಯನೆಂಬುವನು ಯೇಸುವಿನ ದ್ವಾದಶ ಶಿಷ್ಯರಲ್ಲಿ ಮೊದಲನೆಯವನು; ಸ್ನಾನಿಕ ಯೋಹಾನನ ಸೂಚನೆಯನ್ನು ಸ್ವೀಕರಿಸಿ ಯೇಸುವನ್ನು ಹಿಂಬಾಲಿಸಿದವನು. ಈ ಆಂದ್ರೇಯನೇ ತನ್ನ ಗುರು ಹಾಗೂ ಕ್ರಿಸ್ತನಿಗೆ ಇನ್ನು ಶಿಷ್ಯರ ಅಗತ್ಯವಿದೆಯೆಂದರಿತು ತನ್ನ ಸಹೋದರ ಸಿಮೋನನನ್ನು ಕರೆದುಕೊಂಡು ಬಂದನು. ಯೇಸುವು ಆತನನ್ನು ನೋಡಿದೊಡನೆ,

"ನೀನು ಯೋನಾಸನ ಪುತ್ರ ಸಿಮೋನನಾಗಿರುವೆ. ನೀನು ಚೇಫಸ್ ('ಪೇತ್ರ') ಅರ್ಥಾತ್ ಬಂಡೆಗಲ್ಲು ಎಂದು ಕರೆಯಲ್ಪಡುವೆ" (ಯೋಹಾನ ೧, ೪೨) ಎಂದನು.

ಸಿಮೋನ ಎಂದಿದ್ದ ಹೆಸರನ್ನು ಚೇಫಸ್ (ಪೇತ್ರ) ಎಂದು ಯೇಸುವು ಪರಿವರ್ತಿಸಿದನು. ಚೇಫಸ್ ಎಂಬ ಹೀಬ್ರೂ ಪದಕ್ಕೆ ಪೇತ್ರ ಎಂಬುದು ಲ್ಯಾಟಿನ್ ರೂಪ. ಈ ಪರಿವರ್ತನೆಯ ಕಾರಣವನ್ನು ನಾವು ಅವಲೋಕಿಸಬೇಕು.

ಹೀಬ್ರೂ ಭಾಷೆಯಲ್ಲಿ ಪಾರಿವಾಳದ ಮರಿಗೆ ಸಿಮೋನವೆನ್ನುವರು. ಪಾರಿವಾಳದ ಮರಿಯು ತಾಯಿಪಕ್ಷಿಯಂತೆ ಕೋಮಲವೂ ಭೀರುವೂ ಆಗಿರುವುದು. ಆದುದರಿಂದ ಪಾರಿವಾಳದ ಮರಿಯ ಗುಣಶೀಲಗಳಿರುವವನೇ ಸಿಮೋನನು ಎಂದು ತಿಳಿಯಬೇಕು. ಚೇಫಸ್ ಅಥವಾ ಪೇತ್ರ

ನೆಂದರೆ ಬಂಡೆಗಲ್ಲೆಂದು ಅರ್ಥ. ಸ್ಥಿರತೆ, ದುರ್ಭೇದ್ಯತೆಗಳ ಪ್ರತೀಕವೇ ಬಂಡೆಗಲ್ಲು. ಆದುದರಿಂದ ಕೋಮಲತೆ, ಭೀರುತ್ವ, ಚಂಚಲತೆಗಳಿಂದ ಕೂಡಿದ ವ್ಯಕ್ತಿಯನ್ನು ದುರ್ಭೇದ್ಯವೂ ಸ್ಥಿರವೂ ಆದ ವ್ಯಕ್ತಿಯನ್ನಾಗಿ ಯೇಸುವು ಪರಿವರ್ತಿಸುವುದಾಗಿ ಆಶ್ವಾಸನೆಯನ್ನಿತ್ತನು. ಮುಂದೆ ಹಾಗೆಯೇ ನಡೆಯಿತು. ಅದನ್ನು ನಾವು ತಿಳಿಯಲಿರುವೆವು.

ದ್ವಿತೀಯ ಸಂದರ್ಭವು ಯೇಸುವಿನ ಪ್ರಚಾರಕಾಲದ ಉತ್ತರ ಭಾಗದಲ್ಲಿ ನಡೆಯಿತು. ಯೇಸುವು ಪವಾಡಗಳನ್ನು ಮಾಡುತ್ತ, ತನ್ನ ಸಂದೇಶವನ್ನು ಪಸರಿಸುತ್ತ ಸೆಜಾರಿಯೋ ಫಿಲಿಪ್ಪಿ ಎಂಬಲ್ಲಿಗೆ ಬಂದನು. ಅಲ್ಲಿ ಆತನು ತನ್ನ ಶಿಷ್ಯರೊಡನೆ 'ಮಾನವ ಪುತ್ರನನ್ನು ಜನಸಾಮಾನ್ಯರು ಯಾರೆಂದು ಹೇಳುವರು' ಎಂದು ವಿಚಾರಿಸಿದನು. ಶಿಷ್ಯರು ತಾವು ಜನರಿಂದ ಕೇಳಿದುದನ್ನು ತಿಳಿಸಿದರು. ಕೆಲವರು ಆತನನ್ನು ಸ್ನಾನಿಕ ಯೋಹಾನನೆಂದೂ, ಕೆಲವರು ಎಲಿಯಾಸನೆಂದೂ, ಇನ್ನಿತರರು ಯೆರೆಮೀಯಸ್ ಅಥವಾ ಇನ್ನೊಬ್ಬ ಪ್ರವಾದಿಯೆಂದೂ ಹೇಳುತಿದ್ದರು. ಯೇಸುವು ಅದನ್ನು ಕೇಳಿ, ತನ್ನನ್ನು ಕುರಿತು ಅವರ ಭಾವನೆಯನ್ನು ವಿಚಾರಿಸಿದನು. ಇತರರೆಲ್ಲರೂ ಆತನನ್ನೇ ನೋಡುತ್ತಿರಲು ಸಿಮೋನ— ಪೇತ್ರನು ಉತ್ತರಕೊಡುತ್ತ

"ಜೀವಂತ ಭಗವಂತನ ಪುತ್ರ ಕ್ರಿಸ್ತರು ನೀವಾಗಿರುವಿರಿ" (ಮತ್ತೇಯ ೧೬, ೧೬) ಎಂದನು.

ಶಿಷ್ಯರೆಲ್ಲರ ಸಮಕ್ಷದಲ್ಲಿ ಪೇತ್ರನೇ ಯೇಸುವಿನ ದೈವಿಕ ಪುರುಷತ್ವವನ್ನು ಬಹಿರಂಗವಾಗಿ ಒಪ್ಪಿಕೊಂಡನು. ಯೇಸುವಿಗೆ ಅದು ಮೊದಲೇ ತಿಳಿದಿತ್ತು. ಆದುದರಿಂದಲೇ ಆತನ ಹೆಸರನ್ನು ಪರಿವರ್ತಿಸಿದ್ದನು. ಆ ರೀತಿಯ ಸ್ಪಷ್ಟೋಕ್ತಿಗೆ ಬಹುಮಾನವಾಗಿ ಯೇಸುವು,

"ಯೋನಾಸನ ಪುತ್ರ ಸಿಮೋನನೇ, ನೀನೇ ಧನ್ಯನು. ರಕ್ತಮಾಂಸಗಳಿಂದ ಕೂಡಿದ ದೇಹವು ನಿನಗದನ್ನು ಪ್ರಕಟಗೊಳಿಸಿದುದಲ್ಲ; ಆದರೆ ಮೋಕ್ಷದಲ್ಲಿರುವ ನನ್ನ ಪಿತನೇ, ನಿನಗಿದನ್ನು ಸ್ಪಷ್ಟಪಡಿಸಿದ್ದಾನೆ. (ಬಂಡೆಗಲ್ಲೆಂಬ ಅರ್ಥದಲ್ಲಿ) ನೀನು ಪೇತ್ರನಾಗಿರುವೆ. ಈ ಬಂಡೆಗಲ್ಲಿನ ಮೇಲೆ ನನ್ನ ಶ್ರೀಸಭೆಯನ್ನು ರಚಿಸುವೆನು. ನರಕ ದ್ವಾರಗಳು ಅದನ್ನು

ಜಯಿಸಲಾರವು. ಮಾತ್ರವಲ್ಲ ಮೋಕ್ಷರಾಜ್ಯದ ಬೀಗದ ಕೈಗಳನ್ನು ನಿನಗೆ ನಾನು ಕೊಡುವೆನು. ಯಾವುದನ್ನು ಭೂಲೋಕದಲ್ಲಿ ನೀನು ಬಂಧಿಸುವೆಯೋ ಅದು ಪರಲೋಕದಲ್ಲಿಯೂ ಬಂಧಿಸಲ್ಪಡುವುದು. ಯಾವುದನ್ನು ಭೂಲೋಕದಲ್ಲಿ ನೀನು ಬಿಡಿಸುವೆಯೋ ಅದು ಪರಲೋಕದಲ್ಲಿಯೂ ಬಿಡಿಸಲ್ಪಡುವುದು" (ಮತ್ತಾಯ ೧೬, ೧೮-೧೯)

"ನನ್ನ ಕುರಿಗಳನ್ನು ಮೇಯಿಸು"

ಯೇಸುವಿನ ಮರಣಾನಂತರ ಆತನ ಪುನರುತ್ಥಾನದಲ್ಲಿ ಆನಂದವನ್ನು ಪಡೆದರೂ ಶಿಷ್ಯರು ಮುಂದಿನ ಕಾರ್ಯವನ್ನು ಯೋಚಿಸತೊಡಗಿದರು. ಸಿಮೋನನು ತನ್ನ ಮೇಲೆ ಹೊರಿಸಿದ ಹೊರೆಯನ್ನು ಕುರಿತು ವಿವೇಚಿಸುತ್ತಿದ್ದನು. ತನ್ನ ಗುರುವು ಇಹದಲ್ಲಿಯೂ ಪರದಲ್ಲಿಯೂ 'ಬಂಧಿಸುವ' 'ಬಿಡಿಸುವ', ಅಧಿಕಾರವನ್ನು ಸೂಚಿಸಿದ್ದನು. ಹಾಗಿದ್ದರೂ ಆಕಾಲದಲ್ಲಿ ಆತನು ಬಹುವಾಗಿ ಯೋಚಿಸಿ, ಕೊನೆಗೆ ತನ್ನ ಮೂಲವೃತ್ತಿಯಾದ ಜಾಲಗಾರತನಕ್ಕೆ ಹೋಗಲು ನಿಶ್ಚಯಿಸಿದನು. ಹಾಗೆ ಕಾಯಕವನ್ನು ಮಾಡದೆ ನಿರ್ವಾಹವಿದ್ದಿಲ್ಲ. ಯೇಸುವು ಆತನ ಶಿಷ್ಯರೂ ಪರಸ್ಪರ ಸಹಕಾರದಿಂದ ಜೀವಿಸುತಿದ್ದರು. ಅವರ ಅರ್ಥವ್ಯವಸ್ಥೆಯನ್ನು ನೋಡುತ್ತ, ಕೋಶಾಧಿಕಾರಿಯಾಗಿದ್ದ ಯೂದಾನನು ಆತ್ಮಹತ್ಯೆಮಾಡಿಕೊಂಡಿದ್ದನು. ಹೀಗಾಗಿ ಉದರಪೋಷಣೆಗಾಗಿ ನಾಯಕನೇ ಹೊರಡಬೇಕಾಯಿತು.

ಜಾಲಗಾರತನವು ಪೇತ್ರನಿಗೆ ಹೊಸವೃತ್ತಿಯಾಗಿರಲಿಲ್ಲ. ಯೇಸುವನ್ನು ಹಿಂಬಾಲಿಸುವ ಮುನ್ನ ಅವನು ಜಾಲಗಾರನಾಗಿ ಸ್ವತಂತ್ರ ನಾವೆಯೊಂದನ್ನು ಪಡೆದಿದ್ದನು. ಅದನ್ನು ಪುನಃ ಪಡೆದನು. ಅಂದಿನ ರಾತ್ರಿಯಲ್ಲಿ ಪೇತ್ರನೊಡನೆ, ಭಾರತಕ್ಕೆ ಕ್ರಿಸ್ತಸಂದೇಶವನ್ನು ತಂದ ತೋಮಸನೂ, ನಾತಾನಿಯಲ್, ಯೋಹಾನ ಹಾಗೂ ಆತನ ಸಹೋದರ ಯಾಕೋಬ (ಹಿರಿಯ)ನೂ ಇನ್ನಿಬ್ಬರೂ ಇದ್ದರು.

ಪೇತ್ರನ ನಾವೆಯು ಸರೋವರದ ನಡುವಿಗೆ ಬಂದಿತು. ಅವರು ಅದೆಷ್ಟು ಪ್ರಯತ್ನಿಸಿದರೂ ಒಂದಾದರೂ ಮೀನು ಅವರ ಬಲೆಗೆ ಬೀಳಲಿಲ್ಲ.

ಕೊನೆಗೆ ಉಷಾಕಾಲದಲ್ಲಿ ಅವರು ದಡದೆಡೆಗೆ ನಿರಾಶೆಯಿಂದಲೇ ಹಿಂತಿರುಗಿದರು. ದಡದಿಂದ ಸುಮಾರು ಮುನ್ನೂರು ಗಜ ದೂರವಿರುವಾಗ ಆ ಮುಂಬೆಳಕಿನಲ್ಲಿ ದಡದ ಮೇಲೊಬ್ಬನು ನಿಂತಿರುವುದನ್ನವರು ನೋಡಿದರು. ಆತನು, "ಮಕ್ಕಳಿರಾ, ಮೀನು ದೊರೆಯಿತೋ" ಎಂದು ಪ್ರಶ್ನಿಸಿದನು. ಪೇತ್ರನು ನಕಾರವನ್ನು ಉತ್ತರವಾಗಿತ್ತನು. "ನಿಮ್ಮ ಬಲೆಯನ್ನು ದೋಣಿಯ ಬಲಗಡೆಯಲ್ಲಿ ಎಸೆಯಿರಿ, ಮೀನು ಸಿಗುವುದು" ಎಂದು ದಡದಲ್ಲಿ ನಿಂತವನು ಹೇಳಿದನು.

ದಡದಿಂದ ಬಂದ ಅಧಿಕಾರವಾಣಿಯ ಸೂಚನೆಯನ್ನು ಪೇತ್ರ ಮೊದಲಾದವರು ಸ್ವೀಕರಿಸಿ, ಬಲೆ ಬೀಸಿದರು. ಕ್ಷಣಾರ್ಧದಲ್ಲಿ ಬಲೆಯಲ್ಲಿ ಮೀನು ತುಂಬಿರುವಂತೆ ತೋರಿತು. ಹಿಂದೆ ತಮ್ಮ ಗುರುವಿನ ಆದೇಶದಿಂದ ಅಂತಹ ರೀತಿಯಲ್ಲಿ ಮೀನು ಹಿಡಿದ ಘಟನೆಯು ಸ್ಮರಣೆಗೆ ಬಂದು, ಆ ಅಧಿಕಾರವಾಣಿಯು ಯೇಸುವಿನದಾಗಿರಬಹುದೆಂದು ಊಹಿಸಿ, ಯೋಹಾನನು 'ಅದೋ ನಮ್ಮ ಸ್ವಾಮಿ' ಎಂದು ಪೇತ್ರನಿಗೆ ತೋರಿಸಿದನು. ಕೂಡಲೇ ಯೇಸುವನ್ನು ಸಮೀಪಿಸುವ ಬಯಕೆಯಿಂದ ಪೇತ್ರನು ದೋಣಿಯಿಂದ ನೀರಿಗೆ ಹಾರಿ, ಈಸಿಕೊಂಡು ಯೇಸುವಿನ ಸಾಮೀಪ್ಯವನ್ನು ಸೇರಿದನು. ಉಳಿದವರು ದೋಣಿಯನ್ನು ನಡೆಸಿಕೊಂಡು ಬಂದರು.

ದಡದಮೇಲೆ ಯೇಸುವು ನಿಂತಿದ್ದನು; ಬಿಲೆಯೊಂದು ಉರಿಸಲ್ಪಟ್ಟಿತು. ಬಿಸಿಯಾದ ರೊಟ್ಟಿಗಳು ಪರಿಮಳವನ್ನು ಬೀರುತ್ತಿದ್ದುವು. ಶಿಷ್ಯರು ಹಸನ್ಮುಖಗಳಿಂದ ಯೇಸುವನ್ನು ಸಮೀಪಿಸಿ, ಅಂದಿನ ಹಿಡಿತವನ್ನು ಎಣಿಸಿದರು: ನೂರೈವತ್ತಮೂರು ದೊಡ್ಡ ಮೀನುಗಳಿದ್ದುವು. ಕೆಲವನ್ನು ಅಲ್ಲಿಯೇ ಸಿದ್ಧವಾದ ಒಲೆಯಲ್ಲಿ ಹುರಿದರು. ಭೋಜನಕ್ಕೆ ಸಿದ್ಧವಾಯಿತು. ಎಲ್ಲರೂ ತಮ್ಮ ಗುರುವಿನೊಡನೆ ಉಂಡರು.

ಊಟದ ಬಳಿಕ ಯೇಸುವು ಬಿರುಸುಸ್ವಭಾವದ ಪೇತ್ರನನ್ನು ನೋಡಿದನು. ಅಹುದು, ಆತನು ತನ್ನ ಬಿರುಸು ಗುಣವನ್ನು ಹಲವು ಸಲ ಪ್ರದರ್ಶಿಸಿದ್ದನು. ಇಹಪರಗಳಲ್ಲಿ 'ಬಂಧಿಸುವ' 'ಬಿಡಿಸುವ' ಅಧಿಕಾರವನ್ನು ಆಶ್ವಾಸಿಸಿದ ಮರುಗಳಿಗೆಯಲ್ಲಿ ಯೇಸುವು ತನ್ನ ಯಾತನಾಮಯ ಕೊನೆಗಾಲದ ವಿವರಗಳನ್ನೂ ಮರಣವನ್ನೂ ಪುನರುತ್ಥಾನವನ್ನೂ

ತಿಳಿಸಿದನು, ಆದರೆ ಪೇತ್ರನಿಂದ ಅದನ್ನು ತಡೆಯಲಾಗದೆ, 'ರಕ್ಷಕ'ನಾದ ಅವನಿಗೆ ಅಂತಹ ಸ್ಥಿತಿಯೊದಗದೆಂದು ಊಹಿಸಿ ಯೇಸುವನ್ನು ಗದರಿಸಿದನು. ಅದಕ್ಕುತ್ತರವಾಗಿ ಯೇಸುವು

"ಸೈತಾನನೇ, ನನ್ನಿಂದ ಹಿಂದೆ ಹೋಗು ; ನೀನು ಮಾನವರ ಕಾರ್ಯಗಳನ್ನು ಮೆಚ್ಚುತ್ತಿಯಲ್ಲದೆ ಭಗವಂತನವುಗಳನ್ನಲ್ಲ" (ಮತ್ತೀಯ ೧೬, ೨೩)

ಎಂದನು. ಮರಣದ ಮುನ್ನ ಮಾಡಿದ ಭೋಜನ ಕಾಲದಲ್ಲಿಯೂ ಪೇತ್ರನು ತನ್ನ ಒರಟು ಸ್ವಭಾವವನ್ನು ಪ್ರದರ್ಶಿಸದೆ ಬಿಡಲಿಲ್ಲ. ಯೇಸುವು ತನ್ನ ಮರಣವು ಸಮೀಪಿಸಿದೆಯೆಂದು ತಿಳಿಸಲು ಪೇತ್ರನು ತಾನೂ ತನ್ನ ಗುರುವಿನೊಡನೆ ಮರಣಕ್ಕೂ ಸಿದ್ಧನಾಗಿರುವನೆಂದು ಹೇಳಿದನು. ಪ್ರತ್ಯುತ್ತರವಾಗಿ ಯೇಸುವು,

"ಈ ದಿನ, ಈ ರಾತ್ರಿಯೇ ಕೋಳಿಯು ಎರಡುಬಾರಿ ಕೂಗುವ ಮುನ್ನ ನೀನು ಮೂರು ಬಾರಿ ನನ್ನ ಪರಿಚಯದ ನಿರಾಕರಣೆಯನ್ನು ಮಾಡುವೆ (ಮಾರ್ಕ್ ೧೪, ೩೦)

ಎಂದನು. ಹಾಗೆಯೇ ಆಯಿತು. ಮಾತ್ರವಲ್ಲ ಆ ಭೋಜನದ ಮುನ್ನ ಯೇಸುವು ಶಿಷ್ಯರೆಲ್ಲರ ಪಾದ ಪ್ರಕ್ಷಾಳನಕ್ಕೆ ತೊಡಗಿದಾಗ, ಸ್ವಾಮಿಯ ಕಾರ್ಯವನ್ನು ಸಹಿಸದೆ, ತನ್ನ ಪಾದಗಳನ್ನು ತೊಳೆಯಬಿಡಲಿಲ್ಲ. ಆದರೆ ಯೇಸುವು ಹಾಗೆ ನಿರಾಕರಿಸಿದಾಗ ತಮ್ಮೊಳಗಿನ ಸಂಬಂಧವು ಕೊನೆಗೊಳ್ಳುವುದೆಂದು ತಿಳಿಸಿದಾಗ, ಆತನು ತನ್ನ ಪಾದಗಳನ್ನಲ್ಲದೆ, ತನ್ನ ಹಸ್ತಗಳನ್ನೂ ತಲೆಯನ್ನೂ ತೊಳೆಯುವಂತೆ ಕೇಳಿಕೊಂಡನು. ಅದೇ ಪೇತ್ರನು ಯೇಸುವು ಗೆತ್ಸೆಮನಿಯಲ್ಲಿ ಪ್ರಾರ್ಥಿಸುತ್ತಿರಲು ಯಾವ ಯೋಚನೆಯೂ ಇಲ್ಲದೆ ನಿದ್ರೆಮಾಡಿದನು. ಯೇಸುವನ್ನು ಬಂಧಿಸಿದಾಗ ತನ್ನಲ್ಲಿದ್ದ ಶಕ್ತಿಯಿಂದ ಹಿರಿಯ ಯಾಜಕನ ಸೇವಕನ ಕಿವಿಯನ್ನು ಕೊಯ್ದು ಬಿಟ್ಟನು. ಯೇಸುವು ಪೇತ್ರನನ್ನು ಗದರಿಸಿ, ಕಿವಿಯನ್ನು ಸರಿಗೊಳಿಸಿದನು. ಇಂತಹ ಪೇತ್ರನನ್ನು ಯೇಸುವು ನೆಟ್ಟದೃಷ್ಟಿಯಿಂದ ನೋಡುತ್ತ,

"ಯೋಹಾನನ ಮಗನಾದ ಸಿಮೋನನೇ, ಇವರಿಗಿಂತಲೂ ಮಿಗಿಲಾಗಿ ನನ್ನನ್ನು ನೀನು ಪ್ರೀತಿಸುತ್ತೀಯಾ?" (ಯೋಹಾನ ೨೧, ೧೫)

ಎಂದು ಪ್ರಶ್ನಿಸಿದನು. ಯೇಸುವಿನ ಸ್ವರದಲ್ಲಿ ದೃಢತೆಯಿದ್ದಿತು. 'ಇವರಿಗಿಂತಲೂ ಮಿಗಿಲಾಗಿ' ಎಂಬ ನುಡಿಗಟ್ಟು ಪೇತ್ರನನ್ನು ಕುಲುಕಿಸಿತು. ಕೇವಲ ಶಿಷ್ಯನೊಬ್ಬನಾಗಿ ಪ್ರಶ್ನಿಸಲ್ಪಡದೆ, ಇಹಪರಗಳಲ್ಲಿ 'ಬಂಧಿಸುವ -ಬಿಡಿಸುವ' ಅಧಿಕಾರವನ್ನು ಪಡೆದ ಬಂಡೆಗಲ್ಲಿನಂತೆ ಭದ್ರನಾಗಬೇಕಾದ, ಪೇತ್ರನಾದ ತನ್ನನ್ನು ಕೇಳಿದುದನ್ನು ತಿಳಿದು ಅವನು "ಆಹುದು ಸ್ವಾಮಿ; ನಿಮ್ಮನ್ನು ನಾನು ಪ್ರೀತಿಸುವೆನೆಂದು ನೀವೇ ಬಲ್ಲಿರಿ" ಎಂದು ಉತ್ತರವಿತ್ತನು.

"ನನ್ನ ಕುರಿಮರಿಗಳನ್ನು ಪಾಲಿಸು" (ಯೋಹಾನ ೨೧, ೧೫ ಪುನಃ ಮೌನವು ಅಲ್ಲಿ ಬಂತು. ಉತ್ತರಕ್ಷಣದಲ್ಲಿಯೇ ಯೇಸುವು ಪೇತ್ರನ ಹೃದಯಾಂತರಾಳವನ್ನು ಮುಟ್ಟುವಂತೆ ಮೊದಲನೆಯ ಪ್ರಶ್ನೆಯನ್ನೇ ಪೇತ್ರನ ಮುಂದಿಟ್ಟನು. ಪೇತ್ರನೂ ಮೊದಲಿನ ಉತ್ತರವನ್ನು ಕೊಟ್ಟು ಯೇಸುವಿನ "ನನ್ನ ಕುರಿಮರಿಗಳನ್ನು ಪಾಲಿಸು" ಎಂಬ ಉತ್ತರವನ್ನೇ ಪಡೆದನು. ಪುನಃ ಮೌನವು ನೆರೆಯಿತು. ಪುನಃ ಮೌನವನ್ನು ಭೇದಿಸಿ ಯೇಸುವು ಮೂರನೆಯ ಬಾರಿ ಅದೇ ಪ್ರಶ್ನೆಯನ್ನು ಪೇತ್ರನ ಮುಂದಿಟ್ಟನು. ಪೇತ್ರನಿಗೆ ಕಳವಳವಾಯಿತು. ಎರಡು ಬಾರಿಯ ಉತ್ತರದಿಂದಲೂ ತನ್ನ ಸ್ವಾಮಿಗೆ ತೃಪ್ತಿಯಾಗದುದರಿಂದ ಅವನು ಆತನಲ್ಲಿ ಸಂಪೂರ್ಣ ವಿಶ್ವಾಸವನ್ನು ಪ್ರಕಟಗೊಳಿಸುತ್ತ ಆತನ ಪಾದಗಳೆಡೆಗೆ ಬಂದು, ನಮಿಸಿ, "ಸ್ವಾಮೀ, ಸರ್ವವನ್ನೂ ನೀವು ತಿಳಿದಿರುವಿರಿ. ನಿಮ್ಮನ್ನು ನಾನು ಪ್ರೀತಿಸುವೆನೆಂದು ನೀವೇ ಬಲ್ಲಿರಿ" (ಯೋಹಾನ ೨೧)

ಎಂದನು. ಯೇಸುವಿಗೂ ತೃಪ್ತಿಯಾಯಿತು. ಉತ್ತರವನ್ನು ನೀಡುತ್ತ, "ನನ್ನ ಕುರಿಗಳನ್ನು ಮೇಯಿಸು" (ಯೋಹಾನ ೨೧, ೧೭) ಎಂದನು. ಪೇತ್ರನಲ್ಲಿ ವಿದ್ಯುತ್ ಸಂಚಾರವಾದಂತಹ ನವಾನುಭವವಾಯಿತು. ಇಹ-ಪರಗಳಲ್ಲಿ 'ಬಂಧಿಸುವ-ಬಿಡಿಸುವ' ವಿಶೇಷಾಧಿಕಾರವನ್ನು ಪಡೆದ ಭದ್ರವಾದ ಬಂಡೆಗಲ್ಲು ಎಂದು ತನ್ನ ಆರಿಸಿದ ವಿಚಾರದೊಡನೆ, ಯೇಸುವಿನ ಕುರಿಮರಿಗಳನ್ನೂ ಮಾತ್ರವಲ್ಲ ತಾಯಿ ಕುರಿಗಳನ್ನು ಪಾಲಿಸುವ ಅಧಿಕಾರವನ್ನು ಪಡೆದನು. ಪೇತ್ರನೂ ಇತರ ಶಿಷ್ಯರೂ ಯೇಸುವಿನ ಕುರಿಮರಿ

ಗಳನ್ನು ಅರ್ಥಾತ್ ಎಲ್ಲ ಅನುಯಾಯಿಗಳ ಮಾರ್ಗದರ್ಶನವನ್ನು ಮಾಡಬೇಕಾಗಿತ್ತು. ಆದರೆ ಪೇತ್ರನಿಗೆ ಆ ಕುರಿಮರಿಗಳ ಹಿರಿಯರಾದ ತಾಯಿ ಕುರಿಗಳನ್ನೂ ಪಾಲಿಸುವ ಹಿರಿಯ ಅಧಿಕಾರವು ಬಂತು. ಯೇಸುವಿನ ಕೊನೆಗಾಲದಲ್ಲಿ ಪೇತ್ರನು ತನ್ನ ಗುರುವಿನ ಪರಿಚಯ ನಿರಾಕರಣೆಯನ್ನು ಮೂರು ಬಾರಿ ಮಾಡಿದ್ದನು. ಆದರ ಪ್ರತಿಕ್ರಿಯೆಗಾಗಿ ಪೇತ್ರನು ಮೂರು ಸಲ ತನ್ನ ಸ್ವಾಮಿಪ್ರೇಮವನ್ನು ವ್ಯಕ್ತಗೊಳಿಸಿದನೆಂಬ ವಿಚಾರವನ್ನು ನಾವಿಲ್ಲಿ ಸಮನ್ವಯಗೊಳಿಸಬಹುದು.

ಪೇತ್ರನಿಗೆ ಜಗದ್ಗುರುವಿನ ಹಿರಿಯಧಿಕಾರ ಬಂದಿತು. ಉತ್ತರಕ್ಷಣದಲ್ಲಿ ಯೇಸುವು ಮುಂದುವರಿಸಿದನು :

" ನಿಜ ನಿಜವಾಗಿ ನಿನಗೆ ತಿಳಿಸುತ್ತೇನೆ: ನೀನು ಎಳೆಯನಾಗಿದ್ದಾಗ, ನೀನೇ ನಿನ್ನ ಬಟ್ಟೆಯುಟ್ಟುಕೊಂಡು, ನಿನಗಿಚ್ಛೆಯಿದ್ದಲ್ಲಿ ಹೋಗುತ್ತಿದೆ. ಆದರೆ ಹರೆಯದವನಾದಾಗ ನಿನ್ನ ಹಸ್ತಗಳನ್ನು ಮುಂದೆ ನೀಡುವೆ, ಮತ್ತೊಬ್ಬನು ನಿನಗೆ ಬಟ್ಟೆಯುಡಿಸುತ್ತ, ನೀನು ಹೋಗದಲ್ಲಿಗೆ ನಿನ್ನನ್ನು ನಡೆಸುವರು–ನನ್ನನ್ನು ಅನುಸರಿಸು " (ಯೋಹಾನ ೨೧)

ಯೇಸುವಿನ ಈ ಮಾತುಗಳಿಂದ ಪೇತ್ರನಿಗೆ ಸಂತೋಷವಾಯಿತು. ತನ್ನ ಸ್ವಾಮಿಗಾಗಿ ಪ್ರಾಣವನ್ನು ನೀಡುವ, ಅದೂ ಆತನ ಕ್ರಮದಲ್ಲಿಯೇ ನೀಡುವ ಕರುಣೆಯನ್ನು ಒದಗಿಸಿದುದಕ್ಕಾಗಿ ಪೇತ್ರನು ಹರ್ಷಬಾಷ್ಪಗಳನ್ನು ಸುರಿಸಿದನು. ಮುಂದೆ ಕ್ರಿ. ಶ. ೬೭ರ ಜೂನ್ ತಿಂಗಳಲ್ಲಿ ರೋಮಿನ ಚಕ್ರವರ್ತಿ ನಿರೋವು ಕೊಟ್ಟ ಆಣತಿಯಂತೆ ಕೇವಲ ಕ್ರೈಸ್ತನೆಂಬ ಕಾರಣದಿಂದ, ಆದಾವ ಬಗೆಯ ವಿಚಾರಣೆಯೂ ಆಗದೆ ಸಿಲುಬೆಯ ಮರಣದಂಡನೆಯನ್ನು ಪಡೆದನು. ಪೇತ್ರನನ್ನು ನಗರದ ಹೊರವಲಯದ ವಾಟಿಕಾನ್ (Vatican) ಭಾಗಕ್ಕೊಯ್ದು ಅಲ್ಲಿ ಸಿಲುಬೆಗೆ ಜಡಿಯಲು ಸಿದ್ಧತೆ ಮಾಡಿದರು. ಆದರೆ ಧೀರನಾದ ಪೇತ್ರನು ತನ್ನ ವಧೆಗಾಗಿ ಬಂದ ಸೈನಿಕರಲ್ಲಿ ತನ್ನೊಂದು ಕೊನೆಯ ಬಯಕೆಯನ್ನು ಮುಂದಿಟ್ಟನು.

" ಪ್ರಿಯರೇ, ನಮ್ಮ ಸ್ವಾಮಿಯಂತೆ ಸಿಲುಬೆಯ ಮೇಲೆ ಸಾಯಲು ನಾನು ಅಯೋಗ್ಯನು. ನಾನು ಸಿಲುಬೆಯ ಮೇಲೆ ಸಾಯಲೇ ಬೇಕೆಂದಾದರೆ ಹಾಗೆಯೇ ಮಾಡಿರಿ–ತಲೆ ಮಾತ್ರ ಕೆಳಗಾಗಲಿ" ಸೈನಿಕರು

ಎಂಬತ್ತರ ಮುದುಕನ ಕೊನೆಯ ಬಯಕೆಯನ್ನು ನಿರಾಕರಿಸಲಿಲ್ಲ. ಒಂದು ಗಳಿಗೆಯ ಅನಂತರ ಪೇತ್ರನು ತಲೆಕೆಳಗಾಗಿ, ಕಾಲು ಮೇಲಾಗಿ ಸಿಲುಬೆಯ ಮೇಲೆ ತೂಗುತ್ತಿದ್ದನು. ಆತನ ಬಿಳಿಯ ಕೂದಲು, ಗಾಳಿಯಲ್ಲಿ ಹಾರುತ್ತಿತ್ತು. ಕಾಲುಗಳ ಗಾಯದಿಂದ ಸುರಿದ ನೆತ್ತರು ಗಡ್ಡವನ್ನು ತೊಯ್ಯುತ್ತ ಹರಿಯುವ ಮೊಗದಮೇಲೆ ಶಾಶ್ವತ ಶಾಂತಿಯ ಕಳೆಯು ನೆಲೆಸಿತ್ತು.

ಪ್ರಥಮ ಜಗದ್ಗುರು ಪೇತ್ರನ ವಧೆಯಲ್ಲಿ ವೈರಿವರ್ಗವು ಸಂತೋಷವನ್ನು ತಾಳಿತು; ಜಗದ್ಗುರುವನ್ನು ಅಳಿಸಲು ಅವರಿಂದಾಗಲಿಲ್ಲ: ಆದಾಗಲೇ ಲಿನುಸ್ ಎಂಬಾತನು ಪೇತ್ರನ ಸ್ಥಾನವನ್ನು ಪಡೆದಿದ್ದನು.

ಪೇತ್ರನ ನಾಯಕತ್ವ

ಈ ಮೊದಲು ಸೂಚಿಸಿದ ಯೇಸುವಿನ ಸಾಮ್ಯವೊಂದನ್ನು ನಾವು ಸ್ಮರಿಸಬೇಕು. ಬುದ್ಧಿವಂತನಾದ ಮನುಷ್ಯನು ಭದ್ರವಾದ ಬಂಡೆಗಲ್ಲಿನ ಮೇಲೆ ತನ್ನ ಮಂದಿರವನ್ನು ರಚಿಸಿದನು. ಭಗವಾನ್ ಯೇಸುಕ್ರಿಸ್ತನೂ ತನ್ನ ಧರ್ಮಸಂಸ್ಥೆಯನ್ನು ಅರ್ಥಾತ್ ಶ್ರೀಸಭೆಯನ್ನು ಪೇತ್ರನೆಂಬ ಬಂಡೆಗಲ್ಲಿನ ಮೇಲೆ ರಚಿಸಿದನು. ಬುದ್ಧಿವಂತನು ನಿರ್ಮಿಸಿದ ಮಂದಿರಕ್ಕೆ ಜಡಿಮಳೆ, ಹರಿನೆರೆಗಳಿಂದ ಹಾನಿಯಾಗಲಿಲ್ಲ. ಯೇಸುವಿನ ಧರ್ಮಸಂಸ್ಥೆಯು ದುರಭಿಮಾನ, ಸ್ವಾರ್ಥ ಮೊದಲಾದ ಕ್ಷುದ್ರಭಾವನೆಗಳಿಂದಾಗಲಿ, ಅಸತ್ಯ ಮೊದಲಾದ ಮಹಾನರ್ಥಗಳಿಂದಾಗಲಿ ಪರಿಣಾಮ ಪಡೆಯಲಿಲ್ಲ. ಬದಲು ದಿನದಿಂದ ದಿನಕ್ಕೆ ವೃದ್ಧಿಯಾಗಿ ಜಗತ್ತಿನ ಪ್ರತಿ ಜನಾಂಗಕ್ಕೆ ಕ್ರೈಸ್ತ ಸಂದೇಶವು ಮುಟ್ಟಿದೆ – ಮುಟ್ಟುತ್ತಲಿದೆ. ಕೆಳಗಿನ ಮಾತುಗಳನ್ನು ನಾವು ಲಕ್ಷ್ಯಕ್ಕೆ ತರಬೇಕು:

"ಇಹದಲ್ಲಿಯೂ ಪರದಲ್ಲಿಯೂ ಸರ್ವಾಧಿಕಾರವು ನನಗೆ ನೀಡಲಾಗಿದೆ. ಆದುದರಿಂದ ನೀವು ಹೋಗಿ, ಸಕಲ ಜನಾಂಗಗಳಿಗೂ ಬೋಧಿಸಿರಿ. ಪಿತನ, ಪುತ್ರನ, ಪವಿತ್ರಾತ್ಮನ ಹೆಸರಿನಲ್ಲಿ ಜ್ಞಾನಸ್ನಾನವನ್ನು ನೀಡಿರಿ. ನಾನು ನಿಮಗೆ ಆಜ್ಞಾಪಿಸಿದುದೆಲ್ಲವನ್ನೂ ಆಚರಿಸಲು

ಅವರಿಗೆ ಬೋಧಿಸಿರಿ. ಇದೋ ನಾನು ನಿಮ್ಮೊಡನೆ ಎಲ್ಲ ದಿನಗಳಲ್ಲೂ, ಜಗದಂತ್ಯದವರೆಗೂ ಇದ್ದೇನೆ". (ಮತ್ತೇಯ ೨೮, ೧೮–೨೦)

"ಕ್ರಿಸ್ತನು ಶ್ರೀ ಸಭೆಯ ಪತಿಯಾಗಿರುವಂತೆ ಪತಿಯು ಪತ್ನಿಯ ಮಸ್ತಕವು". (ಎಫೆಸ್ ೫, ೨೩)

"ನೀನು ಪೇತ್ರನಾಗಿರುವೆ; ಈ ಬಂಡೆಗಲ್ಲಿನಲ್ಲಿ ನನ್ನ ಶ್ರೀಸಭೆಯನ್ನು ನಾನು ರಚಿಸುವೆನು." (ಮತ್ತೇಯ ೧೬, ೧೮)

"ಈ ಮಂದೆಗೆ ಸೇರದ ಕುರಿಗಳೂ ನನಗಿವೆ. ಅವರನ್ನೂ ನಾನು ತರಲಿದೆ, ಅವರೂ ನನ್ನ ಸ್ವರವನ್ನಾಲಿಸುವರು. ಆಗ ಒಂದು ಮಂದೆಯೂ, ಒಬ್ಬ ಕುರಿಪಾಲಕನೂ ಆಗುವರು." (ಯೋಗಾನ ೧೦, ೧೬)

"ಕ್ರಿಸ್ತನು ಶ್ರೀ ಸಭೆಯನ್ನು ಪ್ರೀತಿಸಿದನು ಮಾತ್ರವಲ್ಲ ಅದನ್ನು ಪವಿತ್ರಗೊಳಿಸುವುದಕ್ಕಾಗಿ ತನ್ನನ್ನೇ ಅದಕ್ಕಾಗಿ ಸಮರ್ಪಿಸಿದನು". (ಎಫೆಸ್ ೫, ೨೫–೨೬)

"ನಿಮ್ಮ ಸ್ವರ್ಗೀಯ ಪಿತನು ಪರಿಪೂರ್ಣನಾಗಿರುವಂತೆ ನೀವೂ ಪರಿಪೂರ್ಣವಾಗಿರಿ". (ಮತ್ತೇಯ ೫, ೪೮)

"ನಾನು ಪಿತನನ್ನು ಕೇಳಿದರೆ, ನಿಮ್ಮೊಡನೆ ಸರ್ವದಾ ಜೀವಿಸುವ ಸತ್ಯದ ಆತ್ಮನಾದ ಇನ್ನೊಬ್ಬ ಮಧ್ಯಸ್ತನನ್ನು ಆತನು ನಿಮಗೆ ಕಳುಹಿಸುವನು (ಯೋಹಾನ ೧೪, ೧೬, ೧೭) ಸತ್ಯಾತ್ಮನು ಬಂದಾಗ, ಸರ್ವ ಸತ್ಯವನ್ನೂ ಆತನು ನಿಮಗೆ ಬೋಧಿಸುವನು" (ಯೋಗಾನ ೧೬, ೧೩)

"ನಿಮಗೆಲ್ಲರಿಗೂ ಭಗವಂತನೊಬ್ಬನೇ, ವಿಶ್ವಾಸವು ಒಂದೇ; ಜ್ಞಾನ ಸ್ನಾನವೂ ಒಂದೇ" (ಎಫೆಸ್ ೪, ೫)

"ನನ್ನ ಕುರಿಮರಿಗಳನ್ನು ಪಾಲಿಸು; ನನ್ನ ಕುರಿಗಳನ್ನೂ ಪಾಲಿಸು" (ಯೋಹಾನ ೨೧, ೧೫, ೧೭).

ಪೇತ್ರನೂ ಅವನ ತರುವಾಯ ಆತನ ಸ್ಥಾನಕ್ಕೆ ಬಂದವರೂ ಕ್ರಿಸ್ತನು ಸಂಸ್ಥಾಪಿಸಿದ ಶ್ರೀಸಭೆಯ ದೃಗ್ಗೋಚರ ನಾಯಕರಾಗಿ ಸಕಲ ಕ್ರೈಸ್ತರನ್ನು ಐಕ್ಯಕ್ಕೆ ತಂದರು. ಹೀಗಾಗಿ ವಿಶ್ವಾಸದ ಐಕ್ಯವು ಸುಲಭವಾಯಿತು. ಆದುದರಿಂದ ಕ್ರಿಸ್ತಮತವು ಯೇಸುವಿನ ಪ್ರತಿನಿಧಿ ಪೇತ್ರನ ಆತನ ಬಳಿಕ ಆಸ್ಥಾನವನ್ನೇರಿದವರ ನಾಯಕತ್ವದಲ್ಲಿ ವಿಶ್ವಾಸದ ಐಕ್ಯ,

ಆರಾಧನೆಯ ಪಿತರೂಪತೆ, ಧರ್ಮಸೂತ್ರಗಳಿಗೆ ಪರಿಪೂರ್ಣ ವಿಧೇಯತೆಗಳಿಂದ ಇಂದಿನವರೆಗೆ ಇಳಿದು ಬಂದಿದೆ.

ಕ್ರಿಸ್ತನ ಶ್ರೀಸಭೆಯ ನಾಯಕನಾದ ಪೇತ್ರನೂ ಅವನ ತರುವಾಯ ಆ ಸಾಲಿಗೆ ಬಂದವರೂ ಸತ್ಯಕ್ಕೆ ಚ್ಯುತಿ ಬಾರದಂತೆ ಧರ್ಮಬೋಧೆಯನ್ನು ಮಾಡಿರುವರು. ಹಾಗೆಂದು ಹೇಳಿದಾಗ ಜಗದ್ಗುರುವಾದವರೆಲ್ಲರೂ ಪವಿತ್ರ ಮೂರ್ತಿಗಳೆಂದು ತಿಳಿಯಬಾರದು. ಆದರೆ ಧಾರ್ಮಿಕ ತತ್ವಗಳನ್ನು ಪ್ರತಿಪಾದಿಸುವಾಗ, ಪ್ರಥಮ ಜಗದ್ಗುರು ಪೇತ್ರನಿಗೆ ಆಶ್ವಾಸನೆಯಿತ್ತ ಸಹಾಯವು ಮತ್ತಿನವರಿಗೆ ದೊರೆಯುವುದೆಂದು ನಾವು ತಿಳಿಯಬೇಕು. ಆದರೆ ಆ ಜಗದ್ಗುರುಗಳ ವೈಯಕ್ತಿಕ ಜೀವನವು ಆ ಉಚ್ಚಸ್ಥಾನಕ್ಕೆ ವ್ಯತಿರಿಕ್ತವಾಗಿರಬಹುದು. ಬಹುಹಿಂದೆ ಅತ್ಯಂತ ಸ್ವಾರ್ಥಿಗಳೂ, ನೈತಿಕ ಮನೋಬಲವಿಲ್ಲದವರೂ ಕಾಮುಕರೂ ಜಗದ್ಗುರುವಾಗಿ ಆರಿಸಲ್ಪಟ್ಟಿರುವರು. ಆದರೂ ತಮ್ಮ ಸ್ಥಾನದಿಂದ ಸಮಸ್ತ ಕ್ರೈಸ್ತರನ್ನು ಧರ್ಮತತ್ವಗಳಲ್ಲಿ ಮಾರ್ಗದರ್ಶನ ಮಾಡುವಾಗ ಅವರು ತಪ್ಪಿ ಬೀಳಲಿಲ್ಲ. ಆದುದರಿಂದ ಶ್ರೀಸಭೆಯು ತಪ್ಪಿ ಬೀಳದಂತೆ ಭಗವಾನ್ ಯೇಸುಕ್ರಿಸ್ತನೂ ಭಗವಾನ್ ಪವಿತ್ರಾತ್ಮನೂ ನೋಡಿಕೊಳ್ಳುತ್ತಾರೆಂಬ ವಿಷಯವು ಸ್ಪಷ್ಟವಾಗುತ್ತದೆ.

೨೬೪ ಮಂದಿಗಳು

ಪೇತ್ರನು ಕ್ರಿ. ಶ. ೬೭ರಲ್ಲಿ ವಧಿಸಲ್ಪಟ್ಟನು. ಆತನೇ ಮೊತ್ತ ಮೊದಲನೆಯ ಪೋಪಸ್ವಾಮಿಯು. (ಇಟಲಿಯನ್ ಭಾಷೆಯಲ್ಲಿ ಪಾಪಾ ಎಂದರೆ ಪಿತನೆಂದು ಅರ್ಥ). ಪೇತ್ರನು ರೋಮಿನ ಬಿಷಪನಾಗಿದ್ದನು. ಅವನ ತರುವಾಯ ಆತನ ಸಾಲಿಗೆ ಬಂದವರನ್ನು ಜಗದ್ಗುರುವೆಂದು ಕರೆಯುವರು. ಪೇತ್ರನು ಧರ್ಮದ ನಾಯಕನಾಗಿ, ಆಗಿನ ಜಗತ್ಪ್ರಸಿದ್ಧ ಸಾಮ್ರಾಜ್ಯದ ಕೇಂದ್ರವಾದ ರೋಮ್ ನಗರವನ್ನು ತನ್ನ ಕೇಂದ್ರವಾಗಿ ಆರಿಸಿಕೊಂಡನು ; ಮಾತ್ರವಲ್ಲ ಇತರ ಬಿಷಪರ ನಾಯಕನೆನಿಸಿಕೊಂಡನು. ಆದರೆ ಪೋಪಸ್ವಾಮಿಯೆಂದು ಜಗದ್ಗುರುವನ್ನು ಆದಿಯಲ್ಲಿ ಕರೆಯುತಿದ್ದಿಲ್ಲ. ಅದು ಮತ್ತೆ ರೂಢಿಗೆ ಬಂದಿತು. ಪೇತ್ರನ ಸ್ಥಾನಕ್ಕೆ, ಅರ್ಥಾತ್ ಜಗ

ದ್ಗುರು ಸ್ಥಾನಕ್ಕೆ ಕೇವಲ ಐರೋಪ್ಯರೇ ಅರ್ಹರೆಂದಿಲ್ಲ. ಪೇತ್ರನನ್ನು ಮೊದಲ್ಗೊಂಡು ಈಗ ಅಧಿಕಾರಾರೂಢರಾಗಿರುವ ಆರನೆಯ ಪಾವ್ಲರು ೨೬೪ನೆಯ ಜಗದ್ಗುರುವಾಗಿ ಯೇಸುವಿನ ಧರ್ಮಸಭೆಯ ನಾಯಕತ್ವವನ್ನು ವಹಿಸಿರುವರು. ಅವರಲ್ಲಿ ಯೂರೋಪ್, ಆಫ್ರಿಕ, ಏಶ್ಯಾದ ವಿವಿಧ ಭಾಗಗಳಿಂದ ಆರಿಸಲ್ಪಟ್ಟವರಿರುವರು. ಅವರ ಅಧಿಕಾರಾವಧಿಗಳಲ್ಲಿಯೂ ಏಕರೂಪತೆಯಿರುವುದಿಲ್ಲ. ೧೮೪೬ ರಿಂದ ೧೮೭೮ರ ವರೆಗೆ ಅಧಿಕಾರ ನಡೆಸಿದ ೯ನೆಯ ಪಿಯಾಸರು ೩೧ ವರ್ಷಗಳಷ್ಟು ದೀರ್ಘ ಕಾಲದವರೆಗೆ ಜಗದ್ಗುರುವಾಗಿದ್ದರೆ, ೨ನೆಯ ತಿಯೊದೋರ್ ಎಂಬವರು ಕ್ರಿ.ಶ. ೮೯೭ರಲ್ಲಿ ಕೇವಲ ೨೦ ದಿನಗಳವರೆಗೆ ಜಗದ್ಗುರುವಾಗಿದ್ದರು. ೧೯೬೩ನೆಯ ಜೂನ್ ತಿಂಗಳಲ್ಲಿ ಈಗಿನ ೬ನೆಯ ಪಾವ್ಲರು ಜಗದ್ಗುರುವಾಗಿ ಆರಿಸಲ್ಪಟ್ಟಿರುವರು

ಜಗದ್ಗುರುಗಳು ರೋಮಿನ ಬಿಷಪರಾಗಿರುವರು. ಪೇತ್ರನೂ ರೋಮಿನ ಬಿಷಪನಾಗಿದ್ದನು. ಅಂದಿನಿಂದ ರೋಮಿನ ಬಿಷಪರನ್ನು ಜಗದ್ಗುರುವೆನ್ನುವುದೂ ಜಗದ್ಗುರುವಾಗಿ ಆರಿಸಲ್ಪಟ್ಟವನು ರೋಮಿನ ಬಿಷಪರಾಗಿ ಅಧಿಕಾರ ವಹಿಸುವುದೂ ಆದಿಯಿಂದಲೇ ರೂಢಿಗೆ ಬಂದಿರುವುದು.

ಜಗದ್ಗುರು ಪೋಪಸ್ವಾಮಿಗಳ ನಾಯಕತ್ವದಲ್ಲಿರುವ ಸಮಸ್ತ ಕ್ರೈಸ್ತರ ಒಕ್ಕೂಟಕ್ಕೆ ಶ್ರೀಸಭೆಯೆಂದು ಹೆಸರು. ನಾಯಕರಾದ ಪೋಪಸ್ವಾಮಿಗಳು ಕೇವಲ ಧಾರ್ಮಿಕ ಗುರುಗಳಲ್ಲ. ಅವರು ರಾಜಕೀಯ ವ್ಯಕ್ತಿಗಳೂ ಅಹುದು. ಹಿಂದೆ ಕಾಲಕ್ಕನುಗುಣವಾಗಿ ಜಗದ್ಗುರುವನ್ನು ಆರಿಸುತ್ತಿದ್ದರು. ಕ್ರೈಸ್ತಮತಕ್ಕೂ ಇಸ್ಲಾಮ್ ಮತಕ್ಕೂ ಪರಸ್ಪರ ಘರ್ಷಣೆಯುಂಟಾದಾಗ ಧೀರಯೋಧರಾದ ಧರ್ಮನಾಯಕ (ಬಿಷಪ)ರನ್ನು ಪೋಪರನ್ನಾಗಿ ಆರಿಸಿರುವರು. ಆದರೆ ಈಗ ಆಧ್ಯಾತ್ಮಿಕ ಶ್ರೇಷ್ಠರನ್ನೆ ಆ ಸ್ಥಾನಕ್ಕೆ ಆರಿಸುತ್ತಿರುವರು. ಆದರೂ ಈಗಲೂ ಅವರಿಗೆ ಸ್ವತಂತ್ರವಾದ ಸಣ್ಣದೊಂದು ರಾಷ್ಟ್ರವಿದೆ. ವಿಸ್ತಾರದಲ್ಲಿ ಅದು ಬಹಳ ಕಿರಿದಾದರೂ ಅವರ ಸ್ವಂತ ಸಾಣ್ಯ ಪದ್ಧತಿ, ಅಂಚೆ ವ್ಯವಸ್ಥೆ, ಲೋಕದ ವಿವಿಧ ರಾಷ್ಟ್ರಗಳೊಡನಿರಿಸಿದ ರಾಜಕೀಯ ಸಂಬಂಧಗಳಿಂದಲೂ, ಅವರ ಕಿರೀಟಧಾರಣೆ,

ಸಿಂಹಾಸನಾರೋಹಣ ಮೊದಲಾದ ಉತ್ಸವಗಳಿಂದಲೂ ತಿಳಿಯಬಹುದು. ಪರರಾಷ್ಟ್ರಗಳ ರಾಜಕೀಯದಲ್ಲಿ ಅವರ ಹಸ್ತಕ್ಷೇಪವಿಲ್ಲ. ಆದರೂ ದೈವಿಕವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಯ ದೈವಿಕವಾಗಿ ನಿಯಮಿಸಲ್ಪಟ್ಟ ದೃಗೋಚರ ನಾಯಕರು ಅವರಾಗಿರುವುದರಿಂದ ಅಧಿಕಾರಯುತರಾಗಿ (Ex-Cathedra) ಸಾರುವ ವಿಷಯಗಳಲ್ಲಿ ಜಗತ್ತಿನ ಸರ್ವ ಕಥೋಲಿಕರೂ ತಲೆಬಾಗುತ್ತಾರೆ. ಆದರೂ ಅವರು ನಿರಂಕುಶ ಪ್ರಭುಗಳಲ್ಲ. ಬೈಬಲ್ ಅಥವಾ ಶ್ರೀಸಭೆಯ ನಿಯಮಗಳಿಗೆ ವ್ಯತಿರಿಕ್ತವಾಗಿ ಅವರು ಆಚರಿಸಲಾರರು. ಸತ್ಯ – ಅಸತ್ಯಗಳಲ್ಲಿ ಯಾವುದನ್ನು ಆದರಿಸಬೇಕೆಂದು ಅವರು ಅಧಿಕಾರವಾಣಿಯಿಂದ ಸಾರುವರಾದರೂ ಅವರೆಂದಿಗೂ ಅಸತ್ಯವನ್ನು ಎತ್ತಿ ಹಿಡಿಯರು.

ಜಗದ್ಗುರು ಪೋಪಸ್ವಾಮಿಗಳು ಲೋಕದ ಎಲ್ಲ ಕಥೋಲಿಕರನ್ನು ಸಂಬಂಧಿಸಿರುವುದರಿಂದ ಜಗತ್ತಿನ ಹಿತಕ್ಕೆ ಆದಾವುದಹಿತವೆಂದು ಅಧಿಕಾರವಾಣಿಯಿಂದ ಪ್ರಕಟಿಸುವಾಗ ತದ್ವಿರುದ್ಧವಾಗಿ ಆಚರಿಸುವವರ ಅಪರಾಧವು ಬಹಿರಂಗಗೊಳ್ಳುತ್ತದೆ. ಅದನ್ನು ಸಹಿಸಲಾಗದೆ, ಆ ನಿಯಮೋತಿಕ್ರಮಣಿಗಳು ನೈತಿಕ ಮಾರ್ಗದರ್ಶನ ಮಾಡಿದ ವ್ಯಕ್ತಿಯನ್ನು ಹಳಿಯುವುದು ಕಂಡುಬರುತ್ತದೆ. ಜಗದ್ಗುರುಗಳಂತಹ ಪವಿತ್ರ ಮೂರ್ತಿಗಳು ಲೋಕಲ್ಲಿರುವುದರಿಂದ ಸತ್ಯವು ಉಳಿದಿದೆ; ಅಂಧಕಾರವು ದೂರವಾಗುತ್ತದೆ.

ಜಗದ್ಗುರುಗಳ ಸಹಾಯಕ್ಕೆ ಕಾರ್ಡಿನಲರ ಕೂಟವಿದೆ. ಸಂಖ್ಯೆಯಲ್ಲಿ ಅವರು ೮೫ ಇರುವರು. ಕಾರ್ಡಿನಲರೇ ತಮ್ಮಲ್ಲೊಬ್ಬನನ್ನು ಜಗದ್ಗುರುವಾಗಿ ಆರಿಸುವರು. ಶುದ್ಧ ಮತದಾನದ (Voting)ಪ್ರಕಾರ ಮೂರರಲ್ಲಿ ಎರಡಂಶ ಮತ್ತು ಒಂದು ಹೆಚ್ಚಿಗೆ ಮತಗಳು ಸಿಗುವತನಕ ಮತದಾನವು ನಡೆಯುವುದು. ಮುಂಬಯಿಯ ಆರ್ಚ್‌ಬಿಷಪರಾದ ವಲೇರಿಯನ್ ಗ್ರೆಸಿಯಸರು ಕಾರ್ಡಿನಲರ ಸ್ಥಾನವನ್ನು ಪಡೆದ ಪ್ರಥಮ ಭಾರತೀಯರು.

ಜಗದ್ಗುರುಗಳು ಬಿಷಪಸ್ವಾಮಿಗಳ ಮೂಲಕ ಅಧಿಕಾರವನ್ನು ನಡೆಸುವರು.

ಭಗವಾನ್ ಯೇಸುಕ್ರಿಸ್ತನು ಸತ್ಯದ ಸ್ಥಿರತೆಗಾಗಿ ಇಹದಲ್ಲಿ ಒಂದ ಏಕಮಾತ್ರ ಧರ್ಮ ಸಂಸ್ಥೆಯನ್ನು ಸ್ಥಾಪಿಸಿರುವನೆಂದೂ, ಆ ಧರ್ಮ ಸಂಸ್ಥೆಯ ನಾಯಕನು ಆತನೇ ಆದರೂ ದೃಗ್ಗೋಚರ ನಾಯಕನಾಗಿ ಆತನ ಪ್ರತಿನಿಧಿ ಜಗದ್ಗುರುವೆಂದೂ ನಾವು ತಿಳಿದಿರುವೆವು. "ಇಹ ದಲ್ಲಿಯೂ ಪರದಲ್ಲಿಯೂ ಸರ್ವಾಧಿಕಾರವು ನನಗೆ ನೀಡಲಾಗಿದೆ. ಆದುದ ರಿಂದ ನೀವು ಹೋಗಿ ಎಲ್ಲ ಜನಾಂಗಗಳಿಗೂ ಬೋಧಿಸಿರಿ" (ಮತ್ತೀಯ ೨೮, ೧೮-೧೯)

ಎಂದು ಆದೇಶವನ್ನಿತ್ತು ಜಗತ್ತಿನ ಎಲ್ಲ ಮಾನವರಿಗೆ ಆತನ ದಿವ್ಯ ಸಂದೇಶವನ್ನು ನೀಡುವಂತೆ ಮಾಡಿದನು. ಆತನ ಮತವು ವಿಶ್ವ ಧರ್ಮ ವಾಗಬೇಕೆಂದು ತಿಳಿಸಿರುವನು. ಜಗದ್ವಿಸ್ತಾರದ ಮತವಾಗಿರುವುದರಿಂದ 'ಕಥೋಲಿಕ' (Catholic) ಎಂದೂ ಕೇಂದ್ರವು ರೋಮಿನಲ್ಲಿರುವುದ ರಿಂದ 'ರೋಮನ್' (Roman) ಎಂದೂ ಆಗಿರುವುದು. 'ರೋಮ್ ನಗರದಿಂದ ಜಗತ್ತಿಗೆ' ವ್ಯಾಪಿಸಿರುವ ಮತವೇ ರೋಮನ್ ಕಥೋಲಿಕ ಮತವು.

"ನಾನೇ ನಿಜವಾದ ದ್ರಾಕ್ಷಿಯ ಬಳ್ಳಿಯು, ನನ್ನ ಪಿತನೇ ತೋಟ ಗಾರನು. ನೀವು ನನ್ನಲ್ಲಿ, ನಾನು ನಿಮ್ಮಲ್ಲಿ ಜೀವಿಸುವಾ ; ಕೊಂಬೆಯು ಬಳ್ಳಿಯಲ್ಲಿ ಜೀವಿಸದಿದ್ದರೆ ಅದು ಫಲವನ್ನು ಪಡೆಯದಿರುವಂತೆ, ನೀವು ನನ್ನಲ್ಲಿ ಜೀವಿಸದೆ ಹೋದರೆ ಫಲವನ್ನು ಪಡೆಯಲಾರಿರಿ. ನಾನೇ ಬಳ್ಳಿಯು, ನೀವದರ ಕೊಂಬೆಗಳು" (ಯೋಹಾಗ ೧೫, ೧-೪)

"ನಿಮಗೆ ಉಪದ್ರವನ್ನು ನೀಡುತ್ತ ಕ್ರಿಸ್ತನ ಸಂದೇಶವನ್ನು ಡೊಂಕುಗೊಳಿಸುವವರು ಕೆಲವರಿದ್ದಾರೆ" (ಗಾಲಾ ೧, ೯)

"ಭಯಪಡಬೇಡಿರಿ ; ಇನ್ನುಮುಂದೆ ನೀವೇ ಜನರ ಜಾಲಗಾರ ರಾಗುವಿರಿ" (ಲೂಕ ೫, ೧೦)

"ನಿಮ್ಮನ್ನು ಆಲಿಸುವವನು ನನ್ನನ್ನು ಆಲಿಸುತ್ತಾನೆ. ನಿಮ್ಮನ್ನು ಅಲಕ್ಷಿಸುವವನು ನನ್ನನ್ನು ಅಲಕ್ಷಿಸುತ್ತಾನೆ; ನನ್ನನ್ನು ಅಲಕ್ಷಿಸುವವನು ನನ್ನನ್ನು ಕಳುಹಿಸಿದಾತನನ್ನು ಅಲಕ್ಷಿಸುತ್ತಾನೆ" (ಲೂಕ ೧೦, ೧೬)

ಕ್ರೈಸ್ತರ ವಿವಿಧ ಶಾಖೆಗಳನ್ನು ಒಂದುಗೂಡಿಸಲು ಪ್ರಯತ್ನಗಳು ನಡೆಯುತ್ತವೆ. ಪೋಪಸ್ವಾಮಿಗಳು ವಿಶ್ವ ಸಭೆ (Vatican Occumanic Council) ಯೊಂದನ್ನು ನಡೆಸಿ, ಅದರಲ್ಲಿ ವಿವಿಧ ಪ್ರಶ್ನೆಗಳನ್ನು ವಿವೇಚಿಸಿಕೊಳ್ಳಲು ವಿವಿಧ ಉಪ ಸಮಿತಿಗಳಿಗೆ ಒಪ್ಪಿಸಲಾಗಿದೆ. ಆ ಸಭೆಯ ಕಾರ್ಯವು ಪೂರ್ಣವಾದ ಬಳಿಕ ನಾವು ಅದರ ಔಚಿತ್ಯವನ್ನು ನಿರ್ಧರಿಸಬೇಕಾಗಿದೆ.

ಭಾಗ ೨

೮. ಪ್ರೇಷಿತರ ಧರ್ಮಸಾರ

ವಿಶ್ವಾಸಕ್ಕಾಗಿ

ಭಗವಾನ್ ಯೇಸುಕ್ರಿಸ್ತನು ಶ್ರೀಸಭೆಯೆಂಬ ಹೆಸರಿನಿಂದ ಧರ್ಮಸಂಸ್ಥೆಯೊಂದನ್ನು ಸ್ಥಾಪಿಸಿದ ವಿಚಾರವನ್ನು ನಾವು ತಿಳಿದೆವು. ಪೇತ್ರನ ನಾಯಕತ್ವದಲ್ಲಿ ಯೇಸುವಿನ ಶಿಷ್ಯರು ಯೆರೂಸಲೇಮ್ ಅದರ ಸುತ್ತಲಿನ ಪ್ರದೇಶಗಳಲ್ಲಿ ಧರ್ಮಸಂದೇಶವನ್ನು ನೀಡುತ್ತಿದ್ದರು. ಆದರೆ ಅವರು ದೂರದೂರದ ದೇಶಗಳಿಗೆ ಹೋಗತೊಡಗಿದರು. ಅವರಲ್ಲಿ ತೋಮಸನೆಂಬವನು ಕ್ರಿ. ಶ. ೫೨ರಲ್ಲಿ ಭಾರತಕ್ಕೆ ಬಂದು, ವಿವಿಧ ಕ್ಷೇತ್ರಗಳಲ್ಲಿ ಸಂದೇಶವನ್ನು ಪಸರಿಸಿ, ಮುಕ್ತ ಅಧಿಕಾರಿಗಳನ್ನು ನಿಯಮಿಸಿದ್ದನು. ಅವನು ಕೊನೆಗೆ ಮದ್ರಾಸಿನ ಮೈಲಾಪುರದಲ್ಲಿ ಕೊಲೆಯಾದನು. ಯೇಸುವು "ನೀವು ಹೋಗಿ ಎಲ್ಲ ಜನಾಂಗಗಳಿಗೂ ಬೋಧಿಸಿರಿ .. ಇದೋ ನಾನು ನಿಮ್ಮೊಡನೆ ಎಲ್ಲಾ ದಿನಗಳಲ್ಲಿಯೂ, ಜಗದಂತ್ಯದವರೆಗೂ ಇರುವೆನು" (ಮತ್ತೇಯ ೨೮, ೧೯–೨೦) ಎಂದು ತನ್ನ ಶಿಷ್ಯರನ್ನು ವಿವಿಧ ದೇಶಗಳಿಗೆ, ಹೋಗುವಂತೆ ಆಣತಿಯನ್ನಿತ್ತನು. ಹಾಗೆ ಕಳುಹಿಸಲ್ಪಟ್ಟವರಾದುದರಿಂದ ಯೇಸುವಿನ ಆ ಶಿಷ್ಯರಿಗೆ ಪ್ರೇಷಿತರು(Apostals) ಎನ್ನುವರು. ಅವರು ಹನ್ನೆರಡೇ ಮಂದಿ ಅವರೊಲ್ಲಬ್ಬರು ಆತ್ಮಹತ್ಯೆ ಮಾಡಿಕೊಂಡ ಬಳಿಕ ಆತನ ಸ್ಥಾನಕ್ಕೊಬ್ಬನನ್ನು ಆರಿಸಿದ ವಿಚಾರವನ್ನೂ, ಪೌಲನ ಸೇರಿಕೆಯಿಂದ ಹದಿಮೂರಾದ ವಿಷಯವನ್ನೂ ಎರಡನೆಯ ಅಧ್ಯಾಯದಲ್ಲಿ ನಾವು ನೋಡಿರುವೆವು. ಆ ಪ್ರೇಷಿತರು ಯಾವ ಮುಖ್ಯ ವಿಷಯಗಳಲ್ಲಿ ವಿಶ್ವಾಸವನ್ನು ಪಡೆದಿದ್ದರೆಂಬುದನ್ನು 'ಪ್ರೇಷಿತರ ಧರ್ಮಸಾರ' ಎಂಬ ಸೂತ್ರಗುಚ್ಛದಲ್ಲಿ ನಾವು ಕಾಣಬಹುದು. ಅದು ಆ ಶಿಷ್ಯರಿಂದ ರಚಿಸಲ್ಪಟ್ಟು ಪರಂಪರೆಯಾಗಿ ನಮಗೆ ಬಂದಿದೆ.

ಕ್ರಿಸ್ತನ ಶಿಷ್ಯರೂ ಅನಂತರ ಅವರ ಅನುಯಾಯಿಗಳೂ ಕ್ರಿಸ್ತನ ಸಂದೇಶವನ್ನು ಸ್ವೀಕರಿಸಿದ ವ್ಯಕ್ತಿಯನ್ನು ನಿಯಮಪೂರ್ವಕವಾಗಿ ಶ್ರೀ ಸಭೆಯ ಸದಸ್ಯನನ್ನಾಗಿ ಸ್ವೀಕರಿಸುವ ಮುನ್ನ ಆತನಿಗೆ ಜ್ಞಾನ-ಸ್ನಾನವನ್ನು ನೀಡುತ್ತಿದ್ದರು. ಆ ಕಾಲದಲ್ಲಿ ನವಶಿಷ್ಯರು (Nephyte) ಕ್ರಿಸ್ತ ಮತದಲ್ಲಿ ತಮಗಿರುವ ವಿಶ್ವಾಸವನ್ನು ಸೂತ್ರರೂಪದಲ್ಲಿ ವ್ಯಕ್ತಗೊಳಿಸ ಬೇಕಾಗಿತ್ತು. ಅಂದಿನ ರೂಪವೇ ಈಗ ಬಳಕೆಯಲ್ಲಿಲ್ಲವಾದರೂ, ಈಗ ಪ್ರಯೋಗಿಸುತ್ತಿರುವ ರೂಪವು ಕ್ರಿ. ಶ. ೩೦೫ರ ಮೊದಲೇ ರೂಢಿಯಲ್ಲಿತ್ತು. ಈ ಧರ್ಮಸಾರದಲ್ಲಿ ಹೇಳಿದ ವಿಷಯಗಳೆಲ್ಲವೂ ಬೈಬಲ್ಲಿನಲ್ಲಿ ನಿರೂಪಿಸ ಲ್ಪಟ್ಟಿವೆ. ಅಲ್ಲಿರದ ವಿಷಯಗಳಲ್ಲಿಯೂ ಕ್ರೈಸ್ತರು ತಮ್ಮ ವಿಶ್ವಾಸವನ್ನು ಪ್ರಕಟಿಸಬೇಕು. ಈ ಕುರಿತು ಪಾವ್ಲನು. "ಸೋದರರೇ, ಸ್ಥಿರತೆಯಿಂದ ಇರಿ, ಮಾತಿನಿಂದಾಗಲಿ ನಮ್ಮ ನಿರೂಪ ಪತ್ರಗಳಿಂದಾಗಲಿ ನೀವು ಕಲಿತುಕೊಂಡ ಹೇಳಿಕೆಗಳನ್ನು ಸ್ವೀಕರಿಸಿರಿ" (೨ ಥೆಸ್ಸಾ ೨,೧೪) "ಕ್ರಿಸ್ತ ಯೇಸುವಿನಲ್ಲಿರುವ ಪ್ರೇಮದಿಂದ, ವಿಶ್ವಾಸಪೂರ್ವಕವಾಗಿ ನನ್ನಿಂದ ಕೇಳಿ ಕೊಂಡ ಆ ಶ್ರೇಷ್ಠಮಾತುಗಳ ರೂಪವನ್ನು ರಕ್ಷಿಸಿಕೊಳ್ಳು" (೨ ತಿಮಾತಿ ೧,೧೩) ಎಂದು ಸ್ಪಷ್ಟವಾಗಿ ವ್ಯಕ್ತಗೊಳಿಸಿರುವನು."

ಈಗ ಕಣ್ಣಾರೆ ಕಂಡ ವಿಚಾರಗಳಿಗೆ ಬೇರೆ ಸಾಕ್ಷಿಯ ಅಗತ್ಯವಿಲ್ಲ. ಆದರೆ ನಾವು ಕಾಣದ ವಿಚಾರಗಳಲ್ಲಿ ಮತ್ತೊಬ್ಬನ ಹೇಳಿಕೆಯು ಅಗತ್ಯವಿದೆ. ಹೀಗೆ ಇನ್ನೊಬ್ಬನ ಹೇಳಿಕೆಯ ಆಧಾರದಿಂದ ಯಾವುದೊಂದು ವಿಚಾರವನ್ನು ಸತ್ಯವೆಂದು ಒಪ್ಪಿಕೊಳ್ಳುವುದೇ ವಿಶ್ವಾಸವು. ಮತದ ತತ್ವಗಳಲ್ಲಿ ಸ್ವಾಭಾವಿಕ ವಾದುವುಗಳನ್ನು ನಾವೆಲ್ಲರೂ ಒಪ್ಪುವೆವು. ಆದರೆ ಅದಕ್ಕಿಂತ ಮೇಲಿನ ವಿಷಯಗಳಲ್ಲಿ ನಾವು ವಿಶ್ವಾಸವನ್ನು ತಾಳಬೇಕಾದರೆ ಸಾಕ್ಷ್ಯವನ್ನು ನೀಡುವ ವ್ಯಕ್ತಿಯ ಸ್ಥಾನವೂ ಉನ್ನತವಾಗಿರಬೇಕಾದುದು ಅಗತ್ಯ. ಕ್ರೈಸ್ತಮತದ ವಿವಿಧ ತತ್ವಗಳನ್ನು ಪುರುಷ ತ್ರಯೈಕ ಭಗವಂತನ ದ್ವಿತೀಯಪುರುಷನಾದ ಯೇಸುಕ್ರಿಸ್ತನು ತನ್ನ ಮಾನವ ಸ್ವಭಾವದಲ್ಲಿ ಬಹಿರಂಗಗೊಳಿಸಿದನು. ಹಿಂದೆ ಭಗವಂತನಿಂದ "ವಿಶ್ವಾಸವನ್ನು ಹೊಂದಿ ಜ್ಞಾನಸ್ನಾನವನ್ನು ಪಡೆಯುವವನು" ರಕ್ಷಿಸಲ್ಪಡುವವನು; ವಿಶ್ವಾಸಹೊಂದ ದವನು ದಂಡಿಸಲ್ಪಡುವನು" (ಮಾರ್ಕ ೧೬, ೧೬) ಎಂದು ಹೇಳಿರುವನು.

ಧರ್ಮಸಾರ

ಪ್ರೇಷಿತರ ಧರ್ಮಸಾರದಲ್ಲಿ ಸೂಚಿಸಿದ ತತ್ವಗಳಲ್ಲಿಯೂ ವಿಶ್ವಾಸವನ್ನು ಪಡೆಯಬೇಕಾಗಿದೆ. ಪ್ರೇಷಿತರ ಧರ್ಮಸಾರವಲ್ಲದೆ ಶ್ರೀಸಭೆಯು 'ಅತಾನಾಸನಧರ್ಮಸಾರ' 'ನಿಚಿನುದ ಧರ್ಮಸಾರ' ಮೊದಲಾದ ರೂಪಭೇದಗಳಲ್ಲಿ ಕ್ರೈಸ್ತತತ್ವಗಳನ್ನು ಧರ್ಮಕ್ರಿಯೆಗಳಲ್ಲಿ ಬಳಸುತ್ತದೆ. ಆದರೆ ಪ್ರೇಷಿತರ ಧರ್ಮಸಾರವೇ ಸಕಲ ಜನಮನ್ನಣೆಯನ್ನು ಪಡೆದ ರೂಪವಾಗಿದೆ. ಇದನ್ನು ಹನ್ನೆರಡು ನಿಬಂಧನೆ(Article)ಗಳಾಗಿ ವಿಭಜಿಸಿರುವರು.

(೧) ಪರಲೋಕ-ಭೂಲೋಕಗಳ ಕರ್ತೃವಾದ ಸರ್ವಶಕ್ತ ಭಗವತ್ ಪಿತನಲ್ಲಿ ನಾನು ವಿಶ್ವಾಸವಿಡುತ್ತೇನೆ.

(೨) ಆತನ ಏಕಮಾತ್ರ ಪುತ್ರನಾಗಿರುವ ನಮ್ಮ ಸ್ವಾಮಿಯಾದ ಯೇಸುಕ್ರಿಸ್ತನಲ್ಲಿ ನಾನು ವಿಶ್ವಾಸವಿಡುತ್ತೇನೆ.

(೩) ಅವನು (ಯೇಸುಕ್ರಿಸ್ತನು) ಪವಿತ್ರಾತ್ಮನ ಶಕ್ತಿಯಿಂದ ಗರ್ಭವಾಗಿ, ಕನ್ಯೆ ಮರಿಯಳಲ್ಲಿ ಹುಟ್ಟಿದನು.

(೪) ಅವನು ಪೊಂತ್ಸಿಯುಸ್ ಪಿಲಾತನ ಕೈಕೆಳಗೆ ಯಾತನೆಗಳನ್ನು ಅನುಭವಿಸಿ, ಸಿಲುಬೆಗೆ ಜಡಿಯಲ್ಪಟ್ಟು, ಮರಣ ಹೊಂದಿ, ನಿಕ್ಷೇಪಿಸಲ್ಪಟ್ಟನು.

(೫) ಅವನು ಪಾತಾಳ (Limbo) ಕ್ಕೆ ಇಳಿದು, ಮೂರನೆಯ ದಿನ ಜೀವಂತನಾಗಿ ಎದ್ದನು.

(೬) ಅವನು ಪರಲೋಕಕ್ಕೇರಿ ಸರ್ವಶಕ್ತ ಭಗವತ್-ಪಿತನ ಬಲಪಾರ್ಶ್ವದಲ್ಲಿ ಕುಳಿತಿರುವನು.

(೭) ಅಲ್ಲಿಂದ ಅವನು ಜೀವಂತ ಹಾಗೂ ಮೃತರ ನೀತಿ ವಿಚಾರಣೆಗಾಗಿ ಬರುವನು.

(೮) ಪವಿತ್ರಾತ್ಮನಲ್ಲಿ ನಾನು ವಿಶ್ವಾಸವಿಡುತ್ತೇನೆ.

(೯) ಪವಿತ್ರಕೆಥೋಲಿಕ ಶ್ರೀಸಭೆಯಲ್ಲಿಯೂ ನಾನು ವಿಶ್ವಾಸವಿಡುತ್ತೇನೆ.

(೧೦) ಪಾತಕಕ್ಷಮಾಪಣೆಯಲ್ಲಿ ನಾನು ವಿಶ್ವಾಸವಿಡುತ್ತೇನೆ.

(೧೧) ದೇಹದ ಪುನರುತ್ಥಾನದಲ್ಲಿ ನಾನು ವಿಶ್ವಾಸವಿಡುತ್ತೇನೆ.

(೧೨) ಅನಂತ ಜೀವನದಲ್ಲಿ ನಾನು ವಿಶ್ವಾಸವಿಡುತ್ತೇನೆ.

ಈ ದ್ವಾದಶ ಭಾಗಗಳನ್ನು ಅವುಗಳ ವಿಷಯಗಳಿಗನುಗುಣವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದರಲ್ಲಿ ಭಗವತ್ ಪಿತನ ಹಾಗೂ ಸೃಷ್ಟಿಯ ಕುರಿತು ಹೇಳಿದೆ. ಎರಡರಿಂದ ಏಳರವರೆಗಿನವು ಭಗವತ್ ಪುತ್ರನ ಹಾಗೂ ನಮ್ಮ ಬಿಡುಗಡೆಯ ಕುರಿತು ವಿವೇಚಿಸುವುವು. ಕೊನೆಯ ಐದು ಪವಿತ್ರಾತ್ಮನ ಮತ್ತು ನಮ್ಮ ಪವಿತ್ರೀಕರಣಗಳ ಕುರಿತು ತಿಳಿಸುವುವು. ಪ್ರತಿಯೊಂದು ಭಾಗವೂ ಕ್ರೈಸ್ತನುತದ ಹಲವು ವಿಷಯಗಳನ್ನೊಳಗೊಂಡಿದೆ. ಹೀಗಾಗಿ ಕೂಲಂಕಷವಾಗಿ ನಾವು ಇಲ್ಲಿ ವಿವೇಚಿಸಲಾರೆವಾದರೂ ಸ್ವಲ್ಪಮಟ್ಟಿನ ವಿಸ್ತರಣವು ಅಗತ್ಯವಿದೆ.

(೧) ಪರಲೋಕ-ಭೂಲೋಕಗಳ ಕರ್ತನಾದ ಸರ್ವಶಕ್ತಭಗವತ್ ಪಿತನಲ್ಲಿ ನಾನು ವಿಶ್ವಾಸವಿಡುತ್ತೇನೆ.

ನಾಸ್ತಿಕನಾಗಿ ಕ್ರೈಸ್ತನಾಗಿರಲು ಸಾಧ್ಯವಿಲ್ಲ. ಮಾನವನು ತನ್ನ ವಿವೇಚನಾಶಕ್ತಿಯಿಂದ ಭಗವಂತನ ಅಸ್ತಿತ್ವವನ್ನು ತಿಳಿದಿರುವನು. ಮಾತ್ರವಲ್ಲ ಭಗವಂತನೇ ತನ್ನ ಅಸ್ತಿತ್ವವನ್ನು ಹಲವು ವಿಧಗಳಲ್ಲಿ ವಿಶದಗೊಳಿಸಿರುವನು. ಆತನು ಸಕಲ ಸ್ಥಿರ-ಚರವಸ್ತುವಿಷಯಗಳಿಗೆ ಆದಿಯೂ ಅಂತ್ಯವೂ ಆಗಿರುವನು. ಆತನಿಗೆ ದೇಹವಿಲ್ಲ. ಹೀಗಾಗಿ ಆತನನ್ನು ಪರಮಾತ್ಮನೆಂದು ಹೇಳುವರು. ನಮಗೊಂದು ಆತ್ಮವಿದೆ. ಆದರೆ ಆ 'ಆತ್ಮ'ವು ಭಗವಂತನ ಸೃಷ್ಟಿಯು.

"ಸೌಂದರ್ಯದ ಹಿರಿಮೆಯಿಂದಲೂ, ಜೀವಿಯಿಂದಲೂ ಕರ್ತೃವನ್ನು ಕಾಣಬಹುದು ಮಾತ್ರವಲ್ಲ ಆದರಿಂದಾಗಿ ತಿಳಿಯಬಹುದು" (ಜಾಣ್ಮೆ ೧೩, ೫).

" ವಿಶ್ವಾಸವಿಲ್ಲದಿದ್ದರೆ ಭಗವಂತನನ್ನು ಮೆಚ್ಚಿಸಲು ಸಾಧ್ಯವಿಲ್ಲ. ಭಗವಂತನೆಡೆಗೆ ಬರುವವನು ಆತನಿರುವನೆಂದೂ, ಆತನನ್ನು ಸೇವಿಸಿದವರನ್ನು ಬಹುಮಾನಿಸುವನೆಂದೂ ವಿಶ್ವಾಸಿಸಬೇಕಾಗಿದೆ" (ಹೀಬ್ರೂ ೧೧,೬).

" ಪ್ರತಿಯೊಂದು ಉತ್ತಮಕಾಣಿಕೆಯು, ಪ್ರತಿಯೊಂದು ಪರಿಪೂರ್ಣ ಕಾಣಿಕೆಯು ಮೇಲಿನಿಂದ, ಪ್ರಕಾಶಗಳ ಹಿತನಿಂದ ಬರುವುದಾಗಿದೆ " (ಯಾಕೋಬ ೧, ೧೭).

ಭಗವಂತನು ನ್ಯಾಯಮೂರ್ತಿಯೂ, ಕರುಣಾಸಾಗರನೂ, ಪರಮ ಪ್ರಿಯನೂ ಆಗಿರುವನು.

" ನಾನು ಜೀವಂತನಾಗಿರುವೆನು, ಆದುದರಿಂದ ದುಷ್ಟರ ಸಾವನ್ನು ನಾನು ಬಯಸುವುದಿಲ್ಲ; ಆದರೆ ಅವರು ಆ ಮಾರ್ಗವನ್ನು ಪರಿತ್ಯಜಿಸಿ ಜೀವಿಸಬೇಕೆಂದು ಮಾತ್ರ ಬಯಸುತ್ತೇನೆ " (ಎಜೆಕಿ ೩೩.೧೧).

"ಸ್ವಾಮಿಯು ಸಹಿಷ್ಣುವೂ ಕರುಣಾಭರಿತನೂ ಆಗಿ ದುಷ್ಟತನವನ್ನೂ ಕೇಡುಗಳನ್ನೂ ನಿವಾರಿಸುವನು" (ನಿರ್ಗಮನ ೧೪, ೧೮)

" ನಿಮ್ಮ ಸ್ವಾಮಿ ಭಗವಂತನಾದ ನಾನು ಪವಿತ್ರನಾಗಿರುವಂತೆ ನೀವೂ ಪವಿತ್ರವಾಗಿರಿ " (ವಿಧಿವಿಧಾನ ೧೯, ೨).

ಭಗವಂತನು ಸೃಷ್ಟಿಕರ್ತನು. ಸುಮನಸರನ್ನೂ ಮಾನವರನ್ನೂ ಇತರ ಎಲ್ಲ ವಿಷಯಗಳಲ್ಲಿ ಶ್ರೇಷ್ಠರೆನಿಸುವಂತೆ ಅವನು ರಚಿಸಿದನು. ಆದಿ ಮಾನವನ ಪತನದ ಕುರಿತು ನಾವು ತಿಳಿದಿರುವೆವು. ಭಗವಂತನು ಪತನ ಗೊಂಡ ಮಾನವನ ಉದ್ಧಾರಕ್ಕಾಗಿ ರಕ್ಷಕನನ್ನು ಕರುಣಿಸಿದನು " ತನ್ನ ಏಕಮಾತ್ರಪುತ್ರನನ್ನೂ ನೀಡುವಷ್ಟುಮಟ್ಟಿಗೆ ಜಗತ್ತನ್ನು ಭಗವಂತನು ಪ್ರೀತಿಸಿದನು " (ಯೋಹಾನ ೩, ೧೬).

"ಒಬ್ಬ ಮನುಷ್ಯನಿಂದಾಗಿ ಪಾತಕವೂ, ಪಾತಕದಿಂದ ಮರಣವೂ ಜಗತ್ತನ್ನು ಪ್ರವೇಶಿಸಿದವು ಆತನಿಂದಾಗಿಯೇ ಎಲ್ಲರೂ ಪಾತಕಿಗಳಾದುದ ರಿಂದ ಮರಣವೂ ಎಲ್ಲ ಮಾನವರಿಗೆ ಬಂದಿತು " (ರೋಮನ್ ೫, ೧೨).

ಭಗವಂತನಲ್ಲಿ ಪುರುಷತ್ರಯವಿದೆ. ಈ ಕುರಿತು ನಾವು ತಿಳಿದಿರುವೆವು. ಜೀವಂತ ಭಗವದೈಕ ವ್ಯಕ್ತಿಯಲ್ಲಿ ಪುರುಷತ್ರಯವಿರುವಂತೆ ನಮ್ಮ ಆತ್ಮ ದಲ್ಲಿ ಜ್ಞಾನ, ವಿವೇಕ, ಇಚ್ಛೆಗಳೆಂಬ ಮೂರು ಶಕ್ತಿಗಳಿವೆ.

(೨) ಭಗವಂತನ ಏಕಮಾತ್ರ ಪುತ್ರ, ನಮ್ಮ ಸ್ವಾಮಿ ಯೇಸು ಕ್ರಿಸ್ತನಲ್ಲಿ ನಾನು ವಿಶ್ವಾಸವಿಡುತ್ತೇನೆ.

ಯೇಸುಕ್ರಿಸ್ತನು ಭಗವತ್ ಪುರುಷನೂ ಮನುಷ್ಯನೂ ಆಗಿರುವುದರಿಂದ ಆತನಲ್ಲಿ ದೈಹಿಕ-ಮಾನವ ಸ್ವಭಾವಗಳೆರಡೂ ಪರಿಪೂರ್ಣರೀತಿಯಲ್ಲಿರುವುವು. ಆ ದೈವತ್ವವನ್ನು ಅವನು ಸ್ಪಷ್ಟಗೊಳಿಸಿದ ವಿಚಾರವನ್ನು ನಾವು ತಿಳಿದಿರುವೆವು.

"ಎಲ್ಲ ವಿಚಾರಗಳಲ್ಲಿಯೂ ಆತನು ತನ್ನ ಸೋದರರಂತೆ ಆದನು" (ಹೀಬ್ರೂ ೨, ೧೭).

ಯೇಸುಕ್ರಿಸ್ತನು ತಾನು 'ಮಾನವಪುತ್ರ'ನೆಂದು ಹೇಳಿಕೊಳ್ಳುತ್ತಿದ್ದನು. ಆ ನುಡಿಯಲ್ಲಾದರೂ ಆತನು ಭಗವಂತನ ಪುತ್ರನೆಂದು ಯೆಹೂದ್ಯ ಜನತೆಯು ತಿಳಿಯಿತು.

(೩) ಯೇಸುಕ್ರಿಸ್ತನು ಪವಿತ್ರಾತ್ಮನ ಶಕ್ತಿಯಿಂದ ಗರ್ಭವಾಗಿ ಕನ್ಯೆ ಮರಿಯಳಲ್ಲಿ ಜನಿಸಿದನು.

ಯೆಹೂದ್ಯರ ಪ್ರಸಿದ್ಧರಾಜನು ದಾವೀದನೆಂಬುವನು. ಆತನ ವಂಶದಲ್ಲಿಯೇ ಯೇಸುವು ಜನಿಸಿದನು. ಮರೀಯಳು ಆತನ ಮಾತೆ. ಆಕೆಯನ್ನು ಯೊಸೇಫನೆಂಬವನಿಗೆ ಮದುವೆ ಮಾಡಿಕೊಡಲಾಗಿತ್ತು. ಆದು ಅವರಿಬ್ಬರ ಸಹಜೀವನವು ಆರಂಭವಾಗುವ ಮೊದಲೇ ಭಗವಂತನ ದೂತ, ಗಾಬ್ರಿಯಲನೆಂಬ ಸುಮನಸನು ಮರೀಯಳಿಗೆ ಪ್ರತ್ಯಕ್ಷನಾದನು, ಎಂದನು

ಆತನು ಆದಾವ ಆಧಾರವೂ ಇಲ್ಲದೆ ವಾಯುವಿನಲ್ಲಿಯೇ ನಿಂತಿದ್ದನು. ಮರಿಯಳು ಭಯಗೊಂಡಳು. ಆಕೆಗೆ ಅಭಯವನ್ನು ನೀಡುತ್ತ, "ಮರೀಯೇ, ಭಯಪಡಬೇಡಿರಿ, ಸ್ವಾಮಿಯು ಅನುಗ್ರಹವನ್ನು ಪಡೆದಿರುವಿರಿ. ಇದೋ ನಿಮ್ಮ ಉದರದಲ್ಲಿ ನೀವು ಗರ್ಭಧರಿಸುವಿರಿ. ಪುತ್ರನೊಬ್ಬನನ್ನು ಪಡೆಯುವಿರಿ: ಆತನನ್ನು ಯೇಸುವೆಂದು ಕರೆಯಿರಿ. ಆತನು ಶ್ರೇಷ್ಠನೆನಿಸುವನು. ಭಗವಂತನ ಪುತ್ರನೆಂದು ಕರೆಯಲ್ಪಡುವನು....... ಆತನ ಸಾಮ್ರಾಜ್ಯಕ್ಕೆ ಕೊನೆಯಿರದು" (ಲೂಕ ೧, ೩೦-೩೩) ಎಂದು ಸಂದೇಶವಿತ್ತನು. ಪುರುಷಸಂಪರ್ಕವಿರದೆ ತಾನು ಮಾತೆಯಾಗುವ ಕ್ರಮ

ವನ್ನು ಅವಳು ಅರಿಯದಾದಳು. ಅದಕ್ಕಾಗಿ ಆತನನ್ನೇ ವಿಚಾರಿಸಿದಳು. ಉತ್ತರವನ್ನೀಯುತ್ತ,

ಭಗವಂತನ ಶಕ್ತಿಯು ನಿನ್ನನ್ನು ಆವರಿಸುವುದು. ಆದುದರಿಂದ ಪವಿತ್ರಾತ್ಮನಿಂದ ನಿನ್ನಲ್ಲಿ ಜನಿಸುವವನು ಭಗವಂತನ ಪುತ್ರನೆಂದು ಕರೆಯಲ್ಪಡುವನು........ಭಗವಂತನಲ್ಲಿ ಅಸಾಧ್ಯವಾದುದೆಂಬುದಿಲ್ಲ" (ಲೂಕ ೧, ೩೫, ೩೭) ಎಂದು ವಿಶದಗೊಳಿಸಿದನು. ಮರಿಯಳಿಗೆ ತೃಪ್ತಿಯಾಯಿತು.

"ಇದೋ ಸ್ವಾಮಿಯ ಚರಣದಾಸಿ; ಅದು ನಿನ್ನ ಮಾತಿನಂತೆ ನನ್ನಲ್ಲಾಗಲಿ" (ಲೂಕ ೧, ೩೮)

ಎಂದು ಸಮ್ಮತಿಸಿದಳು. ಮರೀಯಳು ಅದೇ ಗಳಿಗೆಯಲ್ಲಿ ಗರ್ಭ ಧರಿಸಿದಳೆಂದು ಮುಂದೆ ಅವಳಿಗೆ ತಿಳಿಯಿತು.

ಯೇಸುವು ಕಾನೀನನಾಗಿ ಹುಟ್ಟಿದನು. ಅದನ್ನು ಹಲವು ಶತಮಾನಗಳ ಹಿಂದೆ ಇಸಾಯಸ್ ಎಂಬ ಪ್ರವಾದಿಯು ಸೂಚಿಸಿದ್ದನು. "ಇದೋ ಕನ್ಯೆಯೊಬ್ಬಳು ಗರ್ಭಧರಿಸುವಳು, ಪುತ್ರನನ್ನು ಪಡೆಯುವಳು. ಆತನು ಎಮ್ಮಾನುಎಲ್ ಎಂದು ಕರೆಯಲ್ಪಡುವನು" (ಇಸಾಯ ೭, ೧೪)

ಮರೀಯಳ ದೇಹಪ್ರಕೃತಿಯನ್ನು ಕಂಡು, ಸಂಶಯಗೊಂಡ ಯೊಸೇಫನು ಆಕೆಯನ್ನು ತ್ಯಜಿಸಲು ನಿಶ್ಚಯಿಸಿದನು. ಆದರೆ ಭಗವಂತನ ದೂತನ ಸ್ಪಷ್ಟೀಕರಣದಿಂದ ಪತ್ನಿಯನ್ನಾಗಿ ಸ್ವೀಕರಿಸಿದನು. ಬಾಹ್ಯದಲ್ಲಿ ಪತಿ-ಪತ್ನಿಯರಂತಿದ್ದರೂ ಅಂತರ್ಯದಲ್ಲಿ ಸೋದರ-ಸೋದರಿಯರಂತೆ ಅವರು ಜೀವನ ಸಾಗಿಸಿದರು. ಬಹಿರಂಗದಲ್ಲಿ ಯೇಸುವು ಯೊಸೇಫನ ಮಗನೆಂಬಂತೆ ಬೆಳೆದನು.

ಗಾಬ್ರಿಯೆಲನು ಮರೀಯಳಿಗೆ ಸಂದರ್ಶನವಿತ್ತಾಗ ಭಗವದನುಗ್ರಹದಿಂದ ಆಕೆಯು ಗರ್ಭವತಿಯಾಗುವಳೆಂದೂ ಆಕೆಯ ಸಹೋದರಿ (ದೊಡ್ಡಮ್ಮನ ಮಗಳು)ಎಲಿಜಬೆತಳು (ಎಪ್ಪತ್ತರ ಗಡಿಯಲ್ಲಿದ್ದವಳು) ಗರ್ಭವತಿಯೆಂದೂ ತಿಳಿಸಿದ್ದನು. ಮರೀಯಳು ಎಲಿಜಬೆತಳನ್ನು ಕಾಣಲು, ಅವಳಿಗೆ ಸಹಾಯ ನೀಡಲು ಹೋದಳು, ಎಲಿಜಬೆತಳು ಮರೀಯಳನ್ನು ದೂರದಿಂದಲೇ ಗುರುತಿಸಿ, ಮುಂದಕ್ಕೆ ಬಂದು. ಪ್ರೀತಿಯಿಂದ ತಬ್ಬಿಕೊಂಡು,

ಸ್ತ್ರೀಯರಲ್ಲಿ ನೀನು ಧನ್ಯೆ; ಮತ್ತು ನಿನ್ನ ಉದರದ ಕೂಸು ಕೂಡಾ ಧನ್ಯನು....ನನ್ನ ಸ್ವಾಮಿಯ ಮಾತೆಯು ನನ್ನೆಡೆಗೆ ಬರುವುದು ಅದೆಂತು?...." (ಲೂಕ ೧, ೪೨, ೪೩) ಎಂದು ಭಗವತ್ ಪವಿತ್ರಾತ್ಮ ಪ್ರೇರಣೆಯಿಂದ ಉದ್ಗರಿಸಿದಳು. ಆಗಲೇ ಮರಿಯಳಿಗೆ ತಾನು ಗರ್ಭವತಿ ಯೆಂದು ತಿಳಿಯಿತು.

(೪) ಯೇಸುವು ಪೋಂತ್ಸಿಯುಸ್ ಪಿಲಾತನ ಕೈ ಕೆಳಗೆ ಯಾತನೆ ಗಳನ್ನು ಅನುಭವಿಸಿ, ಸಿಲುಬೆಗೆ ಜಡಿಯಲ್ಪಟ್ಟು, ಮರಣ ಹೊಂದಿ ನಿಕ್ಷೇಪಿಸ ಲ್ಪಟ್ಟನು.

ಇಲ್ಲಿ ಪೋಂತ್ಸಿಯುಸ್ ಪಿಲಾತನ ಹೆಸರನ್ನು ಯೇಸುವಿನ ಮರಣ ಕಾಲದ ನಿಷ್ಕರ್ಷೆಗಾಗಿ ಕೊಟ್ಟಿದೆ. ಯೇಸುವಿನ ಕೊನೆಗಾಲದ ಯಾತನೆ ಗಳನ್ನು ಮೂರು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು. ಕೊನೆಯ ಭೋಜನದ ಬಳಿಕ ಯೇಸುವು ಗೆತ್ಸೆಮನಿ ಎಂಬ ವನದಲ್ಲಿ ಪ್ರಾರ್ಥನೆಗಾಗಿ ತನ್ನ ಶಿಷ್ಯರೊಡನೆ ಹೋದನು. ಅಲ್ಲಿ ಶಿಷ್ಯರನ್ನು ಪ್ರಾರ್ಥಿಸಲು ತೊಡಗಿಸಿ ತಾನು ತುಸು ದೂರಹೋಗಿ ಮಂಡಿಯೂರಿದನು. ಆ ಕಾಲದಲ್ಲಿ ಆತನಿಗೆ ತನ್ನ ಮುಂದಿನ ಯಾತನಾಮಯ ಮರಣದ ಅನುಭವವಾಗತೊಡಗಿತು. ಅವನ ದೇಹವು ತತ್ತರಿಸತೊಡಗಿತು. ಬೆವರು ಕೆಂಪಾಗಿ ರಕ್ತದ ಹನಿ ಗಳಂತೆ ನೆಲದ ಮೇಲೆ ಉದುರಿತು. ಇದುವೆ ಆತನ ಯಾತನೆಗಳ ಮೊದಲ ನೆಯ ಭಾಗವು.

ಅನಂತರ ತನ್ನ ಶಿಷ್ಯನಾದ ಯುದಾಸನು ವೈರಿವರ್ಗದ ಸಮೇತ ಬರು ವುದನ್ನರಿತು, ಶಿಷ್ಯರನ್ನೆಬ್ಬಿಸಿ, ತನ್ನ ವೈರಿವರ್ಗವನ್ನೆದುರುಗೊಂಡನು. ಅವರು ಆತನನ್ನು ಬಂಧಿಸಿ, ಯೆಹೂದ್ಯ ನೀತಿ ಸಭೆಯ ಮುಂದೆ ಅಪರಾಧವನ್ನು ಮಂಡಿಸಿ, ಮರಣ ಶಾಸನವನ್ನೀಯಿಸಲು ಪಿಲಾತನಲ್ಲಿ ಗೊಯ್ದರು. ಮುಂದಿನ ವಿಚಾರಣೆಯನ್ನು ನಾವು ತಿಳಿದಿರುವೆವು. ಪಿಲಾತನಿಗೆ ಯೇಸುವಿ ನಲ್ಲಿ ಅಪರಾಧವು ಕಾಣಲಿಲ್ಲ. ಆತನನ್ನು ಬಿಡುಗಡೆಗೊಳಿಸಲು ಧೈರ್ಯವು ಸಾಲದೆ ಹೋಯಿತು. ಅದಕ್ಕಾಗಿ ಯೇಸುವನ್ನು ದಂಡಿಸುವ ನಿಶ್ಚಯ ಮಾಡಿ ಸೈನಿಕರ ವಶಕ್ಕೆ ಕೊಟ್ಟನು. ಸೈನಿಕರು ಆತನಿಗೆ ಕೊರಡೆಯೇಟು ಗಳನ್ನು ಕೊಟ್ಟು, ತಲೆಗೊಂದು ಕಂಟಕಕಿರೀಟವನ್ನು ಜಡಿದರು. ಆತ

ನನ್ನು ' ರಾಜ ' ನೆಂದು ಅಪಹಾಸ್ಯಗೊಳಿಸಿದರು. ಆತನ ದೇಹವೆಲ್ಲವೂ ಜರ್ಜರಿತವಾಯಿತು. ರಕ್ತಮಾಂಸಗಳು ನೆಲದ ಮೇಲೆ ಬಿದ್ದುವು. ಅಂತಹ ಯೇಸುವನ್ನು ಯೆಹೂದ್ಯ ಜನತೆಗೆ ಪಿಲಾತನು ತೋರಿಸಿ, ಕರುಣೆ ಹುಟ್ಟಿಸಲು ಪ್ರಯತ್ನಿಸಿದನು. ಆದರೆ ಮರಣವನ್ನೇ ಬಯಸಿದ ಯಾಜಕ ವೃಂದದಿಂದ ಪ್ರೇರಿತರಾದ ಅವರು ಮರಣದ ಹೊರತು ಸುಮ್ಮನಾಗಲಿಲ್ಲ ಇದಿಷ್ಟು ದ್ವಿತೀಯ ಭಾಗವು.

ತೃತೀಯ ಭಾಗದಲ್ಲಿ ಯೇಸುವಿನ ಕೊನೆಯ ಪಯಣವನ್ನೂ ಚೋರರ ಮಧ್ಯದಲ್ಲಿ ಅವನ ಮರಣವನ್ನೂ ತಿಳಿಯಬೇಕು. ಯೇಸುವು ತನ್ನ ಸಿಲುಬೆಯನ್ನು ಹೊತ್ತುಕೊಂಡು ಮಧ್ಯಸ್ಥಾನವಾದ ಗೊಲ್ಗೊಥಾದ ಕಡೆಗೆ ನಡೆದನು. ನಡುದಾರಿಯಲ್ಲಿ ಮರಿಯಳನ್ನು ಎದುರುಗೊಂಡನು. ತನ್ನ ಸ್ಥಿತಿಗಾಗಿ ಮರುಗುತ್ತಿದ್ದ ಸ್ತ್ರೀಯರನ್ನು ಸಾಂತ್ವನಗೊಳಿಸಿದನು. ನಿಶ್ಚಿತ ಸ್ಥಾನವನ್ನು ಮುಟ್ಟಿದಾಗ ಸೈನಿಕರು ಯೇಸುವಿನ ಅಂಗಿಯನ್ನು ತೆಗೆದು ಸಿಲುಬೆಯ ಮೇಲೆ ಮಲಗಿಸಿ, ಮೊಳೆಗಳನ್ನು ಜಡಿದು ಸಿಲುಬೆಯನ್ನು ಏರಿಸಿದರು. ಅವನ ಇಕ್ಕಡೆಗಳಲ್ಲಿ ಚೋರರಿಬ್ಬರನ್ನು ಸಿಲುಬೆಗಳ ಮೇಲೇರಿಸಿದರು.

" ಕ್ರಿಸ್ತನು ನಮ್ಮ ಪಾತಕಗಳಿಗಾಗಿ, ನೀತಿವಂತನು ಅನೀತಿವಂತರಿಗಾಗಿ, ನಮ್ಮನ್ನ ಪ್ರೀತಿಸಲು ಒಮ್ಮೆ ಸತ್ತನು " (೧ ಪೇತ್ರ ३, ೧೮). " ಅವನು ಮರಣಕ್ಕೆ, ಸಿಲುಬೆಯ ಮರಣಕ್ಕೂ ವಿಧೇಯನಾಗುವಷ್ಟು ದೀನನಾದನು " (ಫಿಲಿಪ ೨, ೮).

ಯೇಸುವಿನ ಮರಣಕಾಲದಲ್ಲಿ ಆತನ ಮಾತೆ ಮರೀಯಳೂ, ಆಕೆಯ ಸಹೋದರಿ ಕ್ಲೋಯೋಫಾಸನ ಮರೀಯಳೂ, ಮಗ್ದಾಲಾದ ಮರೀಯಳೂ, ಶಿಷ್ಯ ಯೋಹಾನನೂ ಇದ್ದರು. ಯೇಸುವಿನ ಮರಣದ ಬಳಿಕ ಆತನ ಗೆಳೆಯ ನಿಕೊದೆಮುಸ್ ಮತ್ತು ಅರಿಮಥೇಯದ ಯೊಸೇಫ-ಎಂಬಿಬ್ಬರು ಗೆಳೆಯರು ರಾಜ್ಯಪಾಲ ಪಿಲಾತನಿಂದ ಮುಕ್ತ ಅನುಮತಿಯನ್ನು ಪಡೆದು ಸಿಲುಬೆಯ ಮೇಲಿನಿಂದ ಶವವನ್ನು ಕೆಳಗಿಳಿಸಿ, ಯೆಹೂದ್ಯರ ಪದ್ಧತಿಯಂತೆ ನಿಕ್ಷೇಪಮಾಡಿದರು.

(೫) ಯೇಸುವು ಪಾತಾಳ (Limbo)ಕ್ಕಿಳಿದು ಮೂರನೆಯ ದಿನ ಜೀವಂತನಾಗಿ ಎದ್ದನು.

ಪಾತಾಳವು ನರಕವಲ್ಲ. ಆದಿ ಮಾನವನ ಪತನದಿಂದ ಮೋಕ್ಷ ದ್ವಾರವು ಮುಚ್ಚಲಾಗಿತ್ತು. ಆದರೂ ಆ ಪತನದ ಬಳಿಕ ಸತ್ತವರಲ್ಲಿ ಎಷ್ಟೋ ಜನರು ಸದ್ಗುಣಿಗಳಿದ್ದರು. ಅವರು ನರಕದಲ್ಲಿರಲು ಸಾಧ್ಯವಿಲ್ಲ. ಹೀಗಾಗಿ ಸ್ವರ್ಗದ್ವಾರವನ್ನು ಪುನಃ ತೆರೆಯುವವರೆಗೆ ಆ ಜನರು ಯುಕ್ತ ಸ್ಥಳವೊಂದರಲ್ಲಿರಬೇಕಾಯಿತು.ಅದನ್ನು ನಾವು ಪಾತಾಳವೆಂದು ಹೇಳುವೆವು. ಮುಕ್ತಿದಾತನಾದ ಯೇಸುವು ತನ್ನ ಮರಣದಿಂದ ಪಡೆದುಕೊಂಡ ಸತ್ಫಲ ವನ್ನು ಸಮಸ್ತ ಜನರಿಗೆ ನೀಡಬೇಕಾಗಿ ಬಂದಿತು.

"ಆತನು ನರಕದಲ್ಲಿರಲೂ ; ಆತನ ದೇಹವು ಕೊಳೆಯುವಿಕೆಯನ್ನು ಕಾಣಲೂ ಇಲ್ಲ" (ಕಾರ್ಯ ೨, ೩೧)

"ಅಲ್ಲಿಗೆ ಬಂದೊಡನೆ ಬಂಧನದಲ್ಲಿದ್ದ ಆತ್ಮಗಳಿಗೆ ಆತನು (ತನ ಸಂದೇಶವನ್ನು) ಬೋಧಿಸಿದನು" (೧ ಪೇತ್ರ ೩, ೧೦)

ಯೇಸುವನ್ನು ದಫನ ಮಾಡಿನ ಬಳಿಕ ಯೆಹೂದ್ಯಯಾಜಕ ವೃಂದಕ್ಕೆ ಸತ್ತ ಮೂರನೆಯದಿನ ಪುನರುತ್ಥಾನಗೊಳ್ಳುವೆನೆಂದಿದ್ದ ಯೇಸುವಿನ ಮಾತು ಗಳು ನೆನಪಿಗೆ ಬಂದವು. ಗೋರಿಯ ಮೇಲೆ ಸೈನಿಕರ ಕಾವಲನ್ನು ಇಡಿಸು ವಂತೆಯೂ, ಗೋರಿಯ ಮೇಲೆ ಮುದ್ರೆಯನ್ನು ಹಾಕುವಂತೆಯೂ ರಾಜ್ಯ ಪಾಲನನ್ನು ನಿರ್ಬಂಧಿಸಿದರು, ಆದರೂ ಯೇಸುವು ಪುನರುತ್ಥಾನಗೊಂಡನು. ಸೈನಿಕರ ಹೇಳಿಕೆಯನ್ನು ಕೇಳಿದ ಯಾಜಕವೃಂದವು ಅವರ ಬಾಯಿಯನ್ನು ಚಿನ್ನದಿಂದ ಬಿಗಿದು ಪ್ರತ್ಯೇಕವಾದೊಂದು ಹೇಳಿಕೆಯನ್ನು ಕೊಡಿಸಿದರು. ತಾವೂ ಅವನ್ನು ಪ್ರಚಾರಕ್ಕೆ ತಂದರು. ಆದರೆ ಪುನರುತ್ಥಾನಗೊಂಡ ಯೇಸುವು ತನ್ನ ಶಿಷ್ಯರಿಗೆ ದರ್ಶನವಿತ್ತನು. ಅವರೊಡನೆ ಉಂಡನು. ತಾನು ಬೋಧಿಸದೆ ಉಳಿದುದನ್ನು ಪೂರ್ಣಗೊಳಿಸಿದನು. ಅವರಲ್ಲಿ ಸ್ಥಿರ ವಾದ ವಿಶ್ವಾಸವಿರುವಂತೆ ಮಾಡಿದನು.

"ಕ್ರಿಸ್ತನು ಪುನರುತ್ಥಾನಗೊಂಡಿರದಿದ್ದರೆ, ನಮ್ಮ ಬೋಧನೆಯೂ ವ್ಯರ್ಥವು; ನಿಮ್ಮ ವಿಶ್ವಾಸವೂ ವ್ಯರ್ಥವು" (೧ ಕೊರಿಂತ ೧೫-೧೪) (೯)

ಯೇಸುವು ಪರಲೋಕಕ್ಕೇರಿ ಸರ್ವಶಕ್ತ ಭಗವತ್ ಪಿತನ ಬಲಪಾರ್ಶ್ವದಲ್ಲಿ ಕುಳಿತಿರುವನು.

ಪುನರುತ್ಥಾನಗೊಂಡ ಯೇಸುವು ನಾಲ್ವತ್ತು ದಿನಗಳವರೆಗೆ ಭೂಮಿಯ ಮೇಲಿದ್ದು, ತನ್ನ ಶಿಷ್ಯರಿಗೆ ಬೋಧನೆಯಲ್ಲಿ ಸ್ಥಿರತೆಯನ್ನುಂಟು ಮಾಡಿದನು. ತನ್ನ ಧರ್ಮಸಂಸ್ಥೆ ಶ್ರೀ ಸಭೆಯ ವ್ಯವಸ್ಥೆಯನ್ನು ಮಾಡಿದನು. ನಾಲ್ವತ್ತನೆಯ ದಿನ ಅವರೆಲ್ಲರನ್ನೂ ಬೆತಾನಿಯಾಕ್ಕೆ ಬರಹೇಳಿದನು. ಅಲ್ಲಿ ಅವರಿಗೆ ಕೊನೆಯ ಆದೇಶವನ್ನಿತ್ತು ಅವರ ಕಣ್ಮುಂದೆ ಮೇಲಕ್ಕೇರಿದನು: ಶಿಷ್ಯರ ದೃಷ್ಟಿಗೆ ಕಾಣದಾದನು. ದೂತನೊಬ್ಬನು ಪ್ರತ್ಯಕ್ಷನಾಗಿ ಯೇಸುವು ದಿವವನ್ನೇರಿದ ವಿಷಯವನ್ನು ಸ್ಫುಟಗೊಳಿಸಿದನು. ಇದುವೆ ದಿವಾರೋಹಣದ ಪರ್ವದಿನವು. ಯೇಸುವು ಸ್ವರ್ಗಕ್ಕೇರಿ, ಭಗವತ್ ಪಿತನ ಬಳಿಗೆ ತಂದನು. ಪಿತನು ನಮ್ಮಂತೆ ದೇಹಿಯಲ್ಲ. ಹೀಗಾಗಿ ಆತನಿಗೆ ಬಲ, ಎಡ ಪಾರ್ಶ್ವಗಳೊಂದೂ ಇಲ್ಲ. ಇಲ್ಲಿ ಬಲ ಎಂದರೆ ಪ್ರಮುಖಸ್ಥಾನದಲ್ಲಿ ಎಂದು ತಿಳಿಯಬೇಕು.

"ನಾನು ನಿಮ್ಮನ್ನು ತಬ್ಬಲಿಗಳಾಗಿ ಮಾಡಲಾರೆನು; ನಾನು ನಿಮ್ಮಲ್ಲಿ ಬರುವೆನು" (ಯೋಹಾನ ೮, ೧೮)

"ಪಿತನಲ್ಲಿ ನಮಗೊಬ್ಬ ಮಧ್ಯಸ್ಥನಿರುವನು, ಅವನೇ ಯೇಸು ಕ್ರಿಸ್ತನು" (೧ ಯೋಹಾನ ೨, ೧)

(೭) ಅಲ್ಲಿಂದ ಯೇಸುವು ಜೀವಂತರ ಹಾಗೂ ಮೃತರ ನೀತಿ ವಿಚಾರಣೆ ಬರುವನು.

ಕೊನೆಗೊಂದು ದಿನ ಜಗತ್ತು ಕೊನೆಗೊಳ್ಳುವುದು. ಕ್ರಿಸ್ತನ ಸಂದೇಶವು ಜಗತ್ತಿನ ಎಲ್ಲ ಮನುಷ್ಯರಿಗೂ ಸಿಗುವುದು. ಆ ಸಮಯದಲ್ಲಿ ಕ್ರಿಸ್ತವಿರೋಧಿ (Antichrist) ಗೊಂದಲವನ್ನೆಬ್ಬಿಸಿ, ಜನರನ್ನು ಬಹುವಿಧದಲ್ಲಿ ಪೀಡಿಸುವನು. ಅನೇಕ ಶಕುನಗಳು ಉತ್ಪಾತಗಳು ಆ ಕೊನೆಯ ದಿನವನ್ನು ಮುಂದಾಗಿ ತಿಳಿಸುವುವು.

"ಆ ದಿನದ, ಆ ಗಳಿಗೆಯನ್ನು ಕುರಿತು ಯಾರೂ, ಸ್ವರ್ಗದಲ್ಲಿರುವ ಸುಮನಸರೂ ಕೂಡ ಅರಿಯರು; ಪಿತನು ಮಾತ್ರ ಅದನ್ನರಿತಿರುವನು.

ಸ್ವಾಮಿಯು ಆದಾವ ಹೊತ್ತಿನಲ್ಲಿ ಬರುವನೆಂಬುದನ್ನು ನೀವರಿತಿಲ್ಲವಾದುದರಿಂದ ನೀವು ಜಾಗ್ರತೆಯಲ್ಲಿರಿ" (ಮತ್ತ್ತೇಯ ೨೪, ೩೬, ೪೨)

ಅಂದು ಅಖಿಲ ಮಾನವ ಕುಲದ ವಿಚಾರಣೆಯು ನಡೆಯುವುದು. ಮನಸ್ಸು, ಮಾತು, ಕಾರ್ಯಗಳಲ್ಲಿ ಆಚರಿಸಿದ ಪಾತಕಗಳಲ್ಲದೆ ಮಾಡಬೇಕಾದುದನ್ನು ಮಾಡದಿರುವ ಅಪರಾಧಗಳೂ ಬಹಿರಂಗಗೊಳ್ಳುವುವು. ಸಜ್ಜನರಿಗೆ ಮೋಕ್ಷವೂ ದುರ್ಜನರಿಗೆ ನರಕವೂ ಸಿಗುವುದು.

"ಮನುಷ್ಯರು ಒಮ್ಮೆ ಸಾಯಬೇಕೆಂದೂ ಅನಂತರ ವಿಚಾರಣೆಯಿರುವುದೆಂದೂ ನಿಶ್ಚಯಿಸಲಾಗಿದೆ" (ಹೀಬ್ರೂ ೧. ೨೭).

ಆದುದರಿಂದ ಪ್ರತಿವ್ಯಕ್ತಿಯ ವಿಚಾರಣೆಯು ೨ ಬಾರಿ ನಡೆಯುವುದು. ವ್ಯಕ್ತಿಯ ಮರಣದ ಉತ್ತರಕ್ಷಣದಲ್ಲಿ ನಡೆದು ನಾಕ, ನರಕಗಳಲ್ಲೊಂದನ್ನು ಅವನು ಪಡೆಯುವನು (ಅಲ್ಪತರದ ಅಯೋಗ್ಯತೆಗಳಿದ್ದರೆ, ಅವು ಶುದ್ಧೀಕರಣ ಸ್ಥಾನದಲ್ಲಿ ತೊಳೆಯಲ್ಪಡುವುವು). ಎರಡನೆಯ ವಿಚಾರಣೆಯು ಜಗದಂತ್ಯದಲ್ಲಿ ನಡೆಯುವುದು. ಮೊದಲನೆಯದನ್ನು ವೈಯಕ್ತಿಕ ವಿಚಾರಣೆಯೆಂದೂ ಎರಡನೆಯದನ್ನು ಬಹಿರಂಗ ವಿಚಾರಣೆಯೆಂದೂ ಕರೆಯುವರು.

ಬಹಿರಂಗ ವಿಚಾರಣೆಗೆ ಉದ್ದೇಶಗಳಿಲ್ಲದಿಲ್ಲ. ಅಖಿಲ ಜಗತ್ತಿನ ಜನರೆದುರಲ್ಲಿ ಸಂರಕ್ಷಕ ಕ್ರಿಸ್ತನ ಹಿರಿಮೆಯು ಸಕಲರಿಗೆ ವೇದ್ಯವಾಗುವುದು ಮಾತ್ರವಲ್ಲ ಆ ವಿಚಾರಣೆಯು ಸಜ್ಜನ-ದುರ್ಜನರ ಸಮಕ್ಷಮದಲ್ಲಿ ನಡೆಯುವುದರಿಂದ ಸಜ್ಜನರಿಗೆ ಅಧಿಕಗೌರವವೂ ದುರ್ಜನರಿಗೆ ಅಧಿಕ ಅಪಮಾನವೂ ನಡೆಯುವುದು. ಭಗವಂತನ ನ್ಯಾಯವು ಪಕ್ಷಪಾತವಿಲ್ಲದಿದ್ದುದೆಂದು ಸರ್ವರಿಗೂ ತಿಳಿಯುವುದು. ಬಹಿರಂಗ ವಿಚಾರಣೆಯ ಕಾಲದಲ್ಲಿ ಪ್ರತಿ ಮಾನವನ ಆತ್ಮವು ತನ್ನ ದೇಹವನ್ನು ಪುನಃ ಕೂಡಿಕೊಳ್ಳುವುದು; ನಾಕ-ನರಕಗಳ ಅನಂತ ಜೀವನಕ್ಕೆ ಜೊತೆಯಾಗಿಯೇ ಪಾತ್ರತ್ವವನ್ನು ಪಡೆಯುವುವು.

(೮) ನಾನು ಪವಿತ್ರಾತ್ಮನಲ್ಲಿ ವಿಶ್ವಾಸವಿಡುತ್ತೇನೆ. ಪುರುಷತ್ರಯೈಕಭಗವಂತನ ಕುರಿತು ಈ ಮೊದಲೇ ನೋಡಿರುವೆವು. ಪ್ರೇಮತರ ಧರ್ಮಸಾರದಲ್ಲಿ ಭಗವತ್ ಏಕ, ಭಗವತ್ ಪುತ್ರರ ಕುರಿತು ನಾವು ಈ ಮೊದಲೇ ವಿಸ್ತರಿಸಿರುವೆವು. ಈಗ ತೃತೀಯ ಪುರುಷನಾದ ಭಗವತ್ ಪವಿತ್ರಾತ್ಮನ ಕುರಿತು ನಾವು ತಿಳಿಯಬೇಕಾಗಿದೆ.

ಭಗವತ್‌ಪಿತ–ಭಗವತ್‌ಪುತ್ರರ ಸಂಬಂಧದಲ್ಲಿ ಭಗವತ್ ಪವಿತ್ರಾತ್ಮನು ಉದಯಿಸುವನು. ಆದುದರಿಂದ ಪವಿತ್ರಾತ್ಮನನ್ನು ಪ್ರೇಮಸ್ವರೂಪಿಯೆಂದು ಕರೆಯುವರು. ಪವಿತ್ರಾತ್ಮನ ಪೂರ್ಣಪರಿಚಯವನ್ನು ಜಗತ್ತಿಗೆ ಅಧಿಕಾರವಾಣಿಯಿಂದ ಪ್ರಕಟಿಸಿದವನು ಕ್ರಿಸ್ತನೇ. "ಪಿತನಿಂದ ಮುಂಬರುವ ಸತ್ಯದ ಆತ್ಮನಾದ ಆ ಮಧ್ಯಸ್ಥ (Parachte)ನನ್ನು ನಾನು ಕಳುಹಿಸುವೆನು; ಆತನು ನನ್ನ ಕುರಿತು ಸಾಕ್ಷ್ಯವನ್ನೀಯುವನು" (ಯೋಹಾನ ೧೫, ೨೬).

ಪವಿತ್ರಾತ್ಮನ ಆಗಮನದವರೆಗೆ ಶಿಷ್ಯರೆಲ್ಲರೂ ಒಂದೆಡೆಯಿರಬೇಕೆಂದೂ ಆತನೇ ವಿಷಯಗಳನ್ನು ಅವರು ತಿಳಿಯುವಂತೆ ಮಾಡುವನೆಂದೂ ತಿಳಿಸಿದ್ದನು. ದಿವಾರೋಹಣದ ಬಳಿಕ ಶಿಷ್ಯರೆಲ್ಲರೂ 'ನೆನೆಕಲ್' ಕೋಣೆಯಲ್ಲಿ ವಿಚಾರಮಗ್ನರಾಗಿದ್ದರು. ಹತ್ತನೆಯ ದಿನ ಬಿರುಗಾಳಿಯೊಂದು ಬೀಸುವಂತೆ ಭಾಸವಾಯಿತು. ಅವರ ಮಧ್ಯದಲ್ಲಿ ಅಗ್ನಿಯ ಕೆನ್ನಾಲಿಗೆಗಳು ಕಾಣತೊಡಗಿದುವು. ಪ್ರತಿಯೊಬ್ಬನ ತಲೆಯ ಮೇಲ್ಗಡೆ ಅವು ತುಸುಹೊತ್ತು ನಿಂತು ಕಣ್ಮರೆಯಾದವು. ಅವರು ಆಗ ಭಗವತ್ ಪವಿತ್ರಾತ್ಮನ ಶಕ್ತಿಯಿಂದ ತುಂಬಿದರು. ವಿವಿಧ ಭಾಷೆಗಳನ್ನಾಡಲು ಸಾಮರ್ಥ್ಯವನ್ನು ಅವರು ಪಡೆದರು. ಅಂದಿನಿಂದ ಶಿಷ್ಯರು ಧೀರರಾಗಿ ಕ್ರಿಸ್ತನ ಸಂದೇಶವನ್ನು ಪ್ರಚಾರಮಾಡಲು ಉಪಕ್ರಮಿಸಿದರು.

(೯) ಪವಿತ್ರ ಕಥೋಲಿಕ ಶ್ರೀ ಸಭೆಯಲ್ಲಿಯ ಸಂತರ ಐಕ್ಯತೆಯಲ್ಲಿಯೂ ನಾನು ವಿಶ್ವಾಸವಿಡುತ್ತೇನೆ.

ಶ್ರೀ ಸಭೆಯ ಕುರಿತು ಹಿಂದೆಯೇ ನಾವು ನೋಡಿರುವೆವು. ಅದು ಪವಿತ್ರವಾಗಿರುವುದೂ, ವಿಶ್ವಧರ್ಮವಾಗಿರುವುದೂ, ಪಿತಮಾತ್ರ ರೂಪದಲ್ಲಿರುವುದೂ, ನಿತ್ಯ ವಿಸ್ತರಿಸುವಂತಹದೂ ಆಗಿದೆ. ಅದರ ನಾಯಕನು ಭಗವಾನ್ ಕ್ರಿಸ್ತನೂ ಆತ್ಮವು ಭಗವಾನ್ ಪವಿತ್ರಾತ್ಮನೂ ಆಗಿರುವುದರಿಂದ ಅದು ಪವಿತ್ರವಾದುದೆಂದು ನಾವು ತಿಳಿದಿರುವೆವು. ಅದರ ಸಕಲ ಸದಸ್ಯರು ಒಬ್ಬನೇ ನಾಯಕನಡಿಯಲ್ಲಿದ್ದು, ಅದೇ ಸಪ್ತ ಸಂಸ್ಕಾರಗಳನ್ನು ಬಳಸುತ್ತ, ಪಿತರೂಪವಾದ ಮತತತ್ವಗಳಲ್ಲಿ ವಿಶ್ವಾಸವನ್ನಿಡುವರು. ಹೀಗಾಗಿ ಅವರಲ್ಲಿ ಏಕರೂಪತೆಯಿದೆ. ಕ್ರೈಸ್ತ ಶ್ರೀಸಭೆಯ ಸಂಸ್ಥಾಪಕ

ಯೇಸುಕ್ರಿಸ್ತನಾದರೂ ದೃಗ್ಗೋಚರ ನಾಯಕನಾಗಿ ಜಗದ್ಗುರು ಪೋಪ ಸ್ವಾಮಿಗಳಿರುವರು. ಕ್ರಿಸ್ತಮತವು ಜಗತ್ತಿನ ಪ್ರತಿಯೊಂದು ಜೀವಿಗೂ ಅನ್ವಯಿಸುವುದು, ತನ್ನ ಸಂದೇಶವು ಜಗತ್ತಿನ ಪ್ರತಿಯೊಂದು ಜೀವಿಗೆ ಸಿಗಬೇಕೆಂದು ಯೇಸುವು ಇಚ್ಛಿಸಿರುವನು. ಮುಕ್ತ ಆಣತಿಯನ್ನೂ ತನ್ನ ಶಿಷ್ಯರಿಗೆ ನೀಡಿರುವನು.

"ನೀನು ಪೇತ್ರನಾಗಿರುವೆ; ಈ ಬಂಡೆಗಲ್ಲಿನಲ್ಲಿ ನನ್ನ ಶ್ರೀಸಭೆಯನ್ನು ನಾನು ರಚಿಸುವೆನು. ನರಕದ ದ್ವಾರಗಳು ಅದರ ಮೇಲೆ ವರ್ತಿಸಲಾರವು" (ಮತ್ತೇಯ ೧೬, ೧೮).

"ಇದೋ, ನಾನು ನಿಮ್ಮೊಡನೆ ಎಲ್ಲ ದಿನಗಳಲ್ಲಿಯೂ, ಜಗದಂತದವರೆಗೂ ಇರುವೆನು" (ಮತ್ತೇಯ ೨೮, ೨೦).

"ಪಿತನು ನನ್ನನ್ನು ಕಳುಹಿಸಿದಂತೆ ನಿಮ್ಮನ್ನು ನಾನೂ ಕಳುಹಿಸುತ್ತೇನೆ." (ಯೋಹಾನ ೨೦, ೨೧). ಆದುದರಿಂದ ನೀವು ಹೋಗಿ, ಎಲ್ಲ ಜನಾಂಗಗಳಿಗೂ ಬೋಧಿಸಿರಿ.... ನಾನು ಆಜ್ಞಾಪಿಸಿದುದೆಲ್ಲವನ್ನೂ ಅವರಿಗೆ ಕಲಿಸಿರಿ" (ಮತ್ತೇಯ ೨೮, ೧೯, ೨೦).

ಯೇಸುಕ್ರಿಸ್ತನು ತನ್ನ ಶಿಷ್ಯರೊಡನುಂಡ ಕೊನೆಯ ಭೋಜನದ ಅನಂತರ ತನ್ನ ತತ್ವಗಳ ಸ್ಥಿರತೆಗಾಗಿ ದ್ರಾಕ್ಷೆ ಬಳ್ಳಿಯ ಸಾಮ್ಯವನ್ನು ಕೊಟ್ಟನು ; ನಾನೇ ನಿಜವಾದ ದ್ರಾಕ್ಷೆಯ ಬಳ್ಳಿಯು. ನನ್ನ ಪಿತನೇ ತೋಟಗಾರನು. ನನ್ನಲ್ಲಿ ಫಲತೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುವನು. ಫಲಕೊಡುವ ಪ್ರತಿಯೊಂದು ಕೊಂಬೆಯೂ ಅಧಿಕ ಫಲವನ್ನು ನೀಡುವ ಹಾಗೆ ಶುದ್ಧಮಾಡುವನು. ನಾನು ನಿಮಗೆ ಹೇಳಿದ ಮಾತುಗಳಿಂದ ನೀವು ಈಗ ಶುದ್ಧರಾಗಿರುವರಿ, ನೀವು ನನ್ನಲ್ಲಿ ನೆಲೆಗೊಳ್ಳಿರಿ; ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ತನ್ನಲ್ಲಿ ತಾನು ಹೇಗೆ ಫಲವೀಯಲಾರದೊ ಹಾಗೆಯೇ ನೀವು ನನ್ನಲ್ಲಿ ನೆಲೆಗೊಳ್ಳದೆ ಹೋದರೆ ಫಲವೀಯಲಾರಿರಿ. ನಾನೇ ದ್ರಾಕ್ಷೆಯ ಬಳ್ಳಿಯು; ನೀವದರ ಕೊಂಬೆಗಳು. ಅವನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಾಗ ಅವನು ಅಧಿಕ ಫಲವನ್ನು ಧರಿಸುವನು. ನನ್ನನ್ನುಳಿದು ನೀವು ಏನನ್ನೂ ಮಾಡಲಾರಿರಿ. ಯಾವನು

ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು (ದುಷ್ಪ್ರಯೋಗಿ) ಕೊಂಬೆಯಂತೆ ಹೊರಚೆಲ್ಲಲ್ಪಟ್ಟು ಒಣಗಿಹೋಗುವನು" (ಯೋಹಾನ ೧೫, ೧-೬).

ಕ್ರಿಸ್ತನು ದ್ರಾಕ್ಷೆ ಬಳ್ಳಿಯು; ಆತನನ್ನು ಅನುಸರಿಸುವರು ಆ ಬಳ್ಳಿಯ ಕೊಂಬೆಗಳು. ಕೊಂಬೆಗಳು ಪರಸ್ಪರ ಬಂಧುಗಳು-ಅವರನ್ನು ಸಂತರೆಂದು ಕರೆಯುವರು. ' ಅವರು ಇಹದಲ್ಲಿರಲಿ, ಪರದಲ್ಲಿರಲಿ, ಪರಸ್ಪರ ಸಹಕಾರವೀಯುತ್ತಾರೆಂಬುದನ್ನು ಶ್ರೀಸಭೆಯು ವಿಧಿಸುತ್ತದೆ. ಇಹದಲ್ಲಿರುವ ಸಮಸ್ತ ಸದಸ್ಯರಿಗೆ ಹೋರಾಡುವ ಶ್ರೀಸಭೆ (The Church Militant) ಯೆಂದೂ ಸ್ವರ್ಗದಲ್ಲಿರುವ ಸದಸ್ಯರಿಗೆ ವಿಜಯ ಶ್ರೀಸಭೆ (The Church Triumph)ಯೆಂದೂ ಕರೆಯುವರು. ಸತ್ತ ಜನರೆಲ್ಲರೂ ನೇರವಾಗಿ ಪರಲೋಕ(ಸ್ವರ್ಗ)ವನ್ನು ಸೇರುತ್ತಾರೆಂದು ತಿಳಿಯಲಾಗದು. ಪರಿಶುದ್ಧ ಜೀವನವನ್ನು ಸಾಗಿಸುತ್ತ ಸತ್ತವರು ನೇರವಾಗಿ ಸ್ವರ್ಗವನ್ನು ಸೇರುವರೆಂಬುದರಲ್ಲಿ ಸಂದೇಹವಿಲ್ಲ. ಹಾಗೆಯೇ ಮಹಾಪಾತಕಗಳ ಹೊರೆಯಿರುವಾಗಲೇ ಸತ್ತವರೆಲ್ಲರೂ ನರಕಬಾಧ್ಯಸ್ಥರಾಗುವರು. ಆದರೆ ಮರಣಕಾಲದಲ್ಲಿ ಅಲ್ಪವಾದ ಪಾತಕಗಳಿಂದ ಅಶುಚಿಯಾದವರು ಯುಕ್ತ ಶುದ್ಧೀಕರಣವನ್ನು ಪಡೆದು ಸ್ವರ್ಗವನ್ನು ಸೇರುವರು. ಇದನ್ನು ಶುದ್ಧೀಕರಣಸ್ಥಾನ (Purgatory Suffering) ಯೆನ್ನುವರು.

" ಭಗವಂತನು ಪ್ರತಿಮಾನವನಿಗೆ ಅವನ ಕಾರ್ಯಕ್ಕನುಗುಣವಾಗಿ ನೀಡುವನು " (ರೋಮಕ ೨, ೬).

" (ಮೋಕ್ಷವನ್ನು) ಅಶುಚಿಯಾದ ಯಾವುದೊಂದು ವಸ್ತುವೂ ಪ್ರವೇಶಿಸಲಾರದು " (ದೇವೋಕ್ತ ೨೧, ೨೭).

" ಸತ್ತವರಿಗಾಗಿ, ಅವರು ತಮ್ಮ ಪಾತಕಗಳಿಂದ ಬಿಡುಗಡೆ ಹೊಂದುವಂತೆ ಪ್ರಾರ್ಥಿಸುವುದು ಪವಿತ್ರವೂ ವಿಹಿತವೂ ಆದ ಭಾವನೆಯಾಗಿದೆ " (೨ ಮಾಕಾಬಿ ೧೨, ೪೬).

(೧೦) ಪಾತಕ ಕ್ಷಮಾಪಣೆಯಲ್ಲಿ ನಾನು ವಿಶ್ವಾಸವಿಡುತ್ತೇನೆ. ಪಾತಕ, ಅದರ ವಿಧಗಳು ಮೊದಲಾದುವನ್ನು ಹಿಂದೆಯೇ ನಾವು ನೋಡಿರುವೆವು. ಇಲ್ಲಿ ಎಂತಹ ಮಹಾಪಾತಕವನ್ನಾದರೂ ಕ್ಷಮಿಸುವ ಅಧಿಕಾರವನ್ನು ಶ್ರೀಸಭೆಯು ವಿಧಿಯುಕ್ತ ಪುರೋಹಿತರಿಗೆ ಯೇಸುವು ನೀಡಿರುವ

ನೆಂದು ತಿಳಿಯಬೇಕು. ಪಾತಕಗಳ ಕ್ಷಮೆ ಸಿಗಬೇಕಾದರೆ ವ್ಯಕ್ತಿಯು ತನ್ನ ಪಾತಕಗಳಿಗೆ ಪಶ್ಚಾತ್ತಾಪ ಪಡಬೇಕಲ್ಲದೆ, ಮುಂದಿನ ಜೀವನದಲ್ಲಿ ಅವು ಪುನಃ ಘಟಿಸದಂತೆ ದೃಢನಿರ್ಧಾರವನ್ನೂ ಪರಿಹಾರಕ್ಕಾಗಿ ಪ್ರಾಯಶ್ಚಿತ್ತ ಕೈಕೊಳ್ಳಬೇಕು. ಆದುದರಿಂದ ಮಹಾಪಾತಕಗಳು, ವಿಧಗಳಾಗಲಿ, ಸಂಖ್ಯೆಯಾಗಲಿ ಗಣಿಸಲ್ಪಡದೆ ಪರಿಪೂರ್ಣವಾಗಿ ಕ್ಷಮಿಸಲ್ಪಡುವುವು. ಪಾತಕಗಳನ್ನು ಕ್ಷಮಿಸುವ ಅಧಿಕಾರವನ್ನು ಕ್ರಿಸ್ತನು ತನ್ನ ಪುನರುತ್ಥಾನದ ಬಳಿಕ ಶಿಷ್ಯರಿಗಿತ್ತನು.

“ಪವಿತ್ರಾತ್ಮನನ್ನು ನೀವು ಸ್ವೀಕರಿಸಿರಿ; ಯಾರ ಪಾತಕಗಳನ್ನು ನೀವು ಕ್ಷಮಿಸುವರೊ ಅವು ಕ್ಷಮಿಸಲ್ಪಡುವುವು; ಯಾರ ಪಾತಕಗಳನ್ನು ನೀವು ಉಳಿಸುವಿರೊ ಅವು ಉಳಿಯುವುವು ಎಂದು ಅವನು ಹೇಳಿದನು” (ಯೋಹಾನ ೨೦, ೨೨, ೨೩).

ಮಾನವನ ಪಾತಕಗಳನ್ನು ಭಗವಂತನು ಕ್ಷಮಿಸಲೇಬೇಕೆಂದಿಲ್ಲ ವಾದರೂ ಅಪರಿಮಿತ ಕರುಣಾಸಾಗರನಾದ ಭಗವಂತನು ತನ್ನ ಪ್ರೇಮದ ಕುರುಹಾಗಿ ಕ್ಷಮಿಸುವನು.

“ಸ್ವಾಮಿಯಾದ ಭಗವಂತನು ಉದಾರಿಯೂ ಕರುಣಾಮಯನೂ ಸಹಿಷ್ಣುವೂ ಕರುಣೆಯಲ್ಲಿ ಶ್ರೀಮಂತನೂ ಆಗಿರುವನು” (ಜೊಯೆಲ್ ೨, ೧೩).

ಪಾತಕಗಳ ಕ್ಷಮೆಗೆ ಎರಡು ಸಂಸ್ಕಾರಗಳನ್ನು ಕ್ರಿಸ್ತನು ಸ್ಥಾಪಿಸಿ ರುವನು. ಜ್ಞಾನಸ್ನಾನದ ಮುನ್ನ ಘಟಿಸಿದ ಪಾತಕಗಳೆಲ್ಲವೂ ಅವನ್ನು ಸ್ವೀಕರಿಸಿದಾಗ ಕ್ಷಮಿಸಲ್ಪಡುವುವು. ಮುಂದಿನ ಜೀವನದಲ್ಲಿ ಘಟಿಸಿದ ಪಾತಕಗಳು ಪ್ರಾಯಶ್ಚಿತ್ತದ ಸಂಸ್ಕಾರದ ಮೂಲಕ ಕ್ಷಮಿಸಲ್ಪಡುವುವು. ಮಾನವನ ದುರ್ಬಲ ಸ್ವಭಾವವು ಪಾತಕಗಳಿಗೆ ಕಾರಣವಾಗಿದೆ. ಆದುದ ರಿಂದ ಎಲ್ಲರೂ ಪಾತಕಿಗಳಾಗಿರುವರು.

“ನೀನು ಜೀವಂತನಾಗಿರುವೆಯೆಂಬ ಹೆಸರನ್ನು ಪಡೆದರೂ ನೀನು ಸತ್ತಿರುವೆಯೆಂದು ನಿನ್ನ ಕಾರ್ಯಗಳನ್ನು ತಿಳಿದಿರುವೆನು” (ದೇಪ್ರೋಕ್ತ ೩,೧).

“ಯಾವಾತನು ಪಾತಕಗಳನ್ನು ಆಚರಿಸುತ್ತಾನೋ ಅವನು ಕೇಡಿಗ ತನವನ್ನು ಆಚರಿಸುತ್ತಾನೆ; ಪಾತಕವು ಕೇಡಿಗತನವಾಗಿದೆ ”(೧ ಯೋಹಾನ

ಕ್ರಿಸ್ತನು ಶುದ್ಧ ಮಾನವನಾಗಿ ಜನಿಸಿದ್ದರೂ ಆತನು ಭಗವತ್ ಪುರುಷನಾಗಿರುವುದರಿಂದ ಆತನಲ್ಲಿ ಅದಾವ ಪಾಪಲೇಶವೂ ಸುಳಿಯದು. ಮಾತ್ರನಲ್ಲ ಆತನ ಮಾತೆ ಮರಿಯಳೂ ಜನ್ಮಪಾತಕವಾಗಲಿ, ಇತರ ಯಾವತ್ತೂ ಪಾತಕವಾಗಲಿ ಇಲ್ಲದವಳು. ಕ್ರಿ. ಶ. ೩೦೬–೩೭೩ರಲ್ಲಿದ್ದ ಎಫ್ರೆಮ್ ಎಂಥಹ ತತ್ವಜ್ಞನು.

"ಆಕೆಯು ನಿಷ್ಕಲ್ಮಷತೆಯಲ್ಲಿ ಪತನದ ಮುನ್ನ ಈ ವಾಳಂ ತಿದ್ದು ಪಾತಕದ ಪ್ರತಿಯೊಂದು ಕಲೆಯಿಂದ ಪರಿಪೂರ್ಣ ದೂರವಾದ ಕನ್ಯೆಯೂ, ಶುದ್ಧ ಸುಮನಸ (Seraphim)ರಿಗಿಂತ ಅಧಿಕ ಪವಿತ್ರೆಯೂ ಭಗವತ್ ಶುದ್ಧ ಬೀಜವೂ, ದೇಹದಲ್ಲಿಯೂ ಪರಿತ್ಯಕ್ತಳೂ ನಿಷ್ಕಲಂಕಳೂ ಆಗಿರುವಳು." (Carmina Nisibina) ಎಂದೂ ಹೇಳಿರುವನು. ಮರಿಯಳ ಅಮಲೋದ್ಭವ (ನಿರ್ದೋಷ ಗರ್ಭಸಂಭವ)ದ ಪರ್ವದಿನವನ್ನು ದಶಂಬರ ಲೆಕ್ಕ ಶ್ರೀ ಸಭೆಯು ಆಚರಿಸುತ್ತಿದೆ.

(೧೧) ದೇಹದ ಪುನರುತ್ಥಾನದಲ್ಲಿ ನಾನು ವಿಶ್ವಾಸವಿಡುತ್ತೇನೆ. ಮನುಷ್ಯನಾಗಿ ಜನಿಸಿದವನು ಸಾಯುವನು. ಆತನ ಆತ್ಮವು ತನ್ನ ಪುಣ್ಯ ಅಥವಾ ಪಾತಕಗಳ ಸಮೇತ ಭಗವತ್ ಸನ್ನಿಧಾನಕ್ಕೆ ಗಮಿಸುವುದು. ಅಲ್ಲಿ ಅದರ ವಿಚಾರಣೆಯು ನಡೆಯುವುದು. ಅನಂತರ ಸ್ವರ್ಗನರಕಗಳಲ್ಲೊಂದರಲ್ಲಿ ಅದು ಇರುವುದು. ಆತನ ಮೃಣ್ಮಯ ದೇಹವು ಜಗತ್ತಿನಲ್ಲಿ ಉಳಿಯುವುದು.

"ಧೂಳು ನೀನಾಗಿರುವೆ ; ಧೂಳಿಗೆ ನೀನು ಪುನಃ ಹೋಗುವೆ" (ಉತ್ಪತ್ತಿ ೩, ೧೯).

ಕೊನೆಗೊಂದು ದಿನ ಜಗತ್ತು ಕೊನೆಗೊಳ್ಳುವುದು. ಎಲ್ಲ ಜನರು, ಆದಿಮಾನವನ ಮೊದಲ್ಗೊಂಡು ಕಟ್ಟಕಡೆಯ ಮಾನವನವರೆಗೆ ಪುನರುತ್ಥಾನಗೊಳ್ಳುವರು. ಪ್ರತಿಯೊಬ್ಬನು ತನ್ನದೇ ಆದ ದೇಹವನ್ನು ಪಡೆಯುವನು. ಅನಂತರ ಬಹಿರಂಗ ವಿಚಾರಣೆಯು ನಡೆಯುವುದು. ಈ ಕುರಿತು ಹಿಂದೆ ನೋಡಿರುವೆವು.

ಹಿಂದೂಮತದಲ್ಲಿ ಆತ್ಮನು ಹಲವು ಜನ್ಮಾಂತರ ಸಂಬಂಧಗಳನ್ನು ಅನುಕ್ರಮವಾಗಿ ಪಡೆದು ಕೊನೆಗೊಂದು ದಿನ ಭವಬಂಧದಿಂದ ಬಿಡುಗಡೆಯನ್ನು ಪಡೆಯುವನು, ಮಾತ್ರವಲ್ಲ ಭಗವಂತನಲ್ಲಿ ಲೀನನಾಗುವನು. ಆಮೇಲೆ

ಆತ್ಮನ ವೈಯಕ್ತಿಕ ಅಸ್ತಿತ್ವವು ಇರುವುದಿಲ್ಲ. ಅದುವೆ ಮುಕ್ತಿಯು. ಆದರೆ ಕ್ರೈಸ್ತಮತದಲ್ಲಿ ಆತ್ಮಕ್ಕೆ ವೈಯಕ್ತಿಕ ಅಸ್ತಿತ್ವವಿದೆ. ಭಗವಂತನ ಉದಾರತೆಯಿಂದ ಸೃಷ್ಟಿಸಲ್ಪಟ್ಟ ಆತ್ಮವು ಐಹಿಕ ಜೀವನದಲ್ಲಿ ಕೆಲಕಾಲವಿದ್ದು, ಯುಕ್ತ ನಿಯಮಗಳನ್ನು ಪಾಲಿಸಿ ಭಗವಂತನ ಸನ್ನಿಧಾನವನ್ನಾಗಲಿ, ತದ್ವಿರುದ್ಧಾಚರಣೆಯಿಂದ ನರಕವನ್ನಾಗಲಿ ಪಡೆಯುವುದು. ಒಮ್ಮೆ ಸ್ವರ್ಗ ಅಥವಾ ನರಕವನ್ನು ಪ್ರವೇಶಿಸಿದ ಬಳಿಕ ಗತ್ಯಂತರವಿಲ್ಲ. ಅದಕ್ಕಾಗಿ ಐಹಿಕ ಜೀವನದಲ್ಲಿ ಪ್ರೇಮಮಯ ಭಗವಂತನ ನಿಯಮಗಳನ್ನು ಪಾಲಿಸಿ. ಮಾನವ ಸಹಜ ದುರ್ಬಲತೆಯಿಂದಾಗಿ ಮಾಡಿದ ಅಪರಾಧಗಳ ದುಷ್ಫಲವನ್ನು ನೀಗಿಕೊಳ್ಳ ಬೇಕಾಗಿದೆ. ಇವಕ್ಕಾಗಿ ಯೇಸುಕ್ರಿಸ್ತನು ಬಿಡುಗಡೆ (ಮುಕ್ತಿ)ಯ ಮಾರ್ಗವನ್ನು ತೋರಿಸಿರುವನು.

ಕ್ರಿಸ್ತ ತತ್ವದ ಪ್ರಕಾರ ಮನುಷ್ಯನಿಗೆ ಏಕಮಾತ್ರ ಜೀವನಕಾಲವಿರುವುದು. ದೇಹವು ಒಮ್ಮೆ ಪಂಚಭೂತಮಯವಾಗಿ ಹೋದರೂ ಕೊನೆಗೊಮ್ಮೆ ಪುನರುತ್ಥಾನಗೊಳ್ಳುವುದು; ಆದುದರಿಂದ ಮಾನವನ ದೇಹಕ್ಕೆ ಯುಕ್ತಗೌರವವನ್ನು ನೀಡುವರು. ಕ್ರೈಸ್ತರಲ್ಲಿ ಸತ್ತವರ ದೇಹಗಳನ್ನು ಸುಡುವುದಿಲ್ಲ. ಯೆಹೂದ್ಯರಲ್ಲಿ ರೂಢಿಯಲ್ಲಿದ್ದ ದಫನಕ್ರಮವನ್ನು ಕ್ರೈಸ್ತರೂ ಸ್ವೀಕರಿಸಿರುವರು. ಸತ್ತವರಿಗೆ ಗೌರವವನ್ನು ನೀಡುವುದಕ್ಕಾಗಿ ಯುಕ್ತ ದಫನಕ್ರಿಯೆಯನ್ನು ಶ್ರೀಸಭೆಯು ಅನುಗೊಳಿಸಿದೆ. ಪ್ರತಿಯೊಬ್ಬನಲ್ಲಿರುವ ಪವಿತ್ರಾತ್ಮನ ದೇಗುಲವಾದ ದೇಹವನ್ನು ಗೌರವಪೂರ್ವಕವಾಗಿ ಯುಕ್ತ ಮಸಣದಲ್ಲಿ ಅಡಕಗೊಳಿಸುವುದಕ್ಕೆ ಶ್ರೀಸಭೆಯು ಎಲ್ಲ ವಿಧಿವಿಧಾನಗಳನ್ನು ಅನ್ವಯಿಸುತ್ತದೆ. ಹಾಗಾಗಿ ಹಿಂದೂಗಳಲ್ಲಿ ರೂಢಿಯಲ್ಲಿರುವ ದಹನ ಪದ್ಧತಿಯನ್ನು ಅದು ಒಪ್ಪಿಕೊಳ್ಳುವುದಿಲ್ಲ. ದಹನಗೊಂಡ ದೇಹವು ಭಸ್ಮವಾಗುವುದು. ಭಸ್ಮದಿಂದ ಪುನಃ ಮೊದಲನೆಯ ದೇಹವನ್ನು ಪಡೆಯಲು ಕಷ್ಟವೆಂದು ದಹನಪದ್ಧತಿಯ ನಿರಾಕರಣೆಯೆಂದು ತಿಳಿಯಬಾರದು. ದಫನವಾಗಲಿ, ದಹನವಾಗಲಿ ಎರಡೂ ರೀತಿಗಳಲ್ಲಿ ಪುನರುತ್ಥಾನಕ್ಕೆ ಅಭ್ಯಂತರವೇನಿಲ್ಲ. ಮಾತ್ರವಲ್ಲ ಎರಡರಲ್ಲಿ ಒಂದು ಇನ್ನೊಂದಕ್ಕಿಂತ ಸುಲಭಸಾಧ್ಯವಾದುದೇನಲ್ಲ.

(೧೨) ಅನಂತ ಜೀವನದಲ್ಲಿ ವಿಶ್ವಾಸವಿಡುತ್ತೇನೆ.

ಕ್ರೈಸ್ತರ ವೈದಿಕ ಪರಿಭಾಷೆಯಲ್ಲಿ ಸ್ವರ್ಗವೆಂದರೂ, ಮೋಕ್ಷವೆಂದರೂ

ಒಂದೇ. ಮಾನವನ ಬಾಳಿನ ಗುರಿಯು ಅದುವೆ. ಅದನ್ನು ಪಡೆಯಲು ಇಹದಲ್ಲಿ ಯುಕ್ತಸಿದ್ಧತೆಗಳನ್ನು ಮಾಡಬೇಕಾಗಿದೆ.

"(ದುರ್ಜನರು) ಅನಂತ ಶಿಕ್ಷೆಗೂ ಸಜ್ಜನರು ಅನಂತ ಜೀವನಕ್ಕೂ ಹೋಗುವರು" (ಮತ್ತಾಯ ೨೫, ೪೬).

೯. ದಶ ಭಗವನ್ನಿಯಮಗಳು

ಉದಾತ್ತ ಸೂತ್ರಗಳು

ಭಗವಾನ್ ಯೇಸುಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಆತನ ಬೋಧನೆಯನ್ನು ತನ್ನ ಜೀವನದಲ್ಲಿ ಅನ್ವಯಿಸಿಕೊಂಡವನು ಕ್ರೈಸ್ತನು. ಆ ಕ್ರೈಸ್ತನು ಯೇಸುಕ್ರಿಸ್ತನ ಮೂಲಕ ಭಗವಂತನೊಡನೆ ಜೀವಂತ ಐಕ್ಯವನ್ನು ಪಡೆಯಬೇಕಾಗಿದೆ. ಪ್ರೇಮ ಹಾಗೂ ಸತ್ಯಗಳು ವ್ಯಕ್ತಿಯ ಜೀವನವನ್ನು ಕ್ರೈಸ್ತನನ್ನಾಗಿ ಮಾಡುವವು.

“ನನ್ನನ್ನು ಅನುಸರಿಸುವವನು ಅಂಧಕಾರದಲ್ಲಿ ನಡೆಯುವುದಿಲ್ಲ; ಆದರೆ ಜೀವನದ ಪ್ರಕಾಶವನ್ನು ಪಡೆಯುವನು”.

ಹಾಗೆಂದು ಕ್ರೈಸ್ತಮತವು ಸೂತ್ರಗಳ, ವಿಧಿವಿಧಾನಗಳ ಸಂಗ್ರಹವಲ್ಲ. ಸಂಪೂರ್ಣ ಜೀವನದ ಉಜ್ವಲೀಕರಣವು ಅದಾಗಿದೆ. ಆದರೂ ಮುಂದಿನ ಭವ್ಯಜೀವನದ ಮಾರ್ಗದರ್ಶನಕ್ಕೆ, ಐಹಿಕ ಜೀವನದ ಸುವ್ಯವಸ್ಥೆಗೆ ಭಗವಂತನು ಮಾನವನಿಗೆ ಕೆಲವು ಸೂತ್ರಗಳನ್ನು ಅದೊಂದು ಬಗೆಯ ನಿಯಮ ಸಂಹಿತೆಯನ್ನು ಪ್ರಕಟಪಡಿಸಿರುವನು. ಪ್ರತಿಮಾನವನ ಅಂತಃಕರಣದಲ್ಲಿ ಅವು ಭಗವಂತನಿಂದ ಅಚ್ಚೊತ್ತಲ್ಪಟ್ಟಿವೆ. ಆದರೂ ಬಹುಪ್ರಾಚೀನ ಕಾಲದಲ್ಲಿ ಮೋಸೆ ಎಂಬವನಿಗೆ ಕೃತಿರೂಪಕ್ಕೆ ತರಲು ಆ ಭಗವಂತನೇ ಆದೇಶವಿತ್ತನು.

ಭಗವಂತನ ಆಯ್ಕೆಯ ಜನಾಂಗವು ಐಗುಪ್ತಕ್ಕೆ ಬಂದಿತು. ಆದರೆ ರಾಜಕೀಯ ಕ್ರಾಂತಿಯೊಂದು ನಡೆದು ಇಸ್ರೇಲರ ಮೆಚ್ಚಿನ ಫಾರಾವೊವು ಪರಾಜಿತನಾದನು. ವಿರೋಧಿ ವರ್ಗದವನು ಸಿಂಹಾಸನವನ್ನೇರಿದನು. (ಐಗುಪ್ತದವರು ತಮ್ಮ ರಾಜನ ಹೆಸರನ್ನು ಹೇಳದೆ ಫಾರಾವೊ ಅಂದರೆ ದೊಡ್ಡ ಮನೆಯವನೆಂದು ಕರೆಯುತ್ತಿದ್ದರು). ಆದರಿಂದಾಗಿ ಇಸ್ರೇಲರಿಗೆ ಕಷ್ಟಗಳು ಬಂದವು. ಅವರ ಜನತೆಯನ್ನು ಕಡಮೆಮಾಡಲು. ಅವರಿಗಿದ್ದ ಸಾಮಾನ್ಯ ಹಕ್ಕು

ಗಳನ್ನು ಅಳಿಸಲು ರಾಜನು ಪ್ರಯತ್ನಿಸಿದನು. ಆದರೂ ಇಸ್ರೇಲರು ಸಂಖ್ಯಾ ದೃಷ್ಟಿಯಿಂದಲೂ ಭಗವತ್ ಭಕ್ತಿಯಲ್ಲಿಯೂ ವೃದ್ಧಿಯಾದರು. ಇದನ್ನು ತಿಳಿದ ರಾಜನು ಅವರನ್ನು ದಾಸ್ಯರಂತೆ ನಡೆಸಲು ಉಪಕ್ರಮಿಸಿದನು. ಭಗವಂತನ ಮೆಚ್ಚಿನ ಜನತೆಗೆ ದಾಸ್ಯವು ಬಂದಿತು.

ಅವರ ದಾಸ್ಯವಿಮೋಚನೆಗಾಗಿ ಭಗವಂತನು ಮೋಶೆ ಎಂಬವನನ್ನು ನೇಮಿಸಿದನು. ಮೋಶೆಯು ಇಸ್ರೇಲ ಸಂತತಿಯವನಾದರೂ ಐಗುಪ್ತದ ಅರಸ ಫಾರಾವೊನನ ಮಗಳೊಬ್ಬಳ ಉದಾರತೆಯಿಂದಾಗಿ ಎಳೆವೆಯಲ್ಲಿಯೇ ಮರಣದಿಂದ ಉಳಿಸಲ್ಪಟ್ಟಿದ್ದನು. ಯುಕ್ತ ವಿದ್ಯೆಯನ್ನೂ ಪಡೆದಿದ್ದನು. ಹೀಗಾಗಿ ಭಗವಂತನು ಮೋಶೆಯನ್ನು ವಿಮೋಚನೆಯ ಮಹಾಕಾರ್ಯಕ್ಕಾಗಿ ನೇಮಿಸಿದುದು ಆಶ್ಚರ್ಯವಲ್ಲ. ಮೋಶೆಯಾದರೋ ಭಗವಂತನಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿ, ಫಾರಾವೊನನ್ನು ಒಡಂಬಡಿಸಲು ಪ್ರಯತ್ನಿಸಿದನು. ಆದರೆ ಸಫಲನಾಗಲಿಲ್ಲ. ಕೊನೆಗೆ ಭಗವದಾದೇಶದ ಪ್ರಕಾರ ಹಲವು ವಿವಿಧ ಕಂಟಕಗಳನ್ನು ತಂದೊಡ್ಡಿ ಅರಸನ ಅನುಮತಿಯನ್ನು ಪಡೆಯಲು ಪ್ರಯತ್ನಿಸಿದನು. ಅದೂ ವ್ಯರ್ಥವಾಯಿತು. ಕೊನೆಗೆ ಹತ್ತನೆಯ ಕಂಟಕವೊಂದರ ಮೂಲಕ ಐಗುಪ್ತದ ಸಕಲ ಜನತೆಗೆ ದುಃಖವನ್ನು ಬರಿಸಿದನು. ಫಾರಾವೊನೂ ಜನತೆಯೂ ದುಃಖದಲ್ಲಿರುವಾಗ ಇಸ್ರೇಲರನ್ನು ದೇಶದ ಹೊರಗೆ ನಡೆಸಿದನು. ಇಸ್ರೇಲರ ಮೂಲಪ್ರದೇಶಕ್ಕೆ, ವಾಗ್ದತ್ತ ಭೂಮಿಗೆ ನಡೆಸಿದನು. ಈ ಪಯಣಕ್ಕೆ ನಾಲ್ವತ್ತು ವರ್ಷಗಳಷ್ಟು ಕಾಲವು ಬೇಕಾಯಿತು. ಈ ಪಯಣವು ಅಷ್ಟು ದೀರ್ಘಕಾಲವನ್ನು ತೆಗೆಯಲು ದೂರವು ಕಾರಣವಾಗಿರದೆ, ಹೋದ ದಾರಿಯೂ, ನಿಂತ ತಾಣಗಳ ಪರಿಸ್ಥಿತಿಯೂ, ಜನಸಂಖ್ಯೆಯೂ ಕಾರಣವಾಗಿದ್ದವು.

ಪಯಣವು ಹಿತವಾಗಿಯೇ ಸಾಗಿತ್ತು. ಜನತೆಗೆ ಬೇಕಾದ ಆಹಾರ ವಸ್ತುಗಳು ದೊರಕುತ್ತಿದ್ದವು. ಕೊರತೆಯಾದಾಗ ಮೋಶೆಯು ಭಗವಂತನ ನಿರ್ದೇಶನದ ಪ್ರಕಾರ ಕಾರ್ಯವನ್ನು ಸಾಗಿಸಿ, ಒದಗಿಸುತ್ತಿದ್ದನು. ಹೀಗಿರುವಾಗ ಸಿನಾಯಿ ಪರ್ವತದ ತಪ್ಪಲ ಪ್ರದೇಶದಲ್ಲಿ ನೆಲೆಯೂರಿದ ಇಸ್ರೇಲ ಜನಾಂಗಕ್ಕೆ ಅಲ್ಲಿಯ ವಾಸವು ಆಹ್ಲಾದದಾಯಕವಾಗತೊಡಗಿತು. ಮೋಶೆಯು ಭಗವಂತನಿಂದ ಧಾರ್ಮಿಕ ಸಂದೇಶವನ್ನು ಪಡೆಯಲು ಅಲ್ಲಿಯ ಸನ್ನಿವೇಶವು

ಕಾರಣವಾಯಿತು. ಮೋಶೆಯು ಸಮಸ್ತ ಜನತೆಯನ್ನು ಕೂಡಿಸಿ ಭಗವಂತನ ಸಂದೇಶ ಸ್ವೀಕಾರದ ಪ್ರಮಾಣವಚನವನ್ನು ಪಡೆದುಕೊಂಡನು. ಮುಂದಿನ ದಿನಗಳಲ್ಲಿ ಭಗವಂತನ ಸಾಕ್ಷಾತ್ಕಾರದ ಅರಿವು ಅವರಿಗಾಗುವುದೆಂದೂ, ಅದಕ್ಕಾಗಿ ಎಲ್ಲರೂ ಮಿಂದು ಮಡಿಯುಟ್ಟು, ತ್ಯಾಜ್ಯವಿಷಯಗಳಿಂದ ದೂರವಿರಬೇಕೆಂದೂ ಲೈಂಗಿಕ ವಿಷಯಾದಿಗಳ ಚಿಂತನೆಕೂಡ ವಿಸರ್ಜಿಸಬೇಕೆಂದೂ ಆಣತಿಯಿತ್ತನು. ಯುಕ್ತಕಾಲದಲ್ಲಿ ಸಿನಾಯಿ ಪರ್ವತದ ಬಳಿಯಲ್ಲಿ ಜನತೆಯು ಕೂಡಿತು. ಅನತಿ ಕಾಲದಲ್ಲಿ ಪರ್ವತದಲ್ಲಿ ಮುಗಿಲೊಂದು ಆವಿರ್ಭವಿಸಿತು – ಅನಂತರ ಭಯಂಕರ ಅಗ್ನಿಯ ಕೆನ್ನಾಲಿಗೆಗಳು ತೋರಹತ್ತಿದುವು. ಗುಡುಗು ಮಿಂಚುಗಳಿಂದ ಜನತೆಯು ತತ್ತರಿಸತೊಡಗಿತು. ಪ್ರದೇಶವು ಅದೊಂದು ಬಗೆಯ ಕತ್ತಲೆಯಿಂದ ತುಂಬಿತು – ಎಲ್ಲೆಡೆಗಳಲ್ಲೂ ಮೌನವು ಬಂತು.

ಇಂತಹ ಸಮಯದಲ್ಲಿ ಮೋಶೆಯನ್ನು ಭಗವಂತನು ಪ್ರತ್ಯೇಕವಾದೊಂದು ನಿರ್ಜನ ಪ್ರದೇಶಕ್ಕೆ ಕರೆದನು. ಅಲ್ಲಿ ಭಗವಂತನು ಮೋಶೆಗೆ ಭಗವನ್ನಿಯಮಗಳ ಉಕ್ತರೂಪವನ್ನು ಕೊಟ್ಟನು. ಬೈಬಲನ ನಿರ್ಗಮನ ಭಾಗದಲ್ಲಿ ೨೦ನೇ ಅಧ್ಯಾಯದಲ್ಲಿ ೧ರಿಂದ ೧೭ರವರೆಗಿನ ಚರಣಗಳಲ್ಲಿ ಆ ಸೂತ್ರಸಂಹಿತೆಯು ನಿರೂಪಿತವಾಗಿದೆ.

ದಶಸೂತ್ರಸಂಹಿತೆ (Decalogue)

(೧) ಸ್ವಾಮಿಯು ಈ ಎಲ್ಲ ಮಾತುಗಳನ್ನು ನುಡಿದನು :

(೨) ಐಗುಪ್ತದ ಪ್ರದೇಶದಿಂದ ನಿನ್ನನ್ನು ಹೊರಗೂ, ದಾಸ್ಯದ ಮನೆಯ ಹೊರಗೂ ತಂದ ನಿನ್ನ ಭಗವಂತನಾದ ಸ್ವಾಮಿಯು ನಾನಾಗಿರುವೆನು.

(೩) ನನ್ನನ್ನುಳಿದು ಅನ್ಯ ಭಗವಂತನು ನಿನಗಿರಬಾರದು.

(೪) ನಿನಗಾಗಿ ಕೆತ್ತಿಸಿದ ವಸ್ತುವನ್ನಾಗಲಿ, ಉನ್ನತ ಸ್ವರ್ಗದಲ್ಲಿರುವ, ಕೆಳಗೆ ನೆಲದ ಮೇಲಿರುವ ಅಥವಾ ನೆಲದಡಿಯ ನೀರಲ್ಲಿರುವ ಯಾವುದೊಂದು ವಸ್ತುವಿನ ರೂಪವನ್ನಾಗಲಿ ನೀನು (ಭಗವಂತನೆಂದು) ಮಾಡಬಾರದು.

(೫) ನೀವು ಅವುಗಳನ್ನು ಆರಾಧಿಸುವುದಾಗಲಿ, ಸೇವೆಗೈಯುವುದಾಗಲಿ ಕೂಡದು, ಬಲವಂತನೂ, ಹಠವಾದಿಯೂ ಆದ ಸ್ವಾಮಿ ಭಗವಂತನು

ನಾನಾಗಿದ್ದು, ನನ್ನನ್ನು ದ್ವೇಷಿಸುವವನಿಗೆ ಮೂರನೆಯ ಮತ್ತು ನಾಲ್ಕನೆಯ ಸಂತತಿಯವರೆಗೂ ಪಿತನ ಕೇಡನ್ನು ಮಕ್ಕಳ ಮೇಲೆ ಬರಿಸುವವನು.

(೬) ನನ್ನನ್ನು ಪ್ರೀತಿಸುತ್ತ ನನ್ನ ನಿಯಮಗಳನ್ನು ಅನುಸರಿಸುವ ಸಾವಿರಾರು ಮಂದಿಗೆ ಕರುಣೆಯನ್ನು ತೋರಿಸುವವನು.

(೭) ನಿನ್ನ ಸ್ವಾಮಿ ಭಗವಂತನ ಹೆಸರನ್ನು ವ್ಯರ್ಥವಾಗಿ ಎತ್ತಬೇಡ. ಏಕೆಂದರೆ ಸ್ವಾಮಿ ಭಗವಂತನ ನಾಮವನ್ನು ವ್ಯರ್ಥವಾಗಿ ಎತ್ತುವವನನ್ನು ಸ್ವಾಮಿಯು ಅದೆಂದಿಗೂ ನಿರಪರಾಧಿಯಾಗಿ ಸ್ವೀಕರಿಸುವುದಿಲ್ಲ.

(೮) ಸಬ್ಬತಿನ ದಿನವನ್ನು ಪವಿತ್ರವಾಗಿರಿಸಲು ನೆನಪಿಡು.

(೯) ಆರು ದಿನಗಳಲ್ಲಿ ಶ್ರಮವನ್ನು ಪಡೆ ಮತ್ತು ಎಲ್ಲ ಕಾರ್ಯಗಳನ್ನೂ ಮಾಡು.

(೧೦) ಏಳನೆಯ ದಿನವು ನಿನ್ನ ಸ್ವಾಮಿ ಭಗವಂತನ ಸಬ್ಬತ್ ಆಗಿರುವುದು : ಅಂದು ನೀನಾಗಲಿ, ನಿನ್ನ ಮಗನಾಗಲಿ, ನಿನ್ನ ಮಗಳಾಗಲಿ, ನಿನ್ನ ಗಂಡಾಳಾಗಲಿ, ನಿನ್ನ ಹೆಣ್ಣಾಳಾಗಲಿ, ನಿನ್ನ ಪಶುವಾಗಲಿ, ನಿನ್ನ ಮನೆಯೊಳಗಿನ ಅಪರಿಚಿತನೇ ಆಗಲಿ ಕೆಲಸ ಮಾಡಬಾರದು.

(೧೧) ಏಕೆಂದರೆ ಆರು ದಿನಗಳಲ್ಲಿ ಸ್ವಾಮಿಯು ಸ್ವರ್ಗವನ್ನೂ, ಭೂಮಿಯನ್ನೂ, ಸಮುದ್ರವನ್ನೂ ಅವುಗಳಲ್ಲಿರುವ ವಸ್ತುಗಳನ್ನೂ ಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿದನು : ಆದುದರಿಂದ ಏಳನೆಯ ದಿನವನ್ನು ಸ್ವಾಮಿ ಹರಸುತ್ತ, ಪವಿತ್ರೀಕರಿಸಿದನು.

(೧೨) ನಿನ್ನ ಮಾತಾ ಪಿತರನ್ನು ಗೌರವಿಸು; ಅದರಿಂದಾಗಿ ಸ್ವಾಮಿ ಭಗವಂತನು ನಿನಗೆ ಕರುಣಿಸುವಂತೆ ಲೋಕದಲ್ಲಿ ದೀರ್ಘಾಯು ನೀನಾಗುವೆ.

(೧೩) ಕೊಲ್ಲಬೇಡ.

(೧೪) ವ್ಯಭಿಚಾರ ಮಾಡಬೇಡ.

(೧೫) ಕದಿಯಬೇಡ.

(೧೬) ನಿನ್ನ ನೆರೆಯವನ ವಿರುದ್ಧವಾಗಿ ಸುಳ್ಳು ಸಾಕ್ಷಿ ಹೇಳಬೇಡ.

(೧೭) ನಿನ್ನ ನೆರೆಯವನ ಮನೆಯನ್ನು ಅಪಹರಿಸಬೇಡ ; ಆತನ ಪತ್ನಿಯನ್ನಾಗಲಿ,ಆತನ ಆಳನ್ನಾಗಲಿ, ಆತನ ದಾಸಿಯನ್ನಾಗಲಿ, ಆತನ ಎತ್ತ

ನ್ನಾಗಲಿ, ಆತನ ಕತ್ತೆಯನ್ನಾಗಲಿ, ಆತನದಾಗಿರುವ ಯಾವುದೊಂದು ವಸ್ತು ವನ್ನಾಗಲಿ ನೀನು ಆಶಿಸಬಾರದು" (ನಿರ್ಗಮನ ೨೨, ೧-೧೭).

ಮೋಸೆಯು ಭಗವಂತನ ಸ್ವರವನ್ನು ಇನ್ನೂ ಆಲಿಸಿದನು. ಈ ಸೂತ್ರಗಳ ವಿಸ್ತರಣವನ್ನು,-ಆರಾಧನೆಯ ಶುದ್ಧತೆ, ನ್ಯಾಯನೀತಿ, ಸದಿಚ್ಛೆ, ಸಹೋದರತೆ ಮೊದಲಾದುವನ್ನು-ಪಡೆದನು. ಆದಿಯಿಂದಲೂ ಮಾನವನ ಹೃದಯದಲ್ಲಿ ಅಚ್ಚೊತ್ತಲ್ಪಟ್ಟ ನಡತೆಯ ಸೂತ್ರಗಳ ಬಹಿರಂಗ ಪ್ರಕಟನೆಯು ನಡೆಯಿತು. ಅಹುದು ಮುಂದೆ ಮೋಸೆಯು ಇನ್ನೊಂದು ನವೀನ ಸೂತ್ರವನ್ನು ಸೇರಿಸಿದನು. ಅದುವೆ ಭಗವತ್ ಪ್ರೇಮದ ನಿಯಮವು, "ಸ್ವಾಮಿ ಭಗವಂತನೇ ನಮ್ಮೆಲ್ಲರ ಏಕಮಾತ್ರಸ್ವಾಮಿಯು. ನಿನ್ನ ಸ್ವಾಮಿ ಯಾದ ಭಗವಂತನನ್ನು ಪೂರ್ಣ ಹೃದಯದಿಂದಲೂ ಪರಿಪೂರ್ಣಾತ್ಮ ದಿಂದಲೂ, ಸರ್ವಶಕ್ತಿಯಿಂದಲೂ ಪ್ರೀತಿಸಬೇಕು" ಮುಂದೆ ಮೋಸೆಗಿಂತಲೂ ಶ್ರೇಷ್ಠನಾದವನು ಇನ್ನೊಂದನ್ನು ಸೇರಿಸಿದನು : "ನಿನ್ನ ನೆರೆಯವನನ್ನೂ ನಿನ್ನಂತೆಯೇ ಪ್ರೀತಿಸು ; ಈ ಎರಡು ನಿಯಮಗಳಲ್ಲಿ ಸಕಲ ನಿಯಮಗಳೂ ಪ್ರವಾದಿಗಳ ಬೋಧನೆಗಳೂ ಅಡಕವಾಗಿವೆ."

ಮೋಸೆಗೆ ಬಹಿರಂಗಗೊಳಿಸಿದ ಸೂತ್ರಸಂಹಿತೆಯನ್ನು ಅನುಕೂಲ ಕ್ಕಾಗಿ ಸಂಕ್ಷೇಪಗೊಳಿಸಿರುವರು. ಹಾಗೆಂದು ಹಿಂದಿನ ಸೂತ್ರಗಳನ್ನು ಸಂಕುಚಿತಗೊಳಿಸಿರುವರೆಂದು ತಿಳಿಯಬಾರದು. ಮಾನವ ವ್ಯಕ್ತಿಯ ಹೃದಯ ಮಂದಿರದಲ್ಲಿ ಹುದುಗಿಸಲ್ಪಟ್ಟ, ಮೋಸೆಯ ಮೂಲಕ ಬಾಹ್ಯ ಜಗತ್ತಿಗೆ ಪ್ರಕಟಗೊಳಿಸಿದ ಸೂತ್ರಗಳನ್ನು-ಧರ್ಮನಿಯಮಗಳನ್ನು. ಯೇಸುವು ತನ್ನ ಮರ್ತ್ಯಜೀವನ ಕಾಲದಲ್ಲಿ ಪೂರ್ಣಗೊಳಿಸಿದನು.

"ನಾನು ನಿಯಮಗಳನ್ನಾಗಲಿ, ಪ್ರವಾದಿಗಳ ಸೂತ್ರಗಳನ್ನಾಗಲಿ ಧ್ವಂಸ ಮಾಡಲು ಬಂದವನಲ್ಲ ; ನಾನು ಧ್ವಂಸಕ್ಕಾಗಿ ಬಂದವನಲ್ಲ, ಆದರೆ ಪರಿಪೂರ್ಣಗೊಳಿಸುವುದಕ್ಕಾಗಿ" (ಮತ್ತೇಯ ೫, ೧೭).

"ಜೀವನವನ್ನು ಪಡೆಯುತ್ತೀಯಾದರೆ ನಿಯಮಗಳನ್ನು ಪಾಲಿಸು." '(ಮತ್ತೇಯ ೧ ೧೬, ೧೭)'.

ದಶ ಭಗವನ್ನಿಯಮಗಳನ್ನು ಅನುಕೂಲಕ್ಕಾಗಿ ಸಂಕ್ಷೇಪಿಸಿರುವರೆಂದು ಹಿಂದೆ ಹೇಳಿದೆ. ಕ್ರೈಸ್ತರ ವಿವಿಧ ಪಕ್ಷಗಳು ನಿಯಮಗಳ ಸಂಖ್ಯೆಯನ್ನು

ಹತ್ತರಷ್ಟು ಮಾಡಿಕೊಂಡು–ಮೂಲದ ೧೭ ಚರಣಗಳಲ್ಲಿ ಉಕ್ತವಾದ ಸೂತ್ರಗಳನ್ನು ವಿಭಜಿಸಿರುವರು. ಕಥೋಲಿಕರು ಸೂಚಿಸುವ ಪ್ರಥಮ ನಿಯಮನನ್ನು ಪ್ರೊಟೆಸ್ಟಾಂಟರು ಎರಡು ಸೂತ್ರಗಳಾಗಿಯೂ, ಕಥೋಲಿಕರು ಸೂಚಿಸುವ ೯, ೧೦ನೆಯ ಸೂತ್ರಗಳನ್ನು ೧೦ನೆಯ ಸೂತ್ರವನ್ನಾಗಿಯೂ ಪರಿವರ್ತಿಸಿರುವರು. ಯಾವ ರೀತಿಯಲ್ಲಿ ವಿಂಗಡಿಸಬೇಕೆಂದು ಬೈಬಲಿನಲ್ಲಿ ತಿಳಿಸಿಲ್ಲ. ಆದರೂ ಯೇಸುಕ್ರಿಸ್ತನೇ ತಿಳಿಸಿದಂತೆ ಹತ್ತು ನಿಯಮಗಳ ಸಾರವನ್ನು ಎರಡೇ ನಿಯಮಗಳಲ್ಲಿ ಕ್ರೋಢೀಕರಿಸಬಹುದು.

೧. "ನಿನ್ನ ಸ್ವಾಮಿಯಾದ ಭಗವಂತನನ್ನು ಪೂರ್ಣಹೃದಯದಿಂದಲೂ, ಪರಿಪೂರ್ಣಾತ್ಮದಿಂದಲೂ ಸರ್ವಶಕ್ತಿಯಿಂದಲೂ ಪ್ರೀತಿಸು.".

೨. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" (ಮಾರ್ಕ್ ೧೨, ೩೦–೩೧). ಯೇಸುಕ್ರಿಸ್ತನು ಈ ಎರಡು ಸೂತ್ರಗಳಡಿಯಲ್ಲಿ ತನ್ನ ಜೀವನವನ್ನು ಸಾಗಿಸಿ ಸಕಲ ಮಾನವ ಜನತೆಗೆ ಶ್ರೇಷ್ಠವಾದೊಂದು ಆದರ್ಶವನ್ನಿತ್ತನು. "ನಾನು ನಿಮ್ಮನ್ನು ಪ್ರೀತಿಸಿದಂತೆ, ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನನ್ನ ನಿಯಮವಾಗಿದೆ" (ಯೋಹಾನ ೧೫, ೧೨) "ತನ್ನ ಮಿತ್ರರಿಗಾಗಿ ಪ್ರಾಣವನ್ನು ಕೊಡುವುದಕ್ಕೆ ಮಿಗಿಲಾದ ಪ್ರೇಮವು ಯಾವ ಮಾನವನಲ್ಲಿಯೂ ಇರದು" (ಯೋಹಾನ ೧೫, ೧೩).

ದಶಭಗವನ್ನಿಯಮಗಳ ಸಂಕ್ಷಿಪ್ತರೂಪ–

೧. ಭಗವತ್ಪ್ರೈಕ ನಿಜ ವ್ಯಕ್ತಿಯನ್ನು ಸನ್ಮಾನಿಸು.
೨. ಸ್ವಾಮಿ ಭಗವಂತನ ನಾಮದ ದುರುಪಯೋಗ ಮಾಡಬೇಡ.
೩. ಸಬ್ಬತಿನ ದಿನವನ್ನು ಪವಿತ್ರವಾಗಿರಿಸು.
೪. ಮಾತಾಪಿತರನ್ನು ಗೌರವಿಸು.
೫. ಕೊಲ್ಲಬೇಡ.
೬ ವ್ಯಭಿಚಾರ ಮಾಡಬೇಡ.
೭. ಕದಿಯಬೇಡ.
೮. ಸುಳ್ಳು ಸಾಕ್ಷಿ ಹೇಳಬೇಡ.
೯. ನೆರೆಯವನ ಪತ್ನಿಯನ್ನು ಆಶಿಸಬೇಡ.
೧೦. ನೆರೆಯವನ ವಸ್ತುಗಳನ್ನು ಆಶಿಸಬೇಡ.

ಈ ಸಂಕ್ಷಿಪ್ತ ರೂಪಗಳನ್ನು ಪರಿಶೀಲಿಸಿದರೆ ಮೊದಲ ಮೂರು ಸೂತ್ರಗಳಲ್ಲಿ ಭಗವಂತನ ಸಂಬಂಧದ ಕರ್ತವ್ಯಗಳನ್ನೂ ಮತ್ತಿನ ಏಳು ಸೂತ್ರಗಳು ನಮ್ಮ ಹಾಗೂ ನೆರೆಯವರ ಸಂಬಂಧದ ಕರ್ತವ್ಯಗಳನ್ನೂ ತಿಳಿಸುವುದನ್ನು ನಾವು ಕಾಣಬಹುದು. ಈ ನಿಯಮಗಳ ರೂಪವು ಸಕಾರಾತ್ಮಕ ಅಥವಾ ನಿಷೇಧಾತ್ಮಕವಾಗಿರಬಹುದು; ಪ್ರತ್ಯಕ್ಷ ಅಥವಾ ಪರೋಕ್ಷವಾಗಿರಬಹುದು-ಆದರೆ ಅವು ವಿಸ್ತಾರಾರ್ಥವನ್ನು ಪ್ರತಿಪಾದಿಸುವ ವಿಷಯಗಳ ಸೂಚನೆಯೆಂದು ಮಾತ್ರ ನಾವು ಮರೆಯಬಾರದು. ಇನ್ನು ಪ್ರತಿಯೊಂದು ಸೂತ್ರದ ವಿಸ್ತರಣವನ್ನು ನಾವು ನೋಡಬಹುದು.

೧. ಭಗವದೈಕ ನಿಜವ್ಯಕ್ತಿಯನ್ನು ಸನ್ಮಾನಿಸು.

ಭಗವಂತನು ನಮ್ಮ ಸ್ವಾಮಿಯು. ಆತನೇ ನಮ್ಮ ಆದಿಯೂ ಅಂತ್ಯವೂ ಆಗಿರುವನು. ಭಗವಂತನಿಗೆ ಯುಕ್ತವಾದ ಆರಾಧನೆಯನ್ನು ನಾವು ಮಾಡಬೇಕಾಗಿದೆ. ಆತನಿಗೆ ಮಾತ್ರ ಅರ್ಪಿತವಾಗುವಂತಹ ಶ್ರೇಷ್ಠತರದ ಗೌರವವನ್ನು ಅದಾವ ಸೃಷ್ಟಿತ ವಿಷಯಕ್ಕೆ ನಾವು ನೀಡುವಂತಿಲ್ಲ. ಹೀಗೆ ಮೂರ್ತಿಯನ್ನೇ ದೇವರೆಂದು ತಿಳಿದು ಪೂಜಿಸುವುದು ನಿಷೇಧಿಸಲ್ಪಟ್ಟಿದೆ. ಆದರೆ ಮೂರ್ತಿಗಳನ್ನು ಅವು ಯಾವ ವ್ಯಕ್ತಿಯ ಪರವಾಗಿ ಬಳಸಲಾಗಿವೆಯೋ ಅಂತಹ ವ್ಯಕ್ತಿಗಳ ಗೌರವಾರ್ಥದಲ್ಲಿ ಬಳಸುವುದನ್ನು ನಿಷೇಧಿಸಲಾಗಿಲ್ಲ. ಭಗವಂತನೇ ನಮ್ಮೆಲ್ಲರ ಪ್ರತಿಯೊಂದು ವಿಷಯದ ಮೂಲಕಾರಣನಾಗಿರುವನು. ಆದುದರಿಂದ ಎಲ್ಲ ಕಾರ್ಯಗಳನ್ನೂ ಆತನು ಮೆಚ್ಚುವಂತೆ ನಾವು ಮಾಡಬೇಕಾಗಿದೆ.

"ನೀವು ತಿನ್ನುವ ಅಥವಾ ಕುಡಿಯುವ, ಅಥವಾ ಬೇರೇನನ್ನಾದರೂ ಮಾಡುವ ಕಾರ್ಯವನ್ನು ಭಗವಂತನ ಆನಂದಕ್ಕಾಗಿ ಮಾಡಿರಿ" (೧ ಕೊರಿಂತ ೧೦, ೩೧).

ಮಾತ್ರವಲ್ಲ ಮಿಥ್ಯಾಭಕ್ತಿ, ಅಭಿಚಾರ ಮೊದಲಾದುವುಗಳೂ ಆಧ್ಯಾತ್ಮಿಕ ಜೀವನಕ್ಕೆ ಧಕ್ಕೆ ತರುವ ವ್ರತಗಳ ವಾಚನವೂ ನಿಷೇಧಿಸಲಾಗಿದೆ. ಭಗವಂತನಲ್ಲಿ ಭಕ್ತಿಯಿರಬೇಕಾದರೆ ಪ್ರಾರ್ಥನೆಯೇ ಮುಖ್ಯವಾದೊಂದು ಹೆದ್ದಾರಿಯೆಂದು ತಿಳಿಯಬೇಕು.

೨. ಭಗವನ್ನಾಮದ ದುರುಪಯೋಗ ಮಾಡಬೇಡ.

ಚಿರಂತನ ಸತ್ಯವೇ ಆದ ಆ ಪರಮ ಪವಿತ್ರ ವ್ಯಕ್ತಿಯ ಹೆಸರೂ ಪವಿತ್ರವಾಗಿರುವುದು. ಅದಾವ ರೀತಿಯಲ್ಲಿಯೂ ಅವನಿಗೆ ಅಪಮಾನವಾಗುವಂತೆ ನಾವದನ್ನು ಬಳಸಬಾರದು. ಭಗವಂತನಿಗೆ ಪ್ರತಿಯೊಂದು ಹೆಸರೂ ಒಗ್ಗುವುದು. ಆದರೂ ಆತನ ಪರಮಗುಣಗಳಿಗೆ ಅನುಗುಣವಾಗಿ ನಾವು ಆತನನ್ನು ವಿಶಿಷ್ಟ ನಾಮಗಳಿಂದ ಸಂಬೋಧಿಸುವೆವು. "ನಿನ್ನ ನಾಮವೊಂದು ಸಾಲದೇ ?" ಎಂದು ದಾಸರು ಹಾಡಿರುವರು. ಬರೇ ಹೆಸರಿನ ದುರುಪಯೋಗವಲ್ಲ–ಭಗವದರ್ಪಿತ ವಸ್ತುಗಳ ಹಾಗೂ ಆತನ ಸೇವೆಗೆ ಮೀಸಲಾದ ವ್ಯಕ್ತಿಗಳ ದುರುಪಯೋಗವೂ ನಿಷೇಧಿಸಲಾಗಿದೆಯೆಂದು ತಿಳಿಯಬೇಕು. ಮಾತ್ರವಲ್ಲ ಭಗವನ್ನಾಮದ ಸಾಕ್ಷಿಯಾಗಿ ನಾವು ಸ್ವೀಕರಿಸಿದ ಪ್ರಮಾಣಗಳನ್ನೂ 'ಆಣೆಗಳನ್ನೂ' ನೋಂಪುಗಳನ್ನೂ ಪೂರ್ತಿಯಾಗಿ ಸಲ್ಲಿಸಬೇಕಾಗಿದೆ.

"ಭಗವಂತನಿಗೆ ಏನನ್ನಾದರೂ ಹರಕೆ ಮಾಡಿರುವೆಯಾದರೆ ಅದನ್ನು ಪಾವತಿ ಮಾಡಲು ಹಿಂದೆ ಹಾಕಬೇಡ. ಆಣೆ ಹಾಕಿ ಹಾಗೆ ಮಾಡದಿರುವ ಬದಲು ಆಣೆ ಹಾಕದಿರುವುದೇ ಉತ್ತಮವು" (ವಿಧಿ ೫, ೩, ೪).

೩. ಸಬ್ಬತಿನ ದಿನವನ್ನು ಪವಿತ್ರವಾಗಿರಿಸು.

ಮಾನವನು ದೇಹಾತ್ಮಗಳ ಗೂಢ ಸಂಯೋಗವೊಂದಾಗಿರುವನು. ಆತನ ಆತ್ಮವು ಭಗವಂತನ ರೂಪಸಾದೃಶ್ಯಗಳಲ್ಲಿ ವೃದ್ಧಿಸಲ್ಪಟ್ಟು, ಮೃತ್ಪಿಂಡವಾದ ದೇಹವೆಂಬ ದೇಗುಲದಲ್ಲಿದೆ. ಆತನ ಆತ್ಮವು ನಿಶ್ಚಿತ ಗುರಿಯನ್ನು ಮುಟ್ಟಲು ದೇಹವೂ ಸಾಧಿಸಬೇಕಾಗಿದೆ. ಆದರೆ ಮಾನವನು ತನ್ನ ದೈಹಿಕ ಹಿತವನ್ನು ಮಾತ್ರ ಲಕ್ಷಿಸಿಕೊಂಡು, ಆತ್ಮಿಕ ಹಿತವಾದ ಆಧ್ಯಾತ್ಮಿಕಾಭ್ಯಾಸವನ್ನು ಅಲಕ್ಷಿಸಬಹುದು. ಅದಕ್ಕಾಗಿ ವಾರಕ್ಕೊಂದು ದಿನವಾದರೂ ಆಧ್ಯಾತ್ಮಿಕಾಭ್ಯಾಸಕ್ಕೆ, ಶರೀರ ಶ್ರಮದಿಂದ ಬಿಡುಗೊಂಡು ಬಳಸಬೇಕೆಂದು ಸಬ್ಬತಿನ ದಿನವನ್ನು ಮೀಸಲಾಗಿರಿಸಲು ಭಗವಂತನು ನಿಯಾಮಿಸಿದನು.

ಬೈಬಲಿನ 'ಉತ್ಪತ್ತಿ' ಗ್ರಂಥದಲ್ಲಿ ಭಗವಂತನು ತನ್ನ ಆರುದಿನಗಳ ಸೃಷ್ಟಿ ಕಾರ್ಯದ ಬಳಿಕ ಏಳನೆಯ ದಿನದಲ್ಲಿ ವಿಶ್ರಮಿಸಿದನೆಂದೂ ಆ ದಿನವನ್ನು ಪವಿತ್ರೀಕರಿಸಿದನೆಂದೂ ಹೇಳಿದೆ. ಅದರಂತೆಯೇ ನಾವೂ ವಾರದ ಆರು ದಿನಗಳಲ್ಲಿ ಮಾಡುತ್ತಿದ್ದ ದೈಹಿಕ ಕಾರ್ಯಗಳಿಂದ ವಿಮುಕ್ತರಾಗಿ ಏಳನೆಯ

ದಿನವನ್ನು ಆಧ್ಯಾತ್ಮಿಕ ಕಾರ್ಯಗಳಲ್ಲಿ ಲೀನರಾಗಬೇಕೆಂದು ಮೋಸೆಯ ಮೂಲಕ ವಿಧಿಸಿದನು. ಹಾಗಿದ್ದರೂ ಭಗವದಾರಾಧನೆಗೆ ಮೀಸಲಾದ ಕಾರ್ಯಗಳಲ್ಲಿ ದೈಹಿಕ ಶ್ರಮವು ನಿಷಿದ್ಧವಾಗಿಲ್ಲ.

ಯೆಹೂದ್ಯರಲ್ಲಿ ಇಂದಿಗೂ ಶನಿವಾರವೇ ಸಬ್ಬತ್ ದಿನವಾಗಿದೆ. ಆದರೆ ಯೇಸುಕ್ರಿಸ್ತನ ಪುನರುತ್ಥಾನ ಮತ್ತು ಭಗವತ್ ಪವಿತ್ರಾತ್ಮನ ಆಗಮನ ಗಳು ಆದಿತ್ಯವಾರಗಳಲ್ಲಿ ನಡೆದ ಕ್ರೈಸ್ತ ಮತದ ಮಹಾಪರ್ವದಿನಗಳಾಗಿವೆ. ಹೀಗಾಗಿ ಕ್ರೈಸ್ತರಿಗೆ ಆದಿತ್ಯವಾರವೇ ಸಬ್ಬತ್ ದಿನವಾಗಿರುವುದು. ವಾರದ ಕೊನೆಯ ದಿನದ ಸ್ಥಾನದಲ್ಲಿ ಮೊದಲನೆಯ ದಿನವನ್ನು ಬಳಸಲಾಗುತ್ತಿದೆ. ದೈಹಿಕ ವಿಷಯುಗಳಿಂತ ಆತ್ಮಿಕ ವಿಷಯಗಳು ಮೊದಲೆಂದು ತಿಳಿಸಲು ಈ ಪರಿವರ್ತನೆಯು ಸಹಕರಿಸಿದೆ.

ಭಗವನ್ನಿಯಮಗಳಲ್ಲಿ ಈ ಹಿಂದೆ ನಿಯಮವು ಮಾತ್ರ ನೈತಿಕ ನಿಯಮವೆಂದು ಹೇಳಲಾಗುವುದಿಲ್ಲ. ಹಿಂದೂ ಮತದಲ್ಲಿ ಉಳಿದೆಲ್ಲ ನಿಯಮ ಗಳು ಸರ್ವ ಸಾಮಾನ್ಯವಾಗಿದ್ದರೂ ಈ ನಿಯಮದ ವಿಷಯವು ಅಪವಾದ ವಾಗಿದೆ. ಕ್ರೈಸ್ತರಲ್ಲಿ ಸಬ್ಬತ್ ದಿನದಂದು ಶ್ರೀಪೂಜೆಯಲ್ಲಿ ಸಹಕರಿಸುವ ವಿಧಿಯಿದೆ.

೪ ಮಾತಾಪಿತರನ್ನು ಗೌರವಿಸು

ಈ ನಿಯಮದಿಂದ ನಮ್ಮನ್ನು ಪಡೆದ ನೈಜ ಮಾತಾಪಿತರನ್ನು ಮಾತ್ರ ಗೌರವಿಸಬೇಕೆಂದು ಹೇಳಿದುದಲ್ಲ–ಆದರೆ ನಮ್ಮನ್ನು ಸಂಬಂಧಿಸುವ ಪ್ರತಿ ಯೊಬ್ಬ ಹಿರಿಯ ಅಥವಾ ಕಿರಿಯ ವ್ಯಕ್ತಿಯ ಕರ್ತವ್ಯಗಳನ್ನು ಸೂಚಿಸುವುದು.

"ಹಿರಿಯಧಿಕಾರಕ್ಕೆ ಪ್ರತಿಯೊಬ್ಬನೂ ವಿಧೇಯನಾಗಿರಲಿ; ಏಕೆಂದರೆ ಭಗವಂತನಿಂದಲ್ಲದ ಅಧಿಕಾರವಿಲ್ಲ; ಅಧಿಕಾರವಿರುವವರೆಲ್ಲರೂ ಅದನ್ನು ಭಗವಂತನಿಂದಲೇ ನಿಯಾಮಿತರಾದವರು. ಆದುದರಿಂದ ಅಧಿಕಾರವನ್ನು ವಿರೋಧಿಸುವವನು ಭಗವನ್ನಿಯಮವನ್ನು ವಿರೋಧಿಸುವನು. ಹಾಗೆ ವಿರೋಧಿಸುವವರು ತಮ್ಮ ವಿನಾಶನನ್ನೇ ಕೊಳ್ಳುವರು" (ರೋಮ ೧೩, ೧–೨).

ಪರಿಪೂರ್ಣಾಧಿಕಾರವು ಭಗವಂತನದು. ಆದುದರಿಂದ ಮಾನವ ವ್ಯಕ್ತಿ ಗಳ ಅಧಿಕಾರವು ಅವರ ಸ್ಥಾನಮಾನಗಳ ಪ್ರಕಾರ ಅವೆಷ್ಟೋ ವಿಸ್ತಾರವಾಗಿ

ದ್ದರೂ ಭಗವತ್ ದೃಷ್ಟಿಯಿಂದ ನಿಯಮಿತವಾದುದು. ಆದುದರಿಂದ ಭಗವನ್ನಿಯಮಗಳ ವಿರೋಧವಾಗಿ ಆಚರಿಸಲು ಅಧಿಕಾರವನ್ನು ಹೆತ್ತವರಿಗಾಗಲಿ, ಸರಕಾರಕ್ಕಾಗಲಿ ಇಲ್ಲ. ಆದುದರಿಂದ ಇತಿಮಿತಿಗಳಿರುವ ಮಾನವಾಧಿಕಾರಿಗಳಿಗೆ ಸಕಲ ವಿಷಯಗಳಲ್ಲಿ ಪರಿಮಾಣಕ ವಿಧೇಯತೆಯನ್ನು ಪ್ರದರ್ಶಿಸುವುದು ಸಾಧ್ಯವಾಗದು. ಆದರೆ ಅವರ ಅಧಿಕಾರ ಕ್ಷೇತ್ರದೊಳಗಿನ ವಿಷಯಗಳಲ್ಲಿ ಪರಿಪೂರ್ಣ ವಿಧೇಯತೆಯನ್ನು ನಾವು ತೋರಿಸಬೇಕೆಂಬುದು ನಿರ್ವಿವಾದವು. ಈ ನಿಯಮವು ಕಿರಿಯರ ಹಾಗೂ ವಿಧೇಯರ ಕರ್ತವ್ಯಗಳನ್ನು ಒಳಗೊಳ್ಳುವಂತೆ, ಕಿರಿಯರ ಹಾಗೂ ವಿಧೇಯರ ಪರವಾಗಿ ಹಿರಿಯರ ಅಧಿಕಾರ ಹಾಗೂ ಹೊಣೆಗಾರಿಕೆಗಳ ಸಮೇತ ಕರ್ತವ್ಯಗಳನ್ನು ತಿಳಿಸುವುದರ ವಿವಿಧ ರೀತಿಯ ವ್ಯಕ್ತಿಗಳ ಕರ್ತವ್ಯಗಳನ್ನು ಸೂಚಿಸುವ ಆಧಾರವಾಕ್ಯಗಳನ್ನು ಇಲ್ಲಿ ಕೊಡಲಾಗಿವೆ.

"ಮಕ್ಕಳೇ, ಸ್ವಾಮಿಯ ಪರವಾಗಿ ಹೆತ್ತವರಿಗೆ ವಿಧೇಯರಾಗಿರಿ–ಅದು ನ್ಯಾಯವಾಗಿದೆ." (ಎಫೆಸ್ ೬, ೧).

"ನಿನ್ನ ಮಾತೆಯನ್ನು ಆಕೆಯ ಜೀವನದ ಎಲ್ಲ ದಿನಗಳಲ್ಲೂ ಗೌರವಿಸು." (ತೊಬಿ ೪, ೩).

"ನಿನ್ನ ಪರಿಪೂರ್ಣಾತ್ಮದಿಂದ ಸ್ವಾಮಿಯಲ್ಲಿ ಭಯವನ್ನು ತಾಳು ಮತ್ತು ಆತನ ಪುರೋಹಿತರನ್ನು ಗೌರವಿಸು" (ವಿಧಿ ೭, ೩೧).

"ಸೇವಕರೇ, ಪ್ರೈಹಿಕ ವಿಷಯಗಳ ಪ್ರಕಾರ ಎಲ್ಲ ವಿಷಯಗಳಲ್ಲಿಯೂ ನಿಮ್ಮ ಯಜಮಾನರಿಗೆ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸಲು, ದೃಗ್ಗೋಚರವಾಗುವ ಸೇವೆಯಲ್ಲಿ ಅಲ್ಲ, ಆದರೆ ಭಗವಂತನ ಭಯದ ಹಾರ್ದಿಕ ಸರಳತನದಲ್ಲಿ" (ಕೊಲೊ ೩, ೨೨).

"ಮಗನೇ, ನಿನ್ನ ಪಿತನ ವಾರ್ಧಕ್ಯದಲ್ಲಿ ಸಹಾಯಕನಾಗು; ಆತನ ಜೀವಮಾನದಲ್ಲಿ ಆತನನ್ನು ದುಃಖಕ್ಕೀಡು ಮಾಡಬೇಡ." (ವಿಧಿ ೩, ೧೪).

"ನರೆತ ತಲೆಯ ಮುಂದೆ ಎದ್ದೇಳು; ಹರೆಯದ ಮಾನವ ವ್ಯಕ್ತಿಯನ್ನು ಗೌರವಿಸು." (ಪುರೋ Levit ೧೯, ೩೨).

"ತಂದೆಗಳೇ, ನಿಮ್ಮ ಮಕ್ಕಳಲ್ಲಿ ಕೋಪೋದ್ರೇಕವನ್ನು ಮಾಡದಿರಿ; ಆದರೆ ಸ್ವಾಮಿಯ ತಿದ್ದುವಿಕೆಯಲ್ಲಿಯೂ ಶಿಸ್ತಿನಲ್ಲಿಯೂ ಅವರನ್ನು ಬೆಳೆಯಿಸಿರಿ." (ಎಫೆಸ್ ೬, ೪).

" ಧನಿಗಳೇ, ಭಗವಂತನಲ್ಲಿ ವ್ಯಕ್ತಿಗಳ ಗೌರವನೆಂಬುದಿಲ್ಲ. ಆದುದರಿಂದ ಅವರ(ಸೇವಕರ) ಮತ್ತು ನಿಮ್ಮ ಸ್ವಾಮಿಯು ಸ್ವರ್ಗದಲ್ಲಿರುವನೆಂಬುದನ್ನು ತಿಳಿದುಕೊಂಡು, ಗದರಿಕೆಗಳನ್ನು ತಡೆದಿಡಿದು, ಅದೇ ರೀತಿಯಲ್ಲಿ ಅವರನ್ನು ನಡೆಸಿರಿ. " (ಎಫೆಸ್ ೬, ೯)

" ತಾಯಿ ಅಥವಾ ತಂದೆಯನ್ನು ಹೊಡೆಯುವವನನ್ನು ಕೊಲ್ಲಬೇಕು " (ನಿರ್ಗಮನ ೨೧, ೧೫).

ಹೀಗೆ ಈ ನಿಯಮವು ಪ್ರತಿಯೊಂದು ವ್ಯಕ್ತಿಯ ಕರ್ತವ್ಯಗಳನ್ನು ಆದೇಶಿಸುವುದು. ಸೇವಕರಾದವರು ತಮ್ಮ ಕರ್ತವ್ಯಗಳನ್ನು ಮಾಡುವುದರಲ್ಲಿ ಹಿಂಜರಿಯಬಾರದು ; ಯಜಮಾನರಿಗೆ ಅದಾವ ಬಗೆಯಲ್ಲಿಯೂ ನಷ್ಟವನ್ನು ಮಾಡಲು ಪ್ರಯತ್ನಿಸಬಾರದು. ಅದೇ ಕಾಲದಲ್ಲಿ ಯಜಮಾನರು ಸೇವಕರ ನಿಶ್ಚಿತ ಸಂಬಳವನ್ನು ಪಾವತಿ ಮಾಡಬೇಕಾಗಿದೆ. ಆದರೆ ಸಾಮಾನ್ಯವಾಗಿ ಸೇವಕರು ಆದಷ್ಟು ಕಡಮೆ ಕೆಲಸವನ್ನು ಮಾಡಿ ಆದಷ್ಟು ಹೆಚ್ಚಿನ ಸಂಬಳವನ್ನು ಬಯಸುವರು. ಒಡೆಯರಾದವರು ಆಳುಗಳು ಆದಷ್ಟು ಹೆಚ್ಚು ಗೇಯುವಂತೆ ನೋಡಿಕೊಂಡು ಆದಷ್ಟು ಅಲ್ಪ ವೇತನವನ್ನು ನೀಡಲು ಪ್ರಯತ್ನಿಸುವರು–ಇದರಿಂದಾಗಿಯೇ ಆಳೊಡೆಯರಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸಿ, ಮುಷ್ಕರ ಮೊದಲಾದುವು ರೂಢಿಯಲ್ಲಿ ಬಂದಿವೆ.

೫ ಕೊಲ್ಲಬೇಡ

ಸಕಲ ಭಿನ್ನರಾಶಿಗಳಲ್ಲಿ ಮಾನವ ಕುಲವು ಮಾತ್ರ ಭಗವತ್ ರೂಪ ಸಾದೃಶ್ಯಗಳಲ್ಲಿ ಸೃಷ್ಟಿತವಾದ ಆತ್ಮವನ್ನು ಪಡೆದಿರುವುದು. ಇತರ ಯಾವತ್ತು ಜೀವಿಗಳಿಗೆ ಆ ಆತ್ಮವೆಂಬುದಿಲ್ಲ. ಸಕಲ ಸಸ್ಯವರ್ಗಕ್ಕೂ ಜೀವವಿದೆ. ಪ್ರಾಣಿವರ್ಗಕ್ಕೂ ಜೀವವಿದೆ. ಆದರೆ ಮಾನವನಿಗೆ ಮಾತ್ರ ಆತ್ಮವಿದೆ. ಆದುದರಿಂದಲೇ ಮನುಷ್ಯವರ್ಗದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಇತರ ವಿಷಯುಗಳಿವೆ. ಈ ಕುರಿತು ಬೈಬಲಿನಲ್ಲಿ ಹೇಳಿದೆ.

" ಭಗವಂತನು ಅವರನ್ನು (ಪ್ರಥಮ ಮಾನವರನ್ನು) ಆಶೀರ್ವಾದಿಸುತ್ತ ಬಳೆಯಿರಿ ಮತ್ತು ವೃದ್ಧಿಯಾಗಿರಿ, ಮತ್ತು ಜಗತ್ತನ್ನು ತುಂಬಿಕೊಳ್ಳಿರಿ ; ಅದನ್ನು ಸ್ವಾಧೀನಗೊಳಿಸಿರಿ, ಸಮುದ್ರದ ಮೀನುಗಳ ಮೇಲೂ, ವಾತ

ಗೋಲದ ಪಕ್ಷಿಗಳ ಮೇಲೂ, ಲೋಕದ ಮೇಲೆ ಸಂಚರಿಸುವ ಸಕಲ ಜೀವಂತ ಜೀವಿಗಳ ಮೇಲೂ ಅಧಿಕಾರ ನಡೆಸಿರಿ" (ಉತ್ಪತ್ತಿ ೧, ೨೮).

ಹಾಗೆಂದು ಪ್ರಾಣಿವರ್ಗವನ್ನು ಹಿಂಸಿಸಲು ಅಣತಿಯನ್ನಿತ್ತಿಲ್ಲ. ಮಾನವನು ಮಾಂಸಾಹಾರಿಯು. ಹಾಗಾಗಿ ಮಾಂಸಕ್ಕಾಗಿ ಅವನು ಪ್ರಾಣಿಗಳನ್ನು ಕೊಲ್ಲುವನು. ಆದರೆ ಪ್ರಾಣಿಗಳನ್ನು ಪೀಡಿಸುತ್ತ ಅದರಲ್ಲಿ ವಿನೋದವನ್ನು ಅವನು ಪಡೆಯುವುದು ನಿಷಿದ್ಧವಾಗಿದೆ. ಆದರೆ ಸಸ್ಯಾಹಾರಿಗಳಾದವರು ಯಾವ ಬಗೆಯಲ್ಲಿಯೂ ಪ್ರಾಣಿಗಳನ್ನು ಕೊಲ್ಲುವುದಾಗಲಿ, ತಿನ್ನುವುದಾಗಲಿ, ಹಿಂಸೆಯೆಂದೇ ಹೇಳಬಹುದು. ಆದರೂ ಸಸ್ಯಾಹಾರಿಗಳಾದವರೂ ಕೂಡ ತಾವು ತಿಳಿಯದಂತೆ ಎಷ್ಟೋ ಜೀವಿಗಳನ್ನು ಪೀಡಿಸುವರೆಂದು ವಿಜ್ಞಾನಿಗಳು ಹೇಳುವರು. ಹಸಿ ಹಾಲನ್ನು ನಾವು ಬಿಸಿ ಮಾಡಿ ಕುಡಿಯುವೆವು. ಬಿಸಿ ಮಾಡುವ ಉದ್ದೇಶವಾದರೊ ಅದರಲ್ಲಿರಬಹುದಾದ ಅಣು ಜೀವಿಗಳನ್ನು ನಾಶಪಡಿಸುವುದಲ್ಲದೆ ಮತ್ತೇನಿರಬಹುದು. ಅಂತೆಯೇ ನಾವು ಅದೆಷ್ಟೋ ಸಾವಿರ ಜೀವಿಗಳನ್ನು ನಿತ್ಯವೂ ನಾಶಪಡಿಸುತ್ತಿರುವೆವಾದರೂ ನಾವು ಮಾತ್ರ ಅದನ್ನರಿಯೆವು. ಆದುದರಿಂದ ಮಾನವನ ಹಿತರಕ್ಷಣೆಗಾಗಿ ಆತನು ಇತರ ಪ್ರಾಣಿಗಳನ್ನೂ ಬಳಸಿಕೊಳ್ಳುವನು. ತನ್ನ ಪ್ರಾಣ ಹಾಗೂ ಸೊತ್ತುಗಳ ಹಿತಕ್ಕಾಗಿ ಇತರ ಎಲ್ಲ ಪ್ರಾಣಿಗಳನ್ನೂ ಅವನು ಅಲಕ್ಷಿಸುವನು. ಈ ಪಂಚಮ ನಿಯಮವು ಮಾನವನ ದೈಹಿಕ ಹಾಗೂ ಆತ್ಮಿಕ ಹಿತರಕ್ಷಣೆಗೆ ವಿರೋಧವಾದದನ್ನು ಕೈಕೊಳ್ಳದಂತೆ ನೋಡಿಕೊಳ್ಳುತ್ತದೆ; ಪ್ರತಿಯೊಬ್ಬನೂ ನೆರೆಯವರೊಡನೆ ಪ್ರೀತಿ ಸೌಹಾರ್ದಗಳಿಂದ ಇರಬೇಕು. ತನ್ನ ಪ್ರಾಣ ಅಥವಾ ಆರೋಗ್ಯವನ್ನೂ ನೋಡಿಕೊಳ್ಳಬೇಕಾಗಿದೆ. ತನ್ನ ಸ್ವಂತ ಅಥವಾ ಪರನ ಜೀವಿತಕ್ಕೆ ಹಾನಿಯೊದಗಲು ಕಾರಣವಾಗಬಹುದಾದ–ತಿಂಡಿಬಾಕತನ, ಮಧ್ಯಪಾನ, ದುರ್ಮಾರ್ಗದರ್ಶನ ಮೊದಲಾದುವುಗಳನ್ನೂ ತ್ಯಜಿಸಬೇಕಾಗಿದೆ. ಏಕೆಂದರೆ,

"ಎಲೇ ಭಗವಂತನೇ, ಜೀವನ ಮರಣಗಳ ಅಧಿಕಾರವಿರುವವನು ನೀನು ಮಾತ್ರ" (ಜಾಣ್ಮೆ ೧೬, ೧೩).

"ಮಾನವನ ರಕ್ತವನ್ನು ಸುರಿಸಿದಾತನ ರಕ್ತವೂ ಸುರಿಸಲ್ಪಡಬೇಕು" (ಉತ್ಪತ್ತಿ ೯, ೬).

"ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನು" (೧ ಯೋಹಾನ ೩, ೧೫).

ದುರ್ಮಾರ್ಗದರ್ಶಕರ ಕುರಿತು ಯೇಸುವು, "ಅಂತಹರ ಕೊರಳಿಗೆ ಬೀಸುಗಲ್ಲೊಂದನ್ನು ತೂಗಿ, ಆಳವಾದ ಸಮುದ್ರದಲ್ಲಿ ಮುಳುಗಿಸುವುದೇ ವಿಹಿತವು" ಮತ್ತೇಯ (೧೮, ೬).

ಕಥೋಲಿಕ ಶ್ರೀ ಸಭೆಯು ಅನ್ಯಾಯವಾಗಿ ಪೀಡಿಸಲು ಬಂದವನನ್ನು ಹೊಡೆದೋಡಿಸುವುದಕ್ಕೂ, ಬೇರೆ ಉಪಾಯವಿಲ್ಲದಾಗ ಕೊಲ್ಲುವುದಕ್ಕೂ ವಿರೋಧವಿಲ್ಲ. ಹಾಗೆಯೇ ಕ್ರಮಬದ್ಧ ರಣರಂಗದಲ್ಲಿ ವೈರಿಯನ್ನು ಕೊಲ್ಲುವುದಕ್ಕೂ, ಅಪರಾಧದ ಪರಮಾವಧಿ ಶಿಕ್ಷೆಯಾಗಿ ಮರಣದಂಡನೆಯನ್ನು ಸರ್ಕಾರವೀಯುವುದಕ್ಕೂ, ಅನುಮತಿಸುತ್ತದೆ. ಆದರೆ ಮಾನವನ ಮನೋಭಾವನೆಯು, ವಿಷಯುಕ್ತ ಹಾವುಗಳನ್ನು ಕೊಲ್ಲುವುದರಲ್ಲಿ ಹಿಂದೆಯೂ, ಗರ್ಭನಿರೋಧ, ಗರ್ಭಪಾತ, ಭ್ರೂಣಹತ್ಯೆ, ಶಿಶುಹತ್ಯೆ ಮೊದಲಾದ ರೀತಿಗಳಲ್ಲಿ ನಿಷ್ಕಲಂಕ ಶಿಶುಗಳ ವಧೆಗೆ ಮುಂದೆಯೂ ಆಗಿರುವುದು.

(೬) ವ್ಯಭಿಚಾರ ಮಾಡಬೇಡ.

(೯) ಪರಪತ್ನಿಯನ್ನು ಆಶಿಸಬೇಡ.

ಭಗವನ್ನಿಯಮಗಳಲ್ಲಿ ಮೊದಲ ಮೂರು ಭಗವಂತನ ಪರವಾಗಿ ನನ್ನ ಕರ್ತವ್ಯಗಳನ್ನು ನಿಷ್ಕರ್ಷಿಸುವುದನ್ನೂ ಮತ್ತಿನ, ಏಳು ನನ್ನ ಹಾಗೂ ನನ್ನ ನೆರೆಯವರ ಪರವಾಗಿ ಕರ್ತವ್ಯಗಳನ್ನು ನಿಷ್ಕರ್ಷಿಸುವುದನ್ನೂ, ನಾವು ನೋಡಿರುವೆವು. ಮತ್ತಿನ ಏಳು ನಿಯಮಗಳಲ್ಲಿ ಎರಡನ್ನು ನಾವೀಗಲೇ ನೋಡಿರುವೆವು. ಆದರೆ ಇಲ್ಲಿ ಎರಡು ನಿಯಮಗಳನ್ನು ಜೊತೆಯಾಗಿಯೇ ಕೊಟ್ಟಿದೆ. ಅವೆರಡರ ವಿಷಯಗಳು ಒಂದಕ್ಕೊಂದು ಪೂರಕವಾಗಿವೆ. ಹಾಗೆಯೇ ೯ನೆಯ ಹಾಗೂ ೧೦ನೆಯ ನಿಯಮಗಳೂ ಪರಸ್ಪರ ಪೂರಕವಾದ ಏಕಮಾತ್ರ ವಿಷಯದ ಭಿನ್ನಾಂಗಗಳಾಗಿವೆ. ಮಾನವನ ಸಹಜ ಸ್ವಭಾವಕ್ಕನುಗುಣವಾಗಿ ಆತನನ್ನು ಅಧೋಗತಿಗಿಳಿಸಲು ಲೈಂಗಿಕ ವಿಷಯವೊಂದು ಮುಖ್ಯ ಕಾರಣವು. ಅದರಂತೆ ವಿವಿಧ ವಸ್ತುಗಳ ಸಂಗ್ರಹದ ಮೂಲಕ ತನ್ನ ಹಿರಿಮೆಯನ್ನು ಪ್ರದರ್ಶಿಸುವ ಬಯಕೆ ಇನ್ನೊಂದು—

ಆದುದರಿಂದಲೇ ಆ ವಿಷಯಗಳನ್ನು ಅದುಮಿ, ಉಜ್ವಲ ಜೀವನವನ್ನು ಸಾಗಿಸಲು ಸಹಾಯವಾಗುವಂತೆ ಎರಡೆರಡು ನಿಯಮಗಳಿವೆ.

ಲೈಂಗಿಕ ಸಂಬಂಧವನ್ನು ನೇರಗೊಳಿಸಲು ವಿವಾಹವಿದೆ. ಅದರ ಆಶಯದ ಆವರಣದ ಹೊರಗೆ ಪರವ್ಯಕ್ತಿಯನ್ನು ಕೂಡುವುದೇ ಮಾತ್ರವಲ್ಲ ಅಂತಹ ಸಂಬಂಧಗಳಿಗೆ ಕಾರಣವಾಗಬಹುದಾದ ಹಾವಭಾವಗಳೂ, ದುರಾಲೋಚನೆ, ದುರಪೇಕ್ಷೆಗಳೂ ನಿಷಿದ್ಧವಾಗಿವೆ. ಪರಸ್ತ್ರೀಗಮನವನ್ನು ಎಲ್ಲ ಮತಗಳೂ ನಿಷೇಧಿಸುತ್ತವೆ. ಕ್ರೈಸ್ತ ಮತವು ಏಕಪತ್ನೀ ವ್ರತವನ್ನೂ ಆದೇಶಿಸುತ್ತದೆ. ಮಾತ್ರವಲ್ಲ ನೈತಿಕತೆಯ ಉಚ್ಚಮಟ್ಟದ ಪರಿಶುದ್ಧತೆಯನ್ನು ಬಯಸುತ್ತದೆ. ಅದಕ್ಕಾಗಿ ಪ್ರಾರ್ಥನೆ, ಪವಿತ್ರ ಸಂಸ್ಕಾರಗಳ ಪ್ರಯೋಗ ಮಾತ್ರವಲ್ಲದೆ ಕ್ರಿಸ್ತ ಜೀವನದ ಆದರ್ಶದ ಅನುಕರಣೆ ಮೊದಲಾದ ಸದುಪಾಯಗಳನ್ನು ಬಳಸಲು ಹುರಿದುಂಬಿಸುತ್ತದೆ. ಆಹಾರ, ಪಾನೀಯಗಳ ಸೇವನೆಯಲ್ಲಿ ಮಿತಿ, ಸಭ್ಯರೀತಿಯಲ್ಲಿ ಉಡುಗೆ-ತೊಡುಗೆಗಳ ಪ್ರಯೋಗ ದೋಷಮಯ ಸಾಹಿತ್ಯವಾಚನದಿಂದ ದೂರವಿರುವುದು, ಅಶ್ಲೀಲ ಚಿತ್ರಗಳನ್ನು ನೋಡದಿರುವುದು, ಮೊದಲಾದ ಸದುಪಾಯಗಳಿಂದ ಲೈಂಗಿಕ ಪ್ರಚೋದನೆಯ ಕಾರಣಗಳನ್ನು ದುರ್ಬಲಗೊಳಿಸಲು ಕಥೋಲಿಕ ಶ್ರೀ ಸಭೆಯು ಸೂಚಿಸುತ್ತವೆ. ಹಾಗೆ ಯುಕ್ತ ಕಾರ್ಯಾಚರಣೆಯಿಂದ ಶುದ್ಧ ಜೀವನವನ್ನು ನಡೆಸಲು ಪ್ರಯತ್ನಿಸುವವರಿಗೆ ಭಗವಂತನೂ ಯುಕ್ತ ಬಲವನ್ನೂ ನೀಡುವನು.

" ನನ್ನನ್ನು ಬಲಗೊಳಿಸುವವನಲ್ಲಿ ನಾನು ಎಲ್ಲ ವಸ್ತುಗಳನ್ನೂ ಮಾಡಬಲ್ಲೆನು " (ಫಿಲಿಪ ೪,೧೩).

"ನಿರ್ಮಲ ಹೃದಯದವರೇ ಧನ್ಯರು, ಅವರು ಭಗವಂತನನ್ನು ಕಾಣುವರು " (ಮತ್ತೇಯ ೫, ೮).

"ಅಶುದ್ಧರಾದವರು ಮೋಕ್ಷ ರಾಜ್ಯವನ್ನು ಪಡೆಯಲಾರರು"(ಎಫೆಸ್ ೫,೫).

" ವ್ಯಭಿಚಾರವೂ, ದ್ರಾಕ್ಷಾರಸವೂ, ಮದ್ಯಪಾನೀಯವೂ ತಿಳಿವನ್ನು ಕಳೆಯುತ್ತವೆ "(ಬಿಸಿ ೪, ೧೧).

" ಹೃದಯದಿಂದ ದುರಾಲೋಚನೆಗಳೂ, ಕೊಲೆಗಳೂ, ವ್ಯಭಿಚಾರ್ಯಗಳೂ, ಕಾಮುಕತನವೂ ಬರುವುದು........ಈ ವಿಷಯಗಳು ಮನುಷ್ಯನನ್ನು ಅಶುದ್ಧಗೊಳಿಸುವಂತಹವುಗಳಾಗಿವೆ" (ಮತ್ತೇಯ ೧೫, ೧೯, ೨೦)

" ವ್ಯಭಿಚಾರ ಮಾಡಬಾರದೆಂದು ಹಿಂದಿನವರಿಗೆ ಹೇಳಿರುವುದನ್ನು ನೀವು ಕೇಳಿರುವಿರಿ. ಆದರೆ ಯಾವನು ಕಾಮದಿಂದ ಸ್ತ್ರೀಯನ್ನು ನೋಡು ವನೋ ಆತನು ಆವಾಗಲೇ ಆಕೆಯೊಡನೆ ತನ್ನ ಹೃದಯದಲ್ಲಿ ವ್ಯಭಿಚಾರವನ್ನು ಗೈದಿರುವನೆಂದು ನಾನು ಹೇಳುತ್ತೇನೆ " (ಮತ್ತಾಯ ೫, ೨೭-೨೮).

(೭) ಕದಿಯಬೇಡ.

(೧೦) ಪರರ ವಸ್ತುಗಳನ್ನು ಆಶಿಸಬೇಡ.

ಮಾನವನನ್ನು ಅಧೋಗತಿಗೆ ತರಲು ಅರಿಷಡ್ವರ್ಗಗಳು ಪ್ರಯತ್ನ ಪಡುತ್ತಿವೆಯೆಂದು ದಾರ್ಶನಿಕರು ಬೋಧಿಸುತ್ತಾರೆ. ಆದರೆ ಆ ಆರು ವೈರಿ ಗಳಾದರೋ ಕಾಮ ಲೋಭಗಳೆಂಬ ಎರಡರ ಪರವಾಗಿ ಕಾರ್ಯವೆಸಗುತ್ತವೆ. ಕಾಮದ ನಿಗ್ರಹಣದ ಪರವಾಗಿ ಭಗವನ್ನಿಯಮಗಳೆರಡನ್ನು ನಾವು ವಿವೇಚಿ ಸಿರುವೆವು. ಈಗ ಲೋಭದ ಸಂಬಂಧದಲ್ಲಿ ಸೂತ್ರಗಳೆರಡರ ಆಶಯವನ್ನು ತಿಳಿಯಬೇಕಾಗಿದೆ.

' ಕದಿಯಬೇಡ '– ಪರವ್ಯಕ್ತಿಯ ಲೌಕಿಕ ವಸ್ತು ವಿಷಯಗಳನ್ನು ತಾನು ಅಪಹರಿಸುವುದು ಅಥವಾ ದುರುಪಯೋಗಗೊಳಿಸುವುದನ್ನು ಈ ಸೂತ್ರವು ನಿಷೇಧಿಸುತ್ತದೆ. ಮಾತ್ರವಲ್ಲ, ನಮ್ಮ ವ್ಯವಹಾರಗಳಲ್ಲಿ ವಿಶ್ವಾಸ ಪೂರ್ವಕವಾಗಿ ನಡೆಯುವಂತೆಯೂ, ವಂಚನೆ, ತೂಕದ ಪಡಿಗಳು, ಅಳತೆ ಮೊದಲಾದುವುಗಳಲ್ಲಿ ಮೋಸವನ್ನು ಮಾಡದಂತೆಯೂ ಆದೇಶಿಸುತ್ತದೆ. ಹಾಗೆ ಮಾಡುವುದರಿಂದ ಪರಕೀಯ ವಸ್ತು ವಿಷಯಗಳು ನಮ್ಮ ಹಸ್ತಗತ ವಾಗುತ್ತವೆ. ಆದುದರಿಂದ ಹಾಗೆ ಪಡೆದ ವಸ್ತು ವಿಷಯಗಳನ್ನು ಅವುಗಳ ಒಡೆಯರಿಗೆ ಪಾವತಿ ಮಾಡುವ, ಸಾಲಸಂದಾಯ ಮಾಡುವ ಕರ್ತವ್ಯವು ಬರುತ್ತದೆ. ನೀತಿಯುಕ್ತ ದರದ ಬಡ್ಡಿಯನ್ನು ಸ್ವೀಕರಿಸಲು ಸೂಚಿಸುತ್ತದೆ. ' ಪರರ ವಸ್ತುಗಳನ್ನು ಆಶಿಸಬೇಡ '– ಪರಕೀಯ ವಸ್ತು ವಿಷಯಗಳನ್ನು ಅಪ ಹರಿಸುವುದು ಚೌರ್ಯವಾಯಿತು. ಆದರೆ ಅವುಗಳನ್ನು ಆಶಿಸುವುದೂ ಚೌರ್ಯದ ಮೊದಲ ಹೆಜ್ಜೆಯು. ಆದುದರಿಂದ ತಾನು ತನ್ನ ವಸ್ತು ವಿಷಯ ಗಳಲ್ಲಿ ತೃಪ್ತನಾಗಬೇಕೆಂದೂ ಪರರ ಅಭಿವೃದ್ಧಿಯಲ್ಲಿ ಸಂತಸವನ್ನು ತಾಳ ಬೇಕೆಂದೂ ಈ ನಿಯಮವು ಆದೇಶಿಸುತ್ತದೆ.

" ನಿನ್ನೊಡನಿರುವ ಬಡವರಾದ ನನ್ನ ಜನರಿಗಾರಿಗಾದರೂ ನೀನು ಸಾಲ ಕೊಟ್ಟಿರುವಲ್ಲಿ, ಬಲಪ್ರಯೋಗ ಮಾಡುವವನಂತೆ ಅವರ ಮೇಲೆ ನಿಷ್ಠುರನಾಗಬೇಡ ; ಮಾತ್ರವಲ್ಲ ಅಧಿಕ ತರದ ಬಡ್ಡಿಯನ್ನೂ ಹೇರಬೇಡ" (ನಿರ್ಗಮನ ೨೨, ೨೫).

" ಆತ್ಮಿಕತೆಯಲ್ಲಿ ಬಡವರಾದವರು ಧನ್ಯರು; ಅವರದು ಮೋಕ್ಷದ ರಾಜ್ಯವು " (ಮತ್ತೇಯ ೫, ೩).

" ನೀವು ಮೊದಲು ಭಗವಂತನ ರಾಜ್ಯವನ್ನೂ, ಆತನ ನೀತಿಯನ್ನೂ ಹುಡುಕಿರಿ ! ಆಮೇಲೆ ಈ ಎಲ್ಲ ವಿಷಯಗಳೂ ನಿಮಗೆ ಕೊಡಿಸಲ್ಪಡುವವು" (ಮತ್ತೇಯ ೬, ೩೩).

" ತನ್ನೊಂದು ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಮನುಷ್ಯನನ್ನು ಮತ್ಸರಿಸಬೇಡಿರಿ " (ಗೀತೆ ೩೬, ೭).

" ಅತ್ಯಾಸೆಪಡುವ ಮನುಷ್ಯನಿಗಿಂತ ಕೆಟ್ಟದಾದ ವಿಷಯವಿಲ್ಲ " (ವಿಧಿ ೧೦, ೯).

" ಹಣದ ಆಸೆಯೇ ಸಕಲ ಕೇಡುಗಳ ಮೂಲವು " (೧ ತಿಮೊತಿ ೬, ೧೦).

" ಧನಿಕರೇ ನಿಮಗೆ ಧಿಕ್ಕಾರವಿರಲಿ, ನಿಮ್ಮ ತೃಪ್ತಿಯು ನಿಮ್ಮಲ್ಲಿದೆ " (ಲೂಕ ೬, ೨೪).

(೮) ಸುಳ್ಳು ಸಾಕ್ಷಿ ಹೇಳಬೇಡ.

ಯೇಸುಕ್ರಿಸ್ತನು ಅದೊಂದು ಸಂದರ್ಭದಲ್ಲಿ,

" ನೀನೆಂದಿಗೂ ಆಣೆ ಹಾಕಬಾರದು ; ಆದರೆ ಸ್ವಾಮಿಯಲ್ಲಿ ಕೊಂಡ ಪ್ರಮಾಣಗಳನ್ನು ಪೂರೈಸಬೇಕು, ಎಂದು ಹಿಂದಿನವರಿಗೆ ಹೇಳಿರುವುದನ್ನು ನೀವು ಕೇಳಿರುವಿರಿ ; ಆದರೆ, ಸ್ವರ್ಗಲೋಕದಿಂದಾಗಲಿ–ಅದು ಭಗವಂತನ ಸಿಂಹಾಸನವಾಗಿದೆ, ಭೂಲೋಕದಿಂದಾಗಲಿ–ಅದು ಆತನ ಪಾದಪೀಠವಾಗಿದೆ, ಯೆರೂಸಲೇಮಿನಿಂದಾಗಲಿ– ಅದು ಶ್ರೇಷ್ಠ ರಾಜನ ನಗರವಾಗಿದೆ. ನಿನ್ನ ಮಸ್ತಕದ ಮೇಲಿನಿಂದಾಗಲಿ– ನಿನ್ನಿಂದ ಒಂದೇ ಬಿಂದು ಕೂದಲನ್ನು ಕಪ್ಪು ಅಥವಾ ಬಿಳಿದು ಮಾಡಲಾಗದು, ನೀನು ಅದೆಂದಿಗೂ ಆಣೆಯನ್ನು ಕೊಳ್ಳ ಬಾರದೆಂದು ನಾನು ಹೇಳುತ್ತೇನೆ–ಆದರೆ ಅಹುದು, ಅಹುದು, ಅಲ್ಲ, ಅಲ್ಲ,

ಎಂದೇ ನಿಮ್ಮ ಮಾತುಗಳಾಗಲಿ. ಅದಕ್ಕಿಂತ ಮೇಲಾದುದೆಲ್ಲವೂ ಕೆಟ್ಟ ದಾಗಿದೆ" (ಮತ್ತೇಯ ೫, ೩೩-೩೭). ಎಂದು ಹೇಳಿರುವನು. ಈ ಮಾತುಗಳಲ್ಲಿ ನಮ್ಮ ಮಾತುಗಳ ಸ್ಪಷ್ಟತೆಗೆ ಅವುಗಳ ಸತ್ಯತೆಯೇ ಬೇಕಾಗಿದೆ ಯಲ್ಲದೆ ಮಿಥ್ಯತೆಯನ್ನು ಸತ್ಯವೆಂದು ಪ್ರತಿಪಾದಿಸಲು ಅಲ್ಲವೆಂದು ತಿಳಿಯಬೇಕು.

ಚಿರಂತನ ಸತ್ಯನಾದ ಭಗವಂತನು ಅಸತ್ಯವನ್ನು ಎಂದಿಗೂ ಮೆಚ್ಚನು ಆತನ ರೂಪಸಾದೃಶ್ಯಗಳಲ್ಲಿ ಸೃಷ್ಟಿತ ಆತ್ಮವಿರುವ ಮಾನವ ವ್ಯಕ್ತಿಗಳಾದರೊ ಸತ್ಯವನ್ನೇ ಆದರಿಸಬೇಕು. ಆದರೆ ಅಸತ್ಯವನ್ನು ಸತ್ಯವೆಂದು ಪ್ರತಿಪಾದಿ ಸಲು ಪ್ರಯತ್ನಿಸುವ ಕಾಲವಿದು. ಸತ್ಯವೆಂದೇ ಹೇಳುವುದು ಅಸತ್ಯವನ್ನು. ವ್ಯಕ್ತಿ-ವ್ಯಕ್ತಿಯ ದೇಶ-ದೇಶದ ಸತ್ಯ ಸಮರ್ಥನೆಯ ಮಾತುಗಳಲ್ಲಿ ತಾತ್ಕಾ ಲಿಕ ಸತ್ಯದ ಅಸ್ತಿತ್ವವಿರುವುದು. ಸತ್ಯವನ್ನು ಸತ್ಯದಂತೆ ಆಡುವುದೇ ನ್ಯಾಯವು.

ಪ್ರಮಾಣಪೂರಕವಾಗಿ ಮಾತಾಡುವಾಗ ನಮ್ಮ ಮಾತುಗಳಲ್ಲಿ ಹೇಳಿದ ವಿಷಯಗಳ ಸತ್ಯತೆಯ ಸ್ಪಷ್ಟೀಕರಣಕ್ಕಾಗಿ ನಾವು ಭಗವಂತನನ್ನು ಸಾಕ್ಷ್ಯಕ್ಕಾಗಿ ಆಹ್ವಾನ ಮಾಡುವೆವು. ಹಾಗೆ ಪ್ರಮಾಣಪೂರಕವಾಗಿ ಅಸತ್ಯ ವನ್ನು ಸತ್ಯವೆಂದೇ ಹೇಳುವಾಗ ಭಗವಂತನನ್ನು ಸುಳ್ಳುಗಾರನಾಗಿ ಮಾಡು ವನು. ಆದುದರಿಂದ ಅದೊಂದು ಮಹಾಪರಾಧವು. ಅಂತಹ ಪ್ರಮಾಣ ಗಳನ್ನು ಸ್ವೀಕರಿಸಲು ಜನರು ಹಿಂಜರಿಯುವರು.

" ತಾನು ತಿಳಿದಿರುವುದನ್ನು ಮಾತ್ರ ಅದಾವನು ಮಾತಾಡುತ್ತಾನೊ ಅವನು ನ್ಯಾಯವನ್ನು ಪ್ರದರ್ಶಿಸುತ್ತಾನೆ; ಸುಳ್ಳು ಹೇಳುವವನು ಮೋಸ ಗಾರನು" (ಗಾದೆ ೧೨, ೧೭).

ಈ ಭಗವನ್ನಿಯಮವು ಪರವ್ಯಕ್ತಿಯ ನಿಷ್ಕಾರಣ ಅಪನಿಂದೆ, ಆತನ ಆಂತರಿಕ ವಿಷಯಗಳನ್ನು ಬಹಿರಂಗಗೊಳಿಸುವಿಕೆ, ಚಾಡಿ ಹೇಳುವುದು ಮೊದಲಾದುವುಗಳನ್ನೂ ನಿಷೇಧಿಸುತ್ತದೆ.

ಇಲ್ಲಿಗೆ ದಶಭಗವನ್ನಿಯಮಗಳ ಪರಿಚಯವನ್ನು ಮಾಡಿದೆವು. ಪ್ರತಿ ಯೊಂದು ನಿಯಮವು ವಿಸ್ತಾರಾರ್ಥವುಳ್ಳದೆಂದು ನಾವು ತಿಳಿದೆವು.

ಈ ನಿಯಮಗಳಲ್ಲದೆ ಕಥೋಲಿಕ್ ಧರ್ಮಸಭೆಯು ತನ್ನ ಸದಸ್ಯರಿಗೆ ಕೆಲವು ಸೂತ್ರಗಳನ್ನು ಪಾಲಿಸುವಂತೆ ಬಯಸುತ್ತದೆ.

"ನಿಮ್ಮನ್ನು ಆಲಿಸಿದವನು ನನ್ನನ್ನು ಆಲಿಸುತ್ತಾನೆ; ನಿಮ್ಮನ್ನು ಅಲಕ್ಷಿಸಿದವನು ನನ್ನನ್ನು ಅಲಕ್ಷಿಸುತ್ತಾನೆ" (ಲೂಕ ೧೦. ೧೬).

"ಯಾವುದನ್ನೆಲ್ಲ ಲೋಕದಲ್ಲಿ ನೀನು ಕಟ್ಟುವೆಯೋ ಅದು ಸ್ವರ್ಗದಲ್ಲಿಯೂ ಕಟ್ಟಲ್ಪಡುವುದು" (ಮತ್ತೇಯ ೧೭, ೧೮).

೧೦. ಸಪ್ತ ಸಂಸ್ಕಾರಗಳು

ಪ್ರಾರ್ಥನೆ

ಮಾನವನ ಐಹಿಕ ಪಯಣವು ಕೊನೆಗೊಂಡೊಡನೆ ಆತನು ಮೋಕ್ಷವನ್ನು ಪಡೆಯಬೇಕು. ನಾಕ - ನರಕಗಳಲ್ಲಿ ಮೊದಲನೆಯದನ್ನು ಆತನು ಆರಿಸಬೇಕಾಗಿದೆ. ಅದಕ್ಕಾಗಿ ಭಗವಂತನು ಮಾನವನ ಸಹಜ ಸ್ವಭಾವಕ್ಕೆ ಮೀರಿದ ವರಪ್ರಸಾದಗಳನ್ನು ಕರುಣಿಸಿ, ನಮ್ಮ ಮಾರ್ಗಕ್ರಮಣವು ಸುಲಭವಾಗುವಂತೆ ಮಾಡುವನು. ಈ ವರಪ್ರಸಾದಗಳನ್ನು ಕೃಪಾವರಗಳು (Graces) ಎನ್ನುವರು. ಅದು ಪ್ರತಿಯೊಬ್ಬ ವ್ಯಕ್ತಿಯ ಸ್ವೀಕಾರಕ್ಕೆ ಅನುಗುಣವಾಗಿರುವುದು. ವ್ಯಕ್ತಿಯಲ್ಲಿ ಅದನ್ನು ಪಡೆಯುವ ಆಕಾಂಕ್ಷೆಯೊಂದಿರಬೇಕಲ್ಲದೆ, ಪಡೆದುದನ್ನು ಬಳಸಿಕೊಂಡಾಗ ಇನ್ನೂ ವೃದ್ಧಿಯಾಗಿ ಅದು ನೀಡಲ್ಪಡುವುದು. ಹೀಗಾಗಿ ಅದನ್ನು ಕೃಪಾಪ್ರವಾಹವೆನ್ನಬಹುದು. ಅದುವೆ ಮಾನವನನ್ನು ಉನ್ನತಿಗೆ ತರುವ ಏಕಮಾತ್ರ ಸಾಧನವು.

ಆದಿಮಾನವನ ಪತನದಿಂದ ಈ ವರಪ್ರಸಾದಗಳಲ್ಲದೆ, ಮಾನವನ ಸಹಜಗುಣಸ್ವಭಾವಗಳನ್ನು ಮೀರಿದ ಹಲವು ವರಗಳನ್ನೂ ಆತನು ಕಳೆದುಕೊಂಡನು. ಪುನಃ ಅವನ್ನು ಮಾನವ ಕುಲಕ್ಕೆ ದೊರಕಿಸಿಕೊಡಲು ಭಗವಂತನ ಪುತ್ರನು ಇಹಕ್ಕೆ ಬಂದು ಪತನಕ್ಕೆ ಯುಕ್ತವಾದ ಪರಿಹಾರವನ್ನು ನೀಡಿದನು. ಅದರ ಫಲವಾಗಿ ಭಗವಂತನ ಕೃಪಾವರಗಳು ನಮಗೆ ಲಭ್ಯವಾದುವು. ಈ ಕೃಪಾವರಗಳನ್ನು ನಾವು ಪಡೆಯುವಂತೆ ದ್ವಿವಿಧ ಸಾಧನಗಳಿವೆ. ಅವುಗಳನ್ನು ಬಳಸಿಕೊಂಡಾಗ ಆ ಕೃಪಾಪ್ರವಾಹವು ನಿರರ್ಗಳವಾಗಿ ನಮಗೆ ದೊರಕುವುದು. ಪ್ರಾರ್ಥನೆ ಮತ್ತು ಸಂಸ್ಕಾರಗಳು – ಎಂಬಿವೇ ಆ ದ್ವಿವಿಧ ಸಾಧನಸಂಪತ್ತುಗಳು. ಮೊದಲನೆಯದು ಸರ್ವಜನಾದರಣೀಯ

ಸಾಧನವಾಗಿ ವಿಶ್ವಮಾನ್ಯತೆಯನ್ನು ಪಡೆದಿದೆ. ಎರಡನೆಯ ಸಾಧನವು ಮಾತ್ರ ಶ್ರೀಸಭೆಯ ವಶದಲ್ಲಿದೆ.

ಪ್ರಾರ್ಥನೆಯು ಕೃಪಾಪ್ರವಾಹವನ್ನು ಪಡೆಯುವ ಸುಲಭಸಾಧನವಾಗಿದೆ. ಅದು ಉತ್ತಮವೂ ವಿಶ್ವವಿಸ್ತಾರವೂ ಪರಿಣಾಮಕಾರಿಯೂ ಆದ ವಿಷಯವು. ಜಾತಿ ಮತ ಕುಲಭೇದಗಳಿಲ್ಲದೆ ಪ್ರತಿಯೊಬ್ಬನಿಂದಲೂ ಅದನ್ನು ಬಳಸಿಕೊಳ್ಳಬಹುದು ಮಾತ್ರವಲ್ಲ ಪ್ರಾರ್ಥನೆಯಲ್ಲಿ ಸ್ವಭಾವ ಸಹಜವಾದ ಒಲವೊಂದನ್ನು ನಾವು ಕಾಣಬಹುದು. ಭಗವಂತನ ಪ್ರಸಾದವನ್ನು ಪಡೆಯುವಂತೆ ಪ್ರತಿವ್ಯಕ್ತಿಯ ಹೃದಯದಲ್ಲಿ ಆತನೇ ಆ ಬಗ್ಗೆ ಅಚ್ಚೊತ್ತಿರುವ ಲಕ್ಷಣವದು. ಆದುದರಿಂದ ಭಗವಂತನ ಕರುಣಾಭಂಡಾರದ ಮುದ್ರೆಯನ್ನೊಡೆಯುವ ಚಿನ್ನದ ಬೀಗದ ಕೈ ಪ್ರಾರ್ಥನೆಯಾಗಿದೆ. ಈ ಉಪಕರಣವನ್ನು ಪ್ರಯೋಗಿಸಿ ನಿಷ್ಕಲಂಕ ಹೃದಯದ ಶಿಶುವಿನಿಂದ ಅಂತರಾಳದ ಶೋಧನೆಯನ್ನೆಸಗುವ ವಿಜ್ಞಾನಿಯವರೆಗೆ, ಪಾಮರನಿಂದ ತತ್ವಶೋಧಕ ಪಂಡಿತನ ತನಕ, ಪಾಪಿಯಿಂದ ಸಾಧುಸಂತರವರೆಗೆ ಎಲ್ಲರೂ ಭಗವತ್ ಪ್ರಸಾದವನ್ನು ಧಾರಾಳವಾಗಿ ಸಂಪಾದಿಸಬಹುದು. ಶಿಶುವಿನ ನಿಷ್ಕಲಂಕ ಹೃದಯದ ರೋದನ, ಪಾಪಿಯ ಪಶ್ಚಾತ್ತಾಪಪೂರಿತ ಕರುಣಾಕ್ರಂದನ, ಭಗವತ್ ಭಕ್ತನ ವಿಶ್ವಾಸಪೂರ್ಣ ಸದಾಶಯ ಮೊದಲಾದುವೆಲ್ಲವೂ ಅವರವರ ಯೋಗ್ಯತೆಗನುಸಾರವಾದ ಸದಿಚ್ಛೆಯೆಂಬ ಅಲಂಕರಣದಿಂದ ಭಗವಂತನ ಸನ್ನಿಧಿಯಲ್ಲಿ ಸರ್ವಸಮಾನತೆಯನ್ನು ಪಡೆಯುವವು. ಒಬ್ಬ ವ್ಯಕ್ತಿಯು ಪ್ರಾರ್ಥಿಸುವಾಗ ಆತನ ಭೂತಭವಿಷ್ಯತ್ ಜೀವನ ವಿಚಾರಗಳಿಂದಾಗಿ ಆತನ ಪಾತ್ರೆಯು ಸಿದ್ಧವಾಗುವುದಿಲ್ಲ. ಹಿಂದೆ ಅವನು ಮಹಾ ಪಾಪಿಯಾಗಿರಬಹುದು, ಅಥವಾ ಈವರೆಗೆ ಪರಿಶುದ್ಧ ಜೀವನವೆಸಗಿದ್ದರೂ ಮುಂದೆ ಅವನು ಹಿರಿಯ ಕೇಡಿಯೊಬ್ಬನಾಗಬಹುದು – ಆದರೆ ಈ ವಿಚಾರಗಳು ಗಣಿಸಲ್ಪಡುವಂತಿಲ್ಲ. ಪಾರ್ಥನೆಯ ಕಾಲದಲ್ಲಿ ಆತನ ಮನಸ್ಸಿನ ಸ್ಥಿತಿಯು ಮುಖ್ಯವಾದುದು. ಯಾವಾತನು ಪ್ರಾರ್ಥನೆಯಿಂದ ಭಗವಂತನ ಸನ್ನಿಧಿಯನ್ನು ಸೇರಬಯಸುತ್ತಾನೋ ಅವನು ದಿನದಿಂದ ದಿನಕ್ಕೆ ಸಾಮೀಪ್ಯವನ್ನು ಸೇರುತ್ತಾನೆ. ಹೀಗೆ ಸಾಮೀಪ್ಯದ ಪರಿಣಾಮವಾಗಿ ಸರ್ವೇಶ್ವರನು ನಮ್ಮ ಹೃದಯಮಂದಿರದೊಳು ಬರಲು ಸಿದ್ಧನಾಗಿ, ಅದರ ದ್ವಾರಪ್ರದೇಶದಲ್ಲಿ "ಒಳಗೆ ಬರುವೆನಿದೊ" ಎನ್ನು

ವಂತಹ ಸೂಚನೆಯನ್ನೀಯದಿರನು. ಕೊನೆಗೆ ನಮ್ಮ ಹೃದಯವು ಆತನ ಪೀಠವಾಗುವುದು. ಆಗ ನಾವು ಧನ್ಯರು. ಆದುದರಿಂದ ಪ್ರಾರ್ಥನೆಯ ಮೂಲಕ ಆ ಭಗವಂತನ ಕರುಣಾಕಿರಣಗಳನ್ನು ಪಡೆಯಲು ನಾವೆಷ್ಟು ಪ್ರಯತ್ನಿಸುವೆವೋ ಅಷ್ಟೇಫಲವನ್ನು ಪಡೆಯುವೆವು. ಅಂಧಕಾರದಲ್ಲಿರುವವನಿಗೆ ದಿವ್ಯಪ್ರಕಾಶವು ಲಭಿಸುವುದು– ಸರಿದಾರಿ ತೋರುವುದು.

* ಪ್ರಾರ್ಥನೆ, ಅದನ್ನು ಮಾಡುವ ಕ್ರಮ ಮೊದಲಾದ ವಿಚಾರಗಳಿಗಾಗಿ, 'ಪ್ರಾರ್ಥನೆಗೆ ಶಿಕ್ಷಣ' ಎಂಬ ಕಿರು ಹೊತ್ತಗೆಯನ್ನು ನೋಡಬಹುದು. ಅದು ಎಳೆಯರಿಗಾಗಿ ಬರೆದಿದ್ದರೂ ಹಿರಿಯರೂ ಅನುಸರಿಸಬೇಕಾದ ವಿಚಾರಗಳು ಅದರಲ್ಲಿವೆ.

ಪ್ರಾರ್ಥನೆಯ ರೀತಿ

ಪ್ರಾರ್ಥನೆಯಲ್ಲಿ ನಮ್ಮ ಹೃದಯವನ್ನೂ ಮನಸ್ಸನ್ನೂ ಭಗವಂತನೆಡೆಗೊಯ್ಯುವೆವು. ನಾವು ನಾಲ್ಕು ಪ್ರತ್ಯೇಕ ಉದ್ದೇಶಗಳಿಂದ ಪ್ರಾರ್ಥಿಸಬಹುದು: ೧ ಭಗವದಾರಾಧನೆಗಾಗಿ. ೨ ಆತನು ನಮಗೆ ಕರುಣಿಸಿದ ಅನೇಕಾನೇಕ ಉಪಕಾರಗಳಿಗೆ ಕೃತಜ್ಞತೆ ಸಲ್ಲಿಸಲಿಕ್ಕಾಗಿ, ೩ ನಾವು ಜೀವನದಲ್ಲಿ ಎಡವಿಬಿದ್ದು ಆಚರಿಸಿದ ಅಪರಾಧಿಗಳ ಕ್ಷಮೆಗಾಗಿ, ೪ ನಮ್ಮ ದೇಹಾತ್ಮಗಳ ಹಿತಕ್ಕಾಗಿ ಅಗತ್ಯವಿರುವ ಕೃಪಾಪ್ರವಾಹವನ್ನು ವರವಾಗಿ ಪಡೆಯಲಿಕ್ಕಾಗಿ. ಭಗವಾನ್ ಯೇಸುಕ್ರಿಸ್ತನೂ ಹಲವುಬಾರಿ ಪ್ರಾರ್ಥನೆಯ ಹಿರಿಮೆಯನ್ನು ಬೋಧಿಸಿರುವನು, ತಾನೂ ಆಚರಿಸಿ ತೋರಿಸಿರುವನು.

"ಎಚ್ಚರರಾಗಿ, ಜಾಗ್ರತೆಯಿಂದಿರಿ, ಪ್ರಾರ್ಥಿಸಿರಿ" (ಮಾರ್ಕ ೧೩,೩೩).

"ಶೋಧನೆ (Temptation)ಯಲ್ಲಿ ಬೀಳದಂತೆ ನೀವು ಎಚ್ಚರದಿಂದರಿ ಮತ್ತು ಪ್ರಾರ್ಥಿಸಿರಿ" (ಮಾರ್ಕ ೧೪, ೩೮).

ಪ್ರಾರ್ಥನೆಯು ಆಂತರಿಕವಾಗಿರಬೇಕು; ಹಾರ್ದಿಕ ವಿಷಯವದು. ಕೇವಲ ಮೌಖಿಕ ಪ್ರಾರ್ಥನೆಯು ಕೆಲವು ಪದಗಳ ಉಚ್ಚಾರಮಾತ್ರವಾಗಿರುವುದರಿಂದ ಅದು ಸಫಲವಾಗದೆಂದು ಹೇಳುವರು. ಆದರೂ ಸಾಮೂಹಿಕವಾಗಿ ಪ್ರಾರ್ಥಿಸುವಾಗ ಮೌಖಿಕ ಪ್ರಾರ್ಥನೆಯು ಹಿತವೆನಿಸುವುದು; ಮಾತ್ರವಲ್ಲ, ಭಗವಂತನು ನಮ್ಮ ದೇಹಾತ್ಮಗಳೆರಡರ ಸ್ವಾಮಿಯೆಂದು

ಬಹಿರಂಗದಲ್ಲಿ ನಾವು ಒಪ್ಪಿದಂತಾಗುತ್ತದೆ. ಧ್ಯಾನವೇ ಉತ್ತಮರೀತಿಯ ಪ್ರಾರ್ಥನೆಯು. ಆದರೂ ಅರ್ಥಪೂರ್ಣವಾಗಿ ಉಚ್ಚರಿಸಿದ ಪ್ರಾರ್ಥನೆಗಳು ವಿಹಿತ ವಿಶ್ವಾಸದಿಂದೊಡಗೂಡಿದಾಗ ಉತ್ತಮ ಫಲವನ್ನು ನೀಡುವುವೆಂದು ಬಲ್ಲವರು ತಿಳಿಸುತ್ತಾರೆ. "ನೀವು ಪ್ರಾರ್ಥಿಸುವಾಗ ವಿಧರ್ಮಿಯರಂತೆ ವಿಶೇಷವಾಗಿ ಹೇಳಬೇಡಿರಿ; ವಿಶೇಷವಾಗಿ ಉಚ್ಚರಿಸಿದ ತಮ್ಮ ಪ್ರಾರ್ಥನೆಗಳು (ಭಗವಂತನಿಂದ) ಆಲಿಸಲ್ಪಡಬಹುದೆಂದು ಅವರು ತಿಳಿಯುತ್ತಾರೆ" (ಮತ್ತೇಯ ೬, ೭). ಪ್ರಾರ್ಥನೆ ಮಾಡಬೇಕಾದಾಗ ನಿನ್ನ ಕೋಣೆಯನ್ನು ಪ್ರವೇಶಿಸು. ಅದರ ದ್ವಾರವನ್ನು ಭದ್ರಗೊಳಿಸಿ, ಅಂತರ್ಯದಿಂದಲೇ ನಿನ್ನ ಪಿತನಲ್ಲಿ ಪ್ರಾರ್ಥಿಸು; ಅದನ್ನು ನೋಡುವ ನಿನ್ನ ಪಿತನು ಅಂತರಂಗದಲ್ಲಿಯೇ ಪ್ರತಿಫಲವನ್ನು ನೀಡುವನು" (ಮತ್ತೇಯ ೬, ೬).

"ನನ್ನ ಹೆಸರಲ್ಲಿ ಎಲ್ಲಿ ಇಬ್ಬರು ಅಥವಾ ಮೂವರು ಕೂಡುವರೊ ಅವರ ಮಧ್ಯದಲ್ಲಿ ನಾನಿದ್ದೇನೆ" (ಮತ್ತೇಯ ೧೮, ೨೦).

"ಈ ಜನರು ತಮ್ಮ ತುಟಿಗಳಿಂದ ನನ್ನನ್ನು ಗೌರವಿಸುವರು – ಆದರೆ ಅವರ ಹೃದಯವು ನನ್ನಿಂದ ದೂರವಿದೆ" (ಮತ್ತೇಯ ೧೫, ೮).

"ನಿಮ್ಮನ್ನು ಹಿಂಸಿಸುವವರಿಗಾಗಿಯೂ, ದೂಷಿಸುವವರಿಗಾಗಿಯೂ ಪ್ರಾರ್ಥಿಸಿರಿ" (ಮತ್ತೇಯ ೬, ೪೪).

"ನನ್ನ ಮನೆಯು ಪ್ರಾರ್ಥನೆಯ ಮನೆಯೆಂದು ಕರೆಯಲಾಗುವುದು ಎಂದು ಬರೆಯಲಾಗಿದೆ" (ಮತ್ತೇಯ ೨೧, ೧೩).

ಸಂಸ್ಕಾರಗಳು

ಭಗವಾನ್ ಯೇಸುಕ್ರಿಸ್ತನು ಪತನಗೊಂಡ ಮಾನವಕುಲದ ರಕ್ಷಣೆಗಾಗಿ ತನ್ನ ಕೊನೆಯ ರಕ್ತದ ಹನಿಯನ್ನೂ ಸುರಿಸುತ್ತ ಪ್ರಾಣವನ್ನು ನೀಗಿದನು. ಆತನು ತನ್ನ ಜನ್ಮಕಾಲದಲ್ಲಿಯೇ ತನ್ನ ದೂತರ ಮೂಲಕ 'ಸದಿಚ್ಛೆಯ ಜನರಿಗೆ ಶಾಂತಿ'ಯನ್ನು ಆಶ್ವಾಸಿಸಿದ್ದನು. ಮಾತ್ರವಲ್ಲ ತನ್ನ ಬೋಧನೆಯ ಕಾಲದಲ್ಲಿಯೂ ಅದನ್ನು ಸಮರ್ಥಿಸಿರುವನು. 'ಅವರಲ್ಲಿ ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ನಾನು ಬಂದೆನು (ಯೋಹಾನ ೧೦, ೧೦).

ಆ ಆಧ್ಯಾತ್ಮಿಕ ಜೀವನವು ಕೃಪಾವರದಿಂದ ಪರಿಪೂರ್ಣತೆಯನ್ನು ಪಡೆಯುವುದು. ತನ್ನ ಸಂರಕ್ಷಣೆಯ ಮರಣದ ಮೂಲಕ ಗಳಿಸಿಕೊಂಡ ಆ ಅಮೂಲ್ಯವರವನ್ನು ಮಾನವರು ಪಡೆಯುವಂತೆ ಅವನು ವ್ಯವಸ್ಥೆಯನ್ನು ಮಾಡಿರುವನು. ಈ ವ್ಯವಸ್ಥೆಯು ಆತನು ಸ್ಥಾಪಿಸಿದ ಕ್ರೀಸಭೆಯ ವಶದಲ್ಲಿ ಇರುವುದು. ಯೇಸುಕ್ರಿಸ್ತನು ಈ ಅಮೂಲ್ಯ ವರವನ್ನು ಸಪ್ತಸಂಸ್ಕಾರಗಳ ಮೂಲಕ ಮಾನವ ಕುಲಕ್ಕೆ ಒದಗಿಸುವ ವ್ಯವಸ್ಥೆಯಿದೆ. ಈ ಸಪ್ತಸಂಸ್ಕಾರಗಳನ್ನು ಸಪ್ತಪ್ರವಾಹಗಳೆಂದು ಕರೆಯಬಹುದು.

ಸಂಸ್ಕಾರಗಳು (Sacraments) ವಿಹಿತಾರ್ಥವುಳ್ಳ ಸಪ್ತವಿಧಿಗಳು. ಅವುಗಳಿಂದ ನಮ್ಮ ಆಧ್ಯಾತ್ಮಿಕ ಜೀವನಕ್ಕೆ ಅಗತ್ಯವಿರುವ ಅನೇಕಾನೇಕ ಸಹಾಯಗಳು ಲಭಿಸುವುವು. ಆದರೆ ಯುಕ್ತ ಆಧ್ಯಾತ್ಮಿಕ ಸಿದ್ಧತೆಯು ಅವುಗಳ ಸ್ವೀಕರಣೆಗೆ ಅಗತ್ಯವಿದೆ. ಈ ಸಪ್ತ ಸಂಸ್ಕಾರಗಳನ್ನು ಭಗವಾನ್ ಕ್ರಿಸ್ತನು ಸ್ಥಾಪಿಸಿರುವನು. ಇವು ಕಥೋಲಿಕ್ ಪಂಥದ ವಿಶಿಷ್ಟ ದ್ರವ್ಯಗಳಾಗಿವೆ. ಯೇಸುಕ್ರಿಸ್ತನು ಏಳಕ್ಕಿಂತ ಹೆಚ್ಚಿಗೆ ಸಂಸ್ಕಾರಗಳನ್ನು ಸ್ಥಾಪಿಸಿದ ವಿಚಾರವೆಲ್ಲಿಯೂ ತಿಳಿದುಬಂದಿಲ್ಲ. ಹಾಗಾಗಿ ಆತನ ಸಂಸ್ಥೆಯಾದ ಕ್ರೀಸಭೆಯೂ ಆ ಏಳು ಸಂಸ್ಕಾರಗಳನ್ನು ಅಥವಾ ದಿವ್ಯಕರ್ಮಗಳನ್ನು ಸಾರುತ್ತ ಬಂದಿದೆ. ಈಗಿನ ಅಗತ್ಯಗಳಿಗಾಗಿ ಹೊಸದೊಂದು ಸಂಸ್ಕಾರವು ಅಗತ್ಯವೆಂದು ತೋರಿದರೂ ಅದನ್ನು ಬಳಸಲು ಕ್ರೀಸಭೆಯು ಶಕ್ತವಾಗಿಲ್ಲ. ಹಾಗೆ ಮಾಡಿದರೆ ಯೇಸುವು ಬೋಧಿಸಿದ ಸತ್ಯಕ್ಕೆ ಚ್ಯುತಿಯೂ ಬರುವುದು.

ಸಂಸ್ಕಾರಗಳನ್ನು ದಿವ್ಯ/ಕರ್ಮಗಳೆಂದು ಕರೆದೆವು. ಪ್ರತಿಯೊಂದೂ ಒಂದು ಕ್ರೀಯೆಯನ್ನೊಳಗೊಂಡಿದೆ. ಬಾಹ್ಯಚಿಹ್ನೆಯಿಂದ ಆವೃತವಾದ ಆ ಕ್ರಿಯೆಯು ಆಂತರಿಕ ಅರ್ಥಾತ್ ಆಧ್ಯಾತ್ಮಿಕ ವರಪ್ರಸಾದವನ್ನು ನಮಗಿತ್ತು ನಮ್ಮ ಪವಿತ್ರೀಕರಣವನ್ನು ಮಾಡುವುದು. ಆದುದರಿಂದ ಯೇಸುಕ್ರಿಸ್ತನ ಆಶ್ವಾಸನೆಯಂತೆ ದೈವಿಕ ಜೀವನವನ್ನು ಪಡೆಯಬಯಸುವವರು ಈ ಸಂಸ್ಕಾರಗಳ ಸದುಪಯೋಗಮಾಡಬೇಕಾಗಿದೆ. ಇದಕ್ಕೆ ತಪ್ಪಿದರೆ ವ್ಯಕ್ತಿಗಳು ಯೇಸುಕ್ರಿಸ್ತನ ಆಶ್ವಾಸನೆಯನ್ನು ಸ್ವೀಕರಿಸಲು ಅನರ್ಹರಾಗುವರು,

ಸಪ್ತಸಂಸ್ಕಾರಗಳು

ದೇಹಾತ್ಮಗಳ ಗೂಢಸಂಯೋಗವೇ ಮನುಷ್ಯನು. ದೇಹವೂ ಆತ್ಮವೂ ಜೊತೆಯಲ್ಲಿಯೇ ಬೆಳೆಯುತ್ತವೆ. ಅವು ವಿಚ್ಛೇದಗೊಂಡಾಗ ಮರಣ ವೆನ್ನುತ್ತೇವೆ. ಜಡದೇಹಕ್ಕೆ ಸಂಬಂಧಿಸಿದ ಕೆಲವು ವಿಶಿಷ್ಟ ಕರ್ಮಗಳನ್ನು ಆಧ್ಯಾತ್ಮಿಕ ಕರ್ಮಗಳೊಡನೆ ಸಮನ್ವಯಗೊಳಿಸಬಹುದು. ಆಗ ದಿವ್ಯ ಕರ್ಮಗಳು ಅಥವಾ ಸಂಸ್ಕಾರಗಳು ಏಳು ಮಾತ್ರವೆಂದು ಸ್ಫುಟವಾಗುವುದು. ನಿಸರ್ಗನಿಯಮದ ಪ್ರಕಾರ ನಮಗೆ ಸಪ್ತವಿಧ ಅಗತ್ಯಗಳಿವೆ. ಅವುಗಳಿಗನು ಗುಣವಾಗಿ ಎಂಬಂತೆ ಆಧ್ಯಾತ್ಮಿಕ ಜೀವನದ ಏಳು ವಿಷಯಗಳಿವೆ.

(೧) ಮನುಷ್ಯನು ಅಸ್ತಿತ್ವಕ್ಕೆ ಬರಬೇಕಾದರೆ ಅವನು ಜನಿಸಬೇಕು. ಹಾಗೆಯೇ ಮಾನವನ ಆತ್ಮದ ಆಧ್ಯಾತ್ಮಿಕ ಜೀವನವು ಆರಂಭವಾಗಲು ಪ್ರವೇಶಕ್ಕೆ ಅರ್ಹತೆಯನ್ನು ನೀಡುವ ಜ್ಞಾನಸ್ನಾನವೆಂಬ ಸಂಸ್ಕಾರವನ್ನು ಆತನು ಬಳಸಿಕೊಳ್ಳಬೇಕಾಗಿದೆ. ನಮ್ಮ ದೈಹಿಕ ಜೀವನದ ಸ್ವಭಾವಸಿದ್ಧ ಗರ್ಭೋತ್ಪತ್ತಿಯಂತೆ ಈ ಆಧ್ಯಾತ್ಮಿಕ ನವಜನ್ಮವು ನಮ್ಮ ಸಹಜ ಸ್ವಭಾವಕ್ಕೆ ಮಿಗಿಲಾದ ದೈವಿಕ ಜೀವನವಾಗಿದೆ. ಮಾತ್ರವಲ್ಲ ಈ ಪ್ರಥಮ ಸಂಸ್ಕಾರದಿಂದ ಇತರ ಸಂಸ್ಕಾರಗಳ ಮಾರ್ಗದರ್ಶನವು ದೊರೆಯುವುದು.

(೨) ಹುಟ್ಟಿದ ಮನುಷ್ಯನು ಬಾಳಬೇಕಾದರೆ ದೇಹದಾರ್ಢ್ಯವನು ಪಡೆಯಬೇಕು. ರೋಗಗಳಿಗೆ ಬಹು ಸುಲಭದಲ್ಲಿ ಬಲಿಯಾಗದಂತೆ, ಸಂಸಾರದ ಎಡರುತೊಡರುಗಳಿಗೆ ಎದೆಯೊಡ್ಡಿ ಪಾರಾಗುವಂತೆ ಆತನು ದೃಢಕಾಯವನ್ನು ಪಡೆಯಬೇಕು. ಅಂತೆಯೇ ಆತನ ಆಧ್ಯಾತ್ಮಿಕ ಜೀವನದಲ್ಲಿ ಮುಂದೆ ಬಂದ ಆತಂಕಗಳನ್ನು ಧೀರತನದಿಂದ ಎದುರಿಸುವ ಶಕ್ತಿಯು ಆತನಲ್ಲಿರಬೇಕಾದದು ಅನಿವಾರ್ಯ. ಆದಕ್ಕಾಗಿ ಭದ್ರಾಭ್ಯಂಗ ಅಥವಾ ದೃಢೀಕರಣವೆಂಬ ಸಂಸ್ಕಾರವಿದೆ.

(೩) ಮಾನವನು ಬದುಕಬೇಕಾದರೆ ಅಥವಾ ಬೆಳೆಯಬೇಕಾದರೆ ಆತನು ಆಹಾರವನ್ನು ಸೇವಿಸಬೇಕಾಗಿದೆ. ಯುಕ್ತಾಹಾರ ಪಾನೀಯಗಳಿಂದ ಮಾನವನು ಸಮರ್ಥ ಶಕ್ತಿಶಾಲಿಯೆನಿಸುವನು. ಹಾಗೆಯೇ ಆಧ್ಯಾತ್ಮಿಕ ಜೀವವು ಬೆಳೆಯಬೇಕಾದರೆ, ಆತ್ಮದಲ್ಲಿ ಭಗವಂತನ ಕೃಪಾಪ್ರವಾಹವು ಸಮೃದ್ಧಿಯಾಗಿರಬೇಕಾದರೆ ಆಧ್ಯಾತ್ಮಿಕ ಆಹಾರಪಾನೀಯಗಳಾಗಿ ದಿವ

ಪ್ರಸಾದವನ್ನು ಸೇವಿಸದೇ ನಿರ್ವಾಹವಿಲ್ಲ. ಇದಕ್ಕಾಗಿ ಪವಿತ್ರ ಪ್ರಸಾದ ವೆಂಬ ಸಂಸ್ಕಾರವೊಂದಿರುವುದು.

(೪) ಅದೆಷ್ಟೋ ಎಚ್ಚರಿಕೆಗಳನ್ನು ಕೈ ಗೊಂಡರೂ ಹಲವು ಸಲ ದೈಹಿಕಾರೋಗ್ಯವು ಕೆಡುವುದನ್ನು ನಾವು ತಿಳಿದಿರುವೆವು. ಆ ಕಾಲದಲ್ಲಿ ತದನುಗುಣವಾದ ಔಷಧೋಪಚಾರಗಳನ್ನು ಬಳಸಿಕೊಳ್ಳುತ್ತ ವೈದ್ಯನ ಸಲಹೆಯಂತೆ ನಾವಿರಬೇಕಾಗಿದೆ ಮಾತ್ರವಲ್ಲ ಮುಂದೆ ಆರೋಗ್ಯವು ಕೆಡದಂತೆ ವೈದ್ಯನ ಸೂಚನೆಯನ್ನು ಅನುಷ್ಠಾನದಲ್ಲಿ ತರಬೇಕು. ಆಧ್ಯಾತ್ಮಿಕ ಜೀವನದಲ್ಲಿಯೂ ಆರೋಗ್ಯವು ಕೆಡುವುದಿದೆ. ಅದನ್ನು ಸರಿಗೊಳಿಸಲು ಪ್ರಾಯಶ್ಚಿತ್ತದ ಸಂಸ್ಕಾರವಿದೆ.

(೫) ದೇಹವು ರೋಗಬಾಧೆ, ವಾರ್ಧಕ್ಯ, ಅಪಾಯ ಮೊದಲಾದ ವಿಶಿಷ್ಟ ಕಾರ್ಯಗಳಿಂದ ಮರಣೋನ್ಮುಖವಾಗಿರಲು ಯುಕ್ತ ಶಕ್ತಿದಾಯಕ ಹಾಗೂ ಧೈರ್ಯೋತ್ಪಾದಕ ಪುನರುಜ್ಜೀವಕಾಹಾರಾದಿಗಳು ಅಗತ್ಯವಿರುವಂತೆ, ಮರಣಕಾಲದಲ್ಲಿ ಆತ್ಮವನ್ನು ಶಾಂತಮರಣಕ್ಕೆ ಸಿದ್ಧಗೊಳಿಸುವುದಕ್ಕಾಗಿಯೂ ಕೃಪಾಪ್ರವಾಹಭರಿತವಾಗಿ ಮಾಡಿ ಧೀರೋತ್ಸಾಹಗಳನ್ನು ಹುಟ್ಟಿಸುವುದಕ್ಕಾಗಿಯೂ ಅವಧಿ ಅಭ್ಯಂಗ ಅಥವಾ ಅಂತ್ಯಾಭ್ಯಂಗವೆಂಬ ಸಂಸ್ಕಾರವಿರುವುದು.

(೬) ಮಾನವನು ಸಾಮಾಜಿಕ ಜೀವಿಯು. ಆತನ ಸಾಮಾಜಿಕ ಜೀವನವು ಸುಗಮವಾಗಬೇಕಾದರೆ ಸರಿ–ತಪ್ಪುಗಳನ್ನು ವಿಮರ್ಶಿಸಿ ಸ್ಫುಟಗೊಳಿಸಿ ಹೇಳುವ ಹಾಗೂ ಜೀವನದ ಉತ್ತಮಾದರ್ಶವನ್ನು ತೋರಿ ಜನತೆಯನ್ನು ಮುಂದೆ ನಡೆಸುವ ಜ್ಞಾನಿಗಳೂ, ನ್ಯಾಯಾಧೀಶರೂ, ಸರಕಾರವೂ ಇರುವಂತೆ ಆಧ್ಯಾತ್ಮಿಕ ಜೀವನದ ಇತಿಮಿತಿಗಳನ್ನು ತೋರಿಸುವ ವ್ಯಕ್ತಿಗಳು ಆ ವಿಶಿಷ್ಟಕಾರ್ಯಗಳಿಗಾಗಿ ದೀಕ್ಷಾಬದ್ಧರಾಗುವಂತೆ ಮಾಡುವ ಪವಿತ್ರವರ್ಗವೊಂದಿದೆ. ಆಧ್ಯಾತ್ಮಿಕ ಸರಕಾರವಾದ ಕ್ರೀಸಭೆಯ ಅಧಿಕಾರವರ್ಗವನ್ನು ತೋರಿಸುವುದು. ಇದನ್ನು ಗುರುತನ ಅಥವಾ ಪುರೋಹಿತಾಭಿಷೇಕವೆಂಬ ಸಂಸ್ಕಾರದಿಂದ ಪೂರೈಸಲಾಗುತ್ತದೆ.

(೭) ಮಾನವನ ಐಹಿಕ ಜೀವನವು ಶಾಶ್ವತವಲ್ಲ. ಆದಕ್ಕಾಗಿ ಸಂತಾನಾಭಿವೃದ್ಧಿಯು ಅಗತ್ಯವಾಗಿದೆ. ಇದರಿಂದಲೇ ಪತಿ–ಪತ್ನಿಯರ

ಐಕ್ಯವು ನಡೆಯುವುದು. ಅದೇ ರೀತಿಯಲ್ಲಿ ದಂಪತಿಗಳು ತಮ್ಮ ವೈವಾಹಿಕ ಜೀವನದ ಸಿಹಿ-ಕಹಿಗಳನ್ನು ಏಕರೀತಿಯಲ್ಲಿ ಸ್ವೀಕರಿಸಿ, ತಮ್ಮ ಉತ್ತರಾಧಿಕಾರಿಗಳಾದ ತಮ್ಮ ಮಕ್ಕಳನ್ನು ಸರಿದಾರಿಯಲ್ಲಿ ಮುಂದೊಯ್ಯುವಂತೆ ಬೇಕಾದ ಆಧ್ಯಾತ್ಮಿಕ ಸಹಾಯವು ವಿವಾಹ ಸಂಸ್ಕಾರದಿಂದ ಲಭಿಸುವುದು. ಇದನ್ನು ಜ್ಞಾನ ವಿವಾಹವೆಂದೂ ಕರೆಯುವರು.

ಹೀಗೆ ಏಳೇ ಏಳಾದ ಈ ಸಂಸ್ಕಾರಗಳನ್ನು ಪರಿವಿಡಿಯಾಗಿ ವಿವೇಚಿಸುವುದು ಹಿತವಾಗಿದೆ.

ಜ್ಞಾನಸ್ನಾನ (Baptism) ಪವಿತ್ರಸ್ನಾನ

ಗ್ರೀಕ್ ಭಾಷೆಯ 'Bapto' ಎಂಬ ಉಚ್ಚಾರದ ಪದವು 'ಅದ್ದು' ಯೆಂಬರ್ಥವನ್ನೀಯುವುದು. ಅದರ ಲತೀನ್ ರೂಪ Baptizo ಎಂಬ ಪದವು ತೊಳೆಯುತ್ತೇನೆ ಅಥವಾ ಶುದ್ಧಗೊಳಿಸುತ್ತೇನೆ ಎಂಬರ್ಥದಲ್ಲಿದೆ. ಅದರಿಂದ Baptism ಎಂಬ ಪದವು ಬಂದಿದೆ. ಅದನ್ನೇ ನಾವು ಜ್ಞಾನಸ್ನಾನವೆಂದು ಅನುವಾದಿಸುವೆವು.

ಯೇಸುಕ್ರಿಸ್ತನು ಸಂಸ್ಥಾಪಿಸಿದ ಸಪ್ತ ಸಂಸ್ಕಾರಗಳಲ್ಲಿ ಜ್ಞಾನಸ್ನಾನವು ಮೊದಲನೆಯದು. ದೈಹಿಕ ಸ್ನಾನದಿಂದ ದೈಹಿಕ ಅಶುದ್ಧತೆಗಳೆಲ್ಲವೂ ನೀಗುವಂತೆ ಜ್ಞಾನಸ್ನಾನದಿಂದ ಆತ್ಮದ ಅಶುದ್ಧತೆಯು ನೀಗುವುದು. ಅದರಿಂದಾಗಿ ಮಾನವನ ಆಧ್ಯಾತ್ಮಿಕ ಜೀವನದ ಜನನವಾಗುವುದು. ಹೀಗಾಗಿ ಇತರ ಯಾವತ್ತೂ ಸಂಸ್ಕಾರವನ್ನು ಸ್ವೀಕರಿಸುವ ಮುನ್ನ ಈ ಸಂಸ್ಕಾರವನ್ನು ಪಡೆಯಬೇಕಾಗುತ್ತದೆ. ಆದುದರಿಂದ ಜ್ಞಾನಸ್ನಾನವನ್ನು ಪಡೆದವನು ಯೇಸುವಿನ ಧರ್ಮಸಂಸ್ಥೆಯಾದ ಶ್ರೀಸಭೆಯ ಸದಸ್ಯನಾಗುವನು. ಯೇಸುವಿನ ಸಂಸ್ಥೆಯ ಸದಸ್ಯನು ಯೇಸುವಿನಲ್ಲಿ ಭ್ರಾತೃತ್ವವನ್ನು ಪಡೆಯುವನು-ಯೇಸುವು ಭಗವತ್ ಪುತ್ರನಾಗಿರುವುದರಿಂದ ಆತನ ಸೋದರನಾದವನು ಭಗವಂತನ ಪುತ್ರನೆನಿಸುವನು. ಆದುದರಿಂದ ಜ್ಞಾನಸ್ನಾನವನ್ನು ಕೊಂಡವನು ಮೋಕ್ಷಮಾರ್ಗದ ಸೋಪಾನಪಂಕ್ತಿಯಲ್ಲಿ ಮೊದಲನೆಯ ಮೆಟ್ಟಲನ್ನೇರುವನು. ಮೋಕ್ಷರಾಜ್ಯದ ಉತ್ತರಾಧಿಕಾರತ್ವವು ವ್ಯಕ್ತಿಗೆ ಬರುವುದು. ಕ್ರೈಸ್ತರೆಂದು ಕರೆಯಲ್ಪಡುವವರೆಲ್ಲರೂ ಈ ಜ್ಞಾನಸ್ನಾನವನ್ನು ಪಡೆದಿರುವರು.

ಜ್ಞಾನಸ್ನಾನವು ಶುದ್ಧತೆಯ ಚಿಹ್ನೆಯಾಗಿರುವುದರಿಂದ ಅದರ ಸ್ವೀಕರಣದ ಮುನ್ನ ಮಾಡಿದ ಸರ್ವಾಪರಾಧಗಳೂ ತೊಳೆಯಲ್ಪಟ್ಟು ಕ್ಷಮಿಸಲ್ಪಡುತ್ತವೆಯಾದರೂ ಆ ಅಪರಾಧಗಳ ದುಷ್ಫಲವನ್ನು ನೀಗಲು ಯುಕ್ತ ಪುಣ್ಯಕಾರ್ಯಗಳನ್ನು ಮಾಡಿಕೊಳ್ಳಬೇಕಾಗುತ್ತದೆಯೆಂದು ತಿಳಿಯಬೇಕು.

ಜ್ಞಾನಸ್ನಾನದ ಆವಶ್ಯಕತೆಯನ್ನು ಸೂಚಿಸುತ್ತ ಯೇಸುವು " ಒಬ್ಬನು ನೀರಿನಿಂದಲೂ ಪವಿತ್ರಾತ್ಮನಿಂದಲೂ ಪುನಃ ಜನಿಸದೆ ಹೋದರೆ ಭಗವತ್ ರಾಜ್ಯವನ್ನು ಸೇರಲಾರನು " (ಯೋಹಾನ ೩, ೫).

ಎಂದು ಯೆಹೂದ್ಯರ ಮಹಾನೀತಿ ಸಭೆಯ ಸದಸ್ಯ ನಿಕೊದೆಮುಸನಿಗೆ ಬಿತ್ತರಿಸಿರುವನು. ಮಾತ್ರವಲ್ಲ ತನ್ನ ದಿವ್ಯಾರೋಹಣದ ಮುನ್ನ ತನ್ನ ಶಿಷ್ಯವೃಂದಕ್ಕೆ ಪ್ರಚಾರಾರ್ಥವಾಗಿ ಕಳುಹಿಸುವಾಗ,

" ಆದುದರಿಂದ ನೀವು ಹೋಗಿ ಸರ್ವ ಜನಾಂಗಗಳಿಗೂ ಬೋಧಿಸಿರಿ, ಪಿತನ, ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ ಅವರಿಗೆ ಜ್ಞಾನಸ್ನಾನವನ್ನೀಯಿರಿ " (ಮತ್ತೇಯ ೨೮, ೧೯).

ಎಂದೂ ಹೇಳಿರುವನು. ಈ ವಿಚಾರವನ್ನು ಮಾರ್ಕನೂ ತಿಳಿಸುತ್ತ " ವಿಶ್ವಾಸ ಹೊಂದಿ ಜ್ಞಾನಸ್ನಾನವನ್ನು ಪಡೆಯುವವನು ರಕ್ಷಿಸಲ್ಪಡುವನು ; ಆದರೆ ವಿಶ್ವಾಸ ಹೊಂದದವನು ದಂಡಿಸಲ್ಪಡುವನು " (ಮಾರ್ಕ ೧೬, ೧೬).

ಎಂದು ಯೇಸುವಿನ ಮಾತುಗಳನ್ನು ಉದ್ಧರಿಸಿರುವನು. ಆದುದರಿಂದ ಅತ್ಯಾವಶ್ಯಕವಾದ ಈ ಜ್ಞಾನಸ್ನಾನವನ್ನು ವಿವೇಕಿಯಾದವನು ಕೂಡ ನೀಡಬಹುದೆಂದು ಯೇಸುವು ನಿರ್ಧರಿಸಿರುವನು. ಪ್ರತ್ಯೇಕ ಪುರೋಹಿತನು ಅಗತ್ಯವೆಂಬುದಿಲ್ಲ.

ಯೇಸುವಿನ ಧರ್ಮೋಪದೇಶದ ಆಶೌತಿಯನ್ನು ಪೇತ್ರನೇ ಮೊದಲಾದವರು ಕಾರ್ಯರೂಪದಲ್ಲಿಳಿಸಲು ತೊಡಗಿದ ಬಳಿಕ ಹಿರಿ ಶಿಷ್ಯಪೇತ್ರನು ಅದೊಂದು ಸಂದರ್ಭದಲ್ಲಿ ಕ್ರಿಸ್ತನ ಸಂದೇಶವನ್ನು ನೀಡಿ ಜನರನ್ನು ಹುರಿದುಂಬಿಸಿ,

'' ಪ್ರಾಯಶ್ಚಿತ್ತವನ್ನು ಮಾಡಿರಿ ; ನಿಮ್ಮ ಅಪರಾಧಗಳ ವಿಮೋಚನೆಗಾಗಿ ಪ್ರತಿಯೊಬ್ಬನೂ ಯೇಸುಕ್ರಿಸ್ತನ ನಾಮದಲ್ಲಿ ಜ್ಞಾನಸ್ನಾನವನ್ನು ಪಡೆಯಿರಿ. ಆಗ ಪವಿತ್ರಾತ್ಮನ ಫಲವನ್ನು ಪಡೆಯುವಿರಿ " (ಕಾಯಕ ೨.೩೮)

ಎಂದು ನಿರ್ದೇಶಿಸುತ್ತ ಜ್ಞಾನಸ್ನಾನದ ಮಹತ್ವವನ್ನು ವಿಶದ ಗೊಳಿಸಿರುವನು.

ತಾರ್ಸುಸಿನ ಸಾವನು ಪಾವ್ಲನಾದ ವಿಚಾರವನ್ನು ನಾವು ತಿಳಿದಿರುವೆವು. ಕ್ರೈಸ್ತರನ್ನು ಸಮೂಲ ನಿರ್ಮೂಲಗೊಳಿಸಬೇಕೆಂದು ಕಂಕಣಬದ್ಧನಾದ ಸಾವ್ಲನು ಜ್ಞಾನಸ್ನಾನದಿಂದ ಕ್ರೈಸ್ತಧರ್ಮ ಪ್ರಚಾರಕನನ್ನಾಗಿ ಮಾಡಿದ ವಿಚಾರವನ್ನು ಅದೇ ಪಾವ್ಲನು ಮುಂದೆ ತನ್ನ ಮತಾಂತರದ ವಿವರವನ್ನೀಯುತ್ತಿರುವಾಗ ಉದ್ಧರಿಸಿರುವನು.

"ಎದ್ದೇಳು, ಜ್ಞಾನಸ್ನಾನವನ್ನು ಸ್ವೀಕರಿಸು: ನಿನ್ನ ಅಪರಾಧಗಳನ್ನು ಆತನ ನಾಮದಲ್ಲಿ ತೊಳೆದುಬಿಡು" (ಕಾಯಕ ೨೨, ೧೬) ಮಾತ್ರವಲ್ಲ ತಾನೇ ಮತಾಂತರಗೊಳಿಸಿದವರಿಗೆ ಕಳುಹಿಸಿದ ನಿರೂಪದಲ್ಲಿ.

"ನೀವು ತೊಳೆಯಲ್ಪಟ್ಟಿದ್ದೀರಿ–ನೀವು ಪವಿತ್ರಗೊಳಿಸಲ್ಪಟ್ಟಿದ್ದೀರಿ. ನಮ್ಮ ಸ್ವಾಮಿ ಯೇಸುಕ್ರಿಸ್ತ ಮತ್ತು ಭಗವತ್ ಆತ್ಮನ ನಾಮದಲ್ಲಿ ನೀವು ಸಮರ್ಥಿಸಲ್ಪಟ್ಟಿರುವಿರಿ" (೧ ಕೊರಿಂತಿ ೬, ೧೧) ಎಂದೂ ತಿಳಿಸಿರುವನು. ಹೀಗೆ ಜ್ಞಾನಸ್ನಾನವು ಕ್ರೈಸ್ತಮತೀಯರ ಪ್ರಪ್ರಥಮ ಕಾಯಕವಾಗಿದೆ.

ಜ್ಞಾನಸ್ನಾನ ಸಂಸ್ಕಾರದ ಪ್ರಯೋಗವನ್ನು ಪ್ರಾಯಪ್ರಬುದ್ಧರಿಗೆ ಮಾಡಿದುದನ್ನು ನಾವು ದೃಷ್ಟಾಂತಗಳಿಂದ ತಿಳಿಯಬಹುದು. ಎಳೆಯ ಹಸುಳೆಗಳಿಗೆ ಈ ಸಂಸ್ಕಾರದ ಪ್ರಯೋಗವನ್ನು ಮಾಡಬಹುದೇ ಎಂಬ ಪ್ರಶ್ನೆಯು ಬರುವುದು ಅಹುದೆಂದೇ ಉತ್ತರವನ್ನು ನೀಡಲಾಗುತ್ತದೆ. ಯೇಸುವು ನಿಷ್ಕಲಂಕ ಹೃದಯದ ಬಾಲಕರನ್ನೊಲಿದವನು. ಅದೆಷ್ಟೋ ಸಲ ಆ ಶುದ್ಧ ಹೃದಯದ ಮಕ್ಕಳ ವರ್ತನೆಯನ್ನು ದೊಡ್ಡವರಿಗೆ ಆದರ್ಶವನ್ನಾಗಿ ನೀಡಿದವನು.

ಎಳೆಯ ಮಕ್ಕಳನ್ನು ನನ್ನೆಡೆಗೆ ಬರಗೊಡಿರಿ, ಅವರನ್ನು ತಡೆಯಬೇಡರಿ; ಅವರಂತಹರದು ಮೋಕ್ಷರಾಜ್ಯವಾಗಿದೆ" (ಮತ್ತೀಯ ೧೯, ೧೪; ಮಾರ್ಕ ೧೦, ೧೪; ಲೂಕ ೧೮, ೧೬) ಎಂದು ತನ್ನೆಡೆಗೆ ಕರೆದುತಂದ ಮಕ್ಕಳನ್ನು ಆತಂಕಗೊಳಿಸುವಾಗ ಯೇಸುವು ಹೇಳಿರುವನು. ಜ್ಞಾನಸ್ನಾನವು ತನ್ನ ಶ್ರೀ ಸಭೆಯ ಸದಸ್ಯತೆಯನ್ನು ಸೂಚಿಸುವಾಗ ಆ ದಿವ್ಯಕರ್ಮವನ್ನು ಏತಕ್ಕಾಗಿ ಆತನು ನಿರಾಕರಿಸಬಹುದು ? ಅದಕ್ಕಾಗಿಯೇ ಸಭೆಯು ಜ್ಞಾನ

ಸ್ನಾನದ ಪ್ರಯೋಗವನ್ನು ಆದಷ್ಟು ಬೇಗ ಮಾಡುವಂತೆ ಭಕ್ತ ಜನರನ್ನು ಆದೇಶಿಸುತ್ತದೆ.

ಸಂತ ಪಾಲ್ಲನೂ ಹರಿಯುದವರೊಡನೆ ಎಳೆಯರಿಗೂ ಜ್ಞಾನಸ್ನಾನ ನ್ನಿತ್ತ ನಿದರ್ಶನಗಳನ್ನು ಬೈಬಲಿನಲ್ಲಿ ಉಲ್ಲೇಖಿಸಿದ್ದಾರೆ, ಒಂದು ಕುಟುಂಬ ದಲ್ಲಿ ಕೆಲವರೊಂದು ಮತದವರೂ, ಉಳಿದವರು ಇನ್ನೊಂದು ಮತದವರೂ ಆದರೆ ಹಲವು ರಗಳೆಗಳು ಬರುವುವು. ಅದಕ್ಕಾಗಿ ಎಳೆಯರಿಗೂ ಆ ಸಂಸ್ಕಾರ ವನ್ನು ನೀಡಬೇಕಾಗುತ್ತದೆ.

ಕ್ರೈಸ್ತ ಮಾತಾಪಿತೃಗಳು ತಮ್ಮ ಮಕ್ಕಳಿಗೆ ಆದಷ್ಟು ಬೇಗ ಜ್ಞಾನ ಸ್ನಾನವನ್ನೀಯಿಸಲು ಇನ್ನೊಂದು ಪ್ರಬಲ ಕಾರಣವೂ ಇದೆ. ಪವಿತ್ರ ಗ್ರಂಥ ಗಳು ತಿಳಿಸುವ ಪ್ರಕಾರ ಆದಿಮಾನವನ ಪತನದ ದುಷ್ಪರಿಣಾಮವಾಗಿ ಭಗ ವಂತನು ಮಾನವನಿಗಿತ್ತ ಮಹಾಪ್ರಸಾದಗಳೆಲ್ಲವೂ ಕಳೆದುವು. ಆ ಮೂಲ ಪಾತಕದ ಪರಿಣಾಮವನ್ನು ತೊಳೆಯುವುದಕ್ಕಾಗಿ, ಭಗವಂತನ ಕೃಪಾವರ ಗಳನ್ನು ಪಡೆಯುವುದಕ್ಕಾಗಿ ಈ ಜ್ಞಾನಸ್ನಾನವು ಅಗತ್ಯವಿದೆ. ಆದುದರಿಂದ ಎಳೆಯ ಶಿಶುಗಳಿಗೂ ಈ ಸಂಸ್ಕಾರದ ಲಾಭವು ದೊರೆಯುವಂತೆ ಕ್ರೈಸ್ತರು ನೋಡುವರು. ಜನನ ಕಾಲದಲ್ಲಿಯೇ ಅಗತ್ಯವಿದ್ದರೆ ಜ್ಞಾನಸ್ನಾನವನ್ನು ನೀಡುವರು.

ಜ್ಞಾನಸ್ನಾನದ ಕ್ರಮ

ಜ್ಞಾನಸ್ನಾನದ ಸಂಸ್ಕಾರದ ಪ್ರಯೋಗವನ್ನು ಅದಾವ ವಿವೇಕಿಯೂ ಮಾಡಬಹುದು. ಹೀಗಾಗಿ ಅದರ ರೀತಿಯು ಬಹು ಸುಲಭವಾಗಿರುವುದು. ನೀರನ್ನು ಹೊಯ್ಯುವ ಚಿಮುಕಿಸುವ ಅಥವಾ ಮುಳುಗಿಸುವ ರೂಪದಲ್ಲಿ ತೊಳೆಯುವಿಕೆಯನ್ನು ತೋರಿಸುತ್ತ ‘ ಪಿತನ, ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ ನನಗೆ ಜ್ಞಾನಸ್ನಾನವನ್ನೀಯುತ್ತೇನೆ ’ ಎಂಬ ನುಡಿಯನ್ನು ಸ್ಪಷ್ಟ ವಾಗಿ ಉಚ್ಚರಿಸಬೇಕು. ಇದುವೆ ಈ ಸಂಸ್ಕಾರದ ಕ್ರಮವು. ಅದನ್ನು ನೀಡುವವನು ಮಾತ್ರ ಸದುದ್ದೇಶಪೂರಿತನಾಗಿರಬೇಕಾಗುತ್ತದೆ. ಆತನ ಇತರ ವಿಚಾರಗಳು ಅಲಕ್ಷಣೀಯ.

ಆದರೆ ಕ್ರೈಸ್ತ ಶ್ರೀ ಸಭೆಯು ಈ ಸಂಸ್ಕಾರವನ್ನು ಕೆಲವು ವಿಶಿಷ್ಟ

ಆಚರಣೆಗಳೊಂದಿಗೆ ಗಂಭೀರ ವಿಷಯವಾಗಿ ಮಾಡಿಕೊಂಡಿದೆ. ಈ ರೀತಿಯನ್ನು ಯುಕ್ತ ಅಧಿಕಾರಹೊಂದಿದ ಪುರೋಹಿತನು ಮಾತ್ರ ಮಾಡಬಹುದು.

ಜ್ಞಾನಸ್ನಾನವನ್ನು ಸ್ವೀಕರಿಸಲು ಮುಂಬಂದವನು ಸುರುವಿಗ (catcehumeny) ತಿಳಿದುಕೊಳ್ಳುವ ಪ್ರಾಯದವನಾಗಿದ್ದಲ್ಲಿ ಯೇಸು ಕ್ರಿಸ್ತನ ಹಾಗೂ ಆತನ ತತ್ವಗಳ ಸಮರ್ಪಕ ಪರಿಚಯಾಭ್ಯಾಸವನ್ನು ಕೈಕೊಳ್ಳಬೇಕು. ಮುಂದೆ ಜ್ಞಾನಸ್ನಾನದ ಬಳಿಕ ಆ ತತ್ವಗಳನ್ನು ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕಾಗಿರುವುದರಿಂದ ಆ ಅಭ್ಯಾಸವು ಅಗತ್ಯವಿದೆ. ಮಾತ್ರವಲ್ಲ ಜ್ಞಾನಸ್ನಾನವನ್ನು ಸ್ವೀಕರಿಸುವ ಮುನ್ನ ಶ್ರೀಸಭೆಯಿಂದ ನೇಮಿಸಲ್ಪಟ್ಟ ಪುರೋಹಿತ ಮತ್ತೊಬ್ಬ ಸಾಕ್ಷಿಯ ಮುಂದೆ ಮಿಥ್ಯಾರಾಧನೆ ಮೊದಲಾದ ಕ್ರೈಸ್ತ ತತ್ವಗಳಿಗೆ ವಿರೋಧವಾದ ವಿಷಯಗಳನ್ನು ತ್ಯಜಿಸುವ ತನ್ನ ನಿರ್ಧಾರವನ್ನು ಪ್ರಕಟಿಸಬೇಕು. ಈ ಬಹಿರಂಗ ಪ್ರಕಟನೆಯ ಬಳಿಕ ಜ್ಞಾನಸ್ನಾನದ ಸಂಸ್ಕಾರವನ್ನು ನೀಡುವ ಪುರೋಹಿತನು ತನ್ನ ಆಧ್ಯಾತ್ಮಿಕಾಧಿಕಾರದ ಬಾಹ್ಯಚಿಹ್ನೆಯಾದ ಉತ್ತರಿಯ(store)ದಂತಿರುವ ವಸನದ ತುದಿಯನ್ನು ವ್ಯಕ್ತಿಯ ಮೇಲಿರಿಸಿ ದೇವಪ್ರೇಷಕರ ವಿಶ್ವಾಸಸಾರ ಹಾಗೂ ನಮ್ಮ ಪಿತನೇ ಮೊದಲಾದ ಪ್ರಾರ್ಥನೆಗಳನ್ನು ಗಟ್ಟಿಯಾಗಿ ಉಚ್ಚರಿಸುತ್ತ ಜ್ಞಾನಸ್ನಾನದ ಕೊಳದೆಡೆಗೆ ತರುವನು.

ವ್ಯಕ್ತಿಯು ತಾನು ಸ್ವೀಕರಿಸಿ ಬಂದ ಮತವು ಅದೊಂದು ಆಧ್ಯಾತ್ಮಿಕ ಜೀವನವೆಂದು ಅದರಲ್ಲಿ ನಿರಂತರವಾದೊಂದು ಕಾಳಗವು ನಡೆಯುವುದೆಂದೂ ಅದರ ಯಶಸ್ಸಿಗಾಗಿ ಯುಕ್ತಶಕ್ತಿಯು ಅಗತ್ಯವೆಂದೂ ತಿಳಿಸಲು ವ್ಯಕ್ತಿಗೆ ಪವಿತ್ರ ತೈಲಗಳನ್ನು ಲೇಪಿಸುವರು. ಅನಂತರ ಸೈತಾನ ಅಥವಾ ಮಿಥ್ಯ ದೇವರುಗಳ ಸಂಬಂಧವನ್ನು ತ್ಯಜಿಸುವ, ಕಥೋಲಿಕ ಶ್ರೀ ಸಭೆಯ ಪ್ರಾಮುಖ್ಯ ವಿಷಯಗಳನ್ನು ವಿಶ್ವಾಸದಿಂದ ಒಪ್ಪಿಕೊಳ್ಳುವ ವಾಗ್ದಾನವನ್ನು ವ್ಯಕ್ತಿಯು ಮಾಡಬೇಕಾಗಿದೆ. ಆದರೆ ಶಿಶುಗಳಿಗೆ ಜ್ಞಾನಸ್ನಾನವನ್ನು ನೀಡುವ ಸಂದರ್ಭಗಳಲ್ಲಿ ಶಿಶುವಿನ ಸ್ಥಾನದಲ್ಲಿ ಸಂರಕ್ಷಕರಾಗಲಿ, ಇತರರಾಗಲಿ ಆ ಕಾರ್ಯಕವನ್ನು (ನ್ಯಾಯಸ್ಥಾನಗಳಲ್ಲಿ ಎಳೆಯರ ಪರವಾಗಿ

ಅವರ ಹಿರಿಯರು ವಾದಿಸುವಂತೆ) ಮಾಡಿಕೊಳ್ಳಬೇಕಾಗಿದೆ. ಮಾತ್ರವಲ್ಲ ಹಾಗೆ ಉತ್ತರವನ್ನು ಕೊಟ್ಟವರು ಆ ಮಗುವಿನ ಆಧ್ಯಾತ್ಮಿಕ ಜೀವನ ಕ್ರಮದ ಹೊಣೆಗಾರಿಕೆಯನ್ನು ವಹಿಸುವರು.

ಅನಂತರ ಜ್ಞಾನಸ್ನಾನವನ್ನು ನೀಡುವರು. ಈ ಭವ್ಯಸ್ನಾನಕ್ಕೆ ಬೇಕಾದ ನೀರನ್ನು ವರ್ಷದಲ್ಲೆರಡು ಸಲ-ಪವಿತ್ರ ಶನಿವಾರ (Holy Saturday) ಮತ್ತು ಐವತ್ತನೆಯ ದಿನ (Pentecost) ದ ಮುನ್ನಾ ದಿನ–ಮಾತ್ರ ಪವಿತ್ರೀಕರಿಸುವರು. ಆ ನೀರಿಗೆ ಪವಿತ್ರ ಗುರುವಾರ (Monday Thursday) ದಿನದಂದು ಬಿಷಪ ಸ್ವಾಮಿಗಳಿಂದ ಹರಸಲ್ಪಟ್ಟ ತೈಲಗಳನ್ನು ಮಿಶ್ರಗೊಳಿಸುವರು.

ಜ್ಞಾನಸ್ನಾನದ ಬಳಿಕ ಆ ಸುರುವಿಗನು ತನ್ನ ಶುದ್ಧತೆಯನ್ನು ಉಳಿಸಿಕೊಂಡು ಕ್ರಿಸ್ತನು ಆದೇಶಿಸಿದ ಜೀವವನ್ನು ಅದೂ ಸಮೃದ್ಧಿಯಾಗಿ ಪಡೆಯುವಂತೆಯೂ ಆ ಮೂಲಕ ಅನಂತ ಜೀವನಕ್ಕೆ ಪಾತ್ರನಾಗುವಂತೆಯೂ ಶ್ವೇತವಸನದಿಂದ ಆಚ್ಛಾದಿಸಲ್ಪಡುವನು. ಆ ಜೀವನವನ್ನು ಪಡೆಯಲು ಶುದ್ಧಜಾಗ್ರತೆಯು ಅಗತ್ಯ. ಅದಕ್ಕಾಗಿ ಬೆಳಗುವ ಬತ್ತಿಯೊಂದನ್ನು ಆತನ ಹಸ್ತದಲ್ಲಿಡುವರು.

ಜ್ಞಾನಸ್ನಾನದ ಮುನ್ನ ವ್ಯಕ್ತಿಗೆ ಹೆಸರೊಂದನ್ನು ಇಡುವರು. ಸಾಮಾನ್ಯವಾಗಿ ಕ್ರೈಸ್ತ ಭಕ್ತನ ಹೆಸರೊಂದಾದರೂ ಇಡುವರು. ಉಳಿದ ಹೆಸರುಗಳನ್ನು ಆರಿಸಬಹುದು. ಜ್ಞಾನಸ್ನಾನದ ಬಳಿಕ ವ್ಯಕ್ತಿಯ ಜ್ಞಾನಸ್ನಾನದ ಸಂಬಂಧದಲ್ಲಿ ಸರಿಯಾದ ದಾಖಲೆಗಳನ್ನು ಇಡಲಾಗುತ್ತದೆ. ಶಿಶುಗಳ ಸಂಬಂಧದಲ್ಲಿ ಜನನದ ದಿನವನ್ನೂ ಅದರಲ್ಲಿ ಕಾಣಿಸುವುದರಿಂದ ಪ್ರಾಯ ನಿರ್ದೇಶಕ್ಕೆ ಯುಕ್ತದಾಖಲೆಯೊಂದು ಉಳಿಯುವುದು.

ಆದರೆ ಅತ್ಯಗತ್ಯ ಸಂದರ್ಭಗಳಲ್ಲಿ ಕೇವಲ ನೀರನ್ನು ಹೊಯ್ದು, ಯುಕ್ತ ಮಾತುಗಳನ್ನು ಉಚ್ಚರಿಸಿ ಈ ಸಂಸ್ಕಾರವನ್ನು ನೀಡಬಹುದು.

ಅನೇಕ ಸಂದರ್ಭಗಳಲ್ಲಿ ಜ್ಞಾನಸ್ನಾನದ ಸಂಸ್ಕಾರದ ಪ್ರಯೋಗವನ್ನು ಮಾಡಲು ಸಾಧ್ಯವಾಗದು. ಅಂತಹ ವ್ಯಕ್ತಿಗಳು ಮುಕ್ತಿಯನ್ನು ಪಡೆಯುವರೆಂದು ಶ್ರೀ ಸಭೆಯು ಬೋಧಿಸುತ್ತದೆ. ಅಂತಹ ವ್ಯಕ್ತಿಗಳು ತಮ್ಮ ಸದಿಚ್ಛೆಯ ಫಲವಾಗಿ ಜ್ಞಾನಸ್ನಾನದ ಫಲವನ್ನು ಪಡೆಯುವರು.

ಈ ರೀತಿಯ ಸಂಸ್ಕಾರವನ್ನು ಸದಿಚ್ಛೆಯ ಜ್ಞಾನಸ್ನಾನ (Baptism of Desire) ಎನ್ನುವರು. ಹೀಗೆಯೇ ಜ್ಞಾನಸ್ನಾನವನ್ನು ಸ್ವೀಕರಿಸದಿದ್ದರೂ ಧರ್ಮಕ್ಕಾಗಿ ಪ್ರಾಣಕೊಟ್ಟವನು 'ರಕ್ತದ ಜ್ಞಾನಸ್ನಾನ' (Baptism of Blood)ವನ್ನು ಪಡೆದು ಸದ್ಗತಿ ಹೊಂದುವನು. ಆದರೆ ನಿಜವಾದ ಜ್ಞಾನಸ್ನಾನವನ್ನು ಪಡೆಯಲು ಅವರು ಅರ್ಹರಾಗಿರಬೇಕು–ಅನುಕೂಲತೆಯು ಮಾತ್ರ ಇಲ್ಲದಿರಬೇಕು.

"ನನಗಾಗಿ ತನ್ನ ಜೀವವನ್ನು ಕಳೆದುಕೊಂಡವನು, ಅದನ್ನು ಪಡೆಯುವನು" (ಮತ್ತೀಯ ೧೦, ೩೯).

ದೃಢೀಕರಣ

ಇದನ್ನು ಭದ್ರಾಭ್ಯಂಗ. (Confirmation) ವೆಂದೂ ಕರೆಯುವರು. ಜ್ಞಾನಸ್ನಾನದಿಂದ ಜನ್ಮವೆತ್ತಿದ ಆಧ್ಯಾತ್ಮಿಕ ಜೀವಕ್ಕೆ ಧರ್ಮದ ಆದೇಶಗಳಂತೆ ನಡೆಯುವ ಧೈರ್ಯವಾಗಲಿ, ಬಲವಾಗಲಿ ಇರಲಾರದು. ಅದಕ್ಕಾಗಿ ದೃಢೀಕರಣವೆಂಬ ಸಂಸ್ಕಾರದ ಪ್ರಯೋಗವನ್ನು ಮಾಡುವರು. ದೃಢೀಕರಣದಿಂದ, ಅದರ ಹೆಸರೇ ತಿಳಿಸುವಂತೆ ವ್ಯಕ್ತಿಯ ಧರ್ಮದಲ್ಲಿ ದೃಢನಾಗುತ್ತಾನೆ. ಜ್ಞಾನಸ್ನಾನದಿಂದ ಶುದ್ಧನಾದ ಮಾನವನ ಆತ್ಮವು ಭಗವಂತನ ದೇಗುಲವಾಗುತ್ತದೆ. ದೃಢೀಕರಣದಿಂದಾಗಿ ಆತ್ಮದ ಆ ದೇಗುಲದಲ್ಲಿ ಭಗವಾನ್ ಪವಿತ್ರಾತ್ಮನು ಜೀವಿಸುವನು.

ಯೇಸುವು ತನ್ನ ಪುನರುತ್ಥಾನದ ಬಳಿಕ ತನ್ನ ಶಿಷ್ಯನನ್ನು ಎಲ್ಲ ದೇಶಗಳಿಗೆ ಹೋಗಿ ಸಕಲ ಜನಾಂಗಗಳಿಗೂ ತನ್ನ ಸಂದೇಶವನ್ನು ಉಪದೇಶಿಸಲು ಅಣತಿಯಿತ್ತನು. ಅದೇ ಕಾಲದಲ್ಲಿ "ನನ್ನ ಪಿತನ ಕಾಣಿಕೆಯನ್ನು ನಿಮ್ಮ ಮೇಲೆ ಕಳುಹಿಸುವೆನು. ಮೇಲಿನಿಂದ ಶಕ್ತಿಯೂ ಬರುವ ತನಕ ನಗರದಲ್ಲಿಯೇ ನೀವು ತಡೆಯಿರಿ" (ಲೂಕ ೨೪, ೪೯) ಎಂದೂ ಸೂಚನೆಯನ್ನಿತ್ತಿದ್ದನು. ಆದರೆ ನಗರದೊಳಗೆ ಕೂಡಾ ಯೇಸುವಿನ ಧರ್ಮಸಂದೇಶವನು ನೀಡಲು ಆ ಶಿಷ್ಯರು ಅಂಜಿದ್ದರು. ತಮ್ಮ ಗುರು ಯೇಸುವನ್ನು ವಿವಿಧ ಯಾತನೆಗೊಳಪಡಿಸಿ, ದುರ್ಮರಣಕ್ಕೆ ಗುರಿಪಡಿಸಿದಂತೆ ತಮ್ಮನ್ನು ನಡೆಸಬಹುದೆಂದು ಅವರು ಅಳುಕಿದ್ದರು. ಆದರೆ

ಕ್ರಿಸ್ತನ ವಿಹಾರೋಹಣದ ಬಳಿಕ ಹತ್ತನೆಯ ದಿನ (penticost) ಶಿಷ್ಯರೆಲ್ಲರೂ ದ್ವಾರಗಳನ್ನು ಭದ್ರಗೊಳಿಸಿಕೊಂಡಿರಲು ಬಿರುಗಾಳಿಯೊಂದು ಬೀಸಿದ ಸದ್ದಾಯಿತು. ಮಂದಿರವು ಕುಸಿದು ಬೀಳುವಂತಾಯಿತೆಂದು ಶಿಷ್ಯರೆಲ್ಲರೂ ಅವಾಕ್ಕಾದರು. ಅಷ್ಟರಲ್ಲಿ ಜಾಜ್ವಲ್ಯಮಾನವಾದ ಅಗ್ನಿಯ ಕೆನ್ನಾಲಿಗೆಗಳು ಮಂದಿರವನ್ನು ಪ್ರವೇಶಿಸಿದುವು. ಶಿಷ್ಯರೆಲ್ಲರೂ ಗಾಬರಿಗೊಂಡಿರಲು ಆ ಕೆನ್ನಾಲಿಗೆಗಳು ಪ್ರತಿಯೊಬ್ಬನ ತಲೆಯ ಮೇಲ್ಗಡೆಯಲ್ಲಿ ನಿಂತು ಮಾಯವಾದುವು. ಅದಾಗಲೇ ಅವರು ದೃಢರಾದರು-ದೃಢೀಕರಣವನ್ನು ಅಸಾಮಾನ್ಯರೀತಿಯಲ್ಲಿ ಅವರು ಪಡೆದರು. ಭಗವಾನ್ ಪವಿತ್ರಾತ್ಮನು ಅವರಲ್ಲಿ ನೆಲಸಿದನು. ಧರ್ಮದುರ್ಬಲರಾದ ಅವರು ಸಬಲರಾಗಿ, ಅತ್ಯುತ್ಸಾಹದಿಂದ ಧರ್ಮೋಪದೇಶಕ್ಕೆ ಹೊರಟರು. ವೈರಿಗಳಿಗವರು ಅಂಜಲಿಲ್ಲ ; ಮರಣಕ್ಕೆ ಅವರು ಹಿಂಜರಿಯಲಿಲ್ಲ : ದೇಶ ವಿದೇಶಗಳೆಂಬ ತಾರತಮ್ಯವನ್ನು ತಿಳಿಯಲಿಲ್ಲ. ಸ್ವಕೀಯ, ಪರಕೀಯರೆಂಬ ಭೇದಭಾವವು ಅವರಲ್ಲಿಗೆ ಸುಳಿಯಲಿಲ್ಲ. ರಕ್ಷಣೆಯ ಮಾರ್ಗದ ಸಂದೇಶವನ್ನು ಬಿತ್ತರಿಸಲು ಧೀರಯೋಧರಂತೆ ಅವರು ಮುಂದಾದರು.

ದೃಢೀಕರಣ ಸಂಸ್ಕಾರದಿಂದ ವ್ಯಕ್ತಿಯು ವೀರನಾಗುವನು. ಕ್ರಿಸ್ತರಾಜ್ಯನ ಧರ್ಮಯೋಧನಾಗುವನು. ತನ್ನ ಧರ್ಮಕ್ಕಾಗಿ ಪ್ರಾಣದ ಸಮೇತ ಪ್ರತಿಯೊಂದು ಇತರ ವಿಷಯವೂ ಲಘುವೆಂದು ಆ ಸೈನಿಕನು ತಿಳಿಯುವನು. ತನ್ನನ್ನು ಅಧೋಗತಿಗೆ ಸೆಳೆದೊಯ್ಯುವ ಸ್ವಾರ್ಥ ಮೊದಲಾದ ಕ್ಷುದ್ರ ಗುಣಗಳೊಡನೆ ಹೋರಾಡಿ ಉದಾತ್ತ ಗುಣಗಳ ಸ್ವೀಕಾರವನ್ನು ಅವನು ಮಾಡುವನು. ತನ್ನನ್ನು ಆ ಮಹಾವೀರನಾದ ಕ್ರಿಸ್ತನು ಆದರ್ಶದಲ್ಲಿ ಮುಂದೊತ್ತಿ ಆತನ ಆ ಜೀವವು ಇರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ಮಾಡಿಸಿಕೊಳ್ಳುವನು.

ಇಂತಹ ದೃಢೀಕರಣವು ಯೇಸುವಿನ ಶಿಷ್ಯರ ಕಾಲದಲ್ಲಿಯೇ ಪ್ರಚಾರದಲ್ಲಿತ್ತು. ಬೈಬಲಿನಲ್ಲಿ.

"ಸಮಾರಿಯವು ಭಗವತ್-ವಾಣಿಯನ್ನು ಪಡೆದುದನ್ನು ಯೆರೂಸಲೇಮಿನಲ್ಲಿದ್ದ ದೇವಪ್ರೇಷಕರು ಕೇಳಿದಾಗ, ಅವರು ಪ್ರೇತ ಮತ್ತು ಯೋಹಾನರನ್ನು ಅವರಲ್ಲಿಗೆ ಕಳುಹಿಸಿದರು. ಅಲ್ಲಿಯವರು ಸ್ವಾಮಿ

ಯೇಸುವಿನ ನಾಮದಲ್ಲಿ ಜ್ಞಾನಸ್ನಾನವನ್ನು ಪಡೆದಿದ್ದರಲ್ಲದೆ ಪವಿತ್ರಾತ್ಮನನ್ನು ಪಡೆಯದುದರಿಂದ ಆತನು ಅವರೊಡನಿರಲಿಲ್ಲ. ಆದುದರಿಂದ ಅವರು ಬಂದು ಪವಿತ್ರಾತ್ಮನು ಅವರ ಮೇಲೆ ಬರುವಂತೆ ಪ್ರಾರ್ಥಿಸಿದರು. ಆಮೇಲೆ ಅವರು ಹಸ್ತಗಳನ್ನು ಮಡಗಲು ಅವರು ಪವಿತ್ರಾತ್ಮನನ್ನು ಪಡೆದರು" (ಕಾರ್ಯ ೧೮, ೧೪-೧೭) ಎಂಬ ಮಾತುಗಳು ದೃಢೀಕರಣದ ಪ್ರಯೋಗವನ್ನು ಸ್ಪಷ್ಟಗೊಳಿಸುತ್ತವೆ. ಇದೇ ರೀತಿಯಲ್ಲಿ ಎಫಿಸುಸ್ ಎಂಬಲ್ಲಿ ಪಾವ್ಲನೂ ದೃಢೀಕರಣವನ್ನು ನೀಡಿದ ವಿಷಯವು ಲಿಖಿತವಾಗಿದೆ.

"ಪಾವ್ಲನು ಅವರ ಮೇಲೆ ಹಸ್ತಗಳನ್ನು ಮಡಗಲು ಪವಿತ್ರಾತ್ಮನು ಅವರ ಮೇಲೆ ಬಂದನು." (ಕಾರ್ಯ ೧೯, ೬) ಹೀಗೆ ಹಸ್ತಮಂಡನದ ಮೂಲಕ ಸುರುವಿಗರಲ್ಲಿ ದೃಢೀಕರಣದ ಸಂಸ್ಕಾರದ ಪ್ರಯೋಗವನ್ನು ಮಾಡುತ್ತಿದ್ದರು. ಅದೇ ಪಾವ್ಲನು "ನನ್ನನ್ನು ಕ್ರಿಸ್ತನಲ್ಲಿ ಭದ್ರಪಡಿಸುವವನು ಭಗವಂತನು. ನಿಮ್ಮನ್ನೂ ಭದ್ರಗೊಳಿಸುವವನೂ ಭಗವಂತನೇ. ನನ್ನನ್ನು ಅಭಿಷೇಕಿಸಿದವನೂ ಅವನೇ. ಆತನೇ ತನ್ನ ಮುದ್ರೆಯನ್ನು ನನ್ನಲ್ಲಿ ಬಿತ್ತಿ, ಪವಿತ್ರಾತ್ಮನು ನನ್ನ ಹೃದಯದಲ್ಲಿ ವ್ಯಾಪಿಸಿರುವಂತೆ ಮಾಡಿದನು" (೨ ಕೊರಿಂತ ೨೧, ೨೨) ಎಂದು ದೃಢೀಕರಣದ ಕುರಿತು ವಿಶದಗೊಳಿಸಿರುವನು.

ದೃಢೀಕರಣದ ಕ್ರಮ

ಹಿಂದೆ ಕೇವಲ ಹಸ್ತಮಂಡನದಿಂದ ದೃಢೀಕರಣವನ್ನು ನೀಡಿ ಪವಿತ್ರಾತ್ಮನು ವ್ಯಕ್ತಿಯಲ್ಲಿ ನೆಲಸುವಂತೆ ಮಾಡುತ್ತಿದ್ದರು. ಆದರೆ ಕ್ರಮೇಣ ಅದೊಂದು ಭವ್ಯಸಂಸ್ಕಾರವಾಗುವಂತೆ ಕ್ರಿಯೆಗಳನ್ನು ಸಂಯೋಜಿಸಿರುವರು. ಸಾಮಾನ್ಯವಾಗಿ ದೃಢೀಕರಣವನ್ನು ಬಿಷಪಸ್ವಾಮಿಗಳೇ ನೀಡುವರು. ಆದರೆ ಸಂದರ್ಭಕ್ಕನುಸಾರವಾಗಿ ದೃಢೀಕರಣದ ಪ್ರಯೋಗದ ಅಧಿಕಾರವನ್ನು ಇತರ ಪುರೋಹಿತರಿಗೂ ಜಗದ್ಗುರುಗಳು ನೀಡಬಹುದು. ಆದರೆ ಮರಣಾಸನ್ನ ಶಿಶುಗಳೂ ಈ ಸಂಸ್ಕಾರದ ಪ್ರಯೋಜನಗಳನ್ನು ಪಡೆಯುವಂತೆ ಎಲ್ಲ ಪುರೋಹಿತರೂ ಅಂತಹ ಶಿಶುಗಳಿಗೆ ನೀಡಬಹುದೆಂದು ಜಗದ್ಗುರುಗಳು ಆದೇಶವಿತ್ತಿರುವರು.

ದೃಢೀಕರಣ ಸಂಸ್ಕಾರವನ್ನು ಪಡೆಯುವಂತಹರು ಅದಕ್ಕಾಗಿ ಯುಕ್ತ ಸಿದ್ಧತೆಗಳನ್ನು ಪ್ರಾಮುಖ್ಯವಾಗಿ ಆಧ್ಯಾತ್ಮಿಕ ಸಿದ್ಧತೆಗಳನ್ನು ಮಾಡಬೇಕಾಗಿದೆ. ಅಂತಹರನ್ನು ಇತರರಿಂದ ಪ್ರತ್ಯೇಕಿಸುವರು. ಬಿಷಪ ಸ್ವಾಮಿಗಳು ಆರಂಭದಲ್ಲಿ ತಮ್ಮ ಹಸ್ತಗಳನ್ನು ಚಾಚಿ ಭಗವತ್ ಪವಿತ್ರಾತ್ಮನು ಆಗಮಿಸುವಂತೆಯೂ ತನ್ನ ವರಗಳನ್ನು ನೀಡುವಂತೆಯೂ ಪ್ರಾರ್ಥಿಸುವರು.

ಅನಂತರ ಉಮೇದ್ವಾರನ ಹೆಸರನ್ನು ಕರೆಯುವರು. ಆತನನ್ನು ಧರ್ಮಪಿತ (ಉಮೇದ್ವಾರಳಾದರೆ ಧರ್ಮಮಾತೆ) – (Sponser) ನು ಭಗವಾನ್ ಯೇಸುಕ್ರಿಸ್ತನ ಸೇನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಮುಂದೆ ತರುವನು.

ಬಿಷಪ ಸ್ವಾಮಿಗಳು ಉಮೇದ್ವಾರನ ಹೆಸರೆತ್ತಿ, ತನ್ನ ಹಸ್ತವನ್ನು ಆತನ ಮುಂದಲೆಯಲ್ಲಿ ಮಡಗಿ, ಪವಿತ್ರ ತೈಲದಿಂದ ಹಣೆಯಲ್ಲಿ ಸಿಲುಬೆಯನ್ನು ಗುರುತಿಸಿ, " ಸಿಲುಬೆಯ ಚಿಹ್ನೆಯಿಂದ ನಾನು ನಿನ್ನನ್ನು ಗುರುತಿಸುತ್ತೇನೆ, ಮತ್ತು ಪಿತನ, ಪುತ್ರನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ರಕ್ಷಣೆಯ ತೈಲದಿಂದ ದೃಢೀಕರಿಸುತ್ತೇನೆ, ತಥಾಸ್ತು ಎನ್ನುವರು. ಅನಂತರ " ಶಾಂತಿಯು ನಿನಗಿರಲಿ " ಎಂದು ಹೇಳುತ್ತ ಆತನ ಗಲ್ಲದ ಮೇಲೆ ತಟ್ಟುವರು. ಹೀಗೆಯೇ ಉಳಿದವರ ದೃಢೀಕರಣವು ನಡೆಯುವುದು. ಬಳಿಕ ಭಗವಂತನ ಕರುಣೆಯನ್ನು ಅವರು ಪಡೆಯುವಂತೆ ಪ್ರಾರ್ಥಿಸಿ, ದೃಢೀಕರಣವನ್ನು ಸ್ವೀಕರಿಸಿದವರಿಗೆ ಮುಖಮಾಡಿ ಭಗವತ್ ಪವಿತ್ರಾತ್ಮನು ಅವರಲ್ಲಿ ಬಂದು ಅವರ ಹೃದಯವು ಆತನ ದೇಗುಲವಾಗಿ ಮಾರ್ಪಡಿಸುವಂತೆ ಪ್ರಾರ್ಥಿಸುವರು. ಕೊನೆಗೆ ಶಾಸ್ತ್ರೋಕ್ತವೂ ಗಂಭೀರವೂ ಆದ ಆಶೀರ್ವಾದವನ್ನು ಮಾಡುವರು.

ಬಳಿಕ ಅವರೆಲ್ಲರೂ ಧರ್ಮಸಾರ ಮತ್ತು ಮುಖ್ಯ ಪ್ರಾರ್ಥನೆಗಳನ್ನು ಉಚ್ಚರಿಸುವರು.

ದೃಢೀಕರಣಕ್ಕಾಗಿ ಪವಿತ್ರ ತೈಲವೊಂದನ್ನು ಬಳಸುವರು. ಇದು ಒಲಿವ್ ಎಣ್ಣೆ ಮತ್ತು ಕರ್ಣಕುಂಡಲ(Balsam)ದ ಎಣ್ಣೆಗಳ ಮಿಶ್ರಣವು. ಎಣ್ಣೆಯು ಬಲದ ಸಂಕೇತವು. ಹಾಗೆ ಬಲ ಹೊಂದಿದವನು ಕ್ರಿಸ್ತನ ಧರ್ಮವನ್ನು ಜೀವನದಲ್ಲಿ ಅನ್ವಯಗೊಳಿಸಲು ಹಿಂಜರಿಯನು.

"ರಕ್ಷಣೆಗಾಗಿ ಭಗವಂತನ ಬಲವು ಅದಾಗಿರುವುದರಿಂದ ನಾನು ಸಂದೇಶದಲ್ಲಿ ಲಜ್ಜಿತನಾಗಿಲ್ಲ" (ರೋಮ ೧, ೧೬) ಎಂದು ಪಾವ್ಲನು ಹೇಳಿರುವನು.

ಶ್ರೀ ಪ್ರಸಾದ (Eucharist)

ಕ್ರೈಸ್ತರಲ್ಲಿ ವಿಶ್ವಾಸಬಲದಿಂದ ಆಧರಿಸಿಕೊಂಡು ಬರುತ್ತಿರುವ ಅತ್ಯಂತ ಮಹತ್ವಪೂರ್ಣವಾದ ಸಂಸ್ಕಾರವಿದು. ಜ್ಞಾನಸ್ನಾನ ಮತ್ತು ದೃಢೀಕರಣದ ಸಂಸ್ಕಾರಗಳು ಕಥೋಲಿಕೇತರ ಪಂಥಗಳಲ್ಲಿದೆಯಾದರೂ ಶ್ರೀಪ್ರಸಾದದ ಪ್ರಭಾವವು ಕಥೋಲಿಕರಲ್ಲಿರುವಷ್ಟು ಬೇರೆಲ್ಲಿಯೂ ಇಲ್ಲ. ಹೀಗಾಗಿ ವಿಶೇಷ ತರ್ಕಗಳಿಗೆ ಕಾರಣವಾಗಿ ಹಲವು ಪಕ್ಷಗಳು ತಲೆಯೆತ್ತಲು ಇದು ನಿಮಿತ್ತವೆನಿಸಿದೆ. ಯೇಸುವಿನ ಮಾತುಗಳ ಸತ್ಯದ ಆಧಾರವೇ ಈ ದಿವ್ಯಪ್ರಸಾದದ ಮಹತ್ವಕ್ಕೂ ಶ್ರೇಷ್ಠತಮ ಭಕ್ತಿಗೂ ಕಾರಣವಾಗಿದೆ.

ಜ್ಞಾನಸ್ನಾನದಿಂದ ಆರಂಭವಾದ ನಮ್ಮ ಆಧ್ಯಾತ್ಮಿಕ ಜೀವವು ದೃಢೀಕರಣವನ್ನು ಪಡೆದರೂ ಯುಕ್ತಾಹಾರವಿಲ್ಲದೆ ಬೆಳೆಯಲಾರದು. ಅದಕ್ಕಾಗಿ ಜನರಲ್ಲಿ 'ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ನಾನು ಬಂದೆನು' ಎಂದು ಸಾರಿದ ಭಗವಾನ್ ಯೇಸುಕ್ರಿಸ್ತನು ಮಾನವನ ಆಧ್ಯಾತ್ಮಿಕ ಬಳವಿಗೆ ಯುಕ್ತಾಹಾರ ಪಾನೀಯಗಳಾಗಿ ತನ್ನ ಮಾಂಸರಕ್ತಗಳನ್ನು ನೀಡುವುದಾಗಿ ಸಾರಿದನು. ಆದರೆ ಯೇಸುಕ್ರಿಸ್ತನು ದೈವಿಕ ಮಾನವನಾಗಿ ಅಂತಹ ವಿಷಯವೊಂದನ್ನು ನೀಡಬಹುದೆಂದು ಅವರು ತಿಳಿಯದಾದರು. ಯೇಸುವಿನ ಮಾತುಗಳನ್ನು ಸಮನ್ವಯಗೊಳಿಸಲು ಅಸಮರ್ಥರಾದ ಹಲವರು ಆತನ ಸ್ನೇಹವನ್ನೇ ತ್ಯಜಿಸಿದರು. ಅಂತಹ ಮಹತ್ವದ ಆಹಾರವನ್ನು ಕ್ರಿಸ್ತನು ಮಾತ್ರ ನೀಡಬಹುದು.

ಯೇಸುವು ಧರ್ಮೋಪದೇಶವನ್ನು ಮಾಡುತ್ತಿದ್ದಾಗ ಆತನ ವಾಗಮೃತವನ್ನು ಸವಿಯುವುದಕ್ಕಾಗಿ ಸಹಸ್ರಸಂಖ್ಯೆಯಲ್ಲಿ ಜನರು ನೆರೆಯುತ್ತಿದ್ದರು. ಯೇಸುವಿನ ಪವಾಡಗಳನ್ನು ಕಂಡು ಅವರು ಆನಂದತುಂದಿಲರಾಗುತ್ತಿದ್ದರು. ಹೀಗಿರಲು ಅದೊಂದು ದಿನ ಯೇಸುವು ತನ್ನ ಬೆಂಬಿಡದೆ ಬಂದ ಜನತೆಯು ಒಂದೆರಡು ದಿನಗಳಿಂದ ಸರಿಯಾಗಿ ಉಂಡಿರದುದನ್ನು

ತಿಳಿದನು. ಮರುದಾರಿಯಲ್ಲಿ ಹಸಿವೆಯಿಂದ ಬಳಲಿ ಆ ಜನರು ಪ್ರಾಣಾ ಪಾಯಕ್ಕೀಡಾಗಬಹುದೆಂದು ಐದು ರೊಟ್ಟಿಗಳಿಂದ ಅವರೆಲ್ಲರೂ ತೃಪ್ತ ರಾಗುವಷ್ಟು ಉಣಬಡಿಸಿದ್ದನು. ಜನತೆಯೂ ಹರ್ಷಗೊಂಡಿತು. ಆದರ ಮಾರನೆಯ ದಿನ ಯೇಸುವು ಕಾಫರ್ನಾವುಂ ಎಂಬಲ್ಲಿ ತತ್ವಪ್ರತಿಪಾದನ ಮಾಡುತ್ತಿದ್ದನು. ಆದರೆ ಮುನ್ನಾದಿನದ ಪವಾಡದಿಂದ ಆಕರ್ಷಿತರಾದ ಹಲವರು ಆತನನ್ನು ಕಾಣದೆ, ಅರಸುತ್ತ ಕಾಫರ್ನಾವುಂಗೆ ಬಂದರು ಹಿಂದಿನ ದಿನ ಪವಾಡದ ಸವಿನೆನಪು ಅವರಲ್ಲಿತ್ತು. ಅಂತಹ ಪವಾಡ ವಿನ್ನೊಂದನ್ನು ಕಾಣಬಂದ ಆ ಜನರನ್ನು ಉದ್ದೇಶಿಸಿ ಯೇಸುವು :

"ನಾನೇ ಜೀವದಾಯಕ ರೊಟ್ಟಿಯು. ನಿಮ್ಮ ಪೂರ್ವಜರು ಅರಣ್ಯ ದಲ್ಲಿದ್ದಾಗ ಮಾನ್ನಾ* ತಿಂದಿದ್ದರೂ ಅಳಿದರು. ಆದರೆ ಪರಲೋಕದಿಂದ ಇಳಿದುಬರುವ ರೊಟ್ಟಿಯನ್ನು ತಿಂದವನು ಸಾಯಲಾರನು. ಪರಲೋಕ ದಿಂದ ಇಳಿದುಬರುವ ರೊಟ್ಟಿಯು ನಾನೇ. ಈ ರೊಟ್ಟಿಯನ್ನು ತಿಂದವನು ಸದಾಕಾಲ ಜೀವಿಸುವನು. ನಾನು ಕೊಡುವ ರೊಟ್ಟಿಯೇ ನನ್ನ ಮಾಂಸ ವಾಗಿದೆ. ಅದನ್ನು ಜಗತ್ತಿನ ಜೀವಕ್ಕಾಗಿ ನಾನು ನೀಡುವೆನು" (ಯೋಹಾನ ೬.೪೮–೫೧)

ಎಂದು ಹೇಳುತ್ತ ತಾನು ಸ್ಥಾಪಿಸುವ ಶ್ರೀಪ್ರಸಾದದ ಸೂಚನೆಯನ್ನು ಒಂದು ವರ್ಷದ ಮುಂಚಿತವಾಗಿಯೇ ಕೊಟ್ಟನು. ಆದರೆ ಆ ಮಾತುಗಳ ಅಂದಿನ ಆ ಶ್ರಾವಕರಿಗೆ ಸರಿದೋರಲಿಲ್ಲ. ಅವರು ತಮ್ಮೊಳಗೆ ಗೊಣಗ ಟ್ಟುತ್ತ ಆತನ ಮಾಂಸದ ಭೋಜನವನ್ನು ಮಾಡುವ ಅಸಮಗ್ರತೆಯನ್ನು ಚರ್ಚಿಸುತ್ತಿರಲು, ಯೇಸುವು ಅದನ್ನು ತಿಳಿದು :

"ನಿಜ ನಿಜವನ್ನೆ ನಿಮಗೆ ಹೇಳುತ್ತೇನೆ: ನೀವು ಮಾನವಪುತ್ರನ ಮಾಂಸವನ್ನು ತಿನ್ನದೆ, ಆತನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮಲ್ಲಿ ಜೀವವಿರಲಾರದು. ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿ ಯುವವನು ನಿತ್ಯಜೀವನವನ್ನು ಹೊಂದುವನು. ಆತನನ್ನು ಅಂತ್ಯ

* ಇಸ್ರೇಲರು ಅರಣ್ಯದಲ್ಲಿರುವಾಗ ಭಗವಂತನು ಅವರಿಗೊದಗಿಸಿದ ಅದೊಂದು ಆಹಾರವಸ್ತು.

ದಿನದಂದು ನಾನು ಎಬ್ಬಿಸುವೆನು. ಏಕೆಂದರೆ ನನ್ನ ಮಾಂಸವು ನಿಜವಾದ ಉಣಿಸು: ನನ್ನ ರಕ್ತವು ನಿಜವಾದ ಪಾನೀಯವು. ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿರುತ್ತಾನೆ; ನಾನು ಅವನಲ್ಲಿರುತ್ತೇನೆ. ಜೀವಸ್ವರೂಪನಾದ ಪಿತನು ನನ್ನನ್ನು ಕಳುಹಿಸಿರುವುದರಿಂದ ನಾನು ಪಿತನಲ್ಲಿ ಜೀವಿಸುತ್ತೇನೆ. ಅಂತೆಯೇ ನನ್ನನ್ನು ತಿನ್ನುವವನು ನನ್ನಲ್ಲಿ ಜೀವಿಸುವನು" (ಯೋಹಾನ ೬, ೫೪-೫೮) ಎಂದು ವಿಶದಗೊಳಿಸಿದನು.

ಈ ಮಾತುಗಳನ್ನು ಯೇಸುವು ತನ್ನ ಕೊನೆಯ ವಿದಾಯ ಭೋಜನ ಕಾಲದಲ್ಲಿ, ತನ್ನ ಮರಣದ ಮುನ್ನಾ ದಿನದಂದು, ನಡೆಸಿದ ಕಾರ್ಯದೊಡನೆ ಸಮನ್ವಯಗೊಳಿಸಬೇಕಾಗಿದೆ. "ಅವರು ಭೋಜನದಲ್ಲಿರುವಾಗ ಯೇಸುವು ರೊಟ್ಟಿಯನ್ನೆತ್ತಿ ಹರಸಿ, ಮುರಿದು ತನ್ನ ಶಿಷ್ಯರಿಗೆ ನೀಡುತ್ತ 'ಕೊಳ್ಳಿರಿ ಮತ್ತು ತಿನ್ನಿರಿ; ಇದುವೆ ನನ್ನ ದೇಹವಾಗಿದೆ' ಎಂದನು. ಅನಂತರ ಅರ್ಘ್ಯಪಾತ್ರೆಯನ್ನೆತ್ತಿ, ವಂದನೆಗಳನ್ನರ್ಪಿಸಿ, ಅವರಿಗೆ ನೀಡುತ್ತ, 'ಇದೆಲ್ಲವನ್ನು ಕುಡಿಯಿರಿ; ಹಲವರ ಅಪರಾಧಗಳ ವಿಮೋಚನೆಗಾಗಿ ಸುರಿದ ನವ ಸಂಧಿಯ ನೆತ್ತರಿದು' ಎಂದನು (ಮತ್ತೇಯ ೨೬, ೨೬-೨೮) ಎಂದು ಮತ್ತೇಯನು ತನ್ನ ಕಥನದಲ್ಲಿ ನಿರೂಪಿಸಿರುವನು. ಅದೇ ವಿಚಾರವನ್ನು ಲೂತನು:

"ರೊಟ್ಟಿಯನ್ನೆತ್ತಿಕೊಂಡು ವಂದನೆಗಳನ್ನರ್ಪಿಸಿ, ಮುರಿದು ಅವರಿಗೆ ನೀಡುತ್ತ "ನಿಮಗಾಗಿ ನೀಡಿದ ನನ್ನ ದೇಹವಿದು. ನನ್ನ ಸ್ಮರಣೆಗಾಗಿ ಇದನ್ನು ಮಾಡಿರಿ" ಎಂದನು. ಅದೇ ರೀತಿಯಲ್ಲಿ ಅರ್ಘ್ಯಪಾತ್ರೆ (Chalice) ಯನ್ನೆತ್ತಿಕೊಂಡು ಭೋಜನಾನಂತರ, ನಿಮಗಾಗಿ ಸುರಿಸುವ ನವಸಂಧಿಯ ನನ್ನ ನೆತ್ತರಿನ ಅರ್ಘ್ಯಪಾತ್ರೆಯಿದು" ಎಂದನು (ಲೂಕ ೨೨, ೧೯-೨೦)

ಈ ರೀತಿಯಲ್ಲಿ ಉಳಿದವರೂ ನಿರೂಪಿಸಿರುವರು. ಯೇಸುಕ್ರಿಸ್ತನ ಈ ಕಾರ್ಯದ ಬಿಂದು ವರ್ಷಕ್ಕಿಂತಲೂ ಹಿಂದೆ ಸೂಚಿಸಿದ ಮಾತುಗಳ ಅರ್ಥವು ನಮಗೀಗ ಸ್ಪಷ್ಟವಾಗುವುದು. ರೊಟ್ಟಿ ಮತ್ತು ದ್ರಾಕ್ಷೆಯ

ರಸದ ರೂಪಗಳಲ್ಲಿ ಭಗವಾನ್ ಯೇಸುಕ್ರಿಸ್ತನ ಮಾಂಸ ಮತ್ತು ರಕ್ತವನ್ನು ಶ್ರೀಪ್ರಸಾದವಾಗಿ ಕಥೋಲಿಕರು ಸೇವಿಸುವರು.

ಯೇಸುವಿನ ಶಿಷ್ಯರು ತಮಗಿತ್ತ ಆಣತಿಯನ್ನು ಕಾರ್ಯರೂಪದಲ್ಲಿ ತಂದರು. ಸಾಮಾನ್ಯ ಆಹಾರವಸ್ತುಗಳಾದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಯೇಸುವಿನ ಮಾಂಸ–ರಕ್ತಗಳಾಗಿ ಪರಿವರ್ತಿಸಿದರು. ಈ ರೀತಿಯಲ್ಲಿ ಯೇಸುವಿನ ದಿವ್ಯಸ್ಮರಣೆಯನ್ನು ತೋರಿದರು. ಈ ಕುರಿತು ಪಾವ್ಲನು:

" ನಾವು ಹರಸುತ್ತಿರುವ ಆಶೀರ್ವಾದದ ಅರ್ಘ್ಯಪಾತ್ರೆಯು ಕ್ರಿಸ್ತನ ನೆತ್ತರಿನ ಉಣಿಸಲ್ಲವೇ? ನಾವು ಮುರಿಯುತ್ತಿರುವ ರೊಟ್ಟಿಯು ಸ್ವಾಮಿಯ ದೇಹದ ಸ್ವೀಕರಣವಲ್ಲವೇ?" ೧ ಕೊರಿಂತ ೧೦, ೧೬) ಎಂದು ದಿವ್ಯ ಪ್ರಸಾದದ ಮಾಹಾತ್ಮ್ಯೆಯನ್ನು ಸೂಚಿಸುತ್ತ ಭಕ್ತಿಪರವಶತೆಯಿಂದ ಕ್ರೈಸ್ತಜನತೆಗೆ ತಿಳಿಸಿರುವನು. ಇದೇ ವಿಷಯವಾಗಿ ಕ್ರಿ. ಶ. ೧೦೭ರಲ್ಲಿ ಸತ್ತ ಇಗ್ನಾಸಿಯುಸ್ ಎಂಬವನ ಮಾತುಗಳೂ ಗಣನೀಯವಾಗಿವೆ:

ಅಬ್ರಹಾಂ ಮತ್ತು ದಾವೀದನ ಸಂತತಿಯವನಾಗಿರುವ, ಭಗವತ್ ಪುತ್ರನಾಗಿರುವ ಯೇಸುಕ್ರಿಸ್ತನ ಮಾಂಸವಾಗಿರುವ ಜೀವದಾಯಕವಾದ ಈ ರೊಟ್ಟಿ. ಮೋಕ್ಷದ ಈ ರೊಟ್ಟಿ, ಭಗವಂತನ ಈ ರೊಟ್ಟಿ ನನಗೆ ಬೇಕಾಗಿದೆ. ಪಾನೀಯವಾಗಿ ಅವಿನಾಶ ಪ್ರೇಮವೂ ಅನಂತಜೀವವೂ ಆಗಿರುವ ಆತನ ನೆತ್ತರು ನನಗೆ ಬೇಕಾಗಿದೆ".

ಪ್ರೇಮದ ಸಂಸ್ಕಾರ (Sacrament Of Love)

ಭಗವಾನ್ ಯೇಸುಕ್ರಿಸ್ತನ ಮಾಂಸ ಮತ್ತು ರಕ್ತವನ್ನು ರೊಟ್ಟಿ ಮತ್ತು ದ್ರಾಕ್ಷೆಯ ರಸದ ರೂಪಗಳಲ್ಲಿ ಸ್ವೀಕರಿಸುವುದನ್ನು ಪ್ರೇಮದ ಸಂಸ್ಕಾರವೆಂದೂ ಕರೆಯುವರು. ಹಾಗೆ ಹೆಸರು ಬರಲು ಕಾರಣವೂ ಇದೆ.

ಆದಿದಂಪತಿಗಳ ಪತನದ ದುಷ್ಫಲವು ಲಿಖಿತ ಮಾನವ ಕುಲದ ಅಧಃಪತನವನ್ನು ತಂದ ವಿಚಾರವನ್ನು ನಾವು ತಿಳಿದಿರುವೆವು. ಆದರಿಂದಾಗಿ ಮಾನವಕುಲವು ಜ್ಞಾನಾಂಧಕಾರದಲ್ಲಿ ಉಳಿಯಿತು. ಪರಿಶುದ್ಧ ಪ್ರಭಾವಮಯ ವಾತಾವರಣವು ಅನ್ಯಾಯದ ಪ್ರಕ್ಷುಬ್ಧ ವಾತಾವರಣದಿಂದ

ಮುಸುಕಲ್ಪಟ್ಟಿತು. ಅದಕ್ಕಾಗಿ ಜನತೆಯನ್ನು ಉದ್ಧಾರಗೊಳಿಸಿ ಸತ್ಯ ಮಾರ್ಗಪ್ರದರ್ಶನವನ್ನು ಮಾಡಿ, ಪಾಪಪಾಶದಿಂದ ಮುಕ್ತಗೊಳಿಸಿ ಮುಕ್ತಿಗೆ ಯೋಗ್ಯರಾಗುವಂತೆ ಮಾಡಲು ನ್ಯಾಯ ಸೂರ್ಯನಾದ ಯೇಸು ಕ್ರಿಸ್ತನು ಕಾರ್ಯತತ್ಪರನಾದನು. ತನ್ನ ತತ್ವಪ್ರದರ್ಶನಕ್ಕಾಗಿ, ಮಾನವ ಸಂತತಿಯ ಅಭ್ಯುದಯಕ್ಕಾಗಿ ಶಿಲುಬೆಯ ದುರ್ಮರಣವನ್ನು ಸ್ವೀಕರಿಸಿದನು. ಇತಿಹಾಸದಲ್ಲಿ ಯಾರೂ ಕಂಡರಿಯದ ಮಿತಿಯನ್ನೂ ಮೀರಿದ ಸಂಕಷ್ಟಗಳನ್ನು ಪಡೆದು ಯಾವ ಸಮಾಜದಲ್ಲಿಯೂ ಕಾಣದ ಪರಿತ್ಯಾಗ ವನ್ನು ಸಹಜ, ಸತತಸಾಧನೆ ಮತ್ತು ಅವಿರತ ಪ್ರಾರ್ಥನೆಗಳಿಂದ ಆ ದೇವ ಪುತ್ರನು ಮಾನವ ಕುಲವು ಕಳೆದುಕೊಂಡಿದ್ದ ಸತ್ಯಶ್ರೀಯನ್ನೂ ಬೋಧಿಸಿ, ಆದರ ಉದ್ಧಾರವೆಸಗಿದನು. ಜಗತ್ತಿಗೆ ಪಾಪದ ನೆಲೆಗಟ್ಟನ್ನು ನಾಶ ಮಾಡುವ ಸದುಪಾಯಗಳನ್ನು ಬೋಧಿಸಿ, ಜೀವನ ಸಮುದ್ರದ ತರುಣೋ ಪಾಯವನ್ನು ಪ್ರದರ್ಶಿಸಿ ತಾರಕನೆನಿಸಿದನು. ಇಷ್ಟಾದರೂ ಯೇಸುವಿಗೆ ತೃಪ್ತಿಯಾಗಲಿಲ್ಲ.

"ತನ್ನ ಲೋಕದಲ್ಲಿರುವ ತನ್ನವರೇ ಆದವರನ್ನು ಪ್ರೀತಿಸುತ್ತ, ಅವನು ತುದಿಯವರೆಗೂ ಪ್ರೀತಿಸಿದನು." (ಯೋಹಾನ, ೧೩, ೧) ಎಂದು ಯೋಹಾನನು ಯೇಸುವಿನ ಕೊನೆಯ ಭೋಜನದ ವಿವರಗಳನ್ನೀಯುವ ಮುನ್ನ ತನ್ನ ಕಥನದಲ್ಲಿ ತಿಳಿಸಿರುವನು. ಯೇಸುವು ತಾನು ಪಡೆವ ದುರ್ಮರಣವನ್ನು ತಿಳಿದಿದ್ದನು. ಅನಂತರ ತಾನು ಪುನರುತ್ಥಾನ ಹೊಂದಿ ಮೋಕ್ಷಕ್ಕೇರಿದ ಬಳಿಕ ತನ್ನ ಅಸ್ತಿತ್ವವು ಈ ಲೋಕದಲ್ಲಿ ಇರದೆ ಹೋಗಿ ಆತನು ಸಂರಕ್ಷಿಸಿದ ನಾವೆಲ್ಲರೂ ಅನಾಥರಾಗುವೆವೆಂದು ಆತನು ತಿಳಿದಿದ್ದನು. ಆದರೆ ಹಾಗೆ ಆಗಿರಲು ಆತನು ಬಯಸಲಿಲ್ಲ. ಮಾನವ ಸಮಾಜದ ಉದ್ಧಾರಕ್ಕೆ ಮಾಡಬಹುದಾದ ಸರ್ವವನ್ನೂ ಅವನು ಮಾಡಿದ ಬಳಿಕ ಇನ್ನೇನು ಮಾಡಬಹುದೆಂದು ಯಾರೂ ಕೇಳಬಹುದು! ಆತನು ಗೊಲ್ಗೊಥಾದಲ್ಲಿ ಸಮರ್ಪಿಸಿದ ಆತ್ಮಯಜ್ಞವು ಒಮ್ಮೆಗೆ ಮುಗಿಯಲಿತ್ತು. ಆ ಯಜ್ಞಕಾರ್ಯದ ಫಲವನ್ನು ಸದಿಚ್ಛೆಯ ಸಕಲ ಮಾನವರಿಗೆ ವಿತರಣೆ ಗೊಳಿಸಲು ಶ್ರೀಸಭೆಯೆಂಬ ಮಾತೆಯನ್ನು ಆತನು ಕರುಣಿಸಿದ್ದನಾದರೂ ಆತನ ಯಜ್ಞಕಾರ್ಯವು ಅಂದಿಗೆ ಮುಗಿದುಹೋಗಲು ಪ್ರತಿಭಾಸಂಪನ್ನ

ನಾದ ಅವನು ಸಿದ್ಧನಾಗಿರಲಿಲ್ಲ. ತಾನು ಯಾರ ಉದ್ಧಾರಕ್ಕಾಗಿ ಜನ್ಮವೆತ್ತಿದನೊ ಅವರ ಮಧ್ಯದಲ್ಲಿ ನಿಂತು, ತಾನು ಅರ್ಪಿಸಿದ ಆತ್ಮಬಲಿದಾನವನ್ನೂ ಆ ಸ್ವಮೇಧ (Self Sacrifice)ವನ್ನು ಸತತವಾಗಿ ಜಗದಂತ್ಯದವರೆಗೂ ಮಾಡುವ ಉಪಾಯವೊಂದನ್ನು ತೋರಿದನು. ತಾನು ಸ್ಥಾಪಿಸಿದ ಪವಿತ್ರಪ್ರಸಾದದ ರೂಪದಲ್ಲಿ ಆತನು ಈ ಲೋಕದಲ್ಲಿ ನೆಲೆಸಿದನು. ಅದೇ ರೂಪದಲ್ಲಿ ತನ್ನ ಆತ್ಮಾಪಹರಣವನ್ನು ಮಾಡುವ ವಾಗ್ದಾನವಿತ್ತನು. ಗೊಲ್ಗೊಥಾದಲ್ಲಿ ಯೇಸುವು ತನ್ನನ್ನೇ ನಿಜರೂಪದಲ್ಲಿ ಬಲಿಯಾಗಿ ಸಮರ್ಪಿಸಿರುವನಾದರೆ, ಇಲ್ಲಿ ಅದೇ ಯೇಸುಕ್ರಿಸ್ತನು ತನ್ನ ಪ್ರತಿನಿಧಿ ಪುರೋಹಿತನ ಮೂಲಕ ರೂಪಾಂತರದಿಂದ ಸಮರ್ಪಿಸುವನು. ಅದು ರಕ್ತಾರಕ್ತ ಬಲಿಯಾದರೆ ಇದು ರಕ್ತವಿಳಿಯದ ಬಲಿದಾನವಾಗಿರುವುದು

ಇಷ್ಟೆಲ್ಲವನ್ನೂ ಯೇಸುವು ತನ್ನ ಪ್ರೇಮದ ಕುರುಹಾಗಿ ಮಾಡಿದನು. ಶ್ರೀಪ್ರಸಾದದಂತಹ ಸ್ವರ್ಗೀತೆಯ ಪುದುವಟ್ಟನ್ನು ನಮಗಿತ್ತ ಯೇಸುವಿನ ಪ್ರೇಮದ ಅಗಾಧತೆಯನ್ನು ನಾವರಿಯಬೇಕು. ಆ ದಿವ್ಯಪ್ರಸಾದವೊಂದಿಲ್ಲದಿರುತ್ತಿದ್ದರೆ ಕ್ರೈಸ್ತಸಮಾಜವು ಪ್ರಾಪಂಚಿಕ ವಿಷಯಗಳ ಬಹುಬಗೆಯ ಸೆಳೆತಗಳಿಂದಾಗಿ ತೊಂದರೆಗೀಡಾಗುತ್ತಿತ್ತು. ಆ ಪ್ರಸಾದವನ್ನು ಸಮರ್ಪಕವಾದ ಭಕ್ತಿಯಿಂದ ಸ್ವೀಕರಿಸಿದರೆ ಆಧ್ಯಾತ್ಮಿಕ ಬಲವನ್ನೂ ದೈಹಿಕ ಶಕ್ತಿಯನ್ನೂ ನೀಡುವುದೆಂದು ಇತಿಹಾಸವೂ ತೋರಿಸಿಕೊಟ್ಟಿದೆ. ದಿವ್ಯಪ್ರಸಾದವು ಗೋಧಿಯ ಹಿಟ್ಟಿನಿಂದ ಮಾಡಿದ ರೊಟ್ಟಿಯೆನ್ನಬಹುದು. ಗೋದಿಗೆ ಬೇರಾವುದನ್ನೂ ಬೆರಸುವುದಿಲ್ಲ. ಸುಮಾರು ೧೫೦ ಮಂದಿಗೆ ಕೊಡುವ ಪ್ರಸಾದದ ಭಾಗಗಳ ಒಟ್ಟು ಭಾರವು ಕೇವಲ ಒಂದು ತೊಲೆ ಮಾತ್ರ. ಬೆಲೆಯೂ ತೊಲೆಯೊಂದಕ್ಕೆ ಕೇವಲ ಇಪ್ಪತ್ತೈದು ಪೈಸೆ ಯಷ್ಟಿರುತ್ತದೆ.

ಇಂತಹ ಉಜ್ವಲ ಮಹಿಮೆಗಳಿರುವ ದಿವ್ಯಪ್ರಸಾದವನ್ನು ಯೇಸುವಿನ ಆದೇಶಕ್ಕೆ ವ್ಯತಿರಿಕ್ತವಾಗಿ ಸ್ವೀಕರಿಸುವುದು ಕರ್ತವ್ಯವಿಮುಖತೆಯೆಂದು ಕ್ರೈಸ್ತರು ತಿಳಿಯುವರು. ಧರ್ಮತತ್ವಗಳನ್ನು ತನ್ನ ನಿತ್ಯಜೀವನದಲ್ಲಿ ಪ್ರತಿಬಿಂಬಿಸಲ್ಪಡುವ ವ್ಯಕ್ತಿಯು ಈ ದಿವ್ಯಪ್ರಸಾದವನ್ನು ಆಗಾಗ ಸ್ವೀಕರಿಸುವನು. ಆದರೂ ದಿನಕ್ಕೊಂದು ಬಾರಿಗಿಂತ ಅಧಿಕ

ವಾಗಿ ಸ್ವೀಕರಿಸಲಾಗುವುದಿಲ್ಲ. ಅದನ್ನು ಸ್ವೀಕರಿಸಲು ಅನುಸರಿಸ ಬೇಕಾದ ಕೆಲವು ವಿಧಿಗಳನ್ನು ನಿಶ್ಚಯಿಸಿರುವರು. ಆ ನಿಯಮಗಳು ಪ್ರಥಮಾವಲೋಕನದಲ್ಲಿ ಆತಂಕಗಳೆಂದು ತೋರಿದರೂ ಭಕ್ತಿಪೂರ್ವಕ ವಾಗಿ ಸ್ವೀಕರಿಸಲು ಬಯಸುವವನು ನೈತಿಕಜೀವನವನ್ನು ಸರಳಸತ್ಯ ಮಾರ್ಗದಲ್ಲಿ ಮುನ್ನಡೆಸಲು ಅವೇ ಶಕ್ತವಾಗುವುವು. ಆದುದರಿಂದಲೇ ಈ ದಿವ್ಯಪ್ರಸಾದವನ್ನು ಸಕ್ರಮವಾಗಿ ಸ್ವೀಕರಿಸುತ್ತ ಬಂದ ಭಕ್ತಜನರು ನಿಶ್ಚಯವಾಗಿಯೂ ಮೋಕ್ಷವನ್ನು ಸೇರುವರೆಂದು ಪ್ರಚಾರ ಮಾಡುವುದು ಯೋಗ್ಯವೇ ಆಗಿದೆ. ಪ್ರತಿಯೊಂದು ಸ್ವೀಕಾರವು ಭಗವಂತನ ಕರುಣಾ ಪ್ರವಾಹದ ನಿಧಿಯೇ ಆಗಿರುವುದರಿಂದ ಆ ಆಶ್ವಾಸನೆಯು ವಿಶ್ವಸ ನೀಯವೂ ಆಗಿದೆ.

"ಕಷ್ಟಪಡುವವರೇ ಹೊರೆಹೊತ್ತವರೇ ಸರ್ವರೂ ನನ್ನೆಡೆಗೆ ಬನ್ನಿರಿ, ನಾನು ನಿಮ್ಮನ್ನು ನವಚೇತನಗೊಳಿಸುವೆನು" (ಮತ್ತಾಯ ೧೧, ೧೮)

"ಯಾರು ಅಯೋಗ್ಯತೆಯಿಂದ ಈ ರೊಟ್ಟಿಯನ್ನು ತಿನ್ನುವನೊ, ಅಥವಾ ಸ್ವಾಮಿಯ ಈ ಅಪ್ರ್ಯಪಾತ್ರೆಯನ್ನು ಕುಡಿಯುವನೊ ಅವನು ಸ್ವಾಮಿಯ ದೇಹ ಮತ್ತು ರಕ್ತಗಳಿಗೆ ಅಪರಾಧಿಯಾಗುವನು" (೧ ಕೊರಿಂತ ೧೧, ೨೭)

"ಎಷ್ಟು ಸಲ ಈ ರೊಟ್ಟಿಯನ್ನು ತಿನ್ನುತ್ತ, ಈ ಅರ್ಘ್ಯ ಪಾತ್ರೆಯನ್ನು ಕುಡಿಯುವಿರೊ ಅಷ್ಟು ಸಲ ಸ್ವಾಮಿಯ ಮರಣವನ್ನು ನೀವು ಪ್ರದರ್ಶಿಸು ವಿರಿ" (೧ಕೊರಿಂತ ೧೧, ೨೬)

ಶ್ರೀ ಪೂಜೆ (Holy Mass)

ಗೋಧಿ ರೊಟ್ಟಿ ಮತ್ತು ದ್ರಾಕ್ಷೆಯ ರಸದ ರೂಪಗಳಲ್ಲಿ ಭಗವಾನ್ ಯೇಸುಕ್ರಿಸ್ತನ ಮಾಂಸ ಹಾಗೂ ರಕ್ತಗಳನ್ನು ಶ್ರೀ ಪ್ರಸಾದವಾಗಿ ಸ್ವೀಕರಿಸುವ ವಿಚಾರದ ವಿವೇಚನೆಯನ್ನು ಮಾಡಿದೆವು. ಹಾಗೆ ಶ್ರೀ ಪ್ರಸಾದವನ್ನು ಹರಸಲು ಶ್ರೀ ಪೂಜೆಯೆಂಬ ಕಾರ್ಯವಿದೆ. ಕಥೋಲಿಕರ ಭಕ್ತಿಕಾರ್ಯಗಳಲ್ಲಿ ಶ್ರೀಪೂಜೆಯು ಮುಖ್ಯವಾದುದು. ಪ್ರತಿ ಭಾನುವಾರ

ಗಳಲ್ಲಿ ಮಾತ್ರವಲ್ಲ ಕೆಲವು ಪರ್ವ ದಿನಗಳಲ್ಲಿ ಪ್ರತಿಯೊಬ್ಬನೂ ಶ್ರೀ ಪೂಜೆಯಲ್ಲಿ ಸಹಕರಿಸಬೇಕೆಂದು ವಿಧಿಯಿದೆ. ನಿತ್ಯವು ಸಹಕರಿಸ ಬೇಕೆಂದು ಭಕ್ತಜನರನ್ನು ಕರೆಯಲಾಗುತ್ತದೆ. ಸಂದರ್ಭಾನುಕೂಲತೆ ಗಳಿದ್ದವರು ಅದರಿಂದ ತಪ್ಪಿಸಿಕೊಳ್ಳುವುದಿಲ್ಲ.

ಪರಮತೀಯನೊಬ್ಬನು ಶ್ರೀ ಪೂಜಾ ಕಾಲದಲ್ಲಿ ಕಥೋಲಿಕ ದೇವಾಲಯದಲ್ಲಿರಲು ಪ್ರಯತ್ನಿಸಿದರೆ, ಅಲ್ಲಿ ನೆರೆದವರು ಮಂಡಿಯೂರು ವುದನ್ನೂ, ಎದ್ದೇಳುವುದನ್ನೂ, ನಮಸ್ಕರಿಸುವುದನ್ನೂ ನೋಡುವನಲ್ಲದೆ ಸಾಮೂಹಿಕವಾಗಿ ಪ್ರಾರ್ಥನೆಗಳನ್ನೂ, ಕೀರ್ತನೆಗಳನ್ನೂ ಹೇಳುವುದನ್ನೂ ಕೇಳುವನು. ಆವನಿಗೆ ಅಲ್ಲಿ ಅದೊಂದು ಬಗೆಯ ಕಾಯಕವು ನಡೆಯುವು ದೆಂಬ ಭಾವನೆಯು ಬರದಿರದು.

ಶ್ರೀ ಪೂಜೆಯೆಂಬುದು ಹಲವು ಪ್ರಾರ್ಥನೆಗಳ ಸರಣಿಯಾಗಲಿ. ಕೀರ್ತನೆಗಳ ಪಠನವಾಗಲಿ ಅಲ್ಲ. ಅದೊಂದು ಕ್ರಿಯೆ. ಹಾಗಾಗಿ ಅದರಲ್ಲಿ ವಿಧಾನವೇ ಮುಖ್ಯವಾಗಿದೆ. ಪ್ರಾರ್ಥನೆಗಳೂ ಕೀರ್ತನೆಗಳೂ ಇವೆ. ಆದರೆ ಅವೆಲ್ಲವೂ ಆ ಪೂಜಾ ವಿಧಾನಕ್ಕೆ ಅನುಗುಣವಾಗಿ ಸಂಯೋ ಜಿಸಲ್ಪಟ್ಟಿವೆ. ಪ್ರಾರ್ಥನೆ ಹಾಗೂ ಕೀರ್ತನೆಗಳಲ್ಲಿ ಹೆಚ್ಚಿನ ಭಾಗಗಳನ್ನು ಬೈಬಲಿನಲ್ಲಿ ಕಾಣಬಹುದು.

ಕಥೋಲಿಕರು ಶ್ರೀಪೂಜೆಯಲ್ಲಿ ಯೇಸುವಿನ ಕೊನೆಯ ಭೋಜನದ ಭಾಗವನ್ನು ಪುನರಾವರ್ತಿಸುವರು. ಇದುವೆ ಶ್ರೀಪೂಜಾ ವಿಧಾನದ ಕೇಂದ್ರ ವಿಷಯವು. ಹಾಗೆ ಹರಸಲ್ಪಟ್ಟ ರೊಟ್ಟಿಯನ್ನು ಶ್ರೀಪ್ರಸಾದ ವಾಗಿ ಭಕ್ತಜನರಿಗೆ ನೀಡುವರು.

ಶ್ರೀಪೂಜೆಯ ಉಳಿದ ಕ್ರಿಯಾಕಲಾಪಗಳು ಕೇಂದ್ರ ವಿಷಯಕ್ಕೆ ಪೂರಕಗಳಾಗಿರುವುವು. ಆ ಕೇಂದ್ರ ವಿಷಯವನ್ನು ಭಕ್ತಿ, ಕಲೆ, ರೂಪ, ರೀತಿಗಳೇ ಮೊದಲಾದುವುಗಳಿಂದ ಅದೊಂದು ಭವ್ಯ ಕ್ರಿಯಾ ವಿಧಾನ ವಾಗಿರುವಂತೆ ಶ್ರೀ ಸಭೆಯು ರೂಪಿಸಿದೆ. ಉಪಭಾಗಗಳನ್ನು ಕಳೆದರೂ ಕೇಂದ್ರ ವಿಷಯವು ಶ್ರೀ ಪೂಜೆಯಾಗಿ ಉಳಿಯುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಕ್ರೈಸ್ತ ವಿವಿಧ ಪಂಥಗಳಲ್ಲಿ ಕಥೋಲಿಕರು ಸಂಖ್ಯಾಬಲದಲ್ಲಿಯೂ

ಧರ್ಮಸಂಬಂಧವಾದ ಪ್ರತ್ಯಕ್ಷ ಕಾರ್ಯಗಳಲ್ಲಿಯೂ ಇತರರಿಗಿಂತ ಮುಂದಿರುವರು. ಅವರ ಯಾವತ್ತೂ ಆಚರಣೆಯು ವಿಶಿಷ್ಟವಾದೊಂದು ಅರ್ಥವನ್ನೊಳಗೊಂಡಿದೆ. ಶ್ರೀಪೂಜಾ ವಿಧಾನದಲ್ಲಿಯೂ ಗೂಡಾರ್ಥ ವಿರುವ ಹಲವು ವಿಷಯಗಳಿವೆ. ಅವುಗಳಿಗೆ ಬಾಹ್ಯರೂಪವೊಂದಿದೆ.

ಬಾಹ್ಯರೂಪದ ಸಿದ್ಧತೆಗಾಗಿ ವಿಧಿಯುಕ್ತವಾಗಿ ಅಧಿಕಾರಹೊಂದಿದ ಪುರೋಹಿತನು ಕೆಲವು ವಸನಗಳನ್ನು ತೊಡುವನು. ಅವೆಲ್ಲವೂ ಯೇಸುವಿನ ಸಂಕಷ್ಟಮಯ ಕೊನೆಗಾಲದ ವಿಷಯಗಳಲ್ಲಿ ಕೆಲವನ್ನು ಸ್ಮರಣೆಗೆ ತರುತ್ತವೆ. ಕೊನೆಯ ವಸನವಾಗಿ ಧರಿಸಿಕೊಳ್ಳುವ (Chasuble) ಕವಚವು ಮುಂಭಾಗದಲ್ಲಿಯೂ ಹಿಂಭಾಗದಲ್ಲಿಯೂ ನಿಲ್ಲುವುದು. ಬೆನ್ನಮೇಲೆ ನಿಲ್ಲುವ ಈ ಮೇಲಂಗಿಯ ಮೇಲೆ ಹಿರಿದೊಂದು ಸಿಲುಬೆಯ ಚಿಹ್ನೆಯಿದೆ. ಇದು ತನ್ನ ಸಿಲುಬೆಯನ್ನು ಹೊತ್ತು ಆತ್ಮಾಹುತಿಗಾಗಿ ವಧ್ಯಸ್ಥಾನದೆಡೆಗೆ ಗಮಿಸುವ ಏಸುವಿನ ಸ್ಮರಣೆಯನ್ನು ಮಾಡಿಸುವುದು. ಈ ರೀತಿಯ ಪುರೋಹಿತನು ಅರ್ಘ್ಯಪಾತ್ರೆಯನ್ನೂ ಅದಕ್ಕೆ ಸಂಬಂಧಿಸಿ ವಸ್ತುವಿಷಯ ಗಳನ್ನೂ ಎತ್ತಿಕೊಂಡು ಸಹಾಯಕರೊಡನೆ ಪೂಜಾಪೀಠಡೆಡೆಗೆ ಬರುವನು.

ಪೂಜಾ ಪೀಠ (Altar)ವು ಸ್ವಲ್ಪ ಎತ್ತರವೂ ಉದ್ದವೂ ಆಗಿರುವ ಒಂದು ಮೇಜು ಎನ್ನಬಹುದು. ಅದರ ಮಧ್ಯಭಾಗದಲ್ಲಿ ಶ್ರೀಪ್ರಸಾದ ವನ್ನು ಪೂಜಾನಂತರವೂ ಭದ್ರವಾಗಿರಿಸುವ ಪೆಟ್ಟಗೆ (Tabernacle) ಇದೆ. ಅದರ ಮೇಲ್ಗಡೆ ಸಿಲುಬೆಗೇರಿಸಲ್ಪಟ್ಟ ಯೇಸುವಿನ ಪ್ರತಿಮೆ (erneifix) ಇರುವುದು. ಇಬ್ಬದಿಗಳಲ್ಲಿಯೂ ಮಯಣದ ಬತ್ತಿಗಳನ್ನೂ ಹೂಗಳನ್ನೂ ಇಟ್ಟು ಅಲಂಕರಿಸುವರು. ಪೂಜಾಪೀಠದ ಸಮೀಪ ದಲ್ಲಿ ಪೂಜೆಗೆ ಉಪಯೋಗಿಸುವ ಕೆಲವು ಉಪಕರಣಗಳನ್ನಿಡುವ ಪೀಠ (Gredence Table) ಇರುವುದು.

ಪೂಜೆಯ ಕಾಲದಲ್ಲಿ ಬಳಸುವ ವಿವಿಧ ಪ್ರಾರ್ಥನೆಗಳನ್ನೂ ಶ್ಲೋಕ ಗಳನ್ನೂ ವಚನಗಳನ್ನೂ ಕ್ರಮ ಪ್ರಕಾರವಾಗಿ ವ್ಯವಸ್ಥೆಗೊಳಿಸಲ್ಪಟ್ಟ ಪುಸ್ತಕ (Missal)ಇದೆ. ಅದರಲ್ಲಿ ವರ್ಷದ ಪ್ರತಿದಿನಕ್ಕೂ ಆಚರಿಸುವ ಸಂತನ ಪರ್ವದಿನದ ಉಲ್ಲೇಖವಿದ್ದು ಮಹಾಪರ್ವದಿನಗಳಿಗೂ ಭಾನು

ವಾರ ಮೊದಲಾದ ತಾರೀಕು ಬದಲಿಸಿ ಬರುವ ದಿನಗಳಿಗೂ ಪ್ರತ್ಯೇಕ ವಾಗಿ ವ್ಯವಸ್ಥೆಯೂ ಇದೆ. ಇದೇ ಪುಸ್ತಕದಲ್ಲಿ ವಿವಿಧ ಆಚರಣೆಗಳ ರೀತಿಯೂ ಸಂಗ್ರಹಿತವಾಗಿದೆ.

ಪೂಜೆಯ ಕಾಲದಲ್ಲಿ ಬಳಸುವ ವಸನಗಳಲ್ಲಿ ಕೆಲವು ನಿತ್ಯ ಶ್ವೇತ ವರ್ಣದವು. ಆದರೆ ಬಾಹ್ಯತಮ ವಚನಗಳಿಗೆ ಆಯಾ ದಿನದ ಪರ್ವಕ್ಕೆ ಅನುಸಾರವಾಗಿ ವಿವಿಧ ವರ್ಣಗಳನ್ನು ನಿಶ್ಚಯಿಸಿರುವರು. ಭಗವಂತ, ಯೇಸುಕ್ರಿಸ್ತ, ದೇವಮಾತೆ ಹಾಗೂ ಕೆಲವು ಬ್ರಹ್ಮಚಾರಿ–ಬ್ರಹ್ಮಚಾರಿಣಿ ಗಳ ಪರ್ವದಿನಗಳಲ್ಲಿ ಶ್ವೇತವರ್ಣವನ್ನೂ; ಧರ್ಮಕ್ಕಾಗಿ, ನ್ಯಾಯಕ್ಕಾಗಿ ರಕ್ತವನ್ನು ಸುರಿಸಿ, ಪ್ರಾಣವಿತ್ತವರ ಪರ್ವದಿನಗಳಲ್ಲಿ ರಕ್ತವರ್ಣವನ್ನೂ; ಸಾಮಾನ್ಯವಾಗಿ ಭಾನುವಾರಗಳಲ್ಲಿ ಹರಿದ್ವರ್ಣವನ್ನೂ; ಪ್ರಾಯಶ್ಚಿತ್ತದ ದಿನಗಳಲ್ಲಿ ನೇರಳೆ ಬಣ್ಣವನ್ನೂ ದುಃಖದ ಕಾಲಗಳಲ್ಲಿ ಕರಿಬಣ್ಣವನ್ನೂ ಬಳಸಲಾಗುತ್ತದೆ. ಆದರೆ ಸಂಭ್ರಮವಾಗಿ ಆಚರಿಸುವಾಗ ಶ್ವೇತವರ್ಣದ ಬದಲು ಅರಿಸಿನ ಬಣ್ಣ ಅಥವಾ ಬಂಗಾರದ ಬಣ್ಣವನ್ನೂ ಬಳಸುವು ದುಂಟು.

ಪೂಜಾರಂಭದಲ್ಲಿ ಪುರೋಹಿತನು ತನ್ನ ಸಹಕಾರಿಗಳ ಸಮನ್ವಯ ದಲ್ಲಿ ದೈನ್ಯ ಹಾಗೂ ಶೋಕದ ವಚನಗಳನ್ನೂ ಉಚ್ಚರಿಸುವನು. ಅನಂತರ ಪೀಠವನ್ನು ಸಮೀಪಿಸಿ, ದೈನಿಕ ಪರ್ವಕ್ಕೆ ಸಂಬಂಧಿಸಿದ ಸೂತ್ರ ವಚನಗಳನ್ನೋದುವನು. ತರುವಾಯ ಭಗವದಾನಂದವನ್ನು ವ್ಯಕ್ತ ಗೊಳಿಸುವ (ಯೇಸುವಿನ ಜನನ ಕಾಲದಲ್ಲಿ ಕೇಳಿಸಿದ) ಕೀರ್ತನೆಯೂ ಬಳಿಕ ಕ್ರಿಸ್ತ ಶಿಷ್ಯರು–ಪ್ರೇಕ್ಷಕರು ಬರೆದ ನಿರೂಪಗಳ ಭಾಗವೂ ತರುವಾಯ ಸುವಾರ್ತೆಯ ಭಾಗವೂ ಓದಲಾಗುವುವು. ಅನಂತರ ಕ್ರೈಸ್ತರು ವಿಶ್ವಾಸ ವಿಡುವ ಧರ್ಮ ವಿಷಯಗಳ ಸಾರದ ಪಠನೆಯು ನಡೆಯುವುದು. ಆ ಮೇಲೆ ಪ್ರಧಾನ ಕಾರ್ಯಾಂಗಕ್ಕೆ ಸಿದ್ಧತೆಗಳಾಗುವುವು. ಬಳಿಕ ಪ್ರಧಾನ ಕಾರ್ಯಭಾಗವು ನಡೆಯುವುದು.

ಪ್ರಧಾನ ಕಾರ್ಯದ ಅಂಗವಾಗಿ ಪುರೋಹಿತನು ಶ್ರೀಪ್ರಸಾದ ವನ್ನು ಎರಡು ರೂಪಗಳಲ್ಲಿ ಸ್ವೀಕರಿಸುವನು. ಅನಂತರ ಭಕ್ತ ಜನರಿಗೆ ರೂಪವೊಂದರಲ್ಲಿ ಮಾತ್ರ ಶ್ರೀಪ್ರಸಾದದ ವಿತರಣೆಯಾಗುವುದು.

ಕೊನೆಯದಾಗಿ ಪೂಜಾಂತ್ಯದ ಪ್ರಾರ್ಥನೆಗಳೂ ಆಶೀರ್ವಾದವೂ ನಡೆಯುವುವು. ಸಂಭ್ರಮವಾಗಿ ಆಚರಿಸುವಾಗ ಕೆಲವು ಭಾಗಗಳನ್ನು ಪುರೋಹಿತನೂ, ಕೆಲವನ್ನು ಜನರೂ ಹಾಡುವರು.

ಪೂಜಾರ್ಥ ವಿಚಾರ

ಪೂಜೆಯ ಕಾಲದಲ್ಲಿ ಕೇಂದ್ರ ವಿಭಾಗದ ಸಿದ್ಧತೆಯಾಗಿ ಪುರೋಹಿತನು ಗೋದಿಯ ರೊಟ್ಟಿ ದ್ರಾಕ್ಷಾರಸಗಳನ್ನು ಭಗವಂತನಿಗರ್ಪಿಸುವನು. ಪೂಜೆಯ ಕಾಲದ ಪ್ರಾರ್ಥನೆಗಳೆಲ್ಲವೂ ಬಹುವಚನದಲ್ಲಿವೆ. ಪೂಜೆಯ ಪ್ರಧಾನಕರ್ತೃವು ಪುರೋಹಿತನೇ ಆದರೂ ಅಲ್ಲಿ ನೆರೆದ ಜನರ ಸಹಕಾರದ ಸ್ಮರಣೆಯಿದೆ. ಮಾತ್ರವಲ್ಲ ಪುರೋಹಿತನ ವಚನಗಳಿಗೆ ಸಹಕಾರದ ಪ್ರತ್ಯುತ್ತರವೆಂಬಂತೆ ಜನತೆಯೂ ಹೇಳುವ ವಚನಗಳಿವೆ. ಹಲವೆಡೆಗಳಲ್ಲಿ ವಲ 'ಅಸ್ತು' 'ತಥಾಸ್ತು' ಎಂಬರ್ಥವಿರುವ ಪದವೊಂದರಿಂದಲೇ ಆ ಹಕಾರವು ಸೂಚಿಸಲ್ಪಡುವುದು. ಆದುದರಿಂದ ಅಲ್ಲಿ ನೆರೆದವರೆಲ್ಲರೂ–ಪುರೋಹಿತನೊಡನೆ ಜನತೆ–ತಮ್ಮ ಐಹಿಕ ಜೀವನದ ಆಧಾರವಾದ ಆಹಾರ ಪಾನೀಯ ವಸ್ತುಗಳನ್ನು ಶಾಂತಿ ಹಾಗೂ ಐಕ್ಯಗಳ ದ್ಯೋತಕವಾಗಿ ಅರ್ಪಿಸುವರು. ಇದನ್ನು ಕಾಣಿಕೆಯೆನ್ನುವರು. ಆ ಅರ್ಪಣೆಯ ಕಾಲದಲ್ಲಿ ಹೇಳುವ ವಚನಗಳಿಗೆ ದಾಸೋಕ್ತಿ (Offertory) ಎನ್ನುವರು.

ಅನಂತರ ಪುರೋಹಿತನು ರೊಟ್ಟಿಯನ್ನೆತ್ತಿ "…. ಇದು ನನ್ನ ದೇಹವು" ಎಂದೂ ದ್ರಾಕ್ಷಾರಸದ ಅರ್ಘ್ಯ ಪಾತ್ರೆಯನ್ನೆತ್ತಿ" "…. ನನ್ನ ನೆತ್ತರಿದು" ಎಂದೂ ಯೇಸುವು ತನ್ನ ಕೊನೆಯ ಭೋಜನ ಕಾಲದಲ್ಲಿ ಸ್ಥಾಪನೆ ಮಾಡಿದನು. ತನ್ನ ಸೇವಕರಿಗೆ ಹಾಗೆಯೇ ಮಾಡಬೇಕೆಂದು ಆಣತಿಯಿತ್ತನು. ಶ್ರೀ ಪ್ರಸಾದದ ವಿತರಣೆಯ ಕಾಲದಲ್ಲಿ ಆತನು

"ಇದನ್ನು ನನ್ನ ಸ್ಮರಣೆಗಾಗಿ ಮಾಡಿರಿ" (ಲೂಕ ೨೨, ೧೯) ಎಂದು ಆಣತಿಯಿತ್ತಿರುವನು. ಯೇಸುವು ಏನು ಮಾಡಬೇಕೆಂದು ಹೇಳಿರುವನೋ ಅದನ್ನು ನೇರವಾಗಿಯೇ ತಿಳಿಸಿರುವನೆಂದು ಕೆಥೋಲಿಕರು ವಿಶ್ವಾಸದಿಂದ ತಿಳಿಯುತ್ತಾರೆ–ಯಾವ ಬಗೆಯ ವ್ಯಂಗ್ಯಾರ್ಥದಲ್ಲಿಯೂ ಅಲ್ಲ.

ಯೇಸುವು ಶ್ರೀಪ್ರಸಾದದ ಸ್ಥಾಪನೆಯ ಕಾಲದಲ್ಲಿ ಹೇಳಿದ

ಮಾತುಗಳನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು: ಆತನು ರೊಟ್ಟಿಯು ನ್ನೆತ್ತಿ 'ಇದು ನನ್ನ ದೇಹವನ್ನು ಸೂಚಿಸುತ್ತದೆ' ಎಂದಾಗಲಿ, 'ಇದು ನನ್ನ ದೇಹದಂತೆ ಇರುವುದು' ಎಂದಾಗಲಿ,'ಇದು ನಿಮ್ಮ ವಿಶ್ವಾಸ ಬಲದಿಂದ ನನ್ನ ದೇಹವಾಗುವುದು' ಎಂದಾಗಲಿ 'ಇದನ್ನು ಸ್ವೀಕರಿಸಿ ದಾಗ ನನ್ನ ದೇಹವು ನಿಮ್ಮಲ್ಲಿ ಬಂದಂತಹ ಪರಿಣಾಮವಾಗುವುದು' ಎಂದಾಗಲಿ ಹೇಳದೆ, "ಇದು ನನ್ನ ದೇಹವು, ನನ್ನ ನೆತ್ತರಿದು" ಎದೇ, ಹೇಳಿರುವನು. ಆದುದರಿಂದ ಶ್ರೀ ಪ್ರಸಾದದಲ್ಲಿ ಭಗವಾನ್ ಏಸಂಕ್ರಿಸ್ತ ನಿರುವನೆಂದು ವಿಶ್ವಾಸವಿಡುವರು. ಮೊದಲೊಮ್ಮೆ ಉದ್ಧರಿಸಿದ ಮಾತು ಗಳನ್ನುಪುನಃ ಪರಿಶೀಲಿಸಿಕೊಳ್ಳೋಣ' :

"ನಾನೇ ಜೀವದಾಯಕ ರೊಟ್ಟಿಯಾಗಿರುವೆನು.... ...... ಜಗತ್ತಿನ ಜೀವಕ್ಕಾಗಿ ನೀಡುವ ರೊಟ್ಟಿಯು ನನ್ನ ಮಾಂಸವೇ ಆಗಿರುತ್ತದೆ. ಮಾನವ ಪುತ್ರನ ಮಾಂಸವನ್ನು ತಿನ್ನದೆ, ಆತನ ರಕ್ತವನ್ನು ಕುಡಿಯದೆ, ಹೋದರೆ ನಿಮ್ಮಲ್ಲಿ ಜೀವವು ಇರಲಾರದು........ನನ್ನ ಮಾಂಸವೇ ನಿಜ ವಾದ ಉಣಿಸು, ನನ್ನ ರಕ್ತವೇ ನಿಜವಾದ ಪಾನೀಯವು" (ಯೋಹಾನ ೬, ೪೮, ೯೨, ೫೬)

ಆದುದರಿಂದ ಶ್ರೀಪ್ರಸಾದವಿರುವಲ್ಲಿ ಕಥೋಲಿಕರು ಭಗವಂತನಿ ಗರ್ಪಿತವಾಗುವ ಗೌರವವನ್ನು ನೀಡುತ್ತಾರೆ. ಶ್ರೀಪ್ರಸಾದದ ಸನ್ನಿಧಾನಕ್ಕೆ ಬಂದಾಗ ಅಥವಾ ಅಲ್ಲಿಂದ ಹೋಗುವಾಗ ಮಂಡಿಯೂರಿ ಕೊಳ್ಳುತ್ತಾರೆ. ಮಾತ್ರವಲ್ಲ ಶ್ರೀಪ್ರಸಾದದ ಮುಂದುಗಡೆ ನಂದಾದೀಪ ವೊಂದು ಉರಿಯುತ್ತದೆ.

ಯುಕ್ತವಚನಗಳ ಉಚ್ಚಾರದಿಂದ ಭಗವಾನ್ ಯೇಸುಕ್ರಿಸ್ತನ ಮಾಂಸ-ರಕ್ತಗಳಾಗಿ ಪರಿಣಮಿಸಿದ ರೊಟ್ಟಿ-ದ್ರಾಕ್ಷಾರಸಗಳನ್ನು- ಅರ್ಥಾತ್ ಯೇಸುಕ್ರಿಸ್ತನನ್ನು, ಪುರೋಹಿತನು ಭಗವಂತನಿಗರ್ಪಿಸುವನು. ಭಗವತ್‌ಪಿತನಿಗೆ ಯುಕ್ತಕಾಣಿಕೆಯಾಗಿ ಆತನ ಪುತ್ರನನ್ನೆ ಸಮರ್ಪಿಸಿ ದಂತಾಯಿತು. ಆದುದರಿಂದ ಶ್ರೀಪೂಜೆಯು ಗೊಲ್ಗೊಥಾದಲ್ಲಿ ನಡೆದ ಯೇಸುವಿನ ಮರಣದ-ಆ ಬಲಿದಾನದ ಪುನರಾವರ್ತನೆಯು. ಪ್ರಸಾದದ

ವಿತರಣೆಯಿಂದ ಭಗವಂತನು ಭಕ್ತರ ಬಳಿಗೆ ಸೇರುವನು. ಭಗವಂತನೇ ತನ್ನನ್ನು ದಾನವಿತ್ತಂತಾಗುವುದು.

ಆದುದರಿಂದ ಶ್ರೀಪೂಜೆಯು ನೂತನವಾದೊಂದು ಬಲಿಯರ್ಪಣೆ ಯಾಗಿದೆ. ಇಲ್ಲಿ ತ್ರಿವಿಧವಾದ ಕಾಣಿಕೆಗಳು ಭಗವದರ್ಪಿತವಾಗುವುವು.

೧. ಜೀವ, ಐಕ್ಯ, ಶಾಂತಿಗಳ ದ್ಯೋತಕವಾಗಿ ರೊಟ್ಟಿಯೂ, ದ್ರಾಕ್ಷಾರಸವೂ.

೨. ಶ್ರೇಷ್ಠ ಪುರೋಹಿತನೂ ಪರಿಶುದ್ಧ ಬಲಿಯೂ ಆದ ಯೇಸುಕ್ರಿಸ್ತನೂ

೩. ಜಗದ್ರಕ್ಷಕನಾದ ಯೇಸುವಿನೊಡನೆ ನಾವೂ ಅಖಿಲ ಮಾನವ ಜಗತ್ತೂ.

ಹೀಗಿರುವ ಶ್ರೀ ಪೂಜೆಯು ಮಾನವಜನಾಂಗದ ಹಿತಕ್ಕಾಗಿ ರಕ್ಷಕನಾಗಿ ಜನಿಸಿದ ಯೇಸುಕ್ರಿಸ್ತನು ಸ್ವೀಕರಿಸಿದ ಸಂರಕ್ಷಣದಾಯಕ ಮರಣದ ಹಾಗೂ ಆತನ ಆ ಕೊನೆಯ ಭೋಜನದ ಪ್ರತೀಕವೆಂದು ನಾವಿಷ್ಟರಲ್ಲಿ ತಿಳಿಯಬಹುದು.

ಪ್ರಾಯಶ್ಚಿತ್ತದ ಸಂಸ್ಕಾರ (Penance)

ಜ್ಞಾನಸ್ನಾನದಿಂದ ಆರಂಭವಾದ ನಮ್ಮ ಆಧ್ಯಾತ್ಮಿಕ ಜೀವವು ದೃಢೀಕರಣದಿಂದ ದೃಢತೆಯನ್ನು ಪಡೆದು ಭಗವತ್ ಪವಿತ್ರಾತ್ಮನ ದೇಗುಲವಾಗುವುದೆಂಬುದನ್ನು ನಾವು ತಿಳಿದಿರುವೆವು. ಆ ಆಧ್ಯಾತ್ಮಿಕ ಜೀವದ ಸರ್ವಾಂಗ ಪೋಷಣೆಗೆ ಯುಕ್ತಾಹಾರವಾಗಿ ಶ್ರೀಪ್ರಸಾದವೆಂಬ ಶ್ರೇಷ್ಠ ಸಂಸ್ಕಾರದ ಸ್ಥಾನವನ್ನೂ ನಾವು ನೋಡಿದೆವು. ಇಷ್ಟಾದರೂ ಮಾನವನು ತನ್ನ ಸ್ವತಂತ್ರ ಇಚ್ಛಾಶಕ್ತಿಯನ್ನೂ ಸ್ವರ್ಗೀಯಪಿತನ ಪುತ್ರನಾಗು ವಂತಹ ಪ್ರೇಮದ ಮಾರ್ಗವನ್ನಾಗಲಿ, ತದ್ವಿರುದ್ಧಾಚರಣೆಯಿಂದ ಆತನಲ್ಲಿ ವಿಮುಖತೆಯನ್ನು ಪ್ರದರ್ಶಿಸುವ ವಿರೋಧಮಾರ್ಗವನ್ನಾಗಲಿ ಆರಿಸಿ ಕೊಳ್ಳಬಹುದು. ಆದರೆ ಮಾನವನು ಭಗವಂತನ ಪಿತೃವಾತ್ಸಲ್ಯವನ್ನೂ ಧಿಕ್ಕರಿಸಿ ತನ್ನ ಸಹಜಸ್ವಭಾವದ ಅದೂ ಅಧೋಗುಣಗಳ ಮಾರ್ಗವನ್ನು ಸ್ವೀಕರಿಸಿ, ಭಗವಂತನಲ್ಲಿ ಅಪರಾಧಿಯೆನಿಸುವನು–ಆದರಿಂದಾಗಿ ಆತನಲ್ಲಿ

ದೈವಿಕ ಜೀವವು ಕೊನೆಗೊಳ್ಳುವುದು. ದೈಹಿಕ ಜೀವವು ಕೊನೆಗೊಂಡಾಗ ದೈಹಿಕ ಮರಣವು ಪರಿಣಮಿಸುವಂತೆ, ಆಧ್ಯಾತ್ಮಿಕ ಜೀವವು ಪಾತಕಾಚರಣೆಯಿಂದ ಕಳೆದುಹೋದಾಗ ಆಧ್ಯಾತ್ಮಿಕ ಮರಣವೆನ್ನಬಹುದು.

ಆದರೆ ಭಗವಂತನು ಕರುಣಾನಿಧಿಯು. ಪತನಗೊಂಡ ಮಾನವ ಕುಲದ ಉದ್ಧಾರಕ್ಕೆ ತನ್ನ ಏಕಮಾತ್ರ ಪುತ್ರನನ್ನು ಕರುಣಿಸಿ ಆತನ ಮೂಲಕ ಯುಕ್ತ ರಕ್ಷಣೆಯನ್ನು ಲೋಕದ ಸಕಲ ಸದಿಚ್ಛೆಯ ಮಾನವರಿಗೊದಗಿಸಿದನು. ಆದುದರಿಂದ ಪಾತಕಾಚರಣೆಯಿಂದ ಭಗವತ್. ಮಿತ್ರತ್ವವನ್ನು ಕಳೆದುಕೊಂಡ ಮಾನವನಿಗೆ ಮನಃಪೂರ್ವಸ್ಥಿತಿಯನ್ನು ಪಡೆಯಲು ಯುಕ್ತಮಾರ್ಗವೊಂದನ್ನು ಕ್ರಿಸ್ತನು ಸಂಸ್ಥಾಪಿಸಿರುವನು. ಅದುವೆ ಪ್ರಾಯಶ್ಚಿತ್ತದ ಸಂಸ್ಕಾರವು. ಲೋಕದಲ್ಲಿ ತನ್ನ ಅಪರಾಧವನ್ನೊಪ್ಪಿಕೊಂಡು, ಪಶ್ಚಾತ್ತಾಪಪಟ್ಟು, ಯುಕ್ತ ಪ್ರಾಯಶ್ಚಿತ್ತವನ್ನು ಮಾಡುವ ಅದಾವ ವ್ಯಕ್ತಿಗೂ ಕ್ಷಮೆಯು ದೊರೆಯುವುದಾದರೆ, ಕರುಣಾಸಾಗರನಾದ ಭಗವಂತನು ಪಶ್ಚಾತ್ತಾಪಪೂರ್ವಕವಾಗಿ ತನ್ನ ಅಪರಾಧವನ್ನೊಪ್ಪಿಕೊಂಡು, ಪುನಃ ಆ ರೀತಿಯಲ್ಲಿ ಆಚರಿಸದಿರುವ ದೃಢನಿರ್ಧಾರದಿಂದ ಮುಂದೆ ಬರುವ ಮಾನವ ವ್ಯಕ್ತಿಯನ್ನು ನಿಶ್ಚಯವಾಗಿಯೇ ಕ್ಷಮಿಸುವನು. ಆದರೆ ಅನುಶಾಹಿಯು ಮಾತ್ರ ಸದುದ್ದೇಶಪೂರಿತನಾಗಿರಬೇಕು. ಪಾತಕಗಳನ್ನು ಕ್ಷಮಿಸುವುದು ಯಾರೆಂಬ ಪ್ರಶ್ನೆ ಬರುತ್ತದೆ! ಅಪರಾಧಗಳ ಕ್ಷಮೆಯನ್ನು ಭಗವಂತನೊಬ್ಬನು ಮಾತ್ರ ನೀಡಬಹುದು. ಯೇಸುವು ಮಹಾಪಾತಕಗಳಿಂದ ರೋಗಿಗಳಾದವರನ್ನೂ ಗುಣಪಡಿಸುವಾಗ ಅವರ ಪಾತಕಗಳನ್ನು ಮೊದಲು ಕ್ಷಮಿಸಿ ಅವರಿಗೆ ಪೂರ್ಣಾರೋಗ್ಯವನ್ನು ಕರುಣಿಸಿದ ಸಂದರ್ಭಗಳನ್ನು ಸುವಾರ್ತೆಯ ಕಥನಕಾರರು ನಿರೂಪಿಸಿರುವರು. ಆದರೆ ಯೇಸುವು ಪಾತಕಗಳನ್ನು ಕ್ಷಮಿಸಿ ಭವದಾಧಿಕಾರವನ್ನೂ ದುರುಪಯೋಗಗೊಳಿಸುತ್ತಿದ್ದನೆಂದು ಯೆಹೂದ್ಯರು ಆಕ್ಷೇಪಿಸಿದ್ದರು. ಆದರೆ ಆ ಆಕ್ಷೇಪವನ್ನು ಕ್ಷುಲ್ಲಕವೆಂದು ತೋರಿಸುವುದಕ್ಕಾಗಿ ಭಗವಂತನಿಗೆ ಮಾತ್ರ ಸಾಧ್ಯವಾದ ಪವಾಡಗಳನ್ನು ಮಾಡಿ ಅವರ ಬಾಯಿಮುಚ್ಚಿಸಿದನು.

ಪಾತಕಿಗಳಿಗೆ ಕ್ಷಮೆಯನ್ನು ನೀಡುವ ಅಧಿಕಾರವನ್ನು ಯೇಸುವು

ತನ್ನ ಶಿಷ್ಯರಿಗೆ ನೀಡಿರುವನು. ಪುನರುತ್ಥಾನಗೊಂಡ ಬಳಿಕ ಆತನು ತನ್ನ ಶಿಷ್ಯರಿಗೆ ದರ್ಶನವಿತ್ತಾಗ ಆ ಸಂದರ್ಭವು ಬರುತ್ತದೆ.

“ ಅದೇ ದಿನ, ವಾರದ ಮೊದಲನೆಯ ದಿನ, ಸಂಜೆ ಶಿಷ್ಯರು ಯೆಹೂದ್ಯರ ಭಯದಿಂದ ತಾವು ದ್ವಾರಗಳನ್ನು ಮುಚ್ಚಿಕೊಂಡಿರುವಲ್ಲಿ ಯೇಸುವು ಬಂದು ಅವರ ಮಧ್ಯದಲ್ಲಿ ನಿಂತು ‘ಶಾಂತಿಯು ನಿಮಗಿರಲಿ’ ಎಂದನು. ಹಾಗೆ ಹೇಳಿದ ಬಳಿಕ ಅವರಿಗೆ ತನ್ನ ಹಸ್ತಗಳನ್ನೂ ಪಕ್ಷವನ್ನೂ ತೋರಿಸಿದನು. ಶಿಷ್ಯರು ಸ್ವಾಮಿಯನ್ನು ನೋಡಿದುದರಿಂದ ಹರ್ಷಗೊಂಡರು. ‘ಶಾಂತಿಯು ನಿಮಗಿರಲಿ’ ಎಂದು ಯೇಸುವು ಪುನಃ ನುಡಿದು ನನ್ನನ್ನು ಪಿತನು ಕಳುಹಿಸಿದಂತೆ ನಿಮ್ಮನ್ನು ನಾನು ಕಳುಹಿಸುತ್ತೇನೆ’ ಎಂದನು. ತರುವಾಯ ಅವರ ಮೇಲ್ಗಡೆ ಶ್ವಾಸವನ್ನೂದಿ ‘ಪವಿತ್ರಾತ್ಮನನ್ನು ಸ್ವೀಕರಿಸಿರಿ ; ಯಾರ ಪಾತಕಗಳನ್ನು ನೀವು ಕ್ಷಮಿಸುವಿರೊ ಅವು ಕ್ಷಮಿಸಲ್ಪಡುವುವು. ಯಾವ ಪಾತಕಗಳನ್ನು ಉಳಿಸುವಿರೊ ಅವು ಉಳಿಸಲ್ಪಡುವುವು” ಎಂದನು (ಯೋಹಾನ ೨೦, ೧೯–೨೩).

ಆದುದರಿಂದ ಮಾನವನಿಗೆ ಪಾತಕಗಳ ಕ್ಷಮೆಯನ್ನು ನೀಡುವ ಅಧಿಕಾರವು ಬಂದಿತು–ಅದರಿಂದಾಗಿ ಮಾನವನು ಭಗವಂತನ ಸ್ನೇಹವನ್ನು ಆತನ ಪುತ್ರಸ್ಥಾನವನ್ನು ಪಡೆಯಲು ಸುಲಭವಾಯಿತು. ಅವರಲ್ಲಿ ‘ಜೀವವಿರುವಂತೆ ಅದೂ ಸಮೃದ್ಧಿಯಾಗಿರುವಂತೆ ಯೇಸುವು ಬಂದವನು– ಆ ಕಾರ್ಯವು ಪೂರ್ಣವಾಗಲು ಆತನು ಶ್ರೀಸಭೆಯನ್ನು ಸಂಸ್ಥಾಪಿಸಿದನು–ಆ ಭಗವತ್ ಪವಿತ್ರಾತ್ಮನನ್ನು ಅದರ ಜೀವವಾಗಿ ಕರುಣಿಸಿದನು. ಮಾತ್ರವಲ್ಲ ತಾನೂ

“ಎಲ್ಲ ದಿನಗಳಲ್ಲೂ ಕಾಲಾಂತ್ಯದವರೆಗೂ ಇದೋ ನಾನು ನಿಮ್ಮೊಡನಿದ್ದೇನೆ” (ಮತ್ತೇಯ ೨೮, ೧೯–೨೦) ಎಂಬ ವಾಗ್ದಾನವನ್ನು ಕಾರ್ಯರೂಪದಲ್ಲಿರಿಸಿರುವನು. ಅವನೇ ಪಶ್ಚಾತ್ತಾಪಪಟ್ಟ ಪಾತಕಿಗಳಿಗೆ ಭಗವತ್‌ಪಿತನ, ಭಗವತ್‌ಪುತ್ರನ ಮತ್ತು ಭಗವತ್‌ಪವಿತ್ರಾತ್ಮನ ಪವಿತ್ರ ನಾಮದಲ್ಲಿ ಶಾಂತಿದಾನವನ್ನು ನೀಡಲು ಪ್ರಾಯಶ್ಚಿತ್ತದ ಸಂಸ್ಕಾರವನ್ನು ನೀಡಿರುವನು. ಜ್ಞಾನಸ್ನಾನದಿಂದ ಪವಿತ್ರೀಕರಿಸಲ್ಪಟ್ಟ ನಮ್ಮ ಆತ್ಮವು ಲೌಕಿಕ ವಿಷಯಗಳಿಂದ ಸೆಳೆಯಲ್ಪಟ್ಟು ಪಾತಕದ ಕೆಸರನ್ನು

ಅಂಟಿಸಿಕೊಂಡಿರಬಹುದು. ದೈಹಿಕ ಕಲ್ಮಷಗಳನ್ನು ನೀಗಲು ಸ್ನಾನವನ್ನು ಕೊಳ್ಳುವಂತೆ, ರೋಗಬಾಧೆಯಿಂದ ಬಳಲುವವನು ಔಷಧೋಪಚಾರವನ್ನು ಸ್ವೀಕರಿಸುವಂತೆ, ಆತ್ಮದ ಕೊಳೆಯನ್ನು ನೀಗಲು ಈ ದಿವ್ಯ ಕರ್ಮವು ಅಗತ್ಯವಾಗಿದೆ. ನೀರಲ್ಲಿ ಮುಳುಗಿ ಎದ್ದವರೆಲ್ಲರೂ ಶುದ್ಧರಲ್ಲ; ದೇಹದ ಕೊಳೆಯನ್ನು ನೀಗಲು ಪ್ರಯತ್ನಿಸುವುದು ಮುಖ್ಯವು-ಮಾತ್ರವಲ್ಲ, ಪುನಃ ಕೊಳೆಯಾಗದಂತೆ ಎಚ್ಚರದಿಂದಿರಲೂ ಬೇಕು. ಹಾಗೆಯೇ ಪ್ರಾಯಶ್ಚಿತ್ತದ ಸಂಸ್ಕಾರದಿಂದ ನೀಗಿಕೊಂಡ ಆತ್ಮದ ಕೊಳೆಯು ಪುನಃ ಅಂಟಿಕೊಳ್ಳದಂತೆ ಜಾಗ್ರತೆಯು ಅಗತ್ಯ.

ಇನ್ನು ನಾವು ಪ್ರಾಯಶ್ಚಿತ್ತದ ಸಂಸ್ಕಾರವನ್ನು ಬಳಸುವ ವಿಧಾನವನ್ನು ಅವಲೋಕಿಸದೆ ಮುಂದೆ ಹೋಗುವುದು ವಿಹಿತವೆನಿಸದು. ಇದನ್ನು ಪಾತಕವಿಖ್ಯಾಪನವೆಂದು ಕರೆಯುವರು.

ಪಾತಕವಿಖ್ಯಾಪನ (Confession)

ಪಾತಕವಿಖ್ಯಾಪನದಲ್ಲಿ ನಾವು ಸ್ವೇಚ್ಛಾಪೂರ್ವಕವಾಗಿ ಆಚರಿಸಿದ ಪಾತಕಗಳನ್ನು ಯುಕ್ತ ಅಧಿಕಾರವನ್ನು ಪಡೆದ ಪುರೋಹಿತನಲ್ಲಿ ಉಚ್ಚರಿಸಿ, ವಿಮೋಚನೆಯನ್ನು ಪಡೆಯುವೆವು. ಇತರ ಯಾವ ಮತದಲ್ಲಾಗಲಿ ಇಂತಹ ವಿಶಿಷ್ಟಾಚರಣೆಯೊಂದು ಇಲ್ಲದುದರಿಂದ ತುಸು ವಿವರಗಳು ಅಗತ್ಯ.

ಈ ವಿಖ್ಯಾಪನಕ್ಕಾಗಿ ಪ್ರತ್ಯೇಕವಾದ ವ್ಯವಸ್ಥೆಯಿದೆ. ಅದೊಂದು ಚಿಕ್ಕ ಕೊಠಡಿಯೆನ್ನಬಹುದು. ಒಂದು ಮಗ್ಗುಲಲ್ಲಿ ಅಧಿಕಾರಹೊಂದಿದ ಪುರೋಹಿತನು ಪೀಠದಲ್ಲಿ ಆಸೀನನಾಗುವನು. ಇನ್ನೊಂದು ಮಗ್ಗುಲಲ್ಲಿ ವಿಖ್ಯಾಪನಕ್ಕಾಗಿ ಬಂದ ವ್ಯಕ್ತಿಯು ಮಂಡಿಯೂರುವನು. ಅವರಿಬ್ಬರ ಮಧ್ಯದಲ್ಲಿ ಮಾತಿನ ಸ್ವರವು ಮಾತ್ರ ಚಲಿಸುವ ವ್ಯವಸ್ಥೆಯಿದೆ. ಸಾಮಾನ್ಯವಾಗಿ ಸಣ್ಣ ಸಣ್ಣ ತೂತುಗಳಿರುವ ಹಲಗೆ ಅಥವಾ ತಗಡು ಇರುವುದು. ವ್ಯಕ್ತಿಯು ಮಂಡಿಯೂರಿ ಪುರೋಹಿತನ ಕಡೆಗೆ ಮುಖಮಾಡಿದಾಗ ಆತನ ಮಾತು ಪುರೋಹಿತನ ಕಿವಿಗೆ ಸಮೀಪವಾಗಿಯೇ ಬರುವುದರಿಂದ ಪಿಸುನುಡಿಯಾದರೂ ಪರಸ್ಪರ ಕೇಳಿಸುವುದು. ಸಾಮಾನ್ಯವಾಗಿ

ವಿಜ್ಞಾಪನ ಕಾಲದಲ್ಲಿ ಸ್ಪಷ್ಟ ಪಿಸುಮಾತುಗಳನ್ನು ಆಡಬಹುದು. ಸಮೀಪದಲ್ಲಿ ಇತರ ಜನರಿರುವ ಕಾಲದಲ್ಲಿ ತನ್ನ ಅಂತರ್ಯದ ವಿಷಯಗಳನ್ನು ಯಾರೂ ಬಹಿರಂಗವಾಗಿ ಪ್ರಕಟಪಡಿಸಲಾರರು. ಹಲವು ಕಡೆಗಳಲ್ಲಿ ವ್ಯಕ್ತಿಗಳ ಪರಿಚಯವೂ ಸಿಗದಂತೆ ಪರದೆಗಳಿರುವುದುಂಟು—ಹೀಗಿದ್ದರೂ ಪಾತಕ ವಿಜ್ಞಾಪನಕ್ಕೆ ಅವು ಅಗತ್ಯವಿಷಯಗಳಲ್ಲ. ಕೇವಲ ಸೌಲಭ್ಯಕ್ಕಾಗಿ ಮಾಡಿಕೊಂಡ ವ್ಯವಸ್ಥೆಗಳು ಮಾತ್ರ.

ವಿಜ್ಞಾಪನಕ್ಕಾಗಿ ಕೊಠಡಿಯನ್ನು ಸೇರುವ ಮುನ್ನ ವ್ಯಕ್ತಿಯು ತಾನು ಮಾಡಲಿರುವ ಕಾರ್ಯದ ಸಿದ್ಧತೆ ಮಾಡುವನು. ತನ್ನ ಜೀವನದಲ್ಲಿ, ಅದೂ ಹಿಂದಿನ ಸರಿಯಾದ ಪಾತಕ ವಿಜ್ಞಾಪನದ ಅನಂತರ ತನ್ನ ಮನೋವಾಕ್ಕಾಯಗಳಲ್ಲಿ ಅಪರಾಧವೆಸಗಿದ ಸಂದರ್ಭಗಳೆಲ್ಲವನ್ನೂ ನೆನೆಯುವನು. ಮಹಾಪಾತಕಗಳಾದರೆ ಅವುಗಳ ಆವರ್ತನ ಸಂಖ್ಯೆಯನ್ನೂ ಸ್ಮರಿಸುವನು. ಬಳಿಕ ಅವುಗಳ ಪೂರ್ವಾಪರ ಸಂಬಂಧಗಳನ್ನು ವಿವೇಚಿಸಿಕೊಂಡು, ಅವುಗಳಿಂದಾಗಿ ತನ್ನ ಆಧ್ಯಾತ್ಮಿಕ ಜೀವನದಲ್ಲಿ ಆದ ಅಧೋಗತಿಯನ್ನು ತಿಳಿಯುವನು. ಆಮೇಲೆ ಪ್ರೇಮಮಯ ಭಗವಂತನ ನಿಯಮಗಳ ವಿರೋಧವಾಗಿ ಆಚರಿಸಿದುದಕ್ಕೆ ಪರಿತಪಿಸಿ, ಇನ್ನು ಮುಂದಿನ ಜೀವನದಲ್ಲಿ ಅಪರಾಧವೆಸಗದ ದೃಢನಿರ್ಧಾರವನ್ನು ಮಾಡುವನು. ತನ್ನ ಪಾತಕಗಳ ಪರಿಣಾಮವಾಗಿ ಭಗವಾನ್ ಯೇಸುಕ್ರಿಸ್ತನು ಸಿಲುಬೆಯ ಮರಣವನ್ನು ಪಡೆಯುವಂತಾಯಿತೆಂದಾಗಲಿ, ಮೋಕ್ಷದ ಪರಮಸೌಭಾಗ್ಯವನ್ನು ತಾನು ಕಳೆದುಕೊಂಡು ಅನಂತ ನರಕದ ಶಿಕ್ಷೆಗರ್ಹತೆಯನ್ನು ಪಡೆಯುವಂತಾಯಿತೆಂದಾಗಲಿ ತಿಳಿದುಕೊಂಡು ಅನುತಾಪಪಟ್ಟು ಇನ್ನು ಮುಂದಿನ ಜೀವನದಲ್ಲಿ ಅಪರಾಧಗಳಿಂದ ದೂರವಿರುವುದಕ್ಕಾಗಿ ತನ್ನ ವ್ಯವಸ್ಥೆಯನ್ನು ನಿರ್ಧರಿಸಿಕೊಳ್ಳುವನು. ಹೀಗೆ ಅನುತಾಪಪಟ್ಟ ವ್ಯಕ್ತಿಗೆ ಅನುತಾಪಿಯೆನ್ನಬಹುದು. ಅನಂತರ ಆತನು ಕೊಠಡಿಯನ್ನು ಪ್ರವೇಶಿಸುವನು.

ಕೊಠಡಿಯನ್ನು ಪ್ರವೇಶಿಸಿದಾಗಲೇ ಪುರೋಹಿತನು ಅನುತಾಪಿಯನ್ನು ಹರಸುವನು. ಅನಂತರ ಅನುತಾಪಿಯು ತಾನು ಮಾಡಿದ ಅಪರಾಧಗಳನ್ನು, ಮಹಾಪಾತಕಗಳಾದರೆ ಆವರ್ತನ ಸಂಖ್ಯೆಯನ್ನೂ ಪುರೋಹಿತ

ನಲ್ಲಿ ಅರಿಕೆಮಾಡಿ ವಿಮೋಚನೆಯನ್ನು ಕೇಳುವನು. ಅನುತಾಪಿಯು ಹೇಳಿದುದೆಲ್ಲವೂ ಸ್ಪಷ್ಟವಾಗಿದ್ದರೆ ಪುರೋಹಿತನು ಅದೇನನ್ನೂ ವಿಚಾರಿಸ ಲಾರನು. ಆದರೆ ಅಸ್ಪಷ್ಟತೆಯಿದ್ದರೆ ಕೆಲವು ಪ್ರಶ್ನೆಗಳನ್ನು ಕೇಳಿ, ಆತನ ಅಪರಾಧದ ಸ್ಥಾನಮಾನಗಳನ್ನು ನಿರ್ಧರಿಸುವನು. ಅಂತೂ ಅನಗತ್ಯ ವಿಚಾರಗಳನ್ನು ಪ್ರಶ್ನಿಸುವುದಿಲ್ಲ. ಬಳಿಕ ಅನುತಾಪಿಗೆ ಸನ್ಮಾರ್ಗವರ್ತನೆಯ ಹಿತಸೂಚನೆಗಳನ್ನಿತ್ತು ಮುಂದೆ ಅಪರಾಧಗಳಿಂದ ದೂರವಿರುವಂತೆಯೂ ಇಂದಿನವುಗಳಿಗೆ ಪ್ರಾಯಶ್ಚಿತ್ತವಾಗುವಂತೆಯೂ ಕೆಲವು ಪ್ರಾರ್ಥನೆ ಗಳನ್ನಾಗಲಿ, ಪುಣ್ಯಪ್ರದ ಕಾಯವನ್ನಾಗಲಿ ಮಾಡಲು ಸೂಚಿಸಿ, ಸಣ್ಣದೊಂದು ಪ್ರಾರ್ಥನೆಯನ್ನು ಉಚ್ಚರಿಸಿ, "ಪಿತನ, ಸುತನ, ಮತ್ತು ಪವಿತ್ರಾತ್ಮನ ನಾಮದಲ್ಲಿ ನಿನ್ನನ್ನು ನಿನ್ನ ಪಾತಕಗಳಿಂದ ವಿಮೋಚನೆಗೊಳಿಸುತ್ತೇನೆ" ಎಂದು ಸ್ಪಷ್ಟವಾಗಿ ಹೇಳುವನು. ಅನಂತರ ವ್ಯಕ್ತಿಯು ಕೊಠಡಿಯನ್ನು ಬಿಟ್ಟೇಳುವನು. ಆಗ ಪುರೋಹಿತನು "ಶಾಂತಿಯಿಂದ ಹೋಗು" ಎಂದಾಗಲಿ "ಭಗವಂತನಾಶೀರ್ವಾದವಿರಲಿ" ಎಂದಾಗಲಿ ಹೇಳುತ್ತ ಪುನಃ ಹರಸುವನು.

ಈ ರೀತಿಯಲ್ಲಿ ವ್ಯಕ್ತಿಯು ತನ್ನ ಅಂತರ್ಯದ ವಿಷಯಗಳನ್ನು ಪುರೋಹಿತನಲ್ಲಿ ಉಚ್ಚರಿಸಿದುದಕ್ಕಾಗಿ ಮರುಗಲಾರನು. ಆದರೆ ಹಿರಿ ದೊಂದು ಹೊರೆಯನ್ನು ನೀಗಿದ ಮನಶ್ಶಾಂತಿಯು ಅವನಿಗೆ ಲಭಿಸುವುದು.

ಹೀಗೆ ಪ್ರಾಯಶ್ಚಿತ್ತದ ಸಂಸ್ಕಾರದ ಉಪಯೋಗಮಾಡಿ, ಮಾನವನು ತನ್ನ ಪಾತಕಗಳಿಂದ ವಿಮುಕ್ತನಾಗುವನು. ಇದರಿಂದಾಗಿ ಅವನಿಗೆ ಆ ರೀತಿಯ ಮಾತ್ರವಲ್ಲ ಇನ್ನೂ ದುರ್ಗತಿಯ ಪಾತಕಗಳನ್ನು ಆಚರಿಸಲು ಸುಲಭ ಮಾಡಿದಂತಾಗುತ್ತದೆ—ಎಂಬ ಸಂದೇಹವು ಬರುವುದು. ಆದರೆ ಅನುತಾಪಿಯು ಪಾತಕ ವಿಖ್ಯಾಪನದ ಮುನ್ನ ತಾನು ಗೈದ ಅಪರಾಧಗಳಿ ಗಾಗಿ ಪರಿಪೂರ್ಣ ಪಶ್ಚಾತ್ತಾಪಪಡಬೇಕು—ಮಾತ್ರವಲ್ಲ, ಆ ಪಾತಕಗಳು ಪುನಃ ಸಂಭವಿಸದಂತೆ ಯುಕ್ತ ದೃಢನಿರ್ಧಾರವನ್ನೂ ಮಾಡಿಕೊಳ್ಳ ಬೇಕಾಗಿದೆಯೆಂಬುದನ್ನು ನಾವು ಮರೆಯಬಾರದು. ಆ ವ್ಯಕ್ತಿಯು ಹೀಗೆ ಸಂಪೂರ್ಣ ವಿಶ್ವಾಸದಿಂದ ವಿಖ್ಯಾಪನವನ್ನು ಬಳಸಿರಬೇಕು. ಆದರೂ ದುರ್ಬಲ ಸ್ವಭಾವದ ಮನುಷ್ಯನು ಸುಲಭದಲ್ಲಿ ಎಡವಿ

ಬೀಳಬಹುದು. ಆದರೆ ಉದ್ದೇಶಪೂರ್ವಕವಾಗಿಯೇ ಪಾತಕದಲ್ಲಿ ಹಾರಿ ಬೀಳಲು ಆತನ ದೃಢನಿರ್ಧಾರವು ಅದೆಲ್ಲಿ ಸಾಧ್ಯತೆಯನ್ನು ಕೊಡುವುದು !

ವಿಖ್ಯಾಪನದಿಂದ ಪಾತಕಗಳ ವಿಮೋಚನೆ ದೊರೆಯಿತಾದರೂ ಅವುಗಳ ದುಷ್ಪರಿಣಾಮಗಳನ್ನು ನೀಗಲು ಪ್ರಾಯಶ್ಚಿತ್ತವನ್ನು ಮಾಡಲಿದೆ. ಇದನ್ನೊಂದು ದೃಷ್ಟಾಂತದಿಂದ ಸಮರ್ಥಿಸಬಹುದು : ಒಬ್ಬನು ಹತ್ತು ರೂಪಾಯಿಗಳನ್ನು ಕದ್ದುಕೊಂಡನು : ಆ ಅಪರಾಧವು ಸರಿಯಾದ ಪಶ್ಚಾತ್ತಾಪದಿಂದ ಕೂಡಿಕೊಂಡಾಗ ಕ್ಷಮಿಸಲ್ಪಡುವುದು. ಆದರೆ ಆ ದುಷ್ಕಾರ್ಯದ ದುಷ್ಫಲವೂ ನೀಗಬೇಕಾದರೆ ಕದ್ದುಕೊಂಡ ಹಣವನ್ನು ಆ ವ್ಯಕ್ತಿಗೆ ಮರುಪಾವತಿ ಮಾಡಿಕೊಳ್ಳಬೇಕಲ್ಲದೆ, ಆತನಿಗಾದ ಉಪದ್ರವಕ್ಕಾಗಿ ಆತನಲ್ಲಿ ಕ್ಷಮೆಯನ್ನೂ ಯಾಚಿಸಬೇಕಾಗುತ್ತದೆ. ಆದುದರಿಂದ ವಿಖ್ಯಾಪನದಲ್ಲಿ ಪಾತಕವು ಕ್ಷಮಿಸಲ್ಪಟ್ಟೊಡನೆ ಆ ಮರುಪಾವತಿಯ ಶರ್ತವೂ ಕ್ಷಮಿಸಲ್ಪಟ್ಟಿತೆಂದು ತಿಳಿಯಬಾರದು : ಏಕೆಂದರೆ,

“ ಪ್ರಾಯಶ್ಚಿತ್ತ ಮಾಡದೆ ಹೋದರೆ ನೀವೆಲ್ಲರೂ ನಾಶವಾದುವಿರಿ ” (ಲೂಕ ೭ ೩)

ಎಂದು ಯೇಸುವು ಹೇಳಿರುವನು.

ಶಾಂತಿಯ ಸಂಸ್ಕಾರ (Sacrament Of Peace)

ಪ್ರಾಯಶ್ಚಿತ್ತದ ಸಂಸ್ಕಾರದಲ್ಲಿ ಅನುತಾಪಿಯು ತನ್ನ ಅಪರಾಧಗಳನ್ನೂ, ಅದೂ ಕೇವಲ ಅಂತರ್ಯದಲ್ಲಿ ಮಾತ್ರ ಸಂಭವಿಸಿದುವುಗಳನ್ನು ವಿಖ್ಯಾಪನ ಕಾಲದಲ್ಲಿ ಅಧಿಕಾರ ಹೊಂದಿದ ಪುರೋಹಿತನಲ್ಲಿ ಉಚ್ಚರಿಸಿ ಹೇಳುವ ಕಾರ್ಯವು ಅಸಹ್ಯವಾಗಿ ತೋರುವುದು. ಭಗವತ್ ಯೇಸು ಕ್ರಿಸ್ತನು ಪಾತಕಗಳ ಕ್ಷಮೆಯನ್ನು ನೀಡುವ ಅಧಿಕಾರವನ್ನು ತನ್ನ ಶಿಷ್ಯರಿಗೆ ನೀಡುವಾಗಲೇ

“ ಪವಿತ್ರಾತ್ಮನನ್ನು ಪಡೆಯಿರಿ; ಯಾರ ಪಾತಕಗಳನ್ನು ನೀವು ಕ್ಷಮಿಸುವಿರೊ ಅವು ಕ್ಷಮಿಸಲ್ಪಡುವುವು ; ಮತ್ತು ಯಾರ ಪಾತಕಗಳನ್ನು ನೀವು ಉಳಿಸುವಿರೊ ಅವು ಉಳಿಯುವುವು ” (ಯೋಹಾನ ೨೦, ೨೩) ಎಂದು ಹೇಳಿದ ಮಾತುಗಳ ಮರ್ಮವನ್ನು ನಾವರಿಯಬೇಕು.

ಪಾತಕಗಳಿಂದ ವಿಮೋಚನೆಯನ್ನು ನೀಡಲು ಅಥವಾ ಅವು ಉಳಿಸಲ್ಪಡಲು, ಅವು ಯಾವುವು, ಎಂದು ತಿಳಿಯದೆ ನಿರ್ವಾಹವಿಲ್ಲ. ಹೀಗಾಗಿ ಅವು ಉಚ್ಚರಿಸಲ್ಪಡಬೇಕಾದುದು ಅನಿವಾರ್ಯವು. ಆದರೆ ಪುರೋಹಿತನು ತನ್ನ ಅಪರಾಧಗಳಿಂದಾಗಿ ತನ್ನ ಕುರಿತು ದುರ್ಭಾವನೆಯನ್ನು ಗ್ರಹಿಸಬಹುದೆಂದು ಅದಾರೂ ತಿಳಿಯಬಾರದು. ಅನುತಾಪಿಯು ತಾನೊಬ್ಬ ಮಾನವ ವ್ಯಕ್ತಿಯೆಂದೂ, ಆ ಪುರೋಹಿತನೂ ತನ್ನಂತೆಯೇ ಕೇವಲ ಮಾನವ ವ್ಯಕ್ತಿಯೆಂದೂ ಆತನೂ ಒಂದಲ್ಲದಿದ್ದರೆ ಇನ್ನೊಂದು ಬಗೆಯಲ್ಲಿ ಅಪರಾಧ ಮಾಡಿರಬಹುದೆಂದೂ ಆತನು ಭಗವತ್ ಸ್ಥಾನದಲ್ಲಿ ನಿಂತು ನಮ್ಮ ಅಪರಾಧಗಳಿಗೆ ತಕ್ಕ ಔಷಧೀಯ ಚಿಕಿತ್ಸೆಯನ್ನು ಮಾಡುವವನೆಂದೂ ತಿಳಿಯಬೇಕು. ಮಾತ್ರವಲ್ಲ ವಿಜ್ಞಾಪನದ ಕಾಲದಲ್ಲಿ ಅನುತಾಪಿಯು ಉಚ್ಚರಿಸಿದ ಅಪರಾಧಗಳನ್ನು ಬಹಿರಂಗಗೊಳಿಸಬಾರದೆಂಬ ಪ್ರಮಾಣವಚನದಿಂದ ಪುರೋಹಿತರು ಬದ್ಧರಾಗಿರುವರು. ಹೀಗೆ ಬಹಿರಂಗಗೊಳಿಸಬೇಕೆಂದು ವಿಧಿಸಿದಾಗ, ನಿರಾಕರಿಸಿ ಮರಣವನ್ನೂ ಸ್ವೀಕರಿಸಿರುವೆವೆಂದೂ ಐತಿಹಾಸಿಕಾಧಾರಗಳಿವೆ. ವ್ಯಕ್ತಿಯು ತನಗೆ ಬೇಕಾದ, ಆಗತ್ಯವಿದ್ದರೆ ತನ್ನ ಪರಿಚಯು ಕೂಡ ಇರದ ಪುರೋಹಿತನಲ್ಲಿ ತನ್ನ ವಿಜ್ಞಾಪನೆಯನ್ನು ಮಾಡಿಕೊಳ್ಳಬಹುದು. ಪಾತಕ ನಿವೇದನೆಯು ಅದೊಂದು ಬಗೆಯ ಪ್ರಾಯಶ್ಚಿತ್ತವೇ ಆಗಿದೆ.

ಅಂತೂ ಆಂತರಿಕ ಶುದ್ಧತೆಯನ್ನು ಅಪೇಕ್ಷಿಸುವ ಪ್ರತಿಯೊಬ್ಬ ಕಥೋಲಿಕನು ವರ್ಷದಲ್ಲಿ ಹಲವು ಸಲ ಈ ಪ್ರಾಯಶ್ಚಿತ್ತದ ಸಂಸ್ಕಾರವನ್ನು ಬಳಸಿಕೊಂಡು, ತನ್ನ ಅಂತಃಕರಣಕ್ಕೆ ಶಾಂತಿಯನ್ನು ತಂದುಕೊಳ್ಳುವನು. ಮನಶ್ಶಾಂತಿಯನ್ನು ತಂದುಕೊಡುವ ಈ ಸಂಸ್ಕಾರವನ್ನು ಶಾಂತಿಯ ಸಂಸ್ಕಾರವೆಂದೂ ಕರೆಯುವರು. ಎಲ್ಲ ಬಗೆಯ ವ್ಯಕ್ತಿಗಳು, ಜಗದ್ಗುರು ಪೋಪ ಸ್ವಾಮಿಗಳೂ ಕೂಡ, ಆಗಾಗ ಇದರ ಸದುಪಯೋಗವನ್ನು ಮಾಡಿಕೊಳ್ಳುವರು.

ಶ್ರೀಸಭೆಯು ಪ್ರತಿ ಕಥೋಲಿಕನು ಈ ಸಂಸ್ಕಾರವನ್ನು ವರ್ಷದಲ್ಲೊಮ್ಮೆಯಾದರೂ ಬಳಸಿಕೊಳ್ಳಬೇಕೆಂದು ವಿಧಿಸುತ್ತದೆ. ಸಮಸ್ತ ಮಹಾಪಾತಕಗಳನ್ನು ಪಶ್ಚಾತ್ತಾಪದಿಂದ ತೊಳೆದು ಪ್ರಾಯಶ್ಚಿತ್ತದಿಂದ

ಅವುಗಳ ದುಷ್ಪರಿಣಾಮವನ್ನು ನೀಗಬೇಕೆಂದು ಅದರ ಆಣತಿಯಿದೆ. ಲಘುಪಾತಕಗಳ ವಿಖ್ಯಾಪನವನ್ನೂ ಮಾಡಬೇಕೆಂದು ವಿಧಿಸಿರದಿದ್ದರೂ ಅವುಗಳನ್ನು ಹೇಳಿಕೊಂಡು ಯುಕ್ತ ನಿರ್ಧಾರವನ್ನು ಮಾಡಿಕೊಳ್ಳುವುದು ಹಿತವಾಗಿದೆ. ಏಕೆಂದರೆ, ಲಘುಪಾತಕಗಳಾದರೂ ನಾವೆಣಿಸಿಕೊಳ್ಳುವಷ್ಟು ಲಘುವಲ್ಲ. ಸುಂದರವಸನವೊಂದರ ಸೊಬಗನ್ನೂ, ಮೌಲ್ಯವನ್ನೂ ಕಾಲಕ್ರಮೇಣ ನಾಶಗೊಳಿಸುವ ಹುಳದಂತೆ, ಆತ್ಮದ ವಸನವಾದ ಭಗವತ್ ಕೃಪಾಪ್ರವಾಹವನ್ನು ಕ್ಷಯಿಸುತ್ತ ಕೊನೆಗೆ ಮಹಾಪರಾಧದ ಬಲೆಗೆ ಬೀಳಿಸುವುದು ಲಘುಪಾತಕವು. ಆದುದರಿಂದ ಸಕಲ ಅಪರಾಧ ಸ್ಥಾನಗಳಿಂದ ನಾವು ಓಡಿ, ಮೋಕ್ಷರಾಜ್ಯದ ಪ್ರವೇಶಪತ್ರವು ನಿತ್ಯವೂ ನಮ್ಮದಾಗುವಂತೆ ನಾವು ನೋಡಿಕೊಳ್ಳಬೇಕು.

ಮಹಾಪರಾಧವು ನಮ್ಮ ಆಧ್ಯಾತ್ಮಿಕ ಜೀವವನ್ನು ನಾಶಗೊಳಿಸುತ್ತದೆ. ಭಗವಂತನ ನಿಯಮಾತಿಕ್ರಮಣವನ್ನು ನಾವು ಮಾಡುವುದರಿಂದ ಆತನನ್ನು ತ್ಯಜಿಸಿ, ಸೃಷ್ಟಿತ ವಸ್ತುವನ್ನು ಭಗವತ್ ಸ್ಥಾನಕ್ಕೇರಿಸುತ್ತೇವೆ. ಆತನ ಪ್ರೇಮ ಮತ್ತು ಕರುಣಾವರವನ್ನು ತ್ಯಜಿಸಿದ ಫಲವಾಗಿ ಇಹದಲ್ಲಿಯೂ, ಪರದಲ್ಲಿಯೂ ಆತನ ನ್ಯಾಯಕ್ಕೊಳಗಾಗಿ ಶಿಕ್ಷಾರ್ಹತೆಯನ್ನು ನಾವು ಪಡೆಯುತ್ತೇವೆ. ಆದುದರಿಂದಲೇ ಮರಣವನ್ನಾದರೂ ಸ್ವೀಕರಿಸಲು ನಾವು ಸಿದ್ಧರಾಗಬೇಕಲ್ಲದೆ, ಮಹಾಪಾತಕವೊಂದನ್ನಾದರೂ ನಾವೆಸಗಬಾರದೆಂದು ಶ್ರೀಸಭೆಯು ಬೋಧಿಸುತ್ತದೆ. ಮಾತ್ರವಲ್ಲ ಲಘುಪಾತಕಗಳನ್ನೂ ಕಡಮೆಮಾಡುತ್ತ ಬರಬೇಕೆಂದು ಆಶಿಸುತ್ತದೆ. ನಮ್ಮ ಮೂಲವೂ ಅಂತ್ಯವೂ ಆದ ಸರ್ವೇಶ್ವರನೆಡೆಗೆ ಎಷ್ಟು ಸಮೀಪಿಸುವೆವೋ ಅದಷ್ಟೇ ದೂರದೂರದಲ್ಲಿ ಪಾತಕಗಳಿಂದ ನಾವಿರುವೆವು. ಆಗ ಮರಣಕ್ಕೆ ನಾವಂಜೆವು. ಏಕೆಂದರೆ,

"ಮಾನವಪುತ್ರನು ಆದಾವ ಗಳಿಗೆಯಲ್ಲಿ ಬರುವನೆಂದು ನೀವರಿತಿರದುದರಿಂದ ನೀವು ಸಿದ್ಧರಾಗಿರಿ" (ಮತ್ತೇಯ ೨೪, ೪೪)

"ನಿಮ್ಮ ದೇಹವನ್ನು ಕೊಲ್ಲುವವರಿಗಾಗಿ ಭಯಪಡಬೇಡಿರಿ; ನಿಮ್ಮ ಆತ್ಮವನ್ನು ದೇಹವನ್ನು ನರಕದಲ್ಲಿ ನಾಶಗೊಳಿಸುವವರಿಗಾಗಿ ಭಯಪಡಿರಿ" (ಮತ್ತೇಯ ೧೦, ೨೮) ಎಂದು ಯೇಸುವು ಕೊಟ್ಟ ಎಚ್ಚರಿಕೆಯನ್ನು

ನಮ್ಮ ನಿತ್ಯ ಜೀವನದಲ್ಲಿ ಅನ್ವಯಗೊಳಿಸಬೇಕು. ಸದಿಚ್ಛೆಯುವರಿಗದು ಸುಲಭಸಾಧ್ಯವು.

ಅಂತಿಮ ಅಭ್ಯಂಗ (Extreme Unction)

ಹುಟ್ಟಿದ ಮನುಷ್ಯನು ಸಾಯಲೇಬೇಕು. ನಮ್ಮ ಐಹಿಕ ಜೀವನವು ಒಂದು ಯಾತ್ರಾವಿಶೇಷವು. ನಾವು ಜೀವನಾನಂತರದಲ್ಲಿ ಇನ್ನೊಂದು ಜೀವನಕ್ಕೆ ಸಿದ್ಧರಾಗುವೆವು. ಆ ಅನಂತ ಜೀವನವು ನಮಗೆ ಲಭಿಸಬೇಕಾದರೆ ಯುಕ್ತಸಿದ್ಧತೆಗಳನ್ನು ನಾವು ಮಾಡುತ್ತ ಬರಬೇಕು. ಕೊನೆಗೊಂದು ದಿನ–ಆ ದಿನವನ್ನು ಅದಾರೂ ಮುಂದಾಗಿ ತಿಳಿಸಲಾರರು–ಮೃತ್ಯುದ್ವಾರದ ಮೂಲಕ ನಾವು ಭಗವತ್ ಸನ್ನಿಧಿಗೆ ತೆರಳುವೆವು.

ಮರಣವು ಮಾನವ ಜೀವನದ ಮಹತ್ವದ ಘಟನೆಯಾಗಿದೆ. ಆ ಒಂದು ಗಳಿಗೆಯಲ್ಲಿ ಅನಂತಮೋಕ್ಷ ಅಥವಾ ಅನಂತನರಕದ ಜೀವನವು ಹೊಂದಿಕೊಂಡಿದೆ. ಮಹಾಸಾಧುಸಂತರಿಗೂ ಮರಣಕಾಲದಲ್ಲಿ ಭಯವಾವರಿಸಿತ್ತು. ಮೋಕ್ಷವನ್ನು ಪಡೆಯುವಂತೆ ಅವರು ಸಾಧಿಸಿದ್ದರೂ ಪ್ರಾಣೋತ್ಕ್ರಮಣಕಾಲದಲ್ಲಿ ಅದೇನೂ ಸಂಭವಿಸಿ ಅವರು ನರಕವನ್ನು ಪಡೆಯುಬಹುದೆಂಬ ಭೀತಿಯು ಅವರನ್ನು ನಡುಗಿಸಿತ್ತು. ಹಾಗಿರುವಾಗ ಕೇವಲ ಸಾಮಾನ್ಯ ವ್ಯಕ್ತಿಗಳಾದ ನಾವು ಮರಣಕಾಲದಲ್ಲಿ ಅದೆಷ್ಟು ಭಯಗೊಳ್ಳಬಹುದು!

ಅದಕ್ಕಾಗಿ ನಾವು ಮರಣಕಾಲವನ್ನು ಸಮೀಪಿಸಿದಾಗ ಯುಕ್ತ ಧೈರ್ಯವನ್ನು ನಮ್ಮಲ್ಲಿ ಹುಟ್ಟಿಸಲು, ನಮ್ಮ ಕೊನೆಗಾಲವು ಹರ್ಷದಾಯಕವಾಗಿ ಮಾಡಲು, ಭಗವಾನ್ ಯೇಸುಕ್ರಿಸ್ತನು ಅಂತಿತ ಅಭ್ಯಂಗವೆಂಬ ಸಂಸ್ಕಾರವನ್ನು ಶ್ರೀಸಭೆಯ ವಶದಲ್ಲಿತ್ತಿರುವನು. ಅಂತಿಮ ಅಭ್ಯಂಗವು ಬಹುಮುಖ ಪರಿಣಾಮಗಳನ್ನು ರೋಗಿಯಲ್ಲಿ ಮಾಡುವುದು. ಕೊನೆಗಾಲದಲ್ಲಿ ಪ್ರಾಯಶ್ಚಿತ್ತದ ಸಂಸ್ಕಾರದಿಂದ ತಾನು ಗೈದ ಪಾತಕಗಳಿಂದ ಮುಕ್ತಿಯನ್ನು ಪಡೆಯಲು ಹಲವೊಮ್ಮೆ ರೋಗಿಗೆ ಅಸಾಧ್ಯವಾಗಿಬಿಡುವುದು. ದೃಷ್ಟಾಂತಕ್ಕೆ: ಸ್ಮೃತಿಯಿಲ್ಲದಿರುವುದು ಅಥವಾ ಪದಗಳನ್ನು ಉಚ್ಚರಿಸಲು ಅಸಾಧ್ಯವಾಗುವುದು (ನಾಲಗೆ ಬೀಳುವುದು) ಮೊದಲಾದುವನ್ನು

ಉದಾಹರಿಸಬಹುದು. ಅಂತಹ ಸಂದರ್ಭಗಳಲ್ಲಿ ಕೇವಲ ಪಶ್ಚಾತ್ತಾಪ ಪಟ್ಟುದರಿಂದ ಸಮಸ್ತ ಪಾತಕಗಳೂ ಕ್ಷಯಿಸಲ್ಪಡುವುವು. ಮಾತ್ರವಲ್ಲ ಆ ಪಾತಕಗಳ ಪರಿಹಾರಕ್ಕಾಗಿ ಆ ವ್ಯಕ್ತಿಯು ಆಚರಿಸಬೇಕಾದ ತಾತ್ಕಾಲಿಕ ಶಿಕ್ಷೆಯೂ ನಿವಾರಿಸಲ್ಪಡುವುದು. ಇಷ್ಟೇ ಅಲ್ಲ, ವ್ಯಕ್ತಿಯು ತನ್ನ ರೋಗದ ಪೀಡೆಯನ್ನು ಶಾಂತಚಿತ್ತದಿಂದ ಸಹಿಸುವಂತೆಯೂ ಪ್ರಾಣೋತ್ಕ್ರಮಣಕಾಲದಲ್ಲಿ ಪಾತಕದ ಪ್ರಲೋಭನಗಳನ್ನು ಜಯಿಸುವಂತೆಯೂ ಮಾಡುತ್ತದೆ. ಭಗವಂತನಿಗೆ ವಿಹಿತವೆಂದು ಕಂಡ ಸಂದರ್ಭಗಳಲ್ಲಿ ರೋಗಿಗೆ ಆರೋಗ್ಯವೂ ಲಭಿಸುವುದು. ಈ ಕುರಿತು ಯೇಸುಕ್ರಿಸ್ತನ ದ್ವಾದಶ ಶಿಷ್ಯರಲ್ಲೊಬ್ಬನಾದ ಯಾಕೋಬನು "ನಿಮ್ಮಲ್ಲಿ ಯಾರಾದರೂ ರೋಗಿಯಾಗಿರುವಿರಾ ? ಅವನು ಶ್ರೀಸಭೆಯ ಪುರೋಹಿತನನ್ನು ಕರೆಸಿಕೊಳ್ಳಲಿ, ಮತ್ತು ಸ್ವಾಮಿಯ ನಾಮದಲ್ಲಿ ತೈಲಾಭ್ಯಂಗವನ್ನು ಮಾಡಿಸುತ್ತ ತನಗಾಗಿ ಪ್ರಾರ್ಥಿಸಿಕೊಳ್ಳಲಿ. ವಿಶ್ವಾಸದ ಪ್ರಾರ್ಥನೆಯು ಆ ರೋಗಿಯನ್ನು ರಕ್ಷಿಸುವುದು: ಸ್ವಾಮಿಯು ಆತನನ್ನು ಎಬ್ಬಿಸುವನು. ಆತನು ಪಾತಕಗಳಲ್ಲಿದ್ದರೆ ಅವುಗಳು ಕ್ಷಮಿಸಲ್ಪಡುವುವು" (ಯಾಕೋಬ ೫, ೧೪–೧೫) ಎಂದು ತನ್ನ ನಿರೂಪದಲ್ಲಿ ಹೇಳಿರುವನು.

ಕ್ರಿ. ಶ. ೫೪೫ರಲ್ಲಿ ಸತ್ತ ಸೆಜಾರಿಯುಸ್ ಎಂಬವನು, "ಯಾವಾಗ ಅಶಕ್ತತೆಯು ಆವರಿಸುತ್ತದೋ ಆ ಸಂದರ್ಭಗಳಲ್ಲಿ ರೋಗಿಯಾದವನು ಕ್ರಿ. ಶ. ದೇಹವನ್ನೂ, ರಕ್ತವನ್ನೂ ಸ್ವೀಕರಿಸಲಿ; ತನ್ನ ದೇಹವನ್ನು ಅಭ್ಯಂಗಿಸಿಕೊಳ್ಳಲಿ. ಹೀಗೆ ಆವುದು ಆಶ್ವಾಸಿಸಲ್ಪಟ್ಟದೆಯೋ ಅದು ಆತನಲ್ಲಿ ಪೂರ್ಣವಾಗಲಿ; ಎಲೇ ಸಹೋದರರೇ ಯಾವನು ಶ್ರೀಸಭೆಯ ಅನುಗ್ರಹವನ್ನು ತನ್ನ ರೋಗದ ಅವಧಿಯಲ್ಲಿ ಪಡೆಯುತ್ತಾನೋ ಅವನು ದೈಹಿಕಾರೋಗ್ಯವನ್ನೂ ಪಾತಕಗಳ ವಿಮೋಚನೆಯನ್ನು ಪಡೆಯಲರ್ಹನೆಂದು ತಿಳಿಯಿರಿ" ಎಂದಿರುವನು.

ಅಂತ್ಯಕಾಲದಲ್ಲಿ ಇಷ್ಟು ಅಮೋಘನಾದ ಈ ಸಂಸ್ಕಾರವನ್ನು ಅನೇಕರು ಕೇವಲ ಅಜ್ಞಾನದಿಂದ ಪ್ರಯೋಗಿಸಲು ಸಂದರ್ಭವನ್ನೊದಗಿಸುವುದಿಲ್ಲ. ಸಾಮಾನ್ಯವಾಗಿ ಮರಣಕಾಲವು ಸಮೀಪಿಸಿದಾಗ ನೀಡುವ ಈ ಸಂಸ್ಕಾರವನ್ನು ಮರಣವು ಸನ್ನಿಹಿತವಾಗುವಂತೆ ಮಾಡುವ ಸಂಸ್ಕಾರ

ವೆಂದು ಅನೇಕರು ತಪ್ಪಾಗಿ ತಿಳಿದಿರುವರು. ಅಂತ್ಯಾಭ್ಯಂಗವು ಆರೋಗ್ಯವನ್ನೂ, ಅದರಲ್ಲೂ ಆಧ್ಯಾತ್ಮಿಕಾರೋಗ್ಯವನ್ನು ನೀಡುತ್ತದೆ. ಆದರೆ ಮರಣವನ್ನು ಅದೆಂದಿಗೂ ಆಮಂತ್ರಿಸುವುದಿಲ್ಲ.

ಅಂತಿಮ ಅಭ್ಯಂಗದ ಸಂಸ್ಕಾರ

ಅಂತಿಮ ಅಭ್ಯಂಗದ ಕಾಲದಲ್ಲಿ ಪ್ರಾಯಶ್ಚಿತ್ತದ ಸಂಸ್ಕಾರವನ್ನೂ ಶ್ರೀಪ್ರಸಾದದ ಸಂಸ್ಕಾರವನ್ನೂ ಬಳಸುವರು. ಆದುದರಿಂದ ಸಾಮಾನ್ಯವಾಗಿ ಈ ಕಾಲದಲ್ಲಿ ಪ್ರಯೋಗಿಸುವ ಈ ಮೂರು ಸಂಸ್ಕಾರಗಳಿಗೆ 'ಕೊನೆಯ ಸಂಸ್ಕಾರಗಳು' (Last Sacraments) ಎಂದು ಹೆಸರು.

ಮೊತ್ತಮೊದಲು ಪುರೋಹಿತನು ರೋಗಿಗೆ ಪ್ರಾಯಶ್ಚಿತ್ತ ಸಂಸಾರ್ಕವನ್ನು ಬಳಸಿ, ಶ್ರೀಪ್ರಸಾದವನ್ನು ನೀಡುವನು. ಈ ಕಾಲದಲ್ಲಿ ಶ್ರೀಪ್ರಸಾದವನ್ನು 'ಪಯಣಕ್ಕಾಗಿ ಆಹಾರ' ವೆಂದು (viaticum) ಕರೆಯುವರು.

ಅನಂತರ ಪವಿತ್ರ ಗುರುವಾರ (Mandy Thursday) ದಂದು ಬಿಷಪ ಸ್ವಾಮಿಗಳಿಂದ ಹರಲಸಲ್ಪಟ್ಟ ಪವಿತ್ರ ತೈಲವನ್ನು ರೋಗಿಯ ಕಣ್ಣು, ಕಿವಿ, ಮೂಗು, ತುಟಿ ಮತ್ತು ಕೈಕಾಲುಗಳಿಗೆ ಸಿಲುಬೆಯಾಕಾರದಲ್ಲಿ ಹಚ್ಚುವನು. ಪ್ರತಿಸಲವೂ ಈ ಪವಿತ್ರ ಅಭ್ಯಂಗದಿಂದ ಮತ್ತು ಆತನ ಅತ್ಯಂತ ಉದಾರಕರುಣೆಯಿಂದ ಸ್ವಾಮಿಯು ನೀನು ನಿನ್ನ ದೃಷ್ಟಿ (ಶ್ರವಣ,ವಾಕ್....) ಯಿಂದ ಮಾಡಿದ ತಪ್ಪುಗಳನ್ನು ಕ್ಷಮಿಸಲಿ" ಎನ್ನುವನು. ತೈಲಾಭ್ಯಂಗವು ಪೂರ್ಣವಾದೊಡನೆ ರೋಗಿಯ ದೇಹ ಹಾಗೂ ಆತ್ಮಗಳನ್ನು ಭಗವಂತನು ಗುಣಪಡಿಸಲೆಂದೂ ಹಿತವೆಂದು ತೋರಿದರೆ ಆರೋಗ್ಯವನು ನೀಡಲೆಂದೂ ಪ್ರಾರ್ಥನೆಯಿದೆ. ಕೊನೆಗೆ ಜಗದ್ಗುರುವಿನ್ನ ಆಶೀರ್ವಾದ (Papul Blessing) ವನ್ನು ನೀಡುವುದುಂಟು. ಈ ಆಶೀರ್ವಾದ ಪಡೆದು ರೋಗಿಯು ಮರಣಹೊಂದಿದರೆ ಆತನು ಗೈದ ಪಾತಕಗಳ ವಿಮೋಚನೆಯಾಗಿದ್ದರೂ ನೀಡಬೇಕಾದ ಪರಿಹಾರವೂ ಕ್ಷಮಿಸಲ್ಪಡುವುದು.

ವಿವಿಧ ಅಂಗಗಳಿಗೆ ತೈಲಾಭ್ಯಂಗವನ್ನು ಮಾಡುವಷ್ಟು ಹೊತ್ತು

ರೋಗಿಯೂ ಜೀವದಿಂದಿರುವ ಲಕ್ಷಣಗಳು ಕಾಣದಿರುವಾಗ ತೈಲವನ್ನು ಹಣೆಗೆ ಮಾತ್ರವೇ ಹಚ್ಚುವುದುಂಟು.

ಅಂತೂ ಕ್ರಿಸ್ತಸ್ವಾಮಿಯಲ್ಲಿ ಸತ್ತವರು ಕ್ರಿಸ್ತಸ್ವಾಮಿಯಂತೆ ಪುನರುತ್ಥಾನ ಹೊಂದುವರು. ಆದುದರಿಂದ ಭಕ್ತ ವಿಶ್ವಾಸಿಗಳಿಗೆ ಸಾವೆಂಬುದು ಜೀವನದ ಅತ್ಯಗತ್ಯ ವಿಷಯವೊಂದಾಗಿದೆ. ಐಹಿಕ ಜೀವನದ ಅನಂತರ ಅನಂತ ಜೀವವನ್ನು ಪಡೆಯಬೇಕಾದರೆ ಭಗವಂತನ ಸ್ನೇಹ ಸಂಪಾದಿಸಿ, ಮೃತ್ಯುದ್ವಾರದಿಂದ ಆತನ ಸನ್ನಿಧಿಗೆ ನಮ್ಮ ಆತ್ಮವು ಹೋಗಬೇಕು. ಅಂತಿಮಃಕಾಲವು ಹಿತವಾಗಬೇಕೆಂದು ಈ ಸಂಸ್ಕಾರವನ್ನು ಪ್ರಯೋಗಿಸುವರು. ಆದುದರಿಂದ ಮರಣಕಾಲದಲ್ಲಿ ಇದು ದೊರೆಯುವಂತೆ ಮಾಡಬೇಕು.

ಪುರೋಹಿತಾಭಿಷೇಕ (Holy Cerder)

ಶ್ರೀಸಭೆಯು ಅಂದೊಂದು ಸಮಾಜವಾಗಿದೆ. ಅದು ಸುಸೂತ್ರವಾಗಿ ನಡೆಯುವಂತೆ, ಜೀವನದ ವಿವಿಧ ವಿಷಯಗಳನ್ನು ಧರ್ಮಸೂತ್ರಗಳಿಗನ್ವಯಿಸಿ ಸರಿತಪ್ಪುಗಳನ್ನು ತೋರಿಸಲು ಕೆಲವು ಅಧಿಕಾರಿಗಳು ಅಗತ್ಯ. ಅಂತಹ ಅಧಿಕಾರಿವರ್ಗವನ್ನು ಪವಿತ್ರೀಕರಿಸಿ, ಅವರು ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುವಂತೆ ಅವರನ್ನು ದೀಕ್ಷಾಬದ್ಧರನ್ನಾಗಿ ಮಾಡಲು ಪೌರೋಹಿತ್ಯದ ಸಂಸ್ಕಾರವನ್ನು ಕ್ರಿಸ್ತನು ಸ್ಥಾಪಿಸಿರುವನು.

ಪುರೋಹಿತ ವರ್ಗಕ್ಕೆ ನಾಲ್ಕು ಬಗೆಯ ಅಧಿಕಾರಗಳನ್ನು ಈ ಸಂಸ್ಕಾರವು ನೀಡುವುದು: ೧. ಕಥೋಲಿಕ ಪೂಜೆಯಾದ ಬಲಿಯರ್ಪಣೆಯನ್ನು ಮಾಡುವುದು. ೨. ವಿವಿಧ ಸಂಸ್ಕಾರಗಳನ್ನು ನೀಡುವುದು ೩. ಪವಿತ್ರೀಕರಿಸುವುದೂ, ಹರಸುವುದೂ. ೪. ಭಗವಂತನ ನುಡಿಯನ್ನು ಬೋಧಿಸುವುದೂ, ರಕ್ಷಣೆಯ ಕಾರ್ಯದಲ್ಲಿ ಭಕ್ತಜನರನ್ನು ಮುನ್ನಡೆಯಿಸುವುದು.

ಭಗವಾನ್ ಯೇಸುಕ್ರಿಸ್ತನು ಈ ಅಧಿಕಾರಗಳನ್ನು ತನ್ನ ಶಿಷ್ಯರಿಗೆ ನೀಡಿರುವ ವಿಚಾರವನ್ನು ಈ ಮಾತುಗಳು ಸ್ಪಷ್ಟಗೊಳಿಸುತ್ತವೆ. "ಇದನ್ನು ನನ್ನ ಸ್ಮರಣೆಗೆ ಮಾಡಿರಿ" (ಲೂಕ ೨೨, ೧೯).

"ಪಿತನು ನನ್ನನ್ನು ಕಳುಹಿಸಿದಂತೆ, ನಾನೂ ನಿಮ್ಮನ್ನು ಕಳುಹಿಸುವೆನು.

ಪವಿತ್ರಾತ್ಮವನ್ನು ಸ್ವೀಕರಿಸಿರಿ. ಯಾರ ಪಾತಕಗಳನ್ನು ನೀವು ಕ್ಷಮಿಸುವಿರೊ ಅವು ಕ್ಷಮಿಸಲ್ಪಡುವವು ; ಯಾರ ಪಾತಕಗಳನ್ನು ನೀವು ಉಳಿಸುವಿರೊ ಅವು ಉಳಿಯುವುವು. [ಯೋಹಾನ ೨೧, ೨೧. ೨೩]

"ನೀನು ಅದಾವುದನ್ನು ಜಗತ್ತಿನಲ್ಲಿ ಬಂಧಿಸುವೆಯೋ ಅದು ಮೋಕ್ಷದಲ್ಲಿಯೂ ಬಂಧಿಸಲ್ಪಡುವುದು ; ಅದಾವುದನ್ನು ನಾನು ಬಿಡಿಸುವೆಯೋ ಅದು ಮೋಕ್ಷದಲ್ಲಿಯೂ ಬಿಡಿಸಲ್ಪಡುವುದು " [ಮತ್ತೇಯ ೧೮, ೧೮]

"ಆದುದರಿಂದ ನೀವು ಹೋಗಿ ಸಕಲ ಜನಾಂಗಗಳಿಗೂ ಬೋಧಿಸಿರಿ. ಪಿತನ, ಸುತನ, ಪವಿತ್ರಾತ್ಮನ ನಾಮದಲ್ಲಿ ಅವರಿಗೆ ಜ್ಞಾನಸ್ನಾನವನ್ನು ನೀಡಿರಿ. ನಾನು ನಿಮಗೆ ಆಜ್ಞಾಪಿಸಿದುದೆಲ್ಲವನ್ನೂ ಅನುಸರಿಸಲು ಅವರಿಗೆ ಕಲಿಸಿರಿ" [ಮತ್ತೇಯ ೨೮, ೧೦-೩೦].

ಭಗವಾನ್ ಯೇಸುಕ್ರಿಸ್ತನು ಸಕಲವಿಷಯಗಳಲ್ಲಿ ಪೂರ್ಣಾಧಿಕಾರವನ್ನು ತನ್ನ ಶಿಷ್ಯರಿಗಿತ್ತನು. ಅವರೆಲ್ಲರಿಗೆ ಅಧಿನಾಯಕನಾಗಿ ಪೇತ್ರನನ್ನು ಮಾಡಿದನು. ಅವರ ಅಧಿಕಾರಗಳು ಅವರ ಅನಂತರ ಅವರ ಸಾಲಿಗೆ ಬಂದವರಿಗೆ ದೊರಕಿದುವು. ಅವರೇ ಬಿಷಪರು. ಆದರೆ ಅವರು ತಮ್ಮ ಅಧಿಕಾರದ ಕೆಲವಂಶವನ್ನು ಪುರೋಹಿತರಿಗೂ ನೀಡುವರು ಬಿಷಪರು ಹಿರಿಯ ಪುರೋಹಿತರೆಂದರೆ ಪುರೋಹಿತರು ಅವರ ಸಹಾಯಕರು. ಪೌರೋಹಿತ್ಯದ ದೀಕ್ಷೆಯಿಂದ ಆ ಅಧಿಕಾರವು ಅವರಿಗೆ ಬಂದಿರುವುದು ನಿಜವಾದರೂ ಕ್ರಿಸ್ತನ ನಾಮದಲ್ಲಿ ಆತನ ಶ್ರೀ ಸಭೆಯನ್ನು ಆಡಳಿತೆಯನ್ನು ನೋಡುವವರು ಕೆಲವು ಸೂತ್ರಗಳ ಮೂಲಕ ಆ ಅಧಿಕಾರದ ವ್ಯಾಪ್ತಿಯನ್ನು ನಿಯಂತ್ರಿಸುವರು. ಆದರೂ ಸರಕಾರಕ್ಕಾಗಲಿ, ಇತರ ಯಾವತ್ತೂ ಅಧಿಕಾರಿಗಾಗಲಿ, ಆ ಅಧಿಕಾರವನ್ನು ನಿಯಂತ್ರಿಸಲಾಗದು.

ಪೋಪಸ್ವಾಮಿಗಳು ಬಿಷಪರನ್ನು ಆರಿಸುವರು. ಬಿಷಪರು ತನ್ನ ಆಡಳಿತಾಕ್ಷೇತ್ರದ (Diocese)ದಲ್ಲಿ ಬೋಧಿಸುವ (To Teach) ಆಡಳಿತಾಧಿಕಾರವನ್ನು ನಿರ್ವಹಿಸುವ(to rule)ಮತ್ತು ಪ್ರವಿತ್ರೀಕರಿಸುವ [to sanctify] ತ್ರಿಮುಖಕಾರ್ಯಗಳನ್ನು ಮಾಡುವರು. ಬಿಷಪರು

ತನ್ನ ಕ್ಷೇತ್ರವನ್ನು ವಿಭಾಗಿಸಿ ಪುರೋಹಿತರನ್ನು ನೇಮಿಸುವರು. ಪುರೋಹಿತರು ತಮ್ಮ ಕ್ಷೇತ್ರದ (Parish)ಲ್ಲಿರುವ ಜನತೆಯ ಆಧ್ಯಾತ್ಮಿಕ ಕಾರ್ಯಪ್ರವರ್ತನೆಯನ್ನು ನೋಡುತ್ತ, ಜನಸಾಮಾನ್ಯರೊಡನೆ ಪ್ರತ್ಯಕ್ಷವಾದ ಸಂಬಂಧವನ್ನಿಟ್ಟುಕೊಳ್ಳುವರು.

ಪೌರೋಹಿತ್ಯದ ದೀಕ್ಷೆ

ಪುರೋಹಿತಾಭಿಷೇಕವೆಂದು ನಾವು ಕರೆದರೂ ಅಭಿಷೇಕ ಮಾತ್ರವಲ್ಲ. ಆದುದರಿಂದ ಅದನ್ನು ದೀಕ್ಷೆಯೆಂದು ಕರೆಯುವೆವು. ಈ ದೀಕ್ಷೆಯನ್ನು ಏಳು ಹೆಜ್ಜೆಗಳಲ್ಲಿ ನೀಡುವರು. ಅವುಗಳನ್ನು ಸಾಮಾನ್ಯವಾಗಿ ಪವಿತ್ರ ವಿಧಿ(Holy Cerder)ಗಳೆಂದು ಕರೆಯುವರು. ಅವುಗಳಲ್ಲಿ ದ್ವಾರ ಪಾಲಕ(Porter), ವಾಚಕ (Reader), ಭೂತೋಚ್ಚಾಟನಗಾರ (Exoreist) ಮತ್ತು ಪೂಜಾಸೇವಕ (Aelyte) ಎಂಬ ನಾಲ್ಕನ್ನು ಕಿರಿಯ ವಿಧಿ(Minor Orders)ಗಳೆಂದು ಹೇಳುವರು. ಉಪ ಸಹಾಯಕ (Sub Deacon) ಸಹಾಯಕ (Deacon) ಮತ್ತು ಪೌರೋಹಿತ್ಯ(Priest)ಗಳೆಂಬ ಮತ್ತೆ ಮೂರನ್ನು ಹಿರಿಯ ವಿಧಿಗಳೆಂದು ಕರೆಯುವರು. ಈ ಎಲ್ಲ ವಿಧಿಗಳು ಮಾತ್ರ ಏಕಮಾತ್ರ ಪೌರೋಹಿತ್ಯ ದೀಕ್ಷೆಯ ಅಂಗಗಳಾಗಿವೆ–ಅವು ಏಳು ದೀಕ್ಷೆಗಳಲ್ಲ.

ಮೊದಲನೆಯ ನಾಲ್ಕು ವಿಧಿಗಳ ಬಳಿಕ ಚೂಡಾಕರ್ಮ(Tonsure) ಎಂಬ ವಿಧಿಯೊಂದಿದೆ. ಬಿಷಪಸ್ವಾಮಿಗಳು ಉಮೇದ್ವಾರನ ತಲೆಯ ಕೂದಲನ್ನು ಸಿಲುಬೆಯಾಕಾರವಾಗುವಂತೆ ನಾಲ್ಕು ಕಡೆಗಳಲ್ಲಿ ಕತ್ತರಿಸುವರು. ಅದರಿಂದ ವ್ಯಕ್ತಿಯು ವಿರಕ್ತನೆಂದು ತೋರಿಸಲಾಗುವುದು. ಪ್ರಾಪಂಚಿಕ ಸುಖಕ್ಕೆ ವಿಮುಖನಾಗಿ ಶುದ್ಧ ಬ್ರಹ್ಮಚರ್ಯವ್ರತವನ್ನು ಅನುಸರಿಸುತ್ತ ಆಧ್ಯಾತ್ಮಿಕ ಧ್ಯೇಯಸಾಧನೆಯಲ್ಲಿ ವ್ಯಕ್ತಿಯು ನಿರತನಾಗುವನು. ಮುಂದೆ ಆ ಚೂಡಾಕರ್ಮವನ್ನು ಮಾಡಿಸಿಕೊಂಡವರು ಹಿಂತಲೆಯಲ್ಲಿ ವೃತ್ತಾಕಾರವಾಗಿ ಮುಂಡನ ಮಾಡುವರು.

ಪೌರೋಹಿತ್ಯದ ದೀಕ್ಷೆಯ ವಿವಿಧ ವಿಧಿಗಳನ್ನು ಬಿಷಪ ಸ್ವಾಮಿಯವರು ಮಾಡುವರು. ಭಗವಾನ್ ಕ್ರಿಸ್ತನು ತನ್ನ ಶ್ರೀಸಭೆಯ ಜಗದಂತ್ಯದ

ವರೆಗೂ ಮುನ್ನಡೆಯುವಂತೆ ಪುರೋಹಿತರನ್ನೂ ಬಿಷಪರನ್ನೂ ವಿಧಿಯುಕ್ತ ವಾಗಿ ಧೀಕ್ಷಾಬದ್ಧರನ್ನಾಗಿ ಮಾಡುವ ಅಧಿಕಾರವನ್ನಿತ್ತಿರುವನು. ಆದರೆ ಶ್ರೀ ಸಭೆಯು ವಿಶಿಷ್ಟವಾದ ಅರ್ಥವಿರುವಂತೆ ಪೌರೋಹಿತ್ಯದ ದೀಕ್ಷೆಯನ್ನು ಸಪ್ತ ವಿಧಿಗಳಾಗಿ ಅಥವಾ ಸ್ಥಾನಗಳಾಗಿ ವಿಭಜಿಸಿ, ಅದೊಂದು ಭವ್ಯ ಕ್ರಿಯೆಯಾಗಿ ರೂಪಿಸಿದೆ. ಪ್ರತಿಯೊಂದು ವಿಧಿಗೆ ಅನುಗುಣವಾಗಿ ಯುಕ್ತ ಪ್ರಾರ್ಥನೆಗಳೂ ವಚನಗಳ ಮತ್ತು ವಿಷಯುಗಳ ಪ್ರದಾನವೂ ನಡೆಯುವುವು. ಹೀಗೆ ದ್ವಾರಪಾಲಕನು ದೇವಾಲಯದ ಬೀಗದ ಕೈಯನ್ನೂ ವಾಚಕನು ನಿರೂಪಗಳ ಪುಸ್ತಕವನ್ನೂ ಹಾಗೆಯೇ ಇತರ ವಿಧಿಗಳಿಗೆ ಇತರ ವಿಷಯುಗಳನ್ನೂ ಪಡೆಯುವನು.

ಬಿಷಪರ ಪವಿತ್ರೀಕರಣವು (Consecration of Bishops) ವಿಸ್ತೃತವಾದ ವಿಧಿಯು. ಪೂಜಾಕಾಲದಲ್ಲಿಯೇ ಅದನ್ನು ನಡೆಸುವುದಾದರೂ ಮೂವರು ಬಿಷಪರು ಸೇರಿಕೊಳ್ಳಬೇಕಾಗಿದೆ. ಆ ಮೂವರಲ್ಲೊಬ್ಬರು ಪ್ರಧಾನರು.

ಕಥೋಲಿಕ ಶ್ರೀ ಸಭೆಯ ಪೌರೋಹಿತ್ಯದ ವರ್ಗದವರು ಆಜನ್ಮ ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕಾಗಿದೆ. ಪೌರೋಹಿತ್ಯದ ದೀಕ್ಷೆ ಯನ್ನು ಸ್ವೀಕರಿಸಲೇಬೇಕೆಂದು ಯಾರನ್ನೂ ವಿಧಿಸುವುದಿಲ್ಲವಾದರೂ,ಹಾಗೆ ದೀಕ್ಷಾಬದ್ಧರಾಗುವವರು ಶ್ರೀ ಸಭೆಯ ನಿಯಮದಂತೆ ನಡೆಯಬೇಕಾಗಿದೆ. ಈ ಕುರಿತು ಮುಂದೆ ಹೇಳಲಾಗುವುದು.

ಜ್ಞಾನವಿವಾಹ (Matrimony)

ಇಹಲೋಕವನ್ನು ಸತ್‌ಜನರಿಂದಲೂ, ಪರಲೋಕವನ್ನು ಸಂತ ರಿಂದಲೂ ತುಂಬಿಸಿಕೊಳ್ಳುವುದಕ್ಕಾಗಿ ಭಗವಂತನು ವಿವಾಹವನ್ನು ರಚಿಸಿ ದನೆಂದು ಭಕ್ತನೊಬ್ಬನು ಸಾರಿರುವನು. ವಿವಾಹವು ಮಾನವನು ತಿಳಿದುಕೊಂಡ ಅತ್ಯಂತ ಪ್ರಾಚೀನವಾದ ಸಂಧಿಯು. ಶುದ್ಧ ಸಮಾಜ ಜೀವಿಯಾದ ಮಾನವನು ಅದೆಷ್ಟೋ ಸಂಧಿಗಳನ್ನು ಕೈಕೊಂಡಿದ್ದರೂ ವೈವಾಹಿಕ ಸಂಧಿಗೆ ಮೀರಿದ ಇನ್ನೊಂದು ಒಪ್ಪಂದವನ್ನು ಅವನರಿಯನು. ಅದರ ಪಾವಿತ್ರ್ಯವನ್ನು ಹದಗೊಳಿಸಲು, ಮಿತಗೊಳಿಸಲು ಮಾಡಿದ

ಹಂಚಿಕೆಗಳು ಅವನನ್ನು ಪಾಶವೀ ಜೀವದತ್ತ ಸರಿಸಿವೆ. ಭಗವಂತನ ಸೃಷ್ಟಿಕಾರ್ಯದಲ್ಲಿ ಮಾನವನು ಸಹಕರಿಸುವ ಏಕಮಾತ್ರ ಸೌಭಾಗ್ಯವು ವೈವಾಹಿಕ ಕ್ರಿಯೆಯಲ್ಲಿ ಅರ್ಥಾತ್ ದಾಂಪತ್ಯದಲ್ಲಿದೆ.

ಆದುದರಿಂದ ಸಂತಾನಾಭಿವೃದ್ಧಿ ಮತ್ತು ಅದರ ಶಿಕ್ಷಣವೇ ವಿವಾಹದ ಮೂಲೋದ್ದೇಶವು ; ಸತಿಪತಿಯರ ಪರಸ್ಪರ ಸಹಾಯ ಮತ್ತು ಲೈಂಗಿಕ ಸೆಳೆತಗಳ ತೃಪ್ತಿಯು ದ್ವಿತೀಯ ಉದ್ದೇಶವು. ವೈವಾಹಿಕ ಸಂಸ್ಕಾರವು ಸಂತಾನಾಭಿವೃದ್ಧಿಗಾಗಿ ಸತಿಪತಿಯರ ಹೊಣೆಗಾರಿಕೆಯನ್ನೂ ಐಕ್ಯವನ್ನೂ ದೃಢಮಾಡಿ ಅದರ ಕಾರ್ಯಭಾರವನ್ನೂ ಸಮಗ್ರವಾಗಿ ನಿರ್ವಹಿಸಲು ಶಕ್ತಿಯನ್ನೀಯುವುದು. ಆದರೆ ವಿಷಯಲಂಪಟರ ದೃಷ್ಟಿಯಲ್ಲಿ ವೈವಾಹಿಕ ಉದ್ದೇಶಗಳೆರಡೂ ಯುಕ್ತಸ್ಥಾನವನ್ನು ಪಡೆಯವು. ಅದು ಮಾತ್ರ ಸರಿಯಲ್ಲ. ಸಂತಾನೋದ್ದೇಶವು ಪರಸ್ಪರ ಸ್ನೇಹಸೌಹಾರ್ದ ಗಳಿಂದ ಮುನ್ನಡೆಯುವುದು. ಪರಸ್ಪರ ಪ್ರೇಮಭಾವವು ವ್ಯತ್ಯಾಸ ಗೊಂಡಂತೆ ಸಂತಾನದ ಬಳವಿನುಲ್ಲಿಯೂ ವ್ಯತ್ಯಾಸವು ತಲೆದೋರುವುದು. ಸತಿಪತಿಯರು ಐಕಭಾವದಿಂದ ನಡೆದಾಗ ಮಾತ್ರ ಅವರು ತಮ್ಮ ಸಂತಾನ ವನ್ನು ಪ್ರೀತಿಯಿಂದ ಸ್ವೀಕರಿಸುವರು ; ಮಾತ್ರವಲ್ಲ ಅದನ್ನು ಉತ್ತಮ ಧ್ಯೇಯ ಹಾಗೂ ರೀತಿಗಳಿಂದ ಬಳೆಯಿಸುವರು. ದೇವ ಭಯಭಕ್ತಿಗಳಲ್ಲಿ ಮುನ್ನಡೆಸುವರು.

ಕಥೋಲಿಕ ಶ್ರೀಸಭೆಯು ಏಕಸತಿಗೆ ಏತಪತಿಯೆಂಬ ನಿಯಮವನ್ನು ರೂಢಿಗೆ ತಂದಿರುವುದು. ಇದೇನೂ ಆದರ ಕಲ್ಪನೆಯಲ್ಲ. ಅವರಿಬ್ಬರಲ್ಲಿ ಒಬ್ಬರ ಮರಣದವರೆಗೆ ಆ ಸಂಧಿಯು ಅಭೇದ್ಯವಾಗಿದೆ. ಆದರೆ ಘನ ವಾದ ಕಾರಣಗಳಿದ್ದಾಗ ಯೋಗ್ಯ ಧರ್ಮಾಧಿಕಾರಿಗಳ ಅನುಮತಿಯನ್ನು ಪಡೆದು ಸತಿಪತಿಯರು ಪರಸ್ಪರ ಅಗಲಿರಬಹುದು. ಹಾಗಿದ್ದರೂ ಅವರ ಲ್ಲೊಬ್ಬರ ಮರಣದವರೆಗೆ ಇನ್ನೊಬ್ಬರಿಗೆ ಪುನರ್ವಿವಾಹದ ಅಧಿಕಾರವಿಲ್ಲ. ಅದನ್ನರಿದೇ ಜನರು ನ್ಯಾಯಸ್ಥಾನಗಳಿಂದ ವಿಚ್ಛೇದವನ್ನು ಪಡೆಯುವರು. ಪುನರ್ವಿವಾಹವನ್ನು ಬಯಸುವವರು, ತಾವು ಲಗ್ನವಾದ ವ್ಯಕ್ತಿಯನು. ಉಪೇಕ್ಷಿಸಿ ಪರವ್ಯಕ್ತಿಯಲ್ಲಿ ಅನುರಕ್ತರಾದವರು ವಿಚ್ಛೇದವನ್ನು ಬಯಸು ವರು. ಆದರೆ ಪುನರ್ವಿವಾಹದಲ್ಲಿ ಅಪೇಕ್ಷೆಯಿರದವರು ಲಗ್ನವಾದ ವ್ಯಕ್ತಿ

ಯಿಂದ ದೂರವಿರಲು ಬಯಸುವರು. ಹಲವು ಸಂದರ್ಭಗಳಲ್ಲಿಅಂತಹ ಸತಿಪತಿ ಯರು ಪರಸ್ಪರ ಸಮ್ಮತಿಯಿಂದ ಸಂಯಮವನ್ನು ಪಾಲಿಸುತ್ತ ಜೀವಿಸುವರು. ಕೆಲವು ಸಮಾಜಗಳಲ್ಲಿ ಮಾತ್ರವಲ್ಲ ಸರಕಾರಗಳಲ್ಲಿ ವಿವಾಹವಿಚ್ಛೇದಕ್ಕೆ ಮಾತ್ರವಲ್ಲ ವಿಚ್ಛೇದಗೊಂಡವರ ಪುನರ್ವಿವಾಹಕ್ಕೆ ಸಮ್ಮತಿಯಿದೆ. ಹಲವರಂತೂ ಈ ಸಮ್ಮತಿಯಿಂದ ಅನುಕ್ರಮವಾಗಿ ಹಲವಾರು ದಾಂಪತ್ಯ ಗಳನ್ನು ಕಟ್ಟಿಕೊಳ್ಳುವರು. ಆದರೆ ಕಥೋಲಿಕ ಪಂಥದಲ್ಲಿ ಅದು ಸಾಧ್ಯವೇ ಇಲ್ಲ. ಇದಕ್ಕಾಗಿ ವಿವಾಹವು ವಧೂವರರ ಪರಸ್ಪರ ಪರಿಚಯ ಮತ್ತು ಪೂರ್ಣ ಸಮ್ಮತಿಯಿಂದಲೇ ನಡೆಸುವಂತೆ ಶ್ರೀಸಭೆಯು ನೋಡಿ ಕೊಳ್ಳುತ್ತದೆ. ದಾಂಪತ್ಯವು ನಡೆದ ಬಳಿಕ ಕಾರಣಾಂತರಗಳಿಂದ ಸತಿಪತಿಯರು ಪ್ರತ್ಯೇಕಗೊಂಡರೂ ಪರಕೀಯ ವ್ಯಕ್ತಿಯೊಡನೆ ಲಗ್ನ ವಾಗುವುದು ವ್ಯಭಿಚಾರವೆಂದು ಕ್ರಿಸ್ತನು ವಿಶದಗೊಳಿಸಿರುವನು.

"ಮನುಷ್ಯನನ್ನು ಸೃಷ್ಟಿಸಿದವನೆ ಆದಿಯಿಂದಲೇ ಗಂಡು-ಹೆಣ್ಣು ಎಂದು ಮಾಡಿರುವುದನ್ನು ನೀವು ಕೇಳಿಲ್ಲವೇ! ಈ ಒಂದು ಕಾರಣಕ್ಕಾಗಿ ಪುರುಷನು ತನ್ನ ಮಾತಾಪಿತರನ್ನು ಬಿಡಲಿ ಮತ್ತು ಪತ್ನಿಯನ್ನು ಆದರಿಸಲಿ. ಹಾಗೆ ಅವರಿಬ್ಬರೂ ಒಂದಾಗಲಿ ; ಅವರಿಬ್ಬರೂ ಎರಡಲ್ಲ, ಒಂದು. ಆದುದರಿಂದ ಯಾವುದನ್ನು ಭಗವಂತನು ಕೂಡಿಸಿರುವನೊ ಅದನ್ನು ಮನುಷ್ಯನು ವಿಂಗ ಡಿಸದಿರಲಿ"(ಮತ್ತಾಯ ೧೯, ೪-೬).

ಯಾವಾತನು ತನ್ನ ಪತ್ನಿಯನ್ನು ಬಿಟ್ಟು ಇನ್ನೊಬ್ಬಳನ್ನು ಲಗ್ನವಾಗು ತ್ತಾನೊ ಅವನು ಆಕೆಯಲ್ಲಿ ವ್ಯಭಿಚಾರವನ್ನೆಸಗುತ್ತಾನೆ. ಅದೇ ರೀತಿ ಯಲ್ಲಿ ಪತ್ನಿಯು ತನ್ನ ಪತಿಯನ್ನು ತ್ಯಜಿಸಿ ಪರನೊಬ್ಬನನ್ನು ಲಗ್ನವಾದರೆ ಆಕೆಯೂ ವ್ಯಭಿಚಾರವನ್ನೆಸಗುತ್ತಾಳೆ" (ಮಾರ್ಕ ೧೦, ೧೧-೧೨).

"ತನ್ನ ಪತ್ನಿಯನ್ನು ತ್ಯಜಿಸಿ, ಮತ್ತೊಬ್ಬಳನ್ನು ಕೂಡಿಕೊಂಡ ಪ್ರತಿ ಯೊಬ್ಬನೂ ವ್ಯಭಿಚಾರವನ್ನೆಸಗುತ್ತಾನೆ; ಮತ್ತು ಪತಿಯಿಂದ ತ್ಯಜಿಸ ಲ್ಪಟ್ಟವಳೊಡನೆ ಲಗ್ನವಾಗುವವನೂ ವ್ಯಭಿಚಾರವನ್ನು ಮಾಡುತ್ತಾನೆ" (ಲೂಕ ೧೬, ೧೮).

ಸಮಾಜದ ಸುವ್ಯವಸ್ಥೆಗೆ ಅತ್ಯಗತ್ಯವಾದ ಈ ಸಂಸ್ಕಾರದ ಕುರಿತ ಕ್ರಿ.ಶ. ೪೬೪ರಲ್ಲಿ ಮರಣಹೊಂದಿದ ನಾಕ್ಸಿಮುಸ್ ಎಂಬುವನು

"ತಾನು ಯಾವುದನ್ನು ಸ್ವಶಕ್ತಿಯಿಂದ ಸ್ಥಾಪಿಸಿದ್ದನೋ ಆ ದಿವ್ಯಾಶೀರ್ವಾದಗಳನ್ನು ನೀಡಿ, ಅವರನ್ನು ಪವಿತ್ರಗೊಳಿಸಲು ಭಗವತ್‌ಪುತ್ರನು ವೈವಾಹಿಕ ಮಂದಿರಕ್ಕೆ ಹೋಗುವನು" ಎಂದಿರುವನು. ಯಾವ ಮತದಲ್ಲಿಯೂ ಸತಿಪತಿಯರನ್ನು ಬೇರ್ಪಡಿಸಲು ಸಂದರ್ಭಗಳನ್ನೊದಗಿಸಲಿಲ್ಲ. ಆದರೆ ಸ್ವಾರ್ಥವೊಂದರ ಹೊರತು ಯಾವ ಬೇರೆ ಕಾರಣದಿಂದಲೂ ವಿವಾಹವಿಚ್ಛೇದವು ಈವರೆಗೆ ನಡೆಯಲಿಲ್ಲ; ಇನ್ನೂ ನಡೆಯಲಾರದು.

ವೈವಾಹಿಕ ಕ್ರಮ

ವಿವಾಹವು ಒಂದು ಬಂಧವೆಂದು ಹೇಳಿದೆವು. ವಧೂವರರೆಂಬ ಹೆಸರುಗಳಿಂದ ಒಬ್ಬ ಸ್ತ್ರೀಯು ಒಬ್ಬ ಪುರುಷನು ಐಕ್ಯವಾಗುವರು. ಹಾಗೆ ಐಕ್ಯವಾಗಲು ಅವರು ತಮ್ಮ ಸಮ್ಮತಿಯನ್ನು ನೀಡಬೇಕಾಗಿದೆ. ಈ ಸಮ್ಮತಿಯೇ ವಿವಾಹದ ಪ್ರಧಾನಾಂಗವು.

"ಸ್ವಭಾವತಃ ವಂಶದ ಪುನರುತ್ಪತ್ತಿಗೆ ಮೀಸಲಾದ ಜೀವನ ರೀತಿಗೆ, ನಿರಂತರ ಹಾಗೂ ಪರಿಪೂರ್ಣವಾದ ಅಧಿಕಾರವನ್ನು ನೀಡುವ ಮತ್ತು ಸ್ವೀಕರಿಸುವ ಬಂಧಬದ್ಧರಾಗುವ ವ್ಯಕ್ತಿಗಳ ಇಚ್ಛಾಪ್ರವೃತ್ತಿಯೇ ವೈವಾಹಿಕ ಸಮ್ಮತಿಯಾಗಿದೆ" (೧೦೮೧).

ವೈವಾಹಿಕ ಸಮ್ಮತಿಗೆ ಕೆಲವು ವಿಶಿಷ್ಟಲಕ್ಷಣಗಳಿವೆ. ಈ ಸಮ್ಮತಿಯು ಹಲವು ಸಲ ನ್ಯಾಯಪೂರ್ಣವಾಗದಿರಲು ಇರಬಹುದಾದ ಆತಂಕಗಳನ್ನು ಸ್ವಾಭಾವಿಕ ನಿಯಮಗಳೂ ಶ್ರೀ ಸಭೆಯ ನಿಯಮಗಳೂ ಪ್ರಕಟಗೊಳಿಸಿವೆ.

ಸಮ್ಮತಿಯು ಯಾವಾಗಲೂ ಮನಃಪೂರ್ವಕವಾಗಿರಬೇಕು. ಸಮ್ಮತಿಯನ್ನು ನೀಡುವ ವ್ಯಕ್ತಿಗೆ ವಿವೇಕಜ್ಞಾನವಿರಬೇಕಾಗಿದೆ. ಆದುದರಿಂದ ಹುಚ್ಚನೂ ಮನೋದೌರ್ಬಲ್ಯವುಳ್ಳವನೂ ಅದನ್ನು ಯಥಾಯೋಗ್ಯವಾಗಿ ನೀಡಲರಿಯನು. ಅಂತಹ ಸಮ್ಮತಿಯು ವೈವಾಹಿಕ ಬಂಧಕ್ಕೆ ಅನುಗುಣವಾಗುವುದಿಲ್ಲ.

ಆ ಸಮ್ಮತಿಯು ಸ್ವತಂತ್ರವಾಗಿರಬೇಕಲ್ಲದೆ ಯುಕ್ತರೀತಿಯಲ್ಲಿ ಅದರ ವಿವೇಚನೆಯನ್ನು ಮಾಡಿರಬೇಕು. ಸಮ್ಮತಿಯನ್ನು ವ್ಯಕ್ತಗೊಳಿಸಲು ಭಯ, ಒತ್ತಾಯ ಮೊದಲಾದುವು. ಸತಿ–ಪತಿಯರಲ್ಲೊಬ್ಬರಿಗಾದರೂ

ಕಾರಣವಾಗಿದ್ದಲ್ಲಿ, ಅಂತಹ ಸಮ್ಮತಿಯು ಸಿಂಧುವಲ್ಲ. ಆ ವಿವಾಹವೂ ಕ್ರಮಾನುಸಾರವಾಗದು.

ಸಮ್ಮತಿಯು ಬಹಿರಂಗವಾಗಿಯೂ ವ್ಯಕ್ತಗೊಳಿಸಬೇಕಾಗಿದೆ. ಸಾಮಾನ್ಯವಾಗಿ ಮಾತುಗಳಿಂದ ವ್ಯಕ್ತಿಗಳಿಬ್ಬರೂ ಪರಸ್ಪರ ಏಕಕಾಲದಲ್ಲಿ ಅದನ್ನು ವ್ಯಕ್ತಗೊಳಿಸಬೇಕು.

ಮಾತ್ರವಲ್ಲ ಸಮ್ಮತಿಯನ್ನು ನೀಡುವ ಕಾಲದಲ್ಲಿ ವಿವಾಹದ ಸ್ವಭಾವ, ಅದರ ಹಕ್ಕುಬಾಧ್ಯತೆಗಳು ಮೊದಲಾದುವುಗಳ ಕುರಿತು ಬಂಧಬದ್ಧರಾಗುವ ವ್ಯಕ್ತಿಗಳಿಬ್ಬರಿಗೂ ತೃಪ್ತಿಕರವಾದ ಜ್ಞಾನವಿರಬೇಕಾದುದು ಅನಿವಾರ್ಯ.

"ವಂಶದ ಪ್ರತ್ಯುತ್ಪನ್ನದ ಉದ್ದೇಶಕ್ಕಾಗಿ ಪುರುಷ ಮತ್ತು ಸ್ತ್ರೀಯ ಶಾಶ್ವತ ಐಕ್ಯವೇ ವಿವಾಹವೆಂದು ಬಂಧಬದ್ಧರಾಗುವವರು ತಿಳಿದಿರಬೇಕು. ವಿವಾಹದ ಕಾಲದಲ್ಲಿ ಪುರುಷನಾಗಲಿ, ಸ್ತ್ರೀಯಾಗಲಿ. ವಿವಾಹದ ಮೂಲೋದ್ದೇಶದಲ್ಲಿ ಅಜ್ಞಾನಿಯಾಗಿದ್ದರೆ ಆ ಐಕ್ಯವು ನ್ಯಾಯಪೂರ್ಣವಾಗಲಾರದು" (೧೦೮೨).

ವೈವಾಹಿಕ ಸಮ್ಮತಿಯನ್ನು ನೀಡುವ ಸತಿಪತಿಯರೇ ವಿವಾಹದ ಅಧ್ವರ್ಯುಗಳು. ಆದರೆ ಶ್ರೀಸಭೆಯು ಸಾಕ್ಷಿಗಾಗಿ ಪುರೋಹಿತನೊಬ್ಬನು ಇರಬೇಕೆಂದು ವಿಧಿಸುತ್ತದೆ. ಪುರೋಹಿತನಲ್ಲದೆ ಇನ್ನಿಬ್ಬರ ಮುಂದೆ ಸಮ್ಮತಿಯು ನೀಡಬೇಕಾಗಿದೆ.

ವೈವಾಹಿಕ ಸಂಸ್ಕಾರವೊಂದರಲ್ಲಿ ಉದ್ಭವವಾಗುವಷ್ಟು ಸಮಸ್ಯೆಗಳು ಇತರ ಆರು ಸಂಸ್ಕಾರಗಳನ್ನೊಂದಾಗಿ ತೆಗೆದುಕೊಂಡರೂ ಉದ್ಭವವಾಗುವಂತಿಲ್ಲ ಎಂದು ಕಥೋಲಿಕ ಧರ್ಮಾಧಿಕಾರಿಗಳು ಹೇಳುತ್ತಿರುವರು. ಉಳಿದ ಸಕಲ ಸಂಸ್ಕಾರಗಳಿಗಿಂತಲೂ ವಿವಾಹ ಸಂಸ್ಕಾರವು ನಿಸರ್ಗಕ್ಕೆ ಅಧಿಕತರದಲ್ಲಿ ಸಮೀಪವಾಗಿದೆ. ಮಾತ್ರವಲ್ಲ ಅದರ ಆಶಯವನ್ನು ಅತಿಕ್ರಮಿಸುವ ವಿಧಾನಗಳು ಹಲವು. ಆದುದರಿಂದಲೇ ಅಷ್ಟು ಸಮಸ್ಯೆಗಳು! ಪ್ರಕೃತದಲ್ಲಿ, ಅಂತಹ ಸಮಸ್ಯೆಗಳಲ್ಲಿ ಎರಡನ್ನು ಮಾತ್ರ ತುಸು ವಿವೇಚಿಸಿಕೊಳ್ಳಬೇಕಾಗಿದೆ.

ಮಿಶ್ರವಿವಾಹ (Mixed Marriage)

ವಿವಾಹದ ಮೂಲಕ ಗಂಡುಹೆಣ್ಣುಗಳಿಬ್ಬರು ಐಕ್ಯವಾಗುವರೆಂಬುದನ್ನು ನಾವು ನೋಡಿರುವೆವು. ಅವರ ಬಂಧವು, ಆ ಐಕ್ಯವು ಅದಷ್ಟು ಸಮರಸ ವಾಗಿರಬೇಕಾಗಿದೆ. ಮತಭಾವನೆಯೂ ಅದಕ್ಕೆ ಪೂರಕವಾಗಿದೆ. ಹಾಗಿರುವಾಗ ವಿವಿಧ ಮತಗಳ ಇಬ್ಬರು ಕೂಡಿಕೊಳ್ಳುವಾಗ ಅವರ ಐಕ್ಯಕ್ಕೆ ಹಲವು ಸಲ ಬಾಧಕಗಳೇಳುವುವು. ದಾಂಪತ್ಯದ ಮೊದಲ ದಿನಗಳಲ್ಲಿ ಅವರಿಬ್ಬರೂ ಬಹುಜಾಗ್ರತೆಯಿಂದ ನಡೆದುಕೊಳ್ಳುವರಾದರೂ ಮುಂದೆ ಆ ಜಾಗ್ರತೆಯು ಮಾಯವಾಗಿ ಹೋಗುವುದು ಬಹುಸುಲಭವು. ಅಂತಹ ಸಂದರ್ಭಗಳಲ್ಲಿ ನಾಲ್ಕು ವಿಧದ ಪ್ರಶ್ನೆಗಳು ಬರುತ್ತವೆ.

ಮೊದಲನೆಯದಾಗಿ ಅವರ ಮತದ ಪ್ರಶ್ನೆ : ಸತಿಪತಿಗಳಿಬ್ಬರೂ ತಮ್ಮ ಮತದ ಆದೇಶಗಳಂತೆ ನಡೆಯಬೇಕಾಗಿದೆ. ಆದರೆ ಅವರಿಬ್ಬರೂ ಮಧ್ಯಮ ಮಾರ್ಗವನ್ನು ಹಿಡಿಯುವ ಸಂದರ್ಭಗಳೇ ಹೆಚ್ಚು. ಪರಸ್ಪರ ವಿರೋಧ ವಾದ ಮತವು ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಒಬ್ಬರು ಇನ್ನೊಬ್ಬರ ಭಾವನೆ ಯನ್ನು ಸ್ವೀಕರಿಸುವುದೇ ಹೆಚ್ಚು. ಅಂದರೆ ಇನ್ನೊಬ್ಬರ ಮತಭಾವನೆಗೆ ಅಲಕ್ಷ್ಯವು ಬಂದಿತು. ಮಧ್ಯಮಾರ್ಗದಿಂದಂತೂ ಇಬ್ಬರ ಮತಗಳಿಗೂ ಹಾನಿಯೊದಗುವುದು. — ಆದುದರಿಂದಲೇ ಮಿಶ್ರವಿವಾಹವು ಇಬ್ಬರ ಲ್ಲೊಬ್ಬರಿಗಾದರೂ ಹಾನಿಕರವಾಗುವುದು.

ಎರಡನೆಯದಾಗಿ ನೈತಿಕ ಭಾವನೆಗಳ ಸಮಸ್ಯೆ. ಮತಪ್ರಕ್ರಿಯೆಗಳನ್ನು ಅದಷ್ಟು ಜಾಗ್ರತೆಯಿಂದ ಅವರಿಬ್ಬರೂ ಅನುಸರಿಸಿಕೊಂಡು ಬರಬಹುದು. ಆದರೆ ಒಂದು ಮತದಲ್ಲಿ ಒಂದು ವಿಚಾರವು ಅಪರಾಧವೆಂದಿರುವಾಗ ಇನ್ನೊಂದರಲ್ಲಿ ಅಲ್ಲದಿರಬಹುದು-ಬಹುಸತ್ನೀತ್ವ, ಗರ್ಭಪಾತ, ಗರ್ಭ ನಿರೋಧ ಮೊದಲಾದುವು ಎಲ್ಲ ಮತಗಳಲ್ಲಿಯೂ ಸಮಾನ ನೈತಿಕ ಸ್ಥಾನ ಗಳನ್ನು ಪಡೆದಿಲ್ಲವೆಂಬುದು ಸರ್ವವಿದಿತ. ಹಾಗಿರುವಾಗ ಸತಿಪತಿಯರ ಲ್ಲೊಬ್ಬರಿಗೆ ಇನ್ನೊಬ್ಬರನ್ನು ತನ್ನ ಮತದ ಆದೇಶಕ್ಕೆ ಅನುಗುಣವಾಗಿ ವರ್ತಿಸುವಂತೆ ಮಾಡಿಸುವ ಕಾರ್ಯಭಾರವು ಬರುತ್ತದೆ.

ಇನ್ನು ಮೂರನೆಯದಾಗಿ ಮಕ್ಕಳ ಪ್ರಶ್ನೆ : ಸತಿಪತಿಯರೊಂದಾದ ಬಳಿಕ ಅವರ ಐಕ್ಯದ ಬಾಹ್ಯರೂಪವೇ ಮಕ್ಕಳು. ಬೇರೆ ಬೇರೆ ಮತದ

ಹಿರಿಯರು ತಮ್ಮ ಮಕ್ಕಳಲ್ಲಿ ಯಾರ ಮತದ ಆದೇಶಗಳನ್ನು ಬೇರೂರಿಸಬೇಕೆಂದು ತಿಳಿಯದೆ, ಇಬ್ಬರೂ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸದಿರಬಹುದು.—ಮಗುವಿಗೆ ಧರ್ಮವೇ ಇಲ್ಲ.

ಇನ್ನು ಕೊನೆಯದಾಗಿ ತಮ್ಮ ಒಡನಾಡಿಯ ಸಂಬಂಧವಾಗಿ–ಸತಿಪತಿಯರು ಪರಸ್ಪರ ವಿಷಯಗಳಲ್ಲಿ ಸಹಿಷ್ಣುತೆಯನ್ನೂ ವಿವೇಕವನ್ನೂ ಅದೆಷ್ಟು ಹೆಚ್ಚಾಗಿ ಪ್ರಯೋಗಿಸುವರೋ ಅಷ್ಟು ದೀರ್ಘವಾಗಿ ಅವರ ಬಂಧವು ಬಾಳುವುದು.—ಅಲ್ಲದೆ ಹೋದರೆ ಮೊತ್ತಮೊದಲನೆಯ ಪ್ರಶ್ನೆಯೇ ಪರ್ವತಾಕಾರವಾಗಿ ನಡುವಿನಲ್ಲಿ ನಿಂತು ವಿರಸವು ಉದ್ಭವವಾಗಿ ವಿವಾಹ ವಿಚ್ಛೇದದಲ್ಲಿ ಕೊನೆಗೊಳ್ಳಬಹುದು.

ಇದಕ್ಕಾಗಿಯೇ ಕಥೋಲಿಕ ಶ್ರೀ ಸಭೆಯು ಮಿಶ್ರವಿವಾಹವನ್ನು ವಿರೋಧಿಸುತ್ತದೆ. ಆದರೆ ಬಲವಾದ ಕಾರಣಗಳಿದ್ದಾಗ ಕಥೋಲಿಕೇತರ ವ್ಯಕ್ತಿಯಿಂದ ಕೆಲವು ನಿಯಮಗಳನ್ನು ಅನುಸರಿಸುವ ಶರ್ತದ ಮೇಲೆ ಅನುಮತಿಯನ್ನು ನೀಡುವುದು–ಆ ದಾಂಪತ್ಯದಲ್ಲಿ ಜನಿಸಿದ ಮಕ್ಕಳೆಲ್ಲರೂ ಕಥೋಲಿಕ ಮತದಲ್ಲಿ ಬಳೆಯಿಸಬೇಕೆಂಬುದು ಒಂದು ಅಷ್ಟೇ ಅಲ್ಲ ಕಥೋಲಿಕ ವ್ಯಕ್ತಿ ಪುರುಷನಾಗಿರಲಿ, ಸ್ತ್ರೀಯಾಗಿರಲಿ ತನ್ನ ಒಡನಾಡಿಯನ್ನು ಕಥೋಲಿಕ ಮತಕ್ಕೆ ಪರಿವರ್ತನೆ ಹೊಂದುವಂತೆ, ಉತ್ತಮ ಧರ್ಮಾದರ್ಶ, ಸತತ ಪ್ರಾರ್ಥನೆ, ಮತ್ತು ನಿರಂತರ ಜಾಗ್ರತೆಗಳಿಂದ ಪ್ರಯತ್ನಿಸಬೇಕೆಂದು ಆರಿಸುತ್ತದೆ.

ಸಂತಾನ ನಿಯಂತ್ರಣ (Birth-Control)

ದಾಂಪತ್ಯದ ಫಲವೇ ಸಂತಾನವು. ಅದು ಮಿತವಾಗಿರಬೇಕೆಂಬ ತತ್ತ್ವವನ್ನು ನಾವೊಪ್ಪಬಹುದು. ಕಥೋಲಿಕ ಶ್ರೀಸಭೆಯೂ ಅದನ್ನು ಒಪ್ಪುತ್ತದೆ. ಆದರೆ ಅದನ್ನು ಸಾಧಿಸಲು ಬಳಸುವ ಸಾಧನೋಪಾಯಗಳೂ ಯೋಗ್ಯವಾಗಿರಬೇಕಲ್ಲದೆ ನಿಸರ್ಗಕ್ಕೆ ವ್ಯತಿರಿಕ್ತವಾಗಿರಬಾರದು.

ಇಲ್ಲೊಂದು ದೃಷ್ಟಾಂತವನ್ನು ಕೊಡಬೇಕಾಗಿದೆ : ನಾವು ಬಳೆಯುವುದಕ್ಕೂ ಶಕ್ತಿಸಂಪಾದನೆಗೂ ಯುಕ್ತಾಹಾರವನ್ನು ಸ್ವೀಕರಿಸುವೆವು. ತಿಂದ ಆಹಾರವೆಲ್ಲವೂ ರಕ್ತಗತವಾಗಬೇಕೆಂದು ಸಾಕಷ್ಟು ಪ್ರಯತ್ನಗಳನ್ನು

ನಾವು ಮಾಡುವೆವು. ಆದರೂ ಕೆಲವಂಶವು ತ್ಯಾಜ್ಯ ಪದಾರ್ಥವಾಗಿ ಹೊರಹೋಗುತ್ತದೆ. ಅದು ನಿಸರ್ಗನಿಯಮವು. ಆದರೆ ತಿಂದ ಆಹಾರವೆಲ್ಲವೂ ತ್ಯಾಜ್ಯ ಪದಾರ್ಥವಾಗಿ ಹೊರಹೋಗುವಂತೆ ನಾವು ಮಾಡುವುದಿಲ್ಲ. ಹಾಗೆ ಮಾಡಲೇಬೇಕೆಂದಾದರೆ, ಆಹಾರವನ್ನೇ ನಾವು ಸ್ವೀಕರಿಸುವ ಆಗತ್ಯವಿರದು. ತಿನ್ನುವ ಅಭ್ಯಾಸಕ್ಕಾಗಿ ಯಾರೂ ಆಹಾರ ವನ್ನು ಸ್ವೀಕರಿಸರು. ಬಹು ಹಿಂದೆ ರೋಮನರು ತಿಂದ ಆಹಾರವನ್ನು ಕೃತಕೋಪಾಯಗಳಿಂದ ವಾಂತಿಮಾಡಿ ಪುನಃ ತಿನ್ನುತ್ತಿದ್ದರೆಂದು ಇತಿಹಾಸವು ಹೇಳುತ್ತದೆ. ಆ ದುಷ್ಪ್ರವೃತ್ತಿಯನ್ನು ನಾವು ಅನುಸರಿಸಲಾರೆವು.

ಅಂತೆಯೇ, ದಾಂಪತ್ಯದ ಐಕ್ಯದ, ಮಕ್ಕಳನ್ನು ಪಡೆಯುವ ಮೂಲೋದ್ದೇಶವನ್ನು ನಿಷ್ಫಲಗೊಳಿಸಲು ಕೃತಕಸಾಧನೋಪಾಯಗಳನ್ನು ಬಳಸುವುದು ನೈಸರ್ಗಿಕ ನಿಯಮಕ್ಕೆ ಪ್ರತಿರೋಧವಾಗಿದೆ. ಆದರೆ ನೈಸರ್ಗಿಕ ರೀತಿಯಲ್ಲಿಯೇ ಅದು ತಪ್ಪಿಹೋದರೆ, ಅಥವಾ ಕಡಿಮೆ ಸಾಫಲ್ಯದ ಸಂದರ್ಭವನ್ನು ಬಳಸಿಕೊಂಡರೆ ದೋಷವಾಗದು. ಆದುದರಿಂದ ನಿಸರ್ಗ ನಿಯಮಬಾಹಿರವಾದ ಕೃತಕ ರೀತಿಯ ಗರ್ಭನಿರೋಧವನ್ನು ಯಾವ ರೀತಿಯಿಂದಲಾದರೂ ಅದನ್ನು ಕೈಕೊಂಡಿರಬಹುದು–ಕಥೋಲಿಕರ ಶ್ರೀಸಭೆಯು ವಿರೋಧಿಸುತ್ತದೆ. ದಾಂಪತ್ಯದ ಮೂಲೋದ್ದೇಶವನ್ನು ಭಂಗಗೊಳಿಸಿ ಕೇವಲ ಪಾಶವಿಕ (ಸ್ವಾಭಾವಿಕ) ತೃಪ್ತಿಯನ್ನು ಪಡೆಯುವುದನ್ನು ಭಗವನ್ನಿಯಮ ವಿರೋಧವೆಂದು ಅದು ಸಾರುತ್ತದೆ.

ಇದಕ್ಕಾಗಿ 'ಸಂಯಮ'–ಆತ್ಮಸಂಯಮವನ್ನು ಕೈಕೊಳ್ಳಬೇಕೆಂದು ಶ್ರೀ ಸಭೆಯು ಬೋಧಿಸುತ್ತದೆ. ಸತಿ ಪತಿಗಳಲ್ಲೊಬ್ಬರ ಅಪ್ರಾಯ ಪ್ರಬುದ್ಧತೆ, ದುರ್ಬಲ ದೈಹಿಕ ಪರಿಸ್ಥಿತಿ, ಅಸಾಮಾನ್ಯ ಸನ್ನಿವೇಶಗಳು, ಆರ್ಥಿಕ ಆವಶ್ಯಕತೆಗಳು ದಂಪತಿಗಳಿಗೆ ಸಂಯಮನದ ಆಗತ್ಯವನ್ನು ತಿಳಿಸುವುವು.

ಸಂಯಮ ಅಭ್ಯಾಸದಿಂದ ವ್ಯಕ್ತಿಯ ನೈತಿಕ ಶಕ್ತಿಯು ಬಲ ಹೊಂದುವುದು. ಯುಕ್ತಕಾಲದಲ್ಲಿ ದಾಂಪತ್ಯವನ್ನು ಅನುಭವಿಸುವಾಗ ಅಧಿಕ ತೃಪ್ತಿಯು ಲಭಿಸುವುದು. ಸಂಯಮವನ್ನು ಬಳಸುವ ವ್ಯಕ್ತಿಯು ಧೀರ ವೀರನಂತೆ ಶೋಭಿಸುವನು.

ಬೈಬಲಿನಲ್ಲಿ ‘ ನೀಚಕೃತ್ಯ ’ ವೆಂದು ಕರೆಯಲ್ಪಡುವ ಕೃತಕಗರ್ಭ ನಿರೋಧವನ್ನು ಆಧುನಿಕರು ‘ ಸುವ್ಯವಸ್ಥಿತ ಮಾತೃತ್ವ ’ (planned parenthood) ಜನನ ಚಿಕಿತ್ಸೆ (Brith clinics) ಮೊದಲಾದ ನಿರ್ದುಷ್ಟನಾಮಗಳಿಂದ ಕರೆದು, ಅದರ ಪ್ರಚಾರವನ್ನು ಮಾಡುತ್ತಿರುವುದನ್ನು ನಾವರಿದು, ಆ ಹೊಲಸುತನದಿಂದ ದೂರವಿರಲು ಪ್ರಯತ್ನಿಸಬೇಕಾಗಿದೆ.

“ ಯಾವಾತನು ಅಂತಹ ಮಗುವನ್ನು ನನ್ನ ಹೆಸರಲ್ಲಿ ಸ್ವೀಕರಿಸುವನೊ ಅವನು ನನ್ನನ್ನೇ ಸ್ವೀಕರಿಸುವನು ” (ಮತ್ತೀಯ ೧೮, ೫)

“ಎಳೆಯ ಮಕ್ಕಳನ್ನು ನನ್ನೆಡೆಗೆ ಬರಲು ಬಿಡಿರಿ, ಅವರನ್ನು ತಡೆಯಬೇಡಿರಿ, ಅವರಂತಹರದೇ ಮೋಕ್ಷರಾಜ್ಯವು ” (ಮತ್ತೀಯ ೧೯, ೧೪)

“ (ಕೃತಕ ಗರ್ಭನಿರೋಧ) ಅಂತಹ ಕೃತ್ಯಗಳನ್ನು ಮಾಡುವವರು ಭಗವತ್ ಸಾಮ್ರಾಜ್ಯವನ್ನು ಕಾಣಲಾರರು ” (೧ ಕೊರಿಂತ ೬, ೯–೧೦) ಯಾವನೊಬ್ಬ ಮನುಷ್ಯನು “ ಭಗವಂತನ ದೇಗುಲವನ್ನು ಭ್ರಷ್ಟಗೊಳಿಸುವನಾದರೆ ಅವನನ್ನು ಭಗವಂತನು ನಾಶಗೊಳಿಸುವನು ; ಏಕೆಂದರೆ ಭಗವಂತನ ದೇಗುಲವು ಪವಿತ್ರವಾದುದು. ಆ ದೇಗುಲವು ನೀವೇ ” (೧ ಕೊರಿಂತಿ ೩, ೧೭).

ಉಪಸಂಸ್ಕಾರಗಳು (Sacramentals)

ಭಗವಾನ್ ಯೇಸುಕ್ರಿಸ್ತನು ಸಪ್ತಸಂಸ್ಕಾರಗಳನ್ನು ಸ್ಥಾಪಿಸಿದುದನ್ನು ನಾವು ತಿಳಿದಿರುವೆವು. ಶ್ರೀಸಭೆಯನ್ನು ಕ್ರಿಸ್ತನೇ ಸ್ಥಾಪಿಸಿದನಾದರೂ, ಅದರ ವಶದಲ್ಲಿ ಸಪ್ತಸಂಸ್ಕಾರಗಳ ಸಮೇತ ಸಕಲ ಬಗೆಯ ಆಧ್ಯಾತ್ಮಿಕ ದ್ರವ್ಯಗಳನ್ನು ಭಕ್ತಜನರಿಗೆ ವಿತರಣೆ ಮಾಡುವುದಕ್ಕಾಗಿ ನೀಡಿದ್ದರೂ ಶ್ರೀಸಭೆಯು ಎಂಟನೆಯ ಸಂಸ್ಕಾರವನ್ನು ಸೃಷ್ಟಿಸಲು ಅದು ಸಮರ್ಥವಾಗಲಿಲ್ಲ. ಅದು ಹಾಗೆ ಇನ್ನೊಂದು ಸಂಸ್ಕಾರವನ್ನು ಸ್ಥಾಪಿಸುತ್ತಿದ್ದರೆ ಕ್ರಿಸ್ತನ ಸತ್ಯವು ವಿರೂಪಗೊಳ್ಳುತಿತ್ತು ; ಅಳಿಯುತಿತ್ತು. ಹೀಗಾಗಿ ಸಂಸ್ಕಾರಗಳು ಹೆಚ್ಚಲಿಲ್ಲ, ಕಡಮೆಯಾಗಲಿಲ್ಲ. ಆದರೂ ಕ್ರಿಸ್ತನು ಕೊಟ್ಟ ಅಧಿಕಾರದಿಂದ ಪ್ರೇರಿತವಾಗಿ ಶ್ರೀಸಭೆಯು ಕೆಲವು ವಿಶಿಷ್ಟ ಆಚರಣೆ

ಗಳನ್ನೂ ವಸ್ತುವಿಷಯಗಳನ್ನೂ ಬಳಕೆಗೆ ತಂದಿರುತ್ತದೆ. ಅಂತಹವು ಗಳನ್ನು ನಾವು ಉಪಸಂಸ್ಕಾರಗಳೆನ್ನುತ್ತೇವೆ. ಸಂಸ್ಕಾರಗಳು ಕೃಪಾ ಪ್ರವಾಹವನ್ನು ಧಾರಾಳವಾಗಿ ನೀಡುತ್ತವೆಯಾದರೂ ಉಪಸಂಸ್ಕಾರಗಳು ಅವುಗಳನ್ನು ಪ್ರಯೋಗಿಸುವ ವ್ಯಕ್ತಿಯ ವೈಯಕ್ತಿಕ ಭಕ್ತಿ ಹಾಗೂ ಶ್ರೀ ಸಭೆಯ ಪ್ರಾರ್ಥನೆಗಳ ದ್ಯೋತಕವಾಗಿ ಪುಣ್ಯದಾಯಕವಾಗುತ್ತದೆ. ಉಪ ಸಂಸ್ಕಾರಗಳ ಸಂಖ್ಯೆಯನ್ನು ಶ್ರೀಸಭೆಯು ಹೆಚ್ಚಿಸಬಹುದು, ಇಳಿಸ ಬಹುದು.

ಉಪಸಂಸ್ಕಾರಗಳಲ್ಲಿ ಕೆಲವು ಕ್ರಿಯಾತ್ಮಕಗಳಾದರೆ ಕೆಲವು ಹರಸಲ್ಪಟ್ಟ ವಸ್ತುವಿಷಯಗಳಾಗಿರುವುವು. ಅವುಗಳಲ್ಲಿ ಕೆಲವನ್ನು ತಿಳಿಯಬೇಕು.

೧. ಸಿಲುಬೆಯ ದಾರಿ (way of the cross): ಕ್ರಿಸ್ತನು ಮರಣದಂಡನೆಗೆ ಗುರಿಯಾದ ಬಳಿಕ ಗೊಲ್ಗೊಥಾ ಎಂಬಲ್ಲಿಗೆ ತನ್ನ ಸಿಲುಬೆ ಯನ್ನು ಹೊತ್ತುಕೊಂಡು ಹೋಗಿದ್ದನು. ಅಲ್ಲಿ ಸಿಬುಬೆಯ ಮೇಲೆ ಸತ್ತನು. ಬಳಿಕ ಸಮೀಪದ ತೋಟದಲ್ಲಿ ಆತನ ದೇಹವನ್ನು ಸಮಾಧಿಯಲ್ಲಿಟ್ಟದ್ದರು. ಈ ಪಯಣದ ಹದಿನಾಲ್ಕು ಘಟ್ಟಗಳನ್ನು ವಿವೇ ಚಿಸುತ್ತ, ಕ್ರಿಸ್ತನ ಕೊನೆಗಾಲವನ್ನು ಸ್ಮರಿಸುವುದು.

೨. ಪ್ರಸವಾನಂತರ ಸ್ತ್ರೀಯರ ದೇವಾಲಯ ಸಂದರ್ಶನ (chu-rching of woman) ಯೆಹೂದ್ಯರಲ್ಲಿ ಮಾತ್ರವಲ್ಲ ಇತರ ಮತಗಳ ಲ್ಲಿಯೂ ಪ್ರಸವಾನಂತರ ಮಾತೆಯು ಶುದ್ಧೀಕರಣವನ್ನು ಮಾಡಿಸಿಕೊ ಳ್ಳುವ ಕ್ರಮವಿದೆ. ಕ್ರೈಸ್ತರಲ್ಲಿ ಈ ಪದ್ಧತಿಯು ಬಹು ಆದಿಯಿಂದಲೇ ರೂಢಿಗೆ ಬಂದಿದೆ. ಕಥೋಲಿಕ ಶ್ರೀಸಭೆಯು ಪ್ರಸವವನ್ನು ಅಶುದ್ಧವೆಂದು ತಿಳಿಯುವುದಿಲ್ಲವಾದರೂ, ಮಾತೆಯೂ ಆಕೆಯ ಮಗುವೂ ಅನಂತಭಾಗ್ಯದ ಆನಂದವನ್ನು ಪಡೆಯಲೆಂದು ಸೂಚಿಸುವ ಪ್ರಾರ್ಥನೆಗಳನ್ನು ಮಾಡುತ್ತದೆ.

೩. ಪವಿತ್ರೋದಕ: ಜಲವು ಶುಚಿತ್ವದ ಬಾಹ್ಯಚಿಹ್ನೆಯು. ಪವಿತ್ರೋದಕದ ಪ್ರಯೋಗದಿಂದ ಭಗವಂತನ ಆಶೀರ್ವಾದವು ವ್ಯಕ್ತಿಗೆ ದೊರೆಯುವಂತೆಯೂ, ತಮಃದ ಶಕ್ತಿಗಳಿಂದ ಬಿಡುಗಡೆ ಪಡೆಯುವಂತೆಯೂ ಶ್ರೀಸಭೆಯು ಪ್ರಾರ್ಥಿಸುತ್ತದೆ.

೪. ಹರಸಲ್ಪಟ್ಟ ಗರಿಗಳು ಸೋಗೆಗಳ ರವಿವಾರ (palm sunday)ದಂದು ಸೋಗೆಗಳನ್ನು ಹರಸುವರು. ಹಿಂದೆ ಕ್ರಿಸ್ತನು ಸಸಂಭ್ರಮದಿಂದ ಜೆರೂಸಲೇಮ್ ನಗರದ ಪ್ರವೇಶವನ್ನು ಮಾಡಿದ್ದನು. ಹರಸಲ್ಪಟ್ಟ ಸೋಗುಗಳಿರುವ ಮನೆಯ ಜನರನ್ನು ದೇಹಾತ್ಮಗಳ ಅಪಾಯ ಗಳಿಂದ ಭಗವಂತನು ರಕ್ಷಿಸಲೆಂದು ಶ್ರೀಸಭೆಯು ಪ್ರಾರ್ಥಿಸುತ್ತದೆ.

೫. ಹರಸಲ್ಪಟ್ಟ ವಿಭೂತಿ : ವಿಭೂತಿ ಬುಧವಾರದಂದು ವಿಭೂತಿಯು ಹರಸಲ್ಪಟ್ಟು ಭಕ್ತಜನರ ತಲೆಯ ಮೇಲೆ ಎರಚುವರು. ವಿಭೂತಿಯು ಶೋಕ ಹಾಗೂ ಪಶ್ಚಾತ್ತಾಪದ ಬಾಹ್ಯಚಿಹ್ನೆ. ಆದುದರಿಂದ ಉಪೋಷ್ಯದ ಕಾಲವನ್ನು ಪ್ರವೇಶಿಸುವಂದು ಈ ವಿಭೂತಿಯನ್ನು ಹಾಕುವರು. ಆಗ, " ಎಲೈ ಮನುಷ್ಯನೇ, ನೀನು ಧೂಳಿಯಾಗಿರುವೆ ಮತ್ತು ಧೂಳಿಗೆ ನೀನು ಹಿಂತಿರುಗುವೆಯೆಂದು ನೆನಪಿಡು " ಎಂಬ ಮಾತುಗಳನ್ನು ಪುರೋಹಿತನು ಹೇಳುವನು.

೧೧ ಮಾತಾ ಮರೀಯಳು

ನವೀನ ಆದಮನೊಡನೆ ನವೀನ ಈವಾ

ಹಿಂದಿನ ಅಧ್ಯಾಯಗಳಲ್ಲಿ ಕ್ರಿಸ್ತ ಯೇಸುವಿನ ಕಾರ್ಯ, ಅದು ಮುಂದುವರಿಯುವಂತೆ ಆತನು ಮಾಡಿದ ವ್ಯವಸ್ಥೆ ಮೊದಲಾದುವುಗಳ ಸಂಕ್ಷಿಪ್ತ ಪರಿಚಯುವನ್ನು ನಾವು ಮಾಡಿರುವೆವು. ಆದಿಮಾನವನ ಪತನದ ದುಷ್ಫಲವನ್ನು ನೀಗಲು ನವೀನ ಆದಮ ಭಗವಾನ್ ಯೇಸುಕ್ರಿಸ್ತನು"ಜನರಲ್ಲಿ ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ನಾನು ಬಂದೆನು" (ಯೋಹಾನ ೧೦, ೧೦)ಎಂದು ತಿಳಿಸಿ ಕಾರ್ಯವೆಸಗಿದನು. ಹಿಂದೆ ಆದಿಮಾನವನ ಪತನದಲ್ಲಿ ಸಹಕರಿಸಿದವಳು ಈವಾಳು. ನವೀನ ಆದಮ ಯೇಸುಕ್ರಿಸ್ತನ ರಕ್ಷಣಾದಾಯಕ ಕಾರ್ಯದಲ್ಲಿ ಸಹಕರಿಸಿದವಳು ಆತನ ಮತೆಯ ಮಾತೆ ಮರೀಯಳು. ಈ ವಿಷಯವು ಪತನೋತ್ತರ ಕಾಲದಲ್ಲಿ ಭಗವಂತನು ಸ್ವತಃ ನುಡಿದ ಮಾತುಗಳಿಂದ ವ್ಯಕ್ತವಾಗುತ್ತದೆ. ನಾಗರೂಪದ ಸೈತಾನನನ್ನು ಉದ್ದೇಶಿಸಿ ಭಗವಂತನು, "ಸ್ತ್ರೀಗೂ ನಿನಗೂ, ಆಕೆಯ ಸಂತತಿಗೂ ನಿನ್ನ ಸಂತತಿಗೂ ವೈರವನ್ನು ಹಾಕುವೆನು. ಆಕೆಯು ನಿನ್ನ ಮಸ್ತಕವನ್ನು ಮೆಟ್ಟುವಳು. ಆಕೆಯ ಪಾದದೆಡೆಗಾಗಿ ನೀನು ಕಾದುಕೊಂಡಿರುವೆ" (ಉತ್ಪತ್ತಿ ೩-೧೫) ಎಂದಿರುವನು. ಸೈತಾನನ ಮಸ್ತಕವು ಸ್ತ್ರೀಯ ಸಂತತಿಯಾದ ಕ್ರಿಸ್ತ ಯೇಸುವಿನಿಂದ ತುಳಿಯಲ್ಪಟ್ಟಿತು. ಸ್ತ್ರೀಯು ಜಯಶಾಲಿಯಾದಳು.

ಕಥೋಲಿಕರು ಭಗವಾನ್ ಯೇಸುವಿನ ಮಾತೆಯಲ್ಲಿ ವಿಶೇಷ ಭಕ್ತಿಯನ್ನು ಪ್ರದರ್ಶಿಸುವರು. ಆಧ್ಯಾತ್ಮಿಕಾಭ್ಯಾಸದಿಂದ ಯೇಸುವಿನ ಸನ್ನಿಧಿಯನ್ನು ಪಡೆಯಲು ನೇರವಾಗಿ ಗಮಿಸುವ ಬದಲು, ಆತನ ಮಾತೆಯ

ಮೂಲಕ ಹೋಗುವುದು (Ad Jesum per Mariam) ಬಹು ಸುಲಭವೆಂದು ಅವರು ತಿಳಿದುಕೊಂಡಿರುವರು. ಕ್ರೈಸ್ತ ಧರ್ಮ ಗ್ರಂಥದ ಉತ್ತರಭಾಗವಾದ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನೇ ಕೇಂದ್ರವ್ಯಕ್ತಿಯಾಗಿರುವನು. ಹೀಗಾಗಿ ಆತನ ಮಾತೆ ಮರೀಯಳ ಜೀವನ ವಿಚಾರಗಳನ್ನು ನಾವು ವಿವರವಾಗಿ ಪಡೆಯಲಾರೆವು. ಅಲ್ಲಲ್ಲಿ ಯೇಸುವಿನ ಜೀವನಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಮಾತೆ ಮರೀಯಳ ವಿಷಯಗಳೂ ಉಲ್ಲೇಖಿಸಲ್ಪಟ್ಟವೆಯಾದರೂ ಶ್ರೀಸಭೆಯು ಜಾನಪದ ಹೇಳಿಕೆಗಳಿಂದಲೂ ಭಕ್ತಿಯುತ ಭಾವನೆಗಳಿಂದಲೂ ಮಾತಾ ಮರೀಯಳ ಜೀವನವನ್ನು ಭಕ್ತ ಜನರಿಗೆ ವಿಶದಗೊಳಿಸಿರುತ್ತದೆ. ಕೆಲವು ವಿಚಾರಗಳನ್ನು ನಾವು ತಿಳಿಯಬೇಕಾಗಿದೆ.

ಮರೀಯಳ ಪರಿಶುದ್ಧ ಜೀವನ

ಯೇಸುಕ್ರಿಸ್ತನ ಮಾತೆ ಮರೀಯಳು ಯೆಹೂದ್ಯರ ಪ್ರಥಮ ಪ್ರಸಿದ್ಧ ರಾಜ ದಾವೀದನ ವಂಶದಲ್ಲಿ ಜನಿಸಿದಳು. ಆಕೆಯ ತಂದೆಯು ಯೋಕಿಮ್ ನೆಂಬುವನು ; ತಾಯಿ ಅನ್ನಾ ಎಂಬ ಹೆಸರಿನವಳು. ಪ್ರಾಚೀನ ಲೇಖಕರು ತಿಳಿಸುವಂತೆ ಮರೀಯಳು ಆಕೆಯ ಹಿರಿಯರ ಪ್ರಥಮ ಪುತ್ರಿ–ಹರೆಯದಲ್ಲಿ ಪಡೆದ ಕೂಸು. ಮರೀಯಳಿಗೆ ಸೋದರಿಯರಿದ್ದ ಉಲ್ಲೇಖವಿದೆ. ಆದರೆ ಆ ಸೋದರಿಯರು ಯೋಕಿಮ–ಅನ್ನಾರಿಗೆ ಹುಟ್ಟಿದವರೊ, ಅಥವಾ ಅವರ ಸಹೋದರ ಸಹೋದರಿಯರಿಗೆ ಹುಟ್ಟಿದವರೊ ಸರಿಯಾಗಿ ತಿಳಿದುಬಂದಿಲ್ಲ. ಯೆಹೂದ್ಯರಲ್ಲಿ ಸಮೀಪದ ಸಂಬಂಧಿಕರನ್ನು ಸಹೋದರ–ಸಹೋದರಿಯರೆಂದು ಹೇಳುವ ಪರಿಪಾಠ. ಮಾತ್ರವಲ್ಲ, ಸಹೋದರಿಯರಿಗೆ ಒಂದೇ ಹೆಸರನ್ನು ಇಟ್ಟುಕೊಳ್ಳುವ ಸಂಭವವಿಲ್ಲ. ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಆಕೆಯ ಸಹೋದರಿಯರನ್ನು ಮರೀಯಾ ಎಂದೇ ಕರೆದಿರುವರು, ಆದುದರಿಂದ ಮರೀಯಳು ಆಕೆಯ ತಂದೆ ತಾಯಿಗಳ ಏಕಮಾತ್ರ ಪುತ್ರಿಯಾಗಿರಬಹುದು.

ಮರೀಯಳ ಹುಟ್ಟುಹಬ್ಬವನ್ನು ಸೆಪ್ಟೆಂಬರ್ ಎಂಟರಂದು ಸಂಭ್ರಮದಲ್ಲಿ ಆಚರಿಸುವರು. ನಮ್ಮೂರಲ್ಲಿ ಆ ದಿನವು 'ಕದಿರು ಹಬ್ಬ'ವಾಗಿದೆ.

ಆ ದಿನದ ನವಮಾಸಗಳ ಹಿಂದೆ ಮರೀಯ ಆಕೆಯ ಮಾತೆ ಅನ್ನಾಳ ಉದರದಲ್ಲಿ ಉತ್ಪತ್ತಿಯಾಗಿರೇಕು. ಭಗವಾನ್ ಯೇಸುಕ್ರಿಸ್ತನ ಮಾತೆಯೂ, ಆದಿಮಾನವನ ಪದದಿಂದ ಮಾನವ ಕುಲವನ್ನು ರಕ್ಷಿಸುವ ಕಾರ್ಯದಲ್ಲಿ ಸಹಕರಿಸಲಿದ್ದ ನವಈವಾಳೂ, ಅಸತ್ಯದ ಪಿತನೂ ತಮದ ರಾಜನೂ ಆದ ಸೈತಾನನ ಬಲವನ್ನು ಮೆಟ್ಟುವವಳೂ ಆಗಿ ಜನಿಸಿದವಳು. ಅದೆಂದಿಗೂ ಸಾಮಾನ್ಯ ಮಾನವರಂತೆ ಉದ್ಭವಿಸಳೆಂದು ಶ್ರೀಸಭೆಯು ಸಾರುತ್ತದೆ. ಮರೀಯಳು ಅದಾವಬಗೆಯ ಪಾತಕದ-ಜನ್ಮಪಾತಕದ-ನೆರಳೂ ಇಲ್ಲದೆ. ತನ್ನ ಮಾತೆಯ ಪದರದಲ್ಲಿ ಉದ್ಭವಿಸುವಂತೆ ಭಗವಂತನು ಮಾಡಿದನೆಂದು ಬೋಧಿಸುತ್ತದೆ. ಇದುವೆ ಮರೀಯಳ ಅಮಲೋದ್ಭವವು (Immaculate conception) ಅಥವಾ ನಿರ್ದೋಷಗರ್ಭಸಂಭವವು. ಮರೀಯಳು ತನ್ನ ಪರಿಶುದ್ಧತೆಯನ್ನು ಜೀವನದಲ್ಲಿಯೂ ಉಳಿಸಿಕೊಂಡಳು.

ಯೇಸುಕ್ರಿಸ್ತನು ಪರಮಪುರುಷತ್ರಯೈಕ ಭಗವಂತನ ದ್ವಿತೀಯ ಪುರುಷ ಭಗವತ್‌ಪುತ್ರನೆಂಬ ವಿಷಯವನ್ನು ಮೂರನೆಯ ಅಧ್ಯಾಯದಲ್ಲಿ ನಾವು ನೋಡಿರುವೆವು. ಮಾನವನಾಗಿ ಜನಿಸಿದ ಕ್ರಿಸ್ತನಿಗೆ ಲೌಕಿಕದೃಷ್ಟಿಯಲ್ಲಿ ಪಿತನಿಲ್ಲ-ಆತನು ರೌನೀನನಾಗಿಯೇ ಜನಿಸಿದ, ಆತನನ್ನು ಹಡೆಯುವ ಮುನ್ನವೂ, ಅನಂತರವೂ ಮರೀಯಳು ತನ್ನ ಕನ್ಯಾತ್ವವನ್ನು ಉಳಿಸಿಕೊಂಡ ವಿಚಾರಗಳನ್ನು ಎಂಟನೆಯ ಅಧ್ಯಾಯದಲ್ಲಿ ನಾವು ತಿಳಿದಿರುವೆವು. ಆದುದರಿಂದ ಯೇಸುವಿನ ರಕ್ತಮಾಂಸಗಳು ಕೇವಲ ಮರೀಯಳ ರಕ್ತ-ಮಾಂಸಗಳಿಂದಲೇ ಕೂಡಿಕೊಂಡಿರುವುವು. ಆ ಕಾರಣದಿಂದಾಗಿ ಮರೀಯಳು ಪರಮಪಾವನೆಯಾಗಿರಬೇಕಾದುದು ಅನಿವಾರ್ಯವು. ಇದಕ್ಕಾಗಿಯೇ ಸಂದೇಶವನ್ನು ತಂದ ಗಾಬ್ರಿಯೆಲನು, "ನಮೋ ಮರೀಯೇ, ವರಪ್ರಸಾದಪೂರ್ಣೆಯೇ, ಸ್ವಾಮಿಯು ನಿಮ್ಮೊಡನಿರುವರು, ಸ್ತ್ರೀಯರಲ್ಲಿ ನೀವು ಧನ್ಯರು" (ಲೂಕ ೧, ೨೮) ಎಂದೂ ಆಕೆಯ ಸಂಬಂಧಿತೆ ಎಲಿಜಾಬೆತಳು. ಆಕೆಯ ದರ್ಶನದ ಪ್ರಥಮದಲ್ಲಿಯೇ "ಸ್ತ್ರೀಯರಲ್ಲಿ ನೀನು ಧನ್ಯೆ, ನಿನ್ನ ಉದರದ ಕೂಸು ಕೂಡ ಧನ್ಯನು" (ಲೂಕ ೧, ೪೨) ಎಂದೂ ಅಭಿನಂದಿಸಿದ ವಿಷಯವು ಗಣನೀಯವಾಗಿದೆ.

ಮರೀಯಳು ಭಗವಾನ್ ಯೇಸುಕ್ರಿಸ್ತನ ಮಾತೆ. ಏಸುವು ಆಕೆಯಲ್ಲಿ ಜನಿಸುವಾಗ ಆತನ ದೈವತ್ವವು ತಿಲದ ಮರೆಯ ತೈಲದಂತೆ ಕಣ್ಮರೆಯಲ್ಲಿತ್ತು. ಆದುದರಿಂದ ಮರೀಯಳನ್ನು ದೇವಮಾತೆಯೆಂದು ಸಂಬೋಧಿಸುವರು. ಹಾಗಿದ್ದರೂ ಮರೀಯಳಲ್ಲಿ ದೈವತ್ವವಿಲ್ಲ. ಆಕೆಯು ಭಗವಂತನ ಸೃಷ್ಟಿಯು. ಆದರೆ ಸಾಮಾನ್ಯ ಮೃತ್ಪಿಂಡ ಮಾನವರಲ್ಲಿಯೇ ಸರ್ವಶ್ರೇಷ್ಠವಾದ ಸೃಷ್ಟಿಯು.

ಮರೀಯಳ ಪ್ರಭಾವ

ಕಥೋಲಿಕರ ಮರೀಯಳ ಮಧ್ಯಸ್ಥಿಕೆಯಲ್ಲಿ ಅಧಿಕ ವಿಶ್ವಾಸವನು ತಾಳುವರು. ಯೇಸುವಿನ ಅರ್ಥಾತ್ ಭಗವಂತನ ಸನ್ನಿಧಾನಕ್ಕೆ ಗಮಿಸಲು ಮರೀಯಳ ಮೂಲಕ ಸುಲಭವೆಂದು ಅರಿತಿರುವರು. ಮರೀಯಳು ತನ್ನ ಮಧ್ಯಸ್ಥಿಕೆಯ ಪ್ರಭಾವವನ್ನು ಯೇಸುವಿನ ಜೀವಕಾಲದಲ್ಲಿಯೇ ಪ್ರದರ್ಶಿಸಿರುವಳು. ಯೇಸುವು ಆಕೆಯ ಮಾತಿಗಾಗಿ ಪ್ರಥಮ ಪವಾಡವನ್ನು ಮಾಡಿದನು.

ಯೇಸುವು ಧರ್ಮಪ್ರಚಾರದ ತನ್ನ ಕಾರ್ಯವನ್ನು ಕೈಕೊಂಡಿದ್ದ ಕಾಲವದು. ಆತನು ತನ್ನ ಶಿಷ್ಯರನ್ನು ಆರಿಸುತ್ತ, ಸಂದರ್ಭ ಸಿಕ್ಕಿದಾಗ ಜನತೆಗೆ ತನ್ನ ಸಂದೇಶವನ್ನು ಬಿತ್ತರಿಸುತ್ತಿದ್ದನು. ಮರೀಯಳ ಊರಿನ ಕಾನಾ ಎಂಬಲ್ಲಿ ವಿವಾಹವೊಂದಿತ್ತು. ಮರೀಯಳೂ ಯೇಸುವೂ ಆತನ ಶಿಷ್ಯರೂ ವಿವಾಹದ ಭೋಜನಕ್ಕೆ ಆಮಂತ್ರಿಸಲ್ಪಟ್ಟಿದ್ದರು. ಆದರೆ ಪದ್ಧತಿಯಂತೆ ಆಮಂತ್ರಿತರು ಔತಣದೂಟದಲ್ಲಿ ಭಾಗಿಗಳಾಗಿದ್ದರು. ಆದರೆ ಎಲ್ಲ ವಿಚಾರಗಳೂ ಸುಸೂತ್ರವಾಗಿ ಅತಿಥಿಗಳ ಮೆಚ್ಚುಗೆಗೆ ಪಾತ್ರವಾಗಿ, ನಡೆಯುತ್ತಿರುವಾಗ ರಸದೂಟದ ಅಗತ್ಯವೆನಿಸಿದ ಪಾನೀಯದ ಕೊರತೆಯಾಯಿತು. ಅತಿಥಿಗಳಿಗೆ ಅತೃಪ್ತಿಯಾಗುವಂತಾಯಿತು. ಸಕಲ ವಸ್ತುಗಳಲ್ಲಿಯೂ ಉದಾರನಾಗಿದ್ದ ಯಜಮಾನನು ಈ ಒಂದು ಕೊರತೆಯಿಂದಾಗಿ ಖಿನ್ನನಾದನು. ಮರೀಯಳು ಅದನ್ನರಿತಳು. ತಾನಾಗಿ ಯೇಸುವಿನ ಬಳಿಗೆ ಬಂದು ದ್ರಾಕ್ಷಾರಸದ ಕೊರತೆಯನ್ನು ಅರುಹಿದಳು. ಯೇಸುವಿಗೆ ತನ್ನ ಮಾತೆಯ ಇಂಗಿತದ ಅರ್ಥವಾಯಿತು. ಆದರೂ

ಆಕೆಯು ಬೇರೆನನ್ನೂ ತನಗೆ ಸೂಚಿಸದಿದ್ದರೂ, ಅಲ್ಲಿಯೇ ಸಮೀಪದಲ್ಲಿ ಶುದ್ಧೀಕರಣಕ್ಕಾಗಿ ನೀರನ್ನು ತುಂಬಿಸಿಟ್ಟ ಭರಣಿಗಳಿದ್ದುವು. ಅವುಗಳನ್ನು ನೀರಿನಿಂದ ಪುನಃ ತುಂಬಿಸುವಂತೆ ಸೇವಕರಿಗೆ ಆಜ್ಞಾಪಿಸಿದನು. ತನ್ನ ಪವಾಡಮಯ ನೋಟದಿಂದ ಅವುಗಳ ಮೇಲೆ ಕೈಯಾಡಿಸಿ ಮನೆಯ ಯಜಮಾನನಲ್ಲಿಗೊಯ್ಯುವಂತೆ ಸೂಚಿಸಿದನು. ಆ ನೀರು ತನ್ನ ಸ್ವಾಮಿಯನ್ನು ಕಂಡು ಕೆಂಪೇರಿತ್ತು. ಆ ಆನಂದದಿಂದ ವಿವಾಹ ಸಂಭ್ರಮದ ಕಳೆಯೇರಿತು.

ಮರೀಯಳ ಮಧ್ಯಸ್ಥಿಕೆಯ ಅರಿವಾಯಿತು. ಇಂದಿಗೂ ಕಥೋಲಿಕರು ಮರೀಯಳ ಮಧ್ಯಸ್ಥಿಕೆಯಲ್ಲಿ ವಿಶ್ವಾಸವನ್ನು ಪ್ರದರ್ಶಿಸುವರು. ಪ್ರತಿಯೊಂದು ಜನಾಂಗದ ಪ್ರತಿಯೊಬ್ಬ ವ್ಯಕ್ತಿಗೆ, ತನ್ನ ಜೀವನ ನಿರ್ವಹಣಕ್ಕೆ, ತನ್ನ ಆಧ್ಯಾತ್ಮಿಕ ಜೀವನದ ಮಾರ್ಗದರ್ಶನಕ್ಕೆ ಕೊರತೆಯಾಗ ಬಹುದಾದ ಭಗವತ್‌ಪ್ರೇಮವೆಂಬ ದ್ರಾಕ್ಷಾರಸವನ್ನು ಆಕೆಯ ಮಧ್ಯಸ್ಥಿಕೆಯಿಂದ ಪಡೆಯಬಹುದು ಎಂದು ಅವರು ತಿಳಿದಿರುವರು. ಅವಳನ್ನು ಕ್ರೈಸ್ತರ ಆಧಾರ' 'ನಿತ್ಯಾಧಾರದ ಮಾನ್ಯೆ' 'ತರುಣಿಯ ಮಾತೆ' ಮೊದಲಾದ ಅನ್ವರ್ಥನಾಮಗಳಿಂದ ಆಕೆಯ ಸೇವೆಯನ್ನು ಬಯಸುವರು.

ಸಂರಕ್ಷಣೆಯ ಕಾರ್ಯದಲ್ಲಿ

ಮರೀಯಳು ದೇವಮಾತೆಯಾಗುವ ಸಂದೇಶವನ್ನು ಸುಮನಸನಾದ ಗಾಬ್ರಿಯೇಲನು ಸೂಚಿಸಿದಾಗಲೇ ತಾನು ಪಡೆಯುವ ಮಹತ್ಪದವಿಯೊಡನೆ ಬಂದ ಹೊಣೆಗಾರಿಕೆಯ ಕೆಲವಂಶವನ್ನು ಅರಿತಿದ್ದಳಾದರೂ ಪರಿಪೂರ್ಣಾನುಭವವಾಗಿರಲಿಲ್ಲ. ಆದರೆ ತಾನು ಪಡೆದ ಕುಮಾರನನ್ನು ಯೆಹೂದ್ಯರ ಪದ್ಧತಿಯಂತೆ ದೇವಾಲಯಕ್ಕೊಯ್ದು ಯುಕ್ತ ಕಾಣಿಕೆಗಳನ್ನು ಸಮರ್ಪಿಸಿ ಶುದ್ಧೀಕರಣವನ್ನು ಮಾಡಿಸಿದ ಉತ್ತರಕ್ಷಣದಲ್ಲಿ ತಿಳಿಯಿತು. ಸಿಮಿಯೋನನೆಂಬ ವೃದ್ಧನು ಭಗವತ್‌ಪ್ರೇರಣೆಯಿಂದ ದೇವಾಲಯಕ್ಕೆ ಬಂದಿದ್ದು, ಕುಮಾರ ಯೇಸುವನ್ನು ಹಿಡಿದೆತ್ತಿ, ರಕ್ಷಕನನ್ನು ಕಂಡ ಸಂತೋಷದಿಂದ ಭಗವಂತನನ್ನು ಸ್ತುತಿಸಿ, ಮರೀಯಳೊಡನೆ,

"ಇದೋ ಈ ಶಿಶುವು ಅನೇಕರ ಪತನಕ್ಕೂ ಮತ್ತು ಅನೇಕರ

ಪುನರುತ್ಥಾನಕ್ಕೂ, ಮತ್ತು ಪ್ರತಿರೋಧಿಸಲ್ಪಡುವ ಕ್ರಿಯೆಗೂ ಮೀಸಲಾಗಿದೆ. ಅನೇಕ ಹೃದಯಗಳ ಭಾವನೆಗಳ ಬಹಿರಂಗಕ್ಕಾಗಿ, ನಿನ್ನ ಹೃದಯವನ್ನೇ ಕತ್ತಿಯೊಂದು ಭೇದಿಸುವುದು" (ಲೂಕ ೨, ೩೪, ೩೫) ಎಂದು ಹೇಳಿದನು. ಅದಾಗಲೇ ರಕ್ಷಕನ ಕುರಿತು ಪವಿತ್ರ ಗ್ರಂಥಗಳ ವಾಚನದಿಂದ ತಾನು ತಿಳಿದುಕೊಂಡ ವಿಷಯಗಳ ಹಿನ್ನೆಲೆಯಲ್ಲಿ ತಾನು ಸಹಿಸಬೇಕಾದ ವಿವಿಧ ದುಃಖಗಳ ಸ್ಮರಣೆಯೊಂದು ಅವಳ ಸ್ಮೃತಿಪಟಲದಲ್ಲಿ ಸುಳಿಯಿತು. ಅಂದಿನಿಂದ ತನ್ನ ಕುಮಾರನ ಉತ್ಕರ್ಷದಲ್ಲಿ ಆಕೆಯು ಸಂತಸವನ್ನು ತಾಳಿದ್ದರೂ 'ರಕ್ಷಕನ ಸಹಕಾರಿ'ಯಾಗುವ ತನ್ನ ಕಾರ್ಯದಲ್ಲಿ ಅವಳು ಹಿಂಜರಿಯಲಿಲ್ಲ; ಮುಂದೊತ್ತಿದಳು.

ಯೇಸುಕ್ರಿಸ್ತನು ತನ್ನ ಮರ್ತ್ಯ ಜೀವನದಲ್ಲಿ ಕೊನೆಯ ಮೂರು ತಾಸುಗಳಷ್ಟು ಸಿಲುಬೆಯ ಮೇಲೆ ತೂಗುತ್ತ ಸಂರಕ್ಷಣೆಯ ಪೂರ್ಣಾಹುತಿಯನ್ನು ಕೈಕೊಂಡನು. ಮೂರು ವರ್ಷಗಳಷ್ಟು ಕಾಲ ತನ್ನ ಪಿತೃಕಾರ್ಯವನ್ನು ನಿರ್ವಹಿಸುವುದರಲ್ಲಿ ಮುಗಿಸಿದನು. ಆದರೆ ಮೂವತ್ತು ವರ್ಷಗಳಷ್ಟು ದೀರ್ಘಕಾಲವನ್ನು ತನ್ನ ಮಾತೆಗೆ ವಿಧೇಯನಾಗಿಯೇ ಕಳೆದಿರುವನು. ಆದುದರಿಂದ ಆ ಮಾತೆಯು ತನ್ನ ಮಗನಲ್ಲಿ ಮಹತ್ವದ ಪ್ರಭಾವವನ್ನು ಬೀರಿರಬೇಕು. ಎಳವೆಯಲ್ಲಿ ಆಕೆಯ ಸ್ತನ್ಯವನ್ನುಂಡನು. ಬಾಲ್ಯದಲ್ಲಿ ಆಕೆಯಿಂದಲೇ ಅಕ್ಷರಾಭ್ಯಾಸವನ್ನು ಪಡೆದು ಗ್ರಂಥಗಳ ವಾಚನವನ್ನು ಮಾಡಿ ಅರ್ಥವನ್ನು ಬಿತ್ತರಿಸುವಷ್ಟು ಜ್ಞಾನಸಂಪಾದನೆಗೆ ಆಕೆಯಿಂದಲೇ ಪ್ರೋತ್ಸಾಹವನ್ನು ಪಡೆದಿರಬೇಕು. ಕ್ರಿಸ್ತ ಯೇಸುವಿನ ಮಹತ್ವವನ್ನು ತಿಳಿದ ಬಳಿಕ, ವಿದ್ಯಾಸಂಸ್ಥೆಗಳವರು ಆತನನ್ನು ತಮ್ಮ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದುದನ್ನು ಅಥವಾ ಸಂಸ್ಥೆಗೆ ಸಂಬಂಧಿಸಿದ ವಿಚಾರವನ್ನು ಸೇರಿಸಿದ್ದ ವಿಷಯಗಳು ಇತ್ತೀಚೆಗೆ ಪ್ರಕಾಶಕ್ಕೆ ಬರಹತ್ತಿವೆ. ಆದರೆ ಯೇಸುವು ಅದಾವ ರೀತಿಯಲ್ಲಿಯೂ ಪಾಂಡಿತ್ಯ ಸಂಪಾದನೆಗಾಗಿ ಗುರುವನ್ನರಸಿ ಹೋಗಿರಲಿಲ್ಲ. ಆದರೂ ಎ. ಇಸಾಯಸ್ ಪ್ರವಾದಿಯಂತಹ ತತ್ವಲೇಖಕರ ಗ್ರಂಥಗಳನ್ನು ಅನ್ವಯಿಸಿ, ವಿವರಿಸುವ ಸಾಮರ್ಥ್ಯವನ್ನು ಯೇಸುವು ಪಡೆಯಲು ಮರೀಯಳೂ ಸ್ವಲ್ಪಮಟ್ಟಿಗೆ ಯೋಸೆಫನೂ ಕಾರಣರಾಗಿರಬೇಕು.

ಯೇಸುವು ಮಾತೆಯ ಅನುಮತಿಯಿಂದ ಪಿತೃಕಾರ್ಯದಲ್ಲಿ ತೊಡಗಿದ ಬಳಿಕ ಮರೀಯಳಿಗೆ ಆತನ ಸಂದರ್ಶನವು ದಿನನಿತ್ಯದ ಕಾರ್ಯಭಾಗವಾಗಿರಲಿಲ್ಲ. ಆದರೂ ಆಕೆಯ ಹೃದಯವು ಆತನ ಹೃದಯದ ಸಮೀಪವಾಗಿಯೇ ಮಿಡಿಯುತ್ತಿರುವಂತೆ ಆತನ ಚಲನವಲನಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದಳು. ಕೊನೆಗೆ ಆತನ ಮರಣವನ್ನು ಬಯಸುವ ವೈರಿಗಳ ಸಂಖ್ಯೆಯು ಬಲವಾಗುತ್ತಿರುವುದನ್ನು ಆಕೆಯು ತಿಳಿದಳು. ಕೊನೆಗೊಂದು ದಿನ ಆತನನ್ನು ಬಂಧಿಸಿ, ಪಿಲಾತನಲ್ಲಿಗೆ ಮರಣದಂಡನೆಯನ್ನು ಕೊಡಿಸಲು ಪ್ರಯತ್ನಿಸಿದ್ದ ವಿಚಾರವು ಆಕೆಗೆ ತಿಳಿಯಿತು. ಕೂಡಲೇ ಪಿಲಾತನ ರಾಜಗೃಹದ ಸಮೀಪವಾಗಿಯೇ ಬಂದು ಮಗನ ಯಾತನೆಗಳಲ್ಲಿ ತನ್ನ ಪಾಲನ್ನು ವಹಿಸಿದಳು. ಮುಂದೆ ಆ ಮಗನೇ ತನ್ನ ಸಿಲುಬೆಯನ್ನು ಹೊತ್ತು ವಧ್ಯಸ್ಥಾನದೆಡೆಗೆ ಗಮಿಸುವಾಗ ಮುಂದೆಹೋಗಿ ಆತನನ್ನು ಎದುರುಗೊಂಡಳು ; ಇಬ್ಬರ ದೃಷ್ಟಿಗಳೂ ಮಿಲನವಾದುವು. ಮಾತೆತ್ತಲಿಲ್ಲ. ಬಳಿಕ ಗೊಲ್ಗಾಥಾದಲ್ಲಿ ಸಿಲುಬೆಯ ಮೇಲೆ ತೂಗುತ್ತ ಕೊನೆಯುಸಿರೆಳೆವ ಮಗನಿಗೆ ಸಮೀಪವಾಗಿಯೇ ನಿಂತುಕೊಂಡಿದ್ದಳು.

ಯೇಸುವು ತನ್ನನ್ನು ನಿಂದಿಸುತ್ತಿದ್ದವರನ್ನು ಕ್ಷಮಿಸುವಂತೆ ಭಗವಂತನಲ್ಲಿ ಪ್ರಾರ್ಥಿಸಿದನು. ಮರೀಯಳೂ ಉತ್ತಾನಹೃದಯದಿಂದ ಅವರೆಲ್ಲರನ್ನೂ ಕ್ಷಮಿಸಿದಳು. ಆತನು ಮರಣೋನ್ಮುಖನಾಗಲು ತನಗೆ ಸಮೀಪದಲ್ಲಿ ನಿಂತ ಶಿಷ್ಯ ಯೋಹಾನನನ್ನು ಕಂಡನು. ತನ್ನ ಅನಂತರ ತನ್ನ ಮಾತೆಯ ರಕ್ಷಣೆಯನ್ನು ಅವನಿಗೊಪ್ಪಿಸಲು ನಿಶ್ಚಯಿಸಿದನು. ಕೇವಲ ತನ್ನ ನೋಟದಿಂದ ಆತನಿಗೆ ತನ್ನ ಮಾತೆಯನ್ನು ತೋರಿಸಿ "ಇದೋ ನಿನ್ನ ಮಾತೆ" (ಯೋಹಾನ ೧೯, ೨೬)

ಎಂದೂ, ತನ್ನ ತಾಯಿಗೆ ಯೋಹಾನನನ್ನು ತೋರಿಸಿ,

"ಇದೋ ನಿನ್ನ ಮಗನು" (ಯೋಹಾನ ೧೯, ೨೭)

ಎಂದೂ ಹೇಳಿದನು. ಅಂದಿನಿಂದ ಯೋಹಾನನು ಯೇಸುವಿನ ಮಾತೆಯನ್ನು ತನ್ನ ಮಾತೆಯೆಂಬಂತೆ ಕಂಡು ಸಲಹಿದನು. ಕ್ರೈಸ್ತ ಬಾವುಕರು ಈ ಒಂದು ವಿಷಯವನ್ನು ವಿಶದಗೊಳಿಸುತ್ತ ಯೇಸುಕ್ರಿಸ್ತನು ಶಿಷ್ಯ ಯೋಹಾನನ ಜೊತೆಯಲ್ಲಿ ಸಮಸ್ತ ಕ್ರೈಸ್ತರನ್ನು ಮರೀಯಳ

ಮಕ್ಕಳನ್ನಾಗಿ ಮಾಡಿದನೆಂದು ಹೇಳಿರುವರು. ಮಾತ್ರವಲ್ಲ ಕ್ರೈಸ್ತರು ಕ್ರಿಸ್ತನ ಅನುಯಾಯಿಗಳು-ಶಿಷ್ಯರು. ಸಕಲ ಕ್ರೈಸ್ತರಿಗೆ ಯೇಸುವೇ ನಾಯಕನು. ಅವನು ಮಸ್ತಕವೆಂದಾದರೆ ಅವರು ಅಂಗೋಪಾಂಗಗಳು.

"ನಾನೇ ದ್ರಾಕ್ಷೆ ಬಳ್ಳಿಯು, ನೀವು ಆ ಕೊಂಬೆಗಳು" (ಯೋಹಾನ ೧೫, ೫)

ಎಂದು ಯೇಸುವೇ ಹೇಳಿರುವನು. ಮಸ್ತಕವು ಜನಿಸುವಾಗ ಉಳಿದ ಭಾಗವೂ ಜನಿಸುವುದು. ಆದುದರಿಂದ ಮಸ್ತಕದ ಮಾತೆಯಾದ ಮರೀಯಳು ಅಂಗಗಳ ಮಾತೆಯಾಗಿರುವುದು ಅಸಮಂಜಸವಾದುದಲ್ಲ.

ಏಸುವು ಕೊನೆಯುಸಿರನ್ನು ಬಿಟ್ಟನು. ಅನಂತರ ರಾಜ್ಯಪಾಲ ಪಿಲಾತನಿಂದ ಯುಕ್ತ ಅನುಮತಿಯನ್ನು ಪಡೆದು ಯೇಸುವಿನ ದೇಹವನ್ನು ಸಿಲುಬೆಯಿಂದ ಕೆಳಗಿಳಿಸಿ ಮಾತೆಯ ಹಸ್ತಗಳಲ್ಲಿತ್ತರು. ಮಾನವನ ಪಾತಕದ ಪರಿಣಾಮವಾಗಿ ಆಕೆಯ ಜೀವಂತಪುತ್ರನು ನಿರ್ಜೀವನಾಗಿ ಆಕೆಯ ತೊಡೆಯ ಮೇಲೊರಗಿದನು.

ಮರೀಯಳ ಶೋಕವು ಶರಧಿಯಂತಾಯಿತು. ತನ್ನ ಏಕಮಾತ್ರ ಪುತ್ರನ ಮೃತದೇಹವನ್ನು ಅಪ್ಪಿಕೊಂಡ ಮಾತೆಯನ್ನು 'ವ್ಯಾಕುಲ ಮಾತೆ' ಯೆಂದು ಸಂಬೋಧಿಸುತ್ತ, ಅನೇಕರು ಆ ವ್ಯಾಕುಲಗಳಲ್ಲಿ ಮಾತೆಯನ್ನು ಅನುಸರಿಸುವರು.ಮುಂದೆ ಯೇಸುವನ್ನು ಮಿಾಯಿಸಿ, ಸುಗಂಧದ್ರವ್ಯಗಳಿಂದ ಲೇಪಿಸಿ, ಯೆಹೂದ್ಯರ ಪದ್ಧತಿಯಂತೆ ಅಂತ್ಯಕ್ರಿಯೆಯನ್ನು ಜರುಗಿಸಿದರು. ಮರೀಯಳು ತನ್ನಿಂದಾಗುವ ಎಲ್ಲ ಕಾರ್ಯಗಳನ್ನು ಮಾಡಿಸಿದಳು.

ಮೋಕ್ಷದ ರಾಣಿ (Queen of Heaven)

ಮರೀಯಳ ಪುತ್ರನು ತೃತೀಯ ದಿನದಂದು ಪುನರುತ್ಥಾನ ಗೊಂಡನು. ಮರೀಯಳಿಗೆ ಅದೊಂದು ಆನಂದದ ದಿನವಾಗಿತ್ತು. ಮುಂದೆ ನಾಲ್ವತ್ತುದಿನಗಳವರೆಗೆ ಆಕೆಗೂ ಶಿಷ್ಯರಿಗೂ ದರ್ಶನವೀಯುತ್ತ ತನ್ನ ಧರ್ಮಸಂಸ್ಥೆ ಶ್ರೀಸಭೆಯ ವ್ಯವಸ್ಥೆಯನ್ನು ಆತನು ಮಾಡಿದನು. ಕೊನೆಗೆ ಅವರೆಲ್ಲರ ಮುಂದೆ ಮೋಕ್ಷವನ್ನೇರಿದನು. ಮರೀಯಳಿಗೆ ಆಕೆಯ ಪುತ್ರನ ಸಾಕ್ಷಾತ್ಕಾರವು ಇಲ್ಲದಾಯಿತು.

ಹತ್ತನೆಯ ದಿನದಂದು ಭಗವತ್ ಪವಿತ್ರಾತ್ಮನು ಅವರೆಲ್ಲರ ಮೇಲೆ ಬಂದನು. ಅಂದಿನಿಂದ ಕ್ರಿಸ್ತಶಿಷ್ಯರೆಲ್ಲರೂ ಕ್ರಿಸ್ತ ಸಂದೇಶವನ್ನು ಎಲ್ಲೆಡೆಗಳಿಗೂ ಪಸರಿಸತೊಡಗಿದರು. ಮರೀಯಳು ತನ್ನ ಮಗನ ಕಾರ್ಯವು ವಿಸ್ತರಿಸುವುದನ್ನು ನೋಡುವುದರಲ್ಲಿಯೂ ಕೇಳುವುದರಲ್ಲಿಯೂ ಆನಂದವನ್ನು ತಾಳುತ್ತಿದ್ದಳು. ಆದರೂ ಆಕೆಗೆ ತನ್ನ ಏಕಮಾತ್ರ ಪುತ್ರನ ಸನ್ನಿಧಾನವನ್ನು ಸೇರುವ ಬಯಕೆಯು ಹಿರಿದಾಯಿತ್ತು. ಕೊನೆಗೊಂದು ದಿನ ಗಾಬ್ರಿಯೆಲನು ಆಕೆಗೆ ದರ್ಶನವಿತ್ತು ಆಕೆಯ ಆಶೆಯು ಕೊನೆಗೂಡುವ ಸಂದೇಹವನ್ನಿತ್ತನು. ಮರೀಯಳು ತನ್ನ ಮಗನೊಡನೆ ಜೀವಿಸಿದ್ದ ಹಾಗೂ ಆತನ ಕೊನೆಗಾಲದ ಯಾತನೆಗಳನ್ನು ಪಡೆದ ವಿವಿಧ ಸ್ಥಳಗಳನ್ನು ಸಂದರ್ಶಿಸಿದಳು. ಬಳಿಕ ಶಿಷ್ಯರೊಡನೆ ಉಂಡು, ಶ್ರೀಪ್ರಸಾದವನ್ನು ಶಿಷ್ಯರನ್ನು ಹರಸಿ ಸ್ವೀಕರಿಸಿ, ಮರಣಶಯ್ಯೆಯಲ್ಲಿ ಒರಗಿದಳು. ಅದಾಗಲೇ ಆಕೆಯ ಮೊಗವು ತೇಜದಿಂದ ತುಂಬಿತು ; ಪ್ರಾಣವು ಹೋಯಿತು. ಪದ್ಧತಿಯ ಪ್ರಕಾರ ಆಕೆಯ ಅಂತ್ಯಕ್ರಿಯೆಗಳನ್ನು ಮಾಡಿದರು.

ಆದರೆ ಈ ಕೊನೆಗಾಲದಲ್ಲಿ ಭಾರತಕ್ಕೆ ಕ್ರಿಸ್ತ ಸಂದೇಶವನ್ನು ತಂದ ತೋಮಸನಿರಲಿಲ್ಲ. ಮಾತೆಯ ಮರಣದಲ್ಲಿ ತನ್ನ ದುಃಖವನ್ನು ತೋರಿಸುತ್ತ,ಆಕೆಯ ಜಡದೇಹದ ಕೊನೆಯ ದರ್ಶನವನ್ನಾದರೂ ಮಾಡಿಸಿಕೊಡಬೇಕಾಗಿ ಇತರ ಶಿಷ್ಯರನ್ನು ಬೇಡಿಕೊಂಡನು. ಸಮಾಧಿಯನ್ನು ಸಮಿೂಪಿಸಿದಾಗ ಅದು ಬರಿದಾಗಿರುವುದು ತಿಳಿಯಿತು ಸುವಾಸನೆಯ ಅರಿವಾಯಿತು. ಮರೀಯಳನ್ನು ಆಕೆಯ ಪುತ್ರನು ದೇಹಸಮೇತ ಮೋಕ್ಷಕ್ಕೊಯ್ದಿರಬೇಕೆಂದು ಅವರಿಗೆ ತಿಳಿಯಿತು. ಇದುವೆ ಮರೀಯಳ ಮೋಕ್ಷಸ್ವೀಕಾರ(Assumption)ವು. ಈ ಪರ್ವ ದಿನದಂದು ಭಾರತಕ್ಕೆ ಸ್ವಾತಂತ್ರ್ಯವು ಲಭಿಸಿತು (ಆಗಸ್ಟ್ ೧೫).

ಮೋಕ್ಷದಲ್ಲಿ ಮರೀಯಳಿಗೆ ಭಗವನ್-ಮಾತೆಯ ಗೌರವವು ದೊರೆಯಿತು. ಭಗವಂತನಿಗೆ ಆರಾಧನೆಯ ಮಹಾಗೌರವ (Latria Dvlia) ವನ್ನು ನೀಡುವರು. ಸಕಲ ಸಂತರಿಗೆ ಸೇವಾಭಾವದ ಗೌರವವು ಸಲ್ಲುವುದು. ಆದರೆ ಮರೀಯಳಿಗೆ ಸಕಲ ಸಂತರಿಗಿಂತಲೂ ಮಿಗಿಲಾದ ಗೌರವವು (Hyperdulia)ವು ನೀಡಲಾಗುತ್ತದೆ. ಮರೀಯಳನ್ನು ಭಗವಾನ್

ಯೇಸುಕ್ರಿಸ್ತನು ಮೋಕ್ಷದ ರಾಣಿ (Queen of Heaven)ಯಾಗಿ ಕಿರೀಟದಿಂದ ಗೌರವಿಸಿದನು. ಆಕೆಯು ಎಲ್ಲ ಭಕ್ತರಿಗೂ ಯುಕ್ತವಾದುದನ್ನು ಕೊಡಿಸುವಳು.

ಮರೀಯಳನ್ನು ಕಥೋಲಿಕರು ಹಲವು ವಿಧಗಳಿಂದ ಗೌರವಿಸುವರು. ಆಕೆಯ ಜೀವನದ ಮುಖ್ಯ ಘಟ್ಟಗಳನ್ನು ಭಕ್ತಿಪೂರ್ವಕವಾಗಿ ಆಚರಿಸುವರು. ಹಲವು ಅನ್ವರ್ಥನಾಮಗಳಿಂದ ಆಕೆಯ ಸಹಾಯವನ್ನು ಬಯಸುವರು. ಹಲವು ವಿಧದ ಕಾರ್ಯಗಳಿಂದ ಆಕೆಯ ಭಕ್ತಿಯನ್ನು ನಿತ್ಯ ಜೀವನದಲ್ಲಿ ಬಳಸುವರು. ಈ ಕಾರ್ಯಗಳಲ್ಲಿ ಜಪಮಾಲೆ, ಕಾಮೆಶಲವಸನ ಮುಂತಾದವು ಪ್ರಮುಖವಾದುವುಗಳು.

ಮಾಲೆಯ ಜಪ (Rosary)

ಆವರ್ತನೆಯಾಗಿ ಮಾಡುವ ಪ್ರಾರ್ಥನೆಯೇ ಜಪವೆನ್ನುವರು. ಹೀಗೆ ಜಪವು ಪ್ರತಿಯೊಂದು ಮತದಲ್ಲಿಯೂ ಒಂದಲ್ಲವಾದರೆ ಇನ್ನೊಂದು ರೂಪದಲ್ಲಿ ಬಳಕೆಯಲ್ಲಿದೆ. ಕಥೋಲಿಕರಲ್ಲಿ ಮಾಲೆಯ ಜಪವು ಬಳಕೆಯಲ್ಲಿದೆ. ಜಪಿಸಿದುದನ್ನು ಎಣಿಸಲು ಮಾಲೆ(Rosary)ಯೊಂದನ್ನು ಬಳಸುವರು. ಅದನ್ನು ಕಂಠಾಭರಣವಾಗಿಯೂ ಉಪಯೋಗಿಸುವುದಿದೆ.

ಜಪದ ಮಾಲೆಯಲ್ಲಿ ಹದಿನೈದು ದಶಕ (Decade)ಗಳಿವೆ. ಪ್ರತಿ ದಶಕದಲ್ಲಿ ಪ್ರತ್ಯೇಕವಾದ ಮಣಿಯೊಂದಿರುವುದು, ಬಳಿಕ ಹತ್ತು ಮಣಿಗಳು ಬರುತ್ತವೆ. ಪ್ರತ್ಯೇಕವಾದ ಮಣಿಯಲ್ಲಿ ಯೇಸು ಸ್ವತಃ ಬೋಧಿಸಿದ.

"ಪರಲೋಕದಲ್ಲಿರುವ ನಮ್ಮ ತಂದೆಯೇ,
ನಿಮ್ಮ ಹೆಸರಿಗೆ ಸ್ತೋತ್ರವಾಗಲಿ, ನಿಮ್ಮ ರಾಜ್ಯ ಬರಲಿ,
ನಿಮ್ಮ ಚಿತ್ತ ಪರಲೋಕದಲ್ಲಿ ನೆರವೇರುವಂತೆ
ಭೂಲೋಕದಲ್ಲಿಯೂ ನೆರವೇರಲಿ
ನಮ್ಮ ಅನುದಿನದ ಅನ್ನವನ್ನು ಇಂದು ನಮಗೆ ಕೊಡಿರಿ
ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವ ಹಾಗೆ
ನಮ್ಮ ಪಾತಕಗಳನ್ನು ಕ್ಷಮಿಸಿರಿ ;
ನಮ್ಮನ್ನು ಶೋಧನೆಗೊಳಪಡಿಸದೆ,

ಕೇಡಿನಿಂದ ನಮ್ಮನ್ನು ರಕ್ಷಿಸಿರಿ,
–ಹಾಗೆಯೇ ಆಗಲಿ"
ಎಂದು ಒಮ್ಮೆ ಜಪಿಸಿ,
–ನಮೋ ಮರೀಯೇ, ವರಪ್ರಸಾದಪೂರ್ಣೆಯೇ
ಸ್ವಾಮಿ ನಿಮ್ಮೊಡನಿರುವರು
ಸ್ತ್ರೀಯರಲ್ಲಿ ಧನ್ಯರು ನೀವೇ ;
ನಿಮ್ಮ ಉದರದ ಫಲವಾದ ಯೇಸುವೂ ಧನ್ಯರೇ
–ಪರಿಶುದ್ಧ ಮರೀಯೇ, ದೇವರ ತಾಯಿಯೇ
ಪಾಪಿಗಳಾಗಿರುವ ನಮಗಾಗಿ
ಈಗಲೂ ಮರಣಕಾಲದಲ್ಲಿಯೂ ಪ್ರಾರ್ಥಿಸಿರಿ.
– ಹಾಗೆಯೇ ಆಗಲಿ"

ಎಂಬುದನ್ನು ಹತ್ತು ಸಲವೂ ಬಯಸುವರು. ಬಳಿಕ

"ಪಿತನಿಗೆ, ಪುತ್ರನಿಗೆ, ಮತ್ತು ಪವಿತ್ರಾತ್ಮನಿಗೆ, ಹಿಂದೆ ಇದ್ದಂತೆ, ಈಗಲೂ ಇನ್ನು ಮುಂದಕ್ಕೂ ಆನಂದವಿರಲಿ, ತಥಾಸ್ತು" ಎಂದು ಪುರುಷತ್ರಯೈಕ ಭಗವಂತನ ಸುತ್ತಿಯನ್ನು ಮಾಡುವರು.

ಪೂರ್ಣ ಜಪಮಾಲೆಯಲ್ಲಿ ಹದಿನೈದು ದಶಕಗಳಿವೆ. ಯೇಸು ಕ್ರಿಸ್ತನ ಹಾಗೂ ಆತನ ಮಾತೆಯ ಜೀವನಗಳ ಮುಖ್ಯವಾದ ಹದಿನೈದು ಘಟನೆಗಳನ್ನು ಆರಿಸಿ, ಧ್ಯಾನಿಸಲು ಈ ಮೂಲಕ ಸಂದರ್ಭವನ್ನು ಕೊಟ್ಟಿರುವರು. ಆ ಹದಿನೈದು ಘಟನೆಗಳಲ್ಲಿ ಪ್ರಥಮಪಂಚಕಕ್ಕೆ ಸಂತೋಷದ ಸ್ಥಾನಗಳೆಂದೂ ದ್ವಿತೀಯ ಪಂಚಕದಲ್ಲಿ ಯೇಸುವಿನ ಕೊನೆಗಾಲದ ಘಟನೆಗಳಿರುವುದರಿಂದ ಶೋಕದ ಸ್ಥಾನಗಳೆಂದೂ ಕೊನೆಯ ಪಂಚಕದಲ್ಲಿ ಯೇಸುವಿನ ಪುನರುತ್ಥಾನದಿಂದ ಮರೀಯಳ ವೈಭವದವರೆಗಿನ ಘಟನೆಗಳಿರುವುದರಿಂದ ಆನಂದದ ಸ್ಥಾನಗಳೆಂದೂ ಕರೆಯುವರು. ಹದಿನೈದು ದಶಕಗಳ ಜಪಮಾಲೆಯು ನೀಳವಾಗುವುದರಿಂದ ಪಂಚಕಗಳಿಗೆ ಅನುಗುಣವಾಗಿ ಮೂಲದ ತೃತೀಯಾಂಶಕ್ಕೆ ತಂದಿರುವರು. ಆಗ ಧರಿಸಲೂ ಹಿತವಾಗುವುದು.

ಬಹುಹಿಂದೆ ಸನ್ಯಾಸಿಗಳೂ ಪುರೋಹಿತರೂ ಪವಿತ್ರ ಗ್ರಂಥದಲ್ಲಿರುವ

ದಾವಿದರಾಜನಿಂದ ರಚಿಸಲ್ಪಟ್ಟ ೧೫೦ ಕೀರ್ತನೆಗಳನ್ನು ಪಠಿಸುತಿದ್ದರು. ಆ ಭಕ್ತಿ ಕಾರ್ಯದ ಸ್ಮರಣೆಗಾಗಿ ಜಪಮಾಲೆಯಲ್ಲಿ ೧೫೦ 'ನಮೋಮರಿಯಳೇ' ಇವೆ. ಪ್ರಾರ್ಥನೆಗಳ ಈ ಮಾಲೆಯು ಗುಲಾಬಿ ಹೂಗಳ ಮಾಲೆಯಂತೆ ಮರೀಯಳಿಗೆ ಅರ್ಪಿಸಲ್ಪಡುವುದರಿಂದ ಈ ಜಪಮಾಲೆಗೆ 'Rosy' ಎಂಬ ಪದವು ಬಳಕೆಗೆ ಬಂದಿದೆ. ನೀರಲ್ಲಿ ಬಿದ್ದವನು "ರಕ್ಷಿಸು, ರಕ್ಷಿಸು" ಎಂದು ನಿರಂತರವಾಗಿ ಕೂಗುತ್ತ ಸಹಾಯವನ್ನು ಕೋರುವಂತೆ, ಮರೀಯಳನ್ನು ಈ ಮರ್ತ್ಯಲೋಕದಿಂದ ಮೃತ್ಪಿಂಡ ಮಾನವನು ಕೂಗಿಕೊಂಡಾಗ ಆಕೆಯು ಆ ವ್ಯಕ್ತಿಗೆ ಯುಕ್ತವಿರುವುದನ್ನು ನೀಡದಿರಲಾರಳು.

ಕಾರ್ಮೆಲ್ ವಸನ (Scapular of our Lady of Mt. Carmel)

ಪ್ರತಿಯೊಂದು ಸಮಾಜದಲ್ಲಿಯೂ ಆಯಾ ಸಮಾಜಕ್ಕೆ ಸಂಬಂಧಿಸಿದ ವಸನಗಳಿಂದ ಬಹಿರಂಗವಾಗಿ ವ್ಯಕ್ತಿಗಳು ಗೋಚರಿಸುವರು. ಮರೀಯಳ ಸೇವೆಗೆ ಮೀಸಲಾದ ಕೂಟವೊಂದು ಕಾರ್ಮೆಲ್ ಬೆಟ್ಟದಲ್ಲಿ ಬಿಡಾರ ಮಾಡಿತ್ತು. ಹಿಂದೆ ಮರೀಯಳು ಆ ಕೂಟದ ಸಿಮೋನಸ್ಟೊಕನೆಂಬವನಿಗೆ ದರ್ಶನವಿತ್ತು ವಸನವೊಂದರ ರೂಪರೇಷೆಯನ್ನು ಕೊಟ್ಟಳು. ಆ ಕೂಟವು ವಿರಕ್ತರಿಗೆ ಮಾತ್ರ ಮೀಸಲಾಗಿತ್ತು. ಆದರೂ ಇತರರೂ ಆ ಕೂಟಕ್ಕೆ ಸೇರಲು ಆ ವಸನದ ಅಳತೆಗಳನ್ನು ಬಳಕೆಗೂ ವಿವಿಧ ವೃತ್ತಿಯವರಿಗೂ ಅನುಕೂಲವಾಗುವಂತೆ ಕುಗ್ಗಿಸಿದರು. ಇಂದಿಗೆ ಅದು ಎರಡು ಚೂರು ಉಣ್ಣೆಬಟ್ಟೆಗಳನ್ನು ಮೈಮೇಲೆ ಧರಿಸಿಕೊಳ್ಳುವುದರಲ್ಲಿ ನಿಲ್ಲಿಸಲಾಗಿದೆ. ಅದನ್ನು ಹೆಗಲಿನ ವಸ್ತ್ರ (Scapular) ಎನ್ನುವರು. ಅದು ಒಂದು ಬಗೆಯ ಚಿಹ್ನೆ(Badge)ಯಾಗಿ ರೂಢಿಗೆ ಬಂದಿದೆ.

ಕಾರ್ಮೆಲದ ಈ ಚಿಹ್ನೆಯು ಅದನ್ನು ಧರಿಸಿಕೊಂಡವರಿಗೆ ಆಧ್ಯಾತ್ಮಿಕ ಆಧಾರವನ್ನು ಮರೀಯಳ ಮೂಲಕ ಒದಗಿಸಿಕೊಡುತ್ತದೆಯೆಂದು ಕಥೋಲಿಕರ ವಿಶ್ವಾಸವಿದೆ. ಮರೀಯಳ ಆಧಾರವನ್ನು ಬಯಸಿದವರು ನಿರಾಶರಾಗಿಲ್ಲ.

ಕಥೋಲಿಕರ ಸಂಧ್ಯಾವಂದನೆ (Angehns)

ಸಂಧ್ಯಾವಂದನೆಯು ಎಲ್ಲ ಮತಗಳಲ್ಲಿಯೂ ರೂಢಿಯಲ್ಲಿದೆ. ಸಂಧ್ಯಾವಂದನೆಯೆಂದರೆ ಸಂಜೆಯಲ್ಲಿ ಮಾಡುವ ಪ್ರಾರ್ಥನೆಯೆಂದು ಮಾತ್ರ ತಿಳಿಯಬಾರದು. ಆದರೆ ಬೆಳಗ್ಗೆ, ಮಧ್ಯಾಹ್ನ, ಸಂಜೆ ಎಂಬ ಮೂರು ಸಂಧಿಕಾಲಗಳಲ್ಲಿ ಮಾಡುವ ವಂದನೆಯೆಂದು ಅರ್ಥ. ಕಥೋಲಿಕರ ದೇವಾಲಯಗಳ ದೊಡ್ಡ ಘಂಟೆಗಳನ್ನು ಈ ಸಂಧಿಕಾಲಗಳಲ್ಲಿ ಬಾರಿಸಿ, ಜನತೆಗೆ ವಂದನೆಯ ಸ್ಮರಣೆಯನ್ನು ಮಾಡುತ್ತವೆ. ಈ ಸಂಧ್ಯಾವಂದನೆಯ ಮೊದಲ ಪದವು ಲತೀನಿನಲ್ಲಿ (Angelns) ಎಂದಿದೆ. ಅದನ್ನೇ ಸಂಧ್ಯಾವಂದನೆಗೆ ನೀಡಿರುವರು.

ಸಂಧ್ಯಾವಂದನೆಯಲ್ಲಿ ಮಾನವನ ರಕ್ಷಣೆಗಾಗಿ ಭಗವತ್ ಪುತ್ರನು ಮಾನವನಾದ ರಹಸ್ಯವಿದೆ. ಅದರೊಡನೆ ಮೂರು ಬಾರಿ 'ನಮೋ ಮರೀಯೇ' ಎಂಬುದನ್ನೂ ಜಪಿಸಲಿದೆ.

"ಸ್ವಾಮಿಯ ಸುಮನಸನು ಮರೀಯಳಿಗೆ ಸಂದೇಶವಿತ್ತನು ! ಮತ್ತು ಪವಿತ್ರಾತ್ಮನಿಂದಾಗಿ ಆಕೆಯು ಗರ್ಭ ಧರಿಸಿದಳು.

ನಮೋ ಮರೀಯೇ.... ....

ಇದೋ ಸ್ವಾಮಿಯ ಚರಣದಾಸಿ,
ನಿನ್ನ ಮಾತಿನಂತೆ ನಮ್ಮಲ್ಲಾಗಲಿ.

ನಮೋ ಮರೀಯೇ...................

ಆ ನುಡಿಯು

"ಮತ್ತು ಮನುಷ್ಯನಾದನು
ಮತ್ತು ನಮ್ಮ ಮಧ್ಯದಲ್ಲಿ ಜೀವಿಸಿದನು

ನಮೋ ಮರೀಯೇ . ...

ಪವಿತ್ರ ದೇವಮಾತೆಯೆ ನಮಗಾಗಿ ಪ್ರಾರ್ಥಿಸು
ಕ್ರಿಸ್ತನ ವಾಗ್ದಾನಗಳಿಗೆ ನಾವು ಯೋಗ್ಯರಾಗುವಂತಾಗಲಿ

ಪ್ರಾರ್ಥನೆ

ಸ್ವಾಮಿಯೇ, ಸುಮನಸನ ಪ್ರಕಟನೆಯ ಮೂಲಕ ನಿನ್ನ ಪುತ್ರ

ಕ್ರಿಸ್ತನು ಸ್ವೀಕರಿಸಿದ ಮಾನವತೆಯನ್ನು ನಾವರಿತುಕೊಂಡೆವು. ಆತನ ಯಾತನೆ ಹಾಗೂ ಸಿಲುಬೆಯಿಂದಾಗಿ ಪುನರುತ್ಥಾನದ ಆನಂದಕ್ಕೆ ನಾವು ಮುಟ್ಟುವಂತೆ ನಿನ್ನ ಕೃಪಾವರವನ್ನು ನಮ್ಮ ಹೃದಯಗಳಲ್ಲಿ ಹೊಯ್ಯ ಬೇಕೆಂದು ನಾವು ಪ್ರಾರ್ಥಿಸುವೆವು–ಅದೇ ಕ್ರಿಸ್ತ ಸ್ವಾಮಿಯ ಮೂಲಕವು. ತಥಾಸ್ತು'

ಮೂರು ಬಾರಿ 'ಪಿತನಿಗೂ ಸುತನಿಗೂ... ...." ಎಂಬುದನ್ನೂ ಜಪಿಸುವರು.

ಮರೀಯಳು ತನ್ನನ್ನು ಮರೆಹೊಕ್ಕವರನ್ನು ಎಂದಿಗೂ ನಿರಾಕರಿಸಿಲ್ಲ. ಹಲವು ಸಲ ಆಕೆಯು ಪ್ರತ್ಯಕ್ಷಳಾಗಿ ಯುಕ್ತಮಾರ್ಗವನ್ನು ಪ್ರದರ್ಶಿಸಿರು ವಳು. ಹಾಗೆ ಆಕೆ ಪ್ರತ್ಯಕ್ಷಳಾದ ಸ್ಥಳಗಳಲ್ಲಿ ಲೂರ್ಡ್ಸ್ ಮತ್ತು ಫಾತಿಮಾ ನಗರಗಳು ಹೆಸರು ಪಡೆದಿವೆ.

ಲೂರ್ಡ್ಸಿನಲ್ಲಿ

೧೮೫೮ರ ಫೆಬ್ರವರಿ ೧೧ರಂದು ಫ್ರಾನ್ಸ್ ದೇಶದ ಲೂರ್ಡ್ಸ್ ವಲ ಯದ ಮಸ್ಸಾಬಿಯೆಲ್ಲೆ ಗುಡ್ಡದ ಸಮೀಪದಲ್ಲಿ ಎಂದಿನಂತೆ ಕಟ್ಟಿಗೆಯ ಸಂಗ್ರಹಕ್ಕೆ ಹೋಗಿದ್ದ ಬೆರ್ನಾದೆತಳೆಂಬವಳಿಗೆ ಮರೀಯಳು ಪ್ರತ್ಯಕ್ಷ ಳಾದಳು. ಅಲ್ಲಿಗೆ ಅವಳೊಡನೆ ಬಂದಿದ್ದ ಉಳಿದ ಹೆಣ್ಣುಮಕ್ಕಳಿಬ್ಬರೂ ದುರ್ಬಲ ಆರೋಗ್ಯದ ಬೆರ್ನಾದೆತಳನ್ನು ಅಲ್ಲಿಯೇ ಬಿಟ್ಟು ತಮ್ಮ ಕಾರ್ಯ ದಲ್ಲಿ ಲೀನರಾದರು. ಆದರೆ ಅವರೊಡನೆ ಸೇರಲು ಸಿದ್ಧಳಾದ ಬೆರ್ನಾದೆತ ಳಿಗೆ ಬಿರುಗಾಳಿಯ ಶಬ್ದ ಕೇಳಿಸಿತು, ಮರಗಿಡಗಳೊಂದೂ ಅಲುಗದಿದ್ದು ದನ್ನು ಕಂಡು ಸುತ್ತಲೂ ನೋಡಿದಳು.

ಆ ಗುಡ್ಡದ ಬದಿಯಲ್ಲಿ ಕಲ್ಲಿನ ಆಸರೆ(Niche, grotto)ಯ ಕೆಳ ಗಿನ ಗುಲಾಬಿಗಿಡವೊಂದು ಮಾತ್ರ ವಿಶೇಷವಾಗಿ ಅಲುಗಿತು. ಆ ಕ್ಷಣದಲ್ಲಿ ಆ ಆಸರೆಯಲ್ಲಿ ಸುಂದರಿಯೊಬ್ಬಳ ದರ್ಶನವಾಯಿತು.

ಆ ಸುಂದರಿಯು ಶ್ವೇತವಸನಗಳನ್ನು ಧರಿಸಿದ್ದಳು. ನಡುವಿಗೆ ನೀಲಿ ಬಣ್ಣದ ಪಟ್ಟಿಯೊಂದಿತ್ತು. ಕೈಯಲ್ಲಿ ಜಪಮಾಲೆಯೊಂದು ಶೋಭಿ ಸುತಿತ್ತು. ಆಕೆಯ ಲಾವಣ್ಯವು ಬೆರ್ನಾದೆತಳನ್ನು ಸೆಳೆಯಿತು. ಅವಳು

ಮಾಲೆಯ ಜಪವನ್ನು ಆರಂಭಿಸಿದಳು. 'ಪರಲೋಕದಲ್ಲಿರುವ ನಮ್ಮ ಪಿತನೇ' ಮತ್ತು 'ನಮೋಮರೀಯಳೇ' ಗಳನ್ನು ಜಪಿಸುವಾಗ ಆಕೆಯು ಮಣಿಗಳನ್ನು ಮಾತ್ರ ಉರುಳಿಸುತ್ತಿದ್ದಳು, ಬಾಯ್ದೆರೆಯಲುಗಿಸುತ್ತಿರಲಿಲ್ಲ. ಆದರೆ ಪುರುಷತ್ರಯೈಕ ಭಗವಂತನ ಸ್ತುತಿಯನ್ನು ಮಾಡುವಾಗ ಆಕೆಯೂ ಬೆರ್ನಾದೆತಳೊಡನೆ ಕೂಡಿಕೊಂಡಳು. ಪೂರ್ಣ ಜಪವಾದ ಬಳಿಕ ಆಕೆಯು ಕಣ್ಮರೆಯಾದಳು.

ಈ ದರ್ಶನವು ಉಳಿದವರಿಗೆ ಆಗಿರಲಿಲ್ಲ. ಆದರೂ ಬೆರ್ನಾದೆತಳ ರೀತಿಯಿಂದಾಗಿ ಅವರು ಪ್ರಶ್ನಿಸಿ, ಬಲವಂತದಿಂದ ತಿಳಿದುಕೊಂಡರು, ಅವರಿಂದ ಅನೇಕರಿಗೆ ಅದು ತಿಳಿದುಹೋಯಿತು. ಬೆರ್ನಾದೆತಳಿಗೆ ಕಷ್ಟಗಳು ಬಂದುವು. ಆಕೆಯು ಕೇವಲ ಕಟ್ಟುಕತೆಯೊಂದನ್ನು ಸಾರುವುದಾಗಿ ಅನೇಕರು ತಿಳಿದರು. ಪರೀಕ್ಷಿಸಲು ಮುಂದೆ ಬಂದರು. ಆದರೆ ದರ್ಶನವು ಅವರಿಗೆ ಆಗದಿದ್ದರೂ ಆ ಸ್ಥಳದ, ಬೆರ್ನಾದೆತಳ ಮೊಗದ, ಶಾಂತಿಯಿಂದ ಅವರು ನಂಬಿದರು. ಅಲ್ಲಿಯ ಪೊಲೀಸ್ ಅಧಿಕಾರಿಗಳೂ ಬೆರ್ನಾದೆತಳನ್ನು ಪೀಡಿಸಿ, ಸತ್ಯದ ವಿರುದ್ಧವಾಗಿ ಹೇಳಿಕೆಯೊಂದನ್ನು ಹೊರಡಿಸಲು ಅಸಮರ್ಥರಾದರು. ಮರೀಯಳು ೧೮ ಸಲ ದರ್ಶನವಿತ್ತಿದ್ದಳು. ಫೆಬ್ರುವರಿ ೨೫ರಂದು ಆಕೆಯು ಬೆರ್ನಾದೆತಳಿಗೆ ಒಣಸ್ಥಳವೊಂದನ್ನು ತೋರಿಸಿ, ಅಗೆಯುವಂತೆ ಮಾಡಿದಳು. ಬಿಸರೊಂದು ಚಿಮ್ಮಿತು. ಇದುವೆ ಲೂರ್ಡ್ಸಿನ ತೀರ್ಥವಾಗಿದೆ. ಈ ನೀರನ್ನು ಪ್ರಯೋಗಿಸಿ ರೋಗಿಗಳು ಆರೋಗ್ಯವನ್ನು ಪಡೆದಿರುವರು. ಆದರೆ ಆ ಸುಂದರಿಯ ಪರಿಚಯವನ್ನು ಬೆರ್ನಾದೆತಳು ಮಾಡಿಕೊಳ್ಳಲಿಲ್ಲ. ಅಲ್ಲಿಯ ಪುರೋಹಿತನ ಬಲವಂತದಿಂದ ಬೆರ್ನಾದೆತಳು ಸುಂದರಿಯ ಹೆಸರನ್ನೂ ಆಕೆಯು ದರ್ಶನವಿತ್ತ ಕಾರಣವನ್ನೂ ವಿಚಾರಿಸಿದಳು. "ನಾನು ಆ ಅಮಲೋದ್ಭವೆಯು" ಎಂದು ತನ್ನ ಹೆಸರನ್ನು ಆಕೆ ಸೂಚಿಸಿದಳು. ಬೆರ್ನಾದೆತಳಿಗೆ ಅದರ ಅರ್ಥವಾಗಲಿಲ್ಲ. ಪುರೋಹಿತನೇ ಅದು ದೇವಮಾತೆಯ ಹೆಸರೆಂದೂ, ಅಂದಿಗೆ ನಾಲ್ಕು ವರ್ಷಗಳ ಹಿಂದೆ ಮರೀಯಳ ಅಮಲೋದ್ಭವದ ತತ್ವ ಪ್ರತಿಪಾದನೆಯನ್ನು ಶ್ರೀ ಸಭೆಯು ಮಾಡಿರುವುದೆಂದೂ ಆಕೆಗೆ ತಿಳಿಯಹೇಳಿದನು. ಮರೀಯಳು ಅಲ್ಲೊಂದು ದೇವಾಲಯವನ್ನು

ನಿರ್ಮಿಸಬೇಕೆಂದೂ ಮೆರವಣಿಗೆಯನ್ನು ಮಾಡುತ್ತಿರಬೇಕೆಂದೂ ತಿಳಿಸಿದ್ದಳು.

ಇಂದಿಗೆ ಲೂರ್ಡ್ಸ್ ದೊಡ್ಡ ನಗರವಾಗಿದೆ. ಪ್ರಾರ್ಥನೆಗಾಗಿ ಅಲ್ಲಿ ಒಂದಲ್ಲ ನಾಲ್ಕು ದೇವಾಲಯಗಳನ್ನು ನಿರ್ಮಿಸಿರುವರು. ನಾಲ್ಕನೆಯ ದೇವಾಲಯವೊಂದರಲ್ಲಿಯೇ ೨೦ ಸಾವಿರ ಜನರು ಏಕಕಾಲದಲ್ಲಿಯೇ ಇದ್ದು ಪ್ರಾರ್ಥಿಸಬಹುದು. ನಿತ್ಯವೂ ಸಂಜೆಗೆ ಮೆರವಣಿಗೆ ನಡೆಯುವುದು. ರೋಗಿಗಳನ್ನು ಪ್ರತ್ಯೇಕವಾಗಿ ನಿಲ್ಲಿಸಿ ಅವರನ್ನು ಪ್ರತ್ಯೇಕವಾಗಿ ಹರಸುವರು. ಹಲವು ರೋಗಿಗಳು ಆರೋಗ್ಯವನ್ನು ಪಡೆದಿರುವರು. ದೈಹಿಕಾರೋಗ್ಯವನ್ನು ಪಡೆಯದವರೂ ಆಧ್ಯಾತ್ಮಿಕಾರೋಗ್ಯವನ್ನು ಸಂಪಾದಿಸಿರುವರು; ನಾಸ್ತಿಕರು ಆಸ್ತಿಕರಾಗಿರುವರು. ಧರ್ಮದಲ್ಲಿ ಹಿಂಜರಿದವರು ಉತ್ಸಾಹಿಗಳಾಗಿರುವರು. ಜಾತಿ ಮತ ಭೇದಗಳಿಲ್ಲದೆ ಲಕ್ಷ ಸಂಖ್ಯೆಯಲ್ಲಿ ಯಾತ್ರಿಕರು ಲೂರ್ಡ್ಸಿಗೆ ತೆರಳುವರು. ನಡೆದ ಪವಾಡಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಲು ನುರಿತ ವೈದ್ಯರ ಕೂಟವಿದೆ.

ಫಾತಿಮಾದಲ್ಲಿ

ದ್ವಿತೀಯ ಜಾಗತಿಕ ಸಮರವು ಭಾರತದಲ್ಲಿ ತಾಂಡವವಾಡಿಲ್ಲವಾದರೂ ಅದರ ಪರಿಣಾಮವನ್ನು ನಾವಿನ್ನೂ ಅನುಭವಿಸುತ್ತಿರುವೆವು. ಆದರೆ ಪ್ರಥಮ ಜಾಗತಿಕ ಸಮರವು ೧೯೧೭ರಲ್ಲಿ ಪರಮಾವಧಿಗೆ ಸೇರಿದಾಗ ಅಖಿಲ ಜಗತ್ತಿನ, ಪ್ರತ್ಯೇಕವಾಗಿ ಯೂರೋಪಿನ ದೇಶಗಳ ಜನರಲ್ಲಿ ಜೀವನದ ಅಭದ್ರತೆಯೊಂದು ಆವರಿಸಿತ್ತು. ಜನರು ಶಾಂತಿಗಾಗಿ ಪ್ರಾರ್ಥಿಸುತ್ತಿದ್ದರು.

೧೯೧೭ರಲ್ಲಿ ಪೋರ್ಚುಗಲ್ ದೇಶದ ಫಾತಿಮಾದಲ್ಲಿ ಮೇ ೧೩ರಿಂದ ಅಕ್ಟೋಬರ್ ೧೩ರವರೆಗೆ ಪ್ರತಿ ತಿಂಗಳ ೧೩ರಂದು ಮರಿಯಳು ಮೂವರು ಎಳೆಯರಿಗೆ ಪ್ರತ್ಯಕ್ಷಳಾದಳು. ಜಾಸಿಂತ, ಫ್ರಾನ್ಸಿಸ್ಕೊ ಮತ್ತು ಲೂಸಿಯಾ ಎಂಬ ೭, ೯, ೧೦ ವರ್ಷ ಪ್ರಾಯಗಳ ಮೂವರು ತಮ್ಮ ಕುರಿಗಳನ್ನು ಮೇಯಿಸುತ್ತಿದ್ದರು. ನಡುಹಗಲಿನಲ್ಲಿ ಅವರು ಮಾಲೆಯ ಜಪವನ್ನು ಹೇಳುತ್ತ, ಜಾಗತಿಕ ಶಾಂತಿಯನ್ನು ಹಾರೈಸುತ್ತಿದ್ದರು. ಹಠಾತ್ತನೇ

ಮಿಂಚೊಂದು ಕಂಡಿತು. ಎಳೆಯರಿಗೆ ಭಯವಾಯಿತು. ಆದರೆ ಭಯಗೊಂಡ ಅವರು ಸುತ್ತಲೂ ನೋಡುತ್ತಿರುವಾಗ ಸಮಿಾಪದ ಜಾತ್ ಮರದ ಹಸುರೆಲೆಗಳ ಮೇಲೆ ಹದಿನಾರು ವರ್ಷ ಪ್ರಾಯದ ಸ್ತ್ರೀಯೊಬ್ಬಳು ನಿಂತಿದ್ದಳು. ಆಕೆಯ ಅಭಯವಿತ್ತುದನ್ನು ಕಂಡು, ಲೂಸಿಯಾ ಆಕೆಯ ಪರಿಚಯವನ್ನು ಮಾಡಿಕೊಂಡಳು. ಮುಂದೆ ಅದೇ ಸ್ಥಳದಲ್ಲಿ ಮರೀಯಳು ಅವರಿಗೆ ಪ್ರತ್ಯಕ್ಷಳಾದಳು.

ಫಾತಿಮಾದಲ್ಲಿ ನಡೆದ ವಿಶೇಷಗಳ ವರ್ತಮಾನವನ್ನು ಕೇಳಿ ಮುಂದೆ ಸಹಸ್ರ ಸಂಖ್ಯೆಯಲ್ಲಿ ಜನರು ನೆರೆದರು. ಮರೀಯಳು ಅವರಿಗೆ ಕಾಣುತ್ತಿರಲಿಲ್ಲವಾದರೂ ಆ ಸ್ಥಳದಲ್ಲಿ ಆದ ವ್ಯತ್ಯಾಸಗಳಿಂದ ಅವರಲ್ಲಿ ಸತ್ಯತೆಯ ಅರಿವಾಯಿತು. ಲೂಸಿಯಾ ಹಲವು ಬಾರಿ ಆಕೆಯ ಆಗಮನದ ಕಾರಣವನ್ನು ವಿಚಾರಿಸಿದ್ದಳು. ಆಕೆ ಅದನ್ನು ಮುಂದುವರಿಸುತ್ತ ಕೊನೆಯ ದಿನದಂದು ತಿಳಿಸಿದಳು.

“ ನಾನೇ ಜಪಮಾಲೆಯ ಮಾನ್ಯೆಯು. ಇಲ್ಲೊಂದು ಪ್ರಾರ್ಥನಾ ಮಂದಿರವನ್ನು ಕಟ್ಟಿಸಬೇಕೆಂಬುದು ನನ್ನ ಇಚ್ಛೆಯಾಗಿದೆ. ಮಾಲೆಯ ಜಪವನ್ನು ನಿತ್ಯವೂ ಹೇಳಬೇಕು ”.

ಅಂದು ಹಲವು ನೋಟಗಳನ್ನು ಎಳೆಯರು ಕಂಡರು. ಕೊನೆಗೆ ಸೂರ್ಯನಲ್ಲಿ ಪವಾಡವೊಂದನ್ನು ಕಂಡರು. ಸೂರ್ಯನು ಕಂಪಿಸುತ್ತ ಬಹುಬಗೆಯ ವರ್ಣಗಳ ಕಿರಣಗಳನ್ನು ಹೊರಹೊಮ್ಮಿಸುತ್ತ, ಜನರಲ್ಲಿ ಭಯ, ಸ್ತಬ್ಧತೆ, ಮೌನಗಳನ್ನು ತಂದಿತು. ಈ ಪವಾಡವು ೨೫ ಮೈಲುಗಳಷ್ಟು ದೂರದ ಜನರೂ ಕಂಡಿದ್ದರು. ಕೊನೆಗೆ ಸೂರ್ಯನೇ ತನ್ನ ಸ್ಥಾನದಿಂದ ಉರುಳಿ ಬೀಳತೊಡಗಿದುದನ್ನು ಜನತೆಯು ಕಂಡಿತು. ಸೂರ್ಯನು ಭೂಮಿಗೆ ಹತ್ತಿರವಾಗುತ್ತ, ಬರುವಾಗ ಆತನ ತೀಕ್ಷ್ಣ ಕಿರಣಗಳ ಬಾಧೆಯನ್ನು ಜನರು ಸಹಿಸಬಾರದು. ಇನ್ನೊಂದು ಕ್ಷಣವೂ ಆತನು ಮುಂದೊತ್ತಿದರೆ ಅಖಿಲ ಜಗತ್ತು ನಾಶವಾಗಲಿತ್ತು. ಜನರಲ್ಲಿ ಭಯವು ತುಂಬಿ ತಮ್ಮ ರಕ್ಷಣೆಗಾಗಿ ಭಗವಂತನಿಗೆ ಮೊರೆಯಿಡತೊಡಗಿದರು. ಆದಾಗಲೇ ಸೂರ್ಯನು ತನ್ನ ಮೊದಲ ಸ್ಥಾನದೆಡೆಗೆ ಹೋದನು. ಫಾತಿಮಾದಲ್ಲಿ ಮರೀಯಳು ಜಾಗತಿಕ ಶಾಂತಿಗಾಗಿ ಸೂಚನೆಗಳನ್ನಿತ್ತಳು.

ಜನರು ತಮ್ಮ ಜೀವನಗಳನ್ನು ರೂಪಿಸಿಕೊಳ್ಳಬೇಕೆಂಬುದೇ ಅವುಗಳಲ್ಲಿ ಮುಖ್ಯವಾದುದು. ಪ್ರಾಯಶ್ಚಿತ್ತ, ಪ್ರಾರ್ಥನೆಗಳು ನಿರಂತರವಾಗಿ ಸಾಗಬೇಕೆಂದು ಆಕೆ ತಿಳಿಸಿದಳು. ಮಾತ್ರವಲ್ಲ ಆ ಮಹಾಯುದ್ಧದ ಅಂತ್ಯವನ್ನೂ ದ್ವಿತೀಯ ಜಾಗತಿಕ ಸಮರದ ಭೀಕರತೆಯನ್ನೂ ಆಕೆ ಅಂದೇ ತಿಳಿಸಿದ್ದಳು. ಇತರ ವಿಚಾರಗಳೂ ಪೂರ್ಣಗೊಂಡಿವೆ.

ಮರೀಯಳ ಮಾತೃತ್ವದಲ್ಲಿ ಕಥೋಲಿಕರ ವಿಶ್ವಾಸವನ್ನು ತಳೆದಿರುವರು. ಬಹುವಿಧಗಳಿಂದ ಆಕೆಯ ಸಹಾಯವನ್ನು ಪಡೆಯುತ್ತಿರುವರು.

"ಇದೋ, ಇಂದಿನಿಂದ ಎಲ್ಲ ಜನಾಂಗಗಳೂ ನನ್ನನ್ನು ಧನ್ಯಳೆಂದು ಹೇಳುವುವು" (ಲೂಕ ೧, ೪೮)

ಎಂದು ಮರೀಯಳು ತನ್ನ ಮರ್ತ್ಯಜೀವಮಾನದಲ್ಲಿ ಹೇಳಿದ ನುಡಿಯು ಸತ್ಯವಾಗಿದೆ.

ಫಾತಿಮಾದಲ್ಲಿ ಮರೀಯಳನ್ನು ನೋಡಿದ ಮೂವರಲ್ಲಿ ಲೂಸಿಯಾ ಮಾತ್ರ ಈಗಲೂ ಜೀವಂತಳಾಗಿರುವಳು.

೧೩. ಕಥೋಲಿಕರ ಕೆಲವು ವೈಶಿಷ್ಟ್ಯಗಳು

ಶುದ್ಧೀಕರಣ ಸ್ಥಾನ (Purgatory)

ಕ್ರೈಸ್ತಮತದಲ್ಲಿ ಜನ್ಮಾಂತರಗಳಿಲ್ಲವೆಂದೂ ನಾಕ–ನರಕಗಳೆರಡೂ ಅನಂತಗಳೆಂದೂ ಅವುಗಳನ್ನು ಪ್ರವೇಶಿಸಿದವರು ಹೊರಬರುವುದಿಲ್ಲವೆಂದೂ ಹಿಂದೆಯೇ ನೋಡಿರುವೆವು. ಐಹಿಕ ಜೀವನವು ಅದೊಂದು ಸಿದ್ಧತೆಯ ಕಾಲವೆಂದೂ, ಆ ಕಾಲದಲ್ಲಿ ಮುಂದಿನ ನಿತ್ಯಜೀವನಕ್ಕೆ ಯುಕ್ತವಾದ 'ಜೀವ'ವನ್ನು ಇಹದಲ್ಲಿಯೇ ಪಡೆದುಕೊಳ್ಳಬೇಕೆಂದೂ ಹೇಳಿದೆ. ಆ ಭಗವತ್ ಜೀವವನ್ನು ಸಮೃದ್ಧಿಯಾಗಿ ಪಡೆದುಕೊಂಡಲ್ಲಿ ಮೋಕ್ಷವು ನಿಶ್ಚಯದ ಸ್ಥಾನವಾಗುವುದು. ಆದರೆ ಮಹಾಪಾತಕಗಳಿಂದ ಭಗವತ್ ಜೀವವನ್ನು ಕಳೆದುಕೊಂಡಾಗ ಮೋಕ್ಷಾರ್ಹತೆಯೂ ಕಳೆಯಲ್ಪಟ್ಟು ವ್ಯಕ್ತಿಯು ನರಕಬಾಧ್ಯಸ್ಥನಾಗುವನು. ಆದರೂ ಜಡದೇಹದಿಂದ ಕೂಡಿದ ಮನುಷ್ಯನು ಹಲವು ಕಾರಣಗಳಿಂದ ಕ್ಷುದ್ರ ಪಾತಕಗಳನ್ನಾದರೂ ಮಾಡಿರಬಹುದು. ಮಹಾಸಾಧುಸಂತರೂ ಕೆಲವು ಸಂದರ್ಭಗಳಲ್ಲಿ ಪಾತಕಿಗಳಾದ ವಿಷಯವು ಅವರ ಜೀವನಚರಿತ್ರೆಗಳನ್ನು ಅಭ್ಯಸಿಸಿದಾಗ ನಮಗೆ ತಿಳಿಯುವುದು. ಅಪರಾಧಗಳ ಬಗ್ಗೆ ಯುಕ್ತ ಪಶ್ಚಾತ್ತಾಪದಿಂದ ನಾವು ಕ್ಷಮೆಯನ್ನು ಅಥವಾ ವಿಮೋಚನೆಯನ್ನು ಪಡೆಯಬಹುದು. ಆದರೆ ಅವುಗಳಿಗಾಗಿ ಮಾಡಬೇಕಾದ ಪರಿಹಾರವೊಂದು ಉಳಿದಿದೆ. ಅದನ್ನು ನಿರ್ವಹಿಸಬೇಕಾದುದು ಅನಿವಾರ್ಯವು.

ಹಿಂದೆ ಪ್ರಾಯಶ್ಚಿತ್ತದ ಸಂಸ್ಕಾರದ ಕುರಿತು ವಿವೇಚಿಸುವಾಗ ನೋಡಿಕೊಂಡ ದೃಷ್ಟಾಂತವೊಂದನ್ನು ಪುನಃ ಸ್ಮರಿಸೋಣ. ಹತು ರೂಪಾಯಿಗಳನ್ನು ಕದ್ದುಕೊಂಡ ಪಾತಕವನ್ನು ಪಶ್ಚಾತ್ತಾಪದಿಂದ

ಕಳೆಯಬಹುದು. ಆದರೆ ಆ ಹತ್ತು ರೂಪಾಯಿಗಳನ್ನು ಪುನಃ ಹಿಂದೆ ನೀಡುವ ಕರ್ತವ್ಯವಿದೆ. ಅದನ್ನು ನಿರ್ವಹಿಸುವ ಮುನ್ನವೇ ವ್ಯಕ್ತಿಯು ಸಾಯಬಹುದು. ಅದಕ್ಕಾಗಿ ಯುಕ್ತ ಶುದ್ಧೀಕರಣವು ಮರಣಾನಂತರ ಆತನು ನೀಡಬೇಕಾಗಿದೆ. ಮಾತ್ರವಲ್ಲ ಪಶ್ಚಾತ್ತಾಪದಿಂದ ಕ್ಷಮಿಸಲ್ಪಟ್ಟ ಪಾತಕಗಳಾದರೂ ಪರಮ ಪವಿತ್ರ ಭಗವಂತನಿಗೆ ಅಪಮಾನ ಮಾಡಿರುವುದರಿಂದ ಯುಕ್ತ ಪರಿಹಾರದ ಕಾರ್ಯವನ್ನು ವ್ಯಕ್ತಿಯು ಮಾಡಬೇಕಾಗಿದೆ. ಅದನ್ನೂ ಮಾಡುವ ಮುನ್ನವೇ ವ್ಯಕ್ತಿಯು ಗತಿಸಬಹುದು. ಇದಕ್ಕಾಗಿ ಶುದ್ಧೀಕರಣ ಸ್ಥಾನ ಅಥವಾ ಉತ್ತರಿಸುವ ಸ್ಥಾನ (Purgatory)ಎಂಬ ಒಂದು ಸ್ಥಳವಿದೆ. ಇಲ್ಲಿ ಶುದ್ಧೀಕರಣವನ್ನು ಪಡೆದ ಬಳಿಕ ಆತ್ಮಗಳ ಮೋಕ್ಷವನ್ನು ಪಡೆಯುವವು.

ಭಗವಂತನು ಪರಮ ನ್ಯಾಯಶೀಲನು. ಪ್ರತಿಯೊಂದು ಆತ್ಮಕ್ಕೆ ತನ್ನ ಪಾಪ-ಪುಣ್ಯಗಳಿಗನುಸಾರವಾಗಿ ಭಗವಂತನು ನೀಡುವನು. ಈ ಭಾವನೆಯನ್ನು ಗ್ರೀಕ್ ತತ್ವಜ್ಞನಾದ ಪ್ಲೇಟೊ ಸಹ ತಿಳಿಸಿರುವನು.

"ಈ ಪರೀಕ್ಷೆಯ ಕಾಲವು ಮುಗಿದೊಡನೆ ಅತಿ ನೀಚರು ನರಕಕ್ಕೂ ಅತಿಶುದ್ಧರು ಮೋಕ್ಷಕ್ಕೂ ಹೋಗುವರು. ನಡುವಣರು ತಾತ್ಕಾಲಿಕ ಶೀಕ್ಷೆಗಳಿಂದ ಶುದ್ಧೀಕರಿಸಲ್ಪಟ್ಟು ಮೋಕ್ಷವನ್ನು ಹೊಂದುವರು."

ಯೇಸುಕ್ರಿಸ್ತನ ಶಿಷ್ಯರಲ್ಲೊಬ್ಬನಾದ ಯೂದಾ ಮಕಾಬಿಯುಸ್ ಎಂಬುವನು ತನ್ನ ನಿರೂಪದಲ್ಲಿ

"ತಮ್ಮ ಪಾತಕಗಳಿಂದ ವಿಮೋಚನೆಗೊಳಿಸಲ್ಪಡಲು ಸತ್ತವರಿಗಾಗಿ ಪ್ರಾರ್ಥಿಸುವುದು ಪವಿತ್ರ ಹಾಗೂ ಹಿತಕರವಾದ ಭಾವನೆಯಾಗಿದೆ." (೨ ಮಕಾಬಿಯಸ್ ೧೨, -೯)

ಎಂದು ಹೇಳುತ್ತ, ಶುದ್ಧೀಕರಣ ಸ್ಥಾನದಲ್ಲಿರುವವರ ಶುದ್ಧೀಕರಣವು ಶೀರ್ವವಾಗಿ ಕೊನೆಗೊಳಿಸುವಂತೆ ಇಹದಲ್ಲಿರುವವರೂ ಸಹಾಯ ಮಾಡಬೇಕೆಂದು ಕ್ರೈಸ್ತ ಜನತೆಯನ್ನು ಆಹ್ವಾನಿಸಿರುವನು.

ಈ ಉತ್ತರಿಸುವ ಸ್ಥಾನವು ಉಗ್ರತೆಯಲ್ಲಿ ನರಕದಂತೆಯೇ ಇದೆಯಾದರೂ ಅಲ್ಲಿರುವ ದುರ್ಗುಣಗಳು ಇಲ್ಲಿಲ್ಲ. ನರಕದಲ್ಲಿರುವವರಿಗೆ ಅನಂತಕಾಲದವರೆಗೂ ಅದುವೆ ಗತಿಯಾಗಿದ್ದು ನಿರಾಶೆಯಿಂದಲೂ

ಕ್ರೋಧದಿಂದಲೂ ಅವರು ಏನೆಲ್ಲವನ್ನು ಮಾಡಬಹುದೋ ಅವೆಲ್ಲವನ್ನು ಮಾಡುತ್ತ ಇರುವರು. ಆದರೆ ಉತ್ತರಿಸುವ ಸ್ಥಳದಲ್ಲಿರುವವರಿಗೆ ಅದು ತಾತ್ಕಾಲಿಕ ಶಿಕ್ಷೆಯಾಗಿದ್ದು, ಶುದ್ಧವಾದೊಡನೆ ಮೋಕ್ಷವನ್ನು ಸೇರಬಹುದೆಂಬ ಮಹದಾನಂದವೊಂದಿದೆ. ಅದುವೆ ತಮ್ಮ ಯಾತನೆಗಳನ್ನು ಶಾಂತತೆಯಿಂದ ಸಹಿಸುವಂತೆ ಮಾಡುವುದು. ಸರ್ವೇಶ್ವರನ ಸನ್ನಿಧಾನಕ್ಕಾಗಿ ಹಾತೊರೆಯುವ ಅವರು ಯಾವಬಗೆಯ ಉದ್ರೇಕವನ್ನೂ ತೋರಿಸಲು ಸಾಧ್ಯವಿಲ್ಲ. ಆದರೆ ಕರುಣಾದ್ರ ಹೃದಯದವರ ಸಹಾಯವನ್ನು ಇದಿರು ನೋಡುತ್ತಾ ತಮ್ಮ ಪಾಲಿನ ಅಂಶವನ್ನು ಸಹಿಸುವರು. ಈ ವಿಚಾರವನ್ನು ದೃಷ್ಟಾಂತದಿಂದ ಸ್ಪಷ್ಟ ಮಾಡಬಹುದು.

ತನ್ನ ಹಲ್ಲುನೋವಿನಿಂದ ಕಷ್ಟಪಡುವ ವ್ಯಕ್ತಿಗೆ ತನ್ನ ನೋವು ಸಹಿಸಲಾಗುವುದಿಲ್ಲ. ಆತನು ಸರಿಯಾಗಿ ಮಾತಾಡನು, ಉಣ್ಣುವುದಂತೂ ಅವನ ಕೇವಲ ಅಗತ್ಯಕ್ಕಾಗಿ ಮಾತ್ರ. ಆತನ ಕಳವಳವನ್ನು ಬಣ್ಣಿಸಲು ಅಸಾಧ್ಯ. ತುಸು ಅಲಕ್ಷ್ಯಕ್ಕಾಗಿ ಆತನು ಉದ್ರೇಕಗೊಳ್ಳುವನು. ಅಂತಹ ಸಂದರ್ಭದಲ್ಲಿ ಆತನ ಸಮೀಪದ ಬಂಧುವೊಬ್ಬನು ದಿವಂಗತನಾದ ವರ್ತಮಾನವನ್ನು ಆವನಿಗಿತ್ತರೆ ಅವನು ತನ್ನ ಹಲ್ಲುನೋವನ್ನು ಶಾಂತಿಯಿಂದಲೇ ಸಹಿಸುತ್ತ ಅಗಲಿದ ಬಂಧುವಿಗಾಗಿ ಮರುಗುವನು, ಮಾತ್ರವಲ್ಲ ಸಾಧ್ಯವಾದರೆ ಅಂತ್ಯ ಸಂಸ್ಕಾರದಲ್ಲಿ ಸಹಕರಿಸಲು ಹೋಗುವನು. ಇದೇ ರೀತಿಯಲ್ಲಿ ಶುದ್ಧೀಕರಣವನ್ನು ಹೊಂದುವ ಆತ್ಮಗಳು ಮುಂದಿನ ಮಹದಾನಂದದ ಆಶಯದಿಂದ ತಮ್ಮ ಯಾತನೆಗಳೆಲ್ಲವನ್ನೂ ಶಾಂತಿಯಿಂದಲೇ ಸಹಿಸುವರು. ನರಕದಲ್ಲಿರುವವರಂತೆ ಉದ್ರೇಕಗೊಳ್ಳಲಾರರು.

ಕೃಪಾದೃಷ್ಟಿ ಅಥವಾ ಉದಾರತೆ

ಮನುಷ್ಯನು ಹೊನ್ನು, ಹೆಣ್ಣು, ಮಣ್ಣುಗಳ ಪ್ರಲೋಭನೆಗೊಳಪಟ್ಟು ಪಾತಕಗಳನ್ನು ಮಾಡಿಕೊಳ್ಳಬಹುದು. ಆ ಪಾತಕಗಳಿಗಾಗಿ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳಬಹುದು. ಆದರೆ ಭಗವಂತನ ಸರ್ವೋತ್ಕೃಷ್ಟ ನ್ಯಾಯದೃಷ್ಟಿಯಲ್ಲಿ ಪ್ರತಿಯೊಂದು ಪಾತಕವೂ ಯುಕ್ತರೀತಿಯ ಪ್ರಾಯಶ್ಚಿತ್ತದಿಂದ ತೊಳೆಯಲ್ಪಡಬೇಕು. ಭಗವಂತನ ಸ್ಥಾನದ ಮಹತ್ವ

ಕ್ಕನುಗುಣವಾದ ಪ್ರಮಾಣದಲ್ಲಿ ಪರಿಹಾರವನ್ನು ನೀಡಲು ಮೃತ್ಪಿಂಡ ಸೃಷ್ಟಿಯಾದ ಮಾನವನಿಂದ ಆಗದ ವಿಚಾರ. ಆ ಸಂದರ್ಭಗಳಲ್ಲಿ ಕೃಪಾದೃಷ್ಟಿ ಅಥವಾ ಉದಾರತೆಯು ವ್ಯವಹರಿಸುವುದು.

ಈ ಉದಾರತೆಯನ್ನು ಶ್ರೀ ಸಭೆಯು ತನಗೆ ಭಗವಾನ್ ಯೇಸು ಕ್ರಿಸ್ತನು ಕೊಟ್ಟ ಆಣತಿಯ ಆಧಾರದಿಂದ ಭಕ್ತಜನರಲ್ಲಿ ಹಂಚುವುದು. ಸಿಲುಬೆಯ ಮೇಲಣ ತನ್ನ ಸಂರಕ್ಷಣೆಯ ಮರಣದಿಂದ ಮಾನವ ಕುಲದ ಉದ್ಧಾರಕ್ಕೆ ಸಾಕಷ್ಟು ಪ್ರತಿಫಲವನ್ನು ಆತನು ಸಂಗ್ರಹಿಸಿರುವನು. ಆ ಪುಣ್ಯ ಫಲವು ಶ್ರೀಸಭೆಯ ಅಧಿಕಾರದಲ್ಲಿ ವಿತರಣೆಗಾಗಿ ನೀಡಿರುವನು. ಪಾತಕ ಗಳಿಗೆ ಯುಕ್ತ ಪರಿಹಾರವನ್ನು ನೀಡಲು ಮಾನವನಿಂದಾಗದುದರಿಂದ ಕ್ರಿಸ್ತನ ಈ ಫಲವನ್ನು, ಉದಾರತೆಯ ಸಂಕೇತವಾಗಿ ಬಳಸಿಕೊಂಡಾಗ ಯುಕ್ತ ಪರಿಹಾರವು ನೀಡಲ್ಪಡುವುದು. ಹೀಗೆ ಯುಕ್ತ ಪರಿಹಾರವನ್ನು ನೀಡಲಾಗದವರು ಶುದ್ಧೀಕರಣ ಸ್ಥಾನದಲ್ಲಿ ಶುದ್ಧಿಯನ್ನು ಪಡೆಯುವರು.

ಈ ಉದಾರತೆಯಲ್ಲಿ ಪೂರ್ಣವಾದುದೆಂದೂ ಅಪೂರ್ಣವಾದುದೆಂದೂ ಎರಡು ವಿಧವಾಗಿ ವಿಭಜಿಸಬಹುದು. ಪೂರ್ಣವಾದುದನ್ನು ಬಳಸಿ ಕೊಂಡಾಗ ವ್ಯಕ್ತಿಯು ನೀಡಬೇಕಾದ ಪರಿಹಾರವೆಲ್ಲವೂ ನೀಡಲ್ಪಡುವುದು. ಆತನು ನೇರವಾಗಿಯೇ ಭಗವತ್- ಸನ್ನಿಧಾನಕ್ಕೆ ಹೋಗುವನು. ಶುದ್ಧೀ ಕರಣದ ಸ್ಥಾನದಲ್ಲಿರುವವರಿಗಾಗಿ ಅಂತಹವುಗಳನ್ನು ಅರ್ಪಿಸಿದಾಗ ಅವರು ಮುಕ್ತರಾಗಿ ಮೋಕ್ಷವನ್ನು ಸೇರುವರು. ಅಪೂರ್ಣವಾದ ಉದಾರತೆ ಯಿಂದ ಸ್ವಲ್ಪಾಂಶ ಪರಿಹಾರವನ್ನು ನೀಡಿದಂತಾಗುವುದು.

ಈ ಉದಾರತೆಯ ಬಳಸುವಿಕೆಯಿಂದ ಪಾತಕಗಳ ಕ್ಷಮೆಯು ದೊರಕುವುದಿಲ್ಲ. ಆದರೆ ಕ್ಷಮಿಸಿದ ಅಪರಾಧಗಳ ದುಷ್ಪರಿಣಾಮವು ನೀಗಲ್ಪಡುತ್ತದೆ. ಈ ಉದಾರತೆಯನ್ನು ಪಡೆಯಬೇಕಾದರೆ ಶ್ರೀ ಸಭೆಯು ವಿಧಿಸಿದ ಕೆಲವು ಕಾರ್ಯಗಳನ್ನು ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಉದಾರತೆಯ ಪ್ರಯೋಗವನ್ನು ಮಾಡಿಕೊಳ್ಳ ಬಯಸುವವರು ಪಾತಕದ ಸ್ಥಿತಿಯಲ್ಲಿರಬಾರದು. ಆತನು ಪ್ರಾಯಶ್ಚಿತ್ತದ ಸಂಸ್ಕಾರವನ್ನು ಬಳಸಿಕೊಂಡು ಭಗವತ್ ಜೀವವಾದ ಪವಿತ್ರೀಕರಣದ ವರಪ್ರಸಾದವನ್ನು ಪಡೆದಿರಬೇಕು. ಎರಡನೆಯದಾಗಿ

ಉದಾರತೆಯು ಸಿಗಬೇಕಾದರೆ ಅದನ್ನು ಪಡೆಯುವ ಸಂಕಲ್ಪವೂ ಇರಬೇಕಾಗಿದೆ. ಮೂರನೆಯದಾಗಿ ಉದಾರತೆಯನ್ನು ಪಡೆಯಲು ನಿಶ್ಚಯಿಸಿದ ಪುಣ್ಯಪ್ರದ ಕಾರ್ಯಗಳನ್ನು ಮಾಡಿಕೊಳ್ಳಬೇಕು. ಆದರೆ ಹಣವಿತ್ತು ಈ ಉದಾರತೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಆದರೂ ದಾನದಿಂದ ಬರಬಹುದಾದ ಉದಾರತೆಯ ಹಕ್ಕು ಇಲ್ಲದಿಲ್ಲ.

ಇಂತಹ ಉದಾರತೆಯ ಪ್ರಯೋಗದಿಂದ ಮನುಷ್ಯನು ಸರಿದಾರಿ ತಪ್ಪದಂತೆ ಅವನೊಂದು ಸಾಧನವನ್ನು ಪಡೆದಿರುವನು. ಕಥೋಲಿಕರು ಪಾತಕದೆಡೆಗೆ ಸೆಳೆಯುವ ಮನಸ್ಸನ್ನು ಬಿಗಿಹಿಡಿಯುವ ಮೂಗುದಾರದಂತಿರುವ ಈ ಉದಾರಫಲದ ಸರಿಯಾದ ಪ್ರಯೋಗವನ್ನು ಮಾಡಿಕೊಂಡು ತಮಗೂ ಸತ್ತುಹೋದ ತಮ್ಮವರಿಗೂ ಉಪಕಾರಿಯಾಗುವಂತೆ ಮಾಡಿಕೊಳ್ಳುವರು.

ಸ್ವಾಯತ್ತ ಬ್ರಹ್ಮಚರ್ಯ

ವಿವಾಹವು ಪವಿತ್ರವಾದೊಂದು ಬಂಧವಾಗಿದೆ. ಅದರಿಂದ ಬಂಧಿಸಲ್ಪಟವನು ಕೌಟುಂಬಿಕ ವಿಷಯಗಳಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ. ಸಾಂಸಾರಿಕ ಸೂತ್ರಗಳಿಂದ ಆವೃತನಾದವನು ಆ ಸೂತ್ರಗಳ ಸಮನ್ವಯದಲ್ಲಿಯೇ ಭಗವತ್-ಸೇವೆಯನ್ನು ಮಾಡಬೇಕಾಗಿದೆ. ಆದುದರಿಂದ ಪೂರ್ಣವಾಗಿ ಭಗವಂತನ ಸೇವೆಯಲ್ಲಿ ಜೀವನವನ್ನು ಕಳೆಯ ಬಯಸುವವರು ಶುದ್ಧ ಬ್ರಹ್ಮಚರ್ಯದಿಂದಿರಬೇಕಾಗಿದೆ. ಈ ಕುರಿತು ಪ್ಲಾವನು ಹೇಳಿದ ಮಾತುಗಳು ಮನನೀಯವಾಗಿವೆ. "ಅವಿವಾಹಿತೆಯರೂ ವಿಧವೆಯರೂ, ನಾನಿರುವಂತೆ, ಅದೇ ರೀತಿಯಲ್ಲಿ ಮುಂದುವರಿದರೆ ಉತ್ತಮವೆಂದು ನಾನು ಹೇಳುತ್ತೇನೆ. ಪತ್ನಿಯಿರದವನು ಭಗವಂತನನ್ನು ಹೇಗೆ ಒಲಿಸಬಹುದೆಂದು ಭಗವತ್ ಸಂಬಂಧವಾದ ವಿಷಯಗಳಲ್ಲಿ ಉತ್ಸುಕನಾಗಿರುವನು. ಆದರೆ ಪತ್ನಿಯಿರುವವನು ತನ್ನ ಪತ್ನಿಯನ್ನು ಒಲಿಸುವುದು ಹೇಗೆಂದು ಲೋಕದ ವಿಷಯಗಳಲ್ಲಿ ಉತ್ಸುಕನಾಗಿರುವುದರಿಂದ ಅವನು ವಿಭಜಿಸಲ್ಪಡುವನು. ಹಾಗೆಯೇ ಅವಿವಾಹಿತಳೂ ಕನ್ಯೆಯೂ ದೇಹದಲ್ಲಿಯೂ ಆತ್ಮದಲ್ಲಿಯೂ ಪವಿತ್ರತೆಯನ್ನು ಹೇಗೆ ಸಂಪಾದಿಸುವು

ದೆಂದು ಭಗವಂತನ ವಿಷಯಗಳನ್ನು ಯೋಚಿಸುವಳು. ಆದರೆ ವಿವಾಹಿತಳು ತನ್ನ ಪತ್ನಿಯನ್ನು ಹೇಗೆ ಒಲಿಸುವುದೆಂದು ಲೋಕದ ವಸ್ತುವಿಷಯ ಗಳನ್ನು ಯೋಚಿಸುವಳು. ಇದೆಲ್ಲವನ್ನೂ ನಿಮ್ಮ ಹಿತಕ್ಕಾಗಿ ನಾನು ಹೇಳ ವುದಲ್ಲದೆ ನಿಮಗೊಂದು ಪಾಶವೀಯುವುದಕ್ಕಲ್ಲ. ಆದರೆ ಆವಾವ ಬಗೆಯು ವಿಘ್ನಗಳಿಲ್ಲದೆ ಸ್ವಾಮಿಯ ಸೇವೆಗೆ ಶಕ್ತಿಯನ್ನು ಪಡೆಯುವಂತೆಯೂ ಅದು ಯೋಗ್ಯವಾಗಿರುವಂತೆಯೂ ನಿಮ್ಮನ್ನು ಮಾಡುವುದಕ್ಕಾಗಿ ಮಾತ್ರ" (೧ ಕೊರಿಂತ ೭, ೩೨-೩೫).

ಭಾರತದಲ್ಲಿ ಬ್ರಹ್ಮಚರ್ಯಕ್ಕೆ ಹಿರಿದೊಂದು ಸ್ಥಾನವಿದೆ. ಭಾರತೀಯ ಸಂಸ್ಕೃತಿ ಹಾಗೂ ಸಮಾಜ ಪದ್ಧತಿಗಳಿಗಾಗಿ ಬ್ರಹ್ಮಚಾರಿಗಳ ಸೇವೆಯು ಮಹತ್ವವುಳ್ಳುದಾಗಿದೆ. ಹಿಂದೂಮತದ ಹೆಚ್ಚಿನ ನಾಯಕರು ಬ್ರಹ್ಮಚಾರಿಗಳಾಗಿರುವರು. ಕೆಲವರು ವೈವಾಹಿಕ ಸೂತ್ರದಿಂದ ಬಂಧಿಸ ಲ್ಪಟ್ಟು ಗೃಹಸ್ಥಾಶ್ರಮಿಗಳಾಗಿದ್ದರೂ ಆ ಆಶ್ರಮಧರ್ಮದ ಆಶ್ರಯದೊಳಗೆ ಬ್ರಹ್ಮಚರ್ಯವನ್ನು ಪಾಲಿಸಿದ್ದರು. ಎಲ್ಲ ದೇಶಗಳಲ್ಲಿಯೂ ಬ್ರಹ್ಮಚಾರಿ ಗಳ ಸೇವೆಯು ಮುಖ್ಯಪಾತ್ರವನ್ನು ವಹಿಸಿದೆ.

ಕಥೋಲಿಕರಲ್ಲಿ ಸ್ವಾಯತ್ತ ಬ್ರಹ್ಮಚರ್ಯಕ್ಕೆ ವಿಶಿಷ್ಟವಾದೊಂದು ಸ್ಥಾನವಿದೆ. ಆ ಧರ್ಮಸಂಸ್ಥಾಪಕನಾದ ಯೇಸುವು ಬ್ರಹ್ಮಚಾರಿ ಯಾಗಿದ್ದನು. ಆತನ ಶಿಷ್ಯರಲ್ಲಿ ಯೋಹಾನನೂ ಪಾವ್ಲನೂ ಮರಣದ ವರೆಗೂ ಬ್ರಹ್ಮಚರ್ಯದಿಂದಿದ್ದರು. ಉಳಿದ ಶಿಷ್ಯರು ಯೇಸುವನ್ನು ಹಿಂಬಾಲಿಸುವ ತನಕ ಗೃಹಸ್ಥಾಶ್ರಮಿಗಳಾಗಿದ್ದರು. ಆನಂತರ ಅವರ ವೈವಾಹಿಕ ಜೀವನದ ಉಲ್ಲೇಖವಿಲ್ಲ.

ಬಹು ಪ್ರಾಚೀನ ಕಾಲದಿಂದಲೇ ಅನೇಕ ಕ್ರೈಸ್ತರು ದೇವತಾ ಸೇವೆ ಯಲ್ಲಿ ಸಂಪೂರ್ಣಲೀನರಾಗಲು ವೈವಾಹಿಕ ಬಂಧವನ್ನು ತ್ಯಜಿಸುತ್ತಿದ್ದರು. ಆದರೆ ಕ್ರಮೇಣ ಅವಿವಾಹಿತರಾಗಿ ಭಗವತ್‌ಸೇವೆಯಲ್ಲಿ ನಿರತರಾಗುವ ಪದ್ಧತಿಯು ಧರ್ಮದ ಪುರೋಹಿತರಲ್ಲಿ ರೂಢಿಗೆ ಬಂದಿತು.

ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಪೌರೋಹಿತ್ಯದ ದೀಕ್ಷೆಯನ್ನು ಪಡೆಯುವವನು ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕೆಂಬ ನಿಯಮವನ್ನು ಕಥೋಲಿಕ ಪಂಥವು ರೂಢಿಗೆ ತಂದಿತು. ಆದರೆ ಪೌರ್ವಾತ್ಯ ಪಂಥಗಳಲ್ಲಿ

ವಿವಾಹಿತ ವ್ಯಕ್ತಿಗಳಿಗೂ ಪೌರೋಹಿತ್ಯದ ದೀಕ್ಷೆಯನ್ನು ನೀಡುತ್ತಿದ್ದರು. ದೀಕ್ಷಾಬದ್ಧರಾದ ಮೇಲೂ ಅವರು ಗೃಹಸ್ಥಾಶ್ರಮದಲ್ಲಿಯೇ ಇದ್ದು ಪೌರೋಹಿತ್ಯವನ್ನು ಸಾಗಿಸುತ್ತಿದ್ದರು. ಆದರೆ ಅವಿವಾಹಿತನು ದೀಕ್ಷಾಬದ್ಧನಾದಾಗ ಮಾತ್ರ ಅವನಿಗೆ ವಿವಾಹವಾಗಲು ಎಡೆಯಿದ್ದಿಲ್ಲ. ಪುರೋಹಿತನಾಗುವ ದೀಕ್ಷೆಯನ್ನು ಸ್ವೀಕರಿಸಲು ಶ್ರೀಸಭೆಯು ಯಾರಿಗೂ ಒತ್ತಾಯ ಮಾಡುವುದಿಲ್ಲ. ಆದರೆ ದೀಕ್ಷಾಬದ್ಧನಾಗುವವನು ಬ್ರಹ್ಮಚರ್ಯದ ಪ್ರಮಾಣವನ್ನು ಮಾಡಲೇಬೇಕಾಗಿದೆ. ಈ ನಿಯಮವು ಹಿತಕರವೆಂದು ಶ್ರೀಸಭೆಯ ಚರಿತ್ರೆಯು ತಿಳಿಸುತ್ತದೆ. ಪುರೋಹಿತನು ಭಗವಂತನಿಗಾಗಿ ಮತ್ತು ತಾನು ಸೇವೆಮಾಡುವ ಜನತೆಗಾಗಿ ಮಾತ್ರ ಜೀವಿಸುವುದು ಉತ್ತಮ ಧ್ಯೇಯವಾಗಿದೆ. ಪ್ರಾಪಂಚಿಕ ವಿಷಯಗಳಲ್ಲಿ ಮಗ್ನನಾದವನು ಪಾರಮಾರ್ಥಿಕ ವಿಷಯಗಳಲ್ಲಿ ಅಲಕ್ಷ್ಯವನ್ನು ತೋರುವುದು ರೂಢಿಯಾಗಿದೆ. ಗುರುತನದ ಸಂಸ್ಕಾರದಿಂದ ಪೌರೋಹಿತ್ಯದ ದೀಕ್ಷೆಯನ್ನು ಪಡೆದವನು ಆಮರಣ ಪುರೋಹಿತನಾಗಿರುವುದರಿಂದ, ಆತನು ಬ್ರಹ್ಮಚರ್ಯವನ್ನು ಆಮರಣವಾಗಿ ಪಾಲಿಸಬೇಕಾಗಿದೆ. ಬ್ರಹ್ಮಚರ್ಯದ ಪ್ರಮಾಣ ಮಾಡಿದವರು ವಿವಾಹದಿಂದ ಮಾತ್ರವಲ್ಲ ಲೈಂಗಿಕ ಸಂಬಂಧಗಳಿಂದಲೂ ದೂರವಿರಬೇಕಾಗಿದೆ.

"ಸ್ತ್ರೀಯನ್ನು ಸ್ಪರ್ಶಿಸದಿರುವುದು ಒಬ್ಬ ಪುರುಷನಿಗೆ ಶ್ರೇಯಸ್ಕರವು. ಆದರೆ ವ್ಯಭಿಚಾರದ ದೋಷವು ತಟ್ಟದಂತೆ ಪ್ರತಿ ಪುರುಷನಿಗೆ ಆತನ ಪತ್ನಿಯಿರಲಿ; ಪ್ರತಿ ಸ್ತ್ರೀಗೆ ಆಕೆಯ ಪುರುಷನಿರಲಿ" (೧ ಕೊರಿಂತ ೭, ೧-೨).

"ಎಲ್ಲ ಮನುಷ್ಯರೂ ನನ್ನಂತೆ ಆಗಿರಲು ನಾನು ಬಯಸುತ್ತೇನೆ. ಆದರೆ ಒಬ್ಬನಿಗೆ ಹೀಗೆ, ಇನ್ನೊಬ್ಬನಿಗೆ ಹಾಗೆ ಎಂದು ಪ್ರತಿಯೊಬ್ಬನಿಗೂ ದೇವರಿತ್ತ ಪ್ರಸಾದವಿದೆ. ಆದರೆ ಅವಿವಾಹಿತೆಗೂ ವಿಧವೆಯರಿಗೂ ನಾನು ಹೇಳುವುದು: ನಾನಿರುವಂತೆಯೇ ಅವರಿರುವುದು ಶ್ರೇಯಸ್ಕರವು. ಆದರೆ ಬ್ರಹ್ಮಚರ್ಯವನ್ನು ಪಾಲಿಸುವುದಿಲ್ಲವಾದರೆ ಮದುವೆಯಾಗಲಿ. ಸುಡುವ ಬದಲು ವಿವಾಹವಾಗುವುದು ಶ್ರೇಯಸ್ಕರವು" (೧ ಕೊರಿಂತ ೭, ೭-೯).

"ಆ ಸಿಂಹಾಸನದ ಮತ್ತು ಜೀವಂತ ನಾಲ್ಕು ಪ್ರಾಣಿಗಳ ಮತ್ತು

ಶ್ರೇಷ್ಠರ ಮುಂದೆ ಹೊಸದೊಂದು ಹಾಡೆಂಬಂತೆ ಅವರು ಹಾಡುತ್ತಿದ್ದರು. ಭೂಲೋಕದಿಂದ ಕೊಳ್ಳಲ್ಪಟ್ಟ ಆ ನೂರನಾಲ್ವತ್ತು ಸಾವಿರ ಜನರ ಹೊರತು ಉಳಿದವರು ಆ ಹಾಡನ್ನು ಕಲಿಯದಾದರು. ಸ್ತ್ರೀಯರಿಂದ ಮಲಿನರಾಗದವರೇ ಇವರು: ಏಕೆಂದರೆ ಅವರು ಬ್ರಹ್ಮಚಾರಿಗಳು. ಕುರಿಮರಿಯು ಹೋಗುವಲ್ಲೆಲ್ಲ ಇವರು ಹಿಂಬಾಲಿಸುತ್ತಿದ್ದರು." (ದೇವೋಕ್ತ, ೧೪, ೩-೪)

ಕಥೋಲಿಕರಲ್ಲಿ ಸ್ವಾಯತ್ತ ಬ್ರಹ್ಮಚರ್ಯಕ್ಕೆ ಅಂತಹ ಸ್ಥಾನವಿದ್ದುದರಿಂದ ಪುರುಷರು ಮಾತ್ರವಲ್ಲ ಸ್ತ್ರೀಯರೂ ಬ್ರಹ್ಮಚರ್ಯವ್ರತಬದ್ಧರಾಗಿ ಭಗವತ್ ಸೇವೆ, ಆ ಮೂಲಕ ಸಮಾಜ ಸೇವೆಯನ್ನು ಮಾಡಲು ತಮ್ಮನ್ನು ತಾವೇ ಸಮರ್ಪಿಸಿರುವರು. ಕೌಟುಂಬಿಕ ಸಂಬಂಧಗಳನ್ನು ಕಡಿದೊಗೆದು ಪ್ರತ್ಯೇಕವಾದ ಮನೆ-ಮಠಗಳಲ್ಲಿ ಜೀವಿಸುವರು. ಉಡುಗೆ-ತೊಡುಗೆಗಳಲ್ಲಿಯೂ ಭಿನ್ನರೀತಿಗಳನ್ನು ಅನುಸರಿಸುವರು. ವಿಲಕ್ಷಣವಾಗಿ ತೋರುವ ಅವುಗಳನ್ನು ಕಂಡಾಗ ಪರಮತೀಯರಿಗೆ ಅಚ್ಚರಿಯಾಗುತ್ತದೆ.

ಸಾಮಾನ್ಯವಾಗಿ ಆ ಸಂಸ್ಥೆಗಳು ವಿಶಿಷ್ಟವಾದ ಧ್ಯೇಯ ಆದರ್ಶಗಳಿಂದ ಸ್ಥಾಪಿಸಲ್ಪಟ್ಟಿವೆ. ಅವುಗಳ ಸುಮನ್ವಯದಲ್ಲಿ ಅವರ ಉಡುಗೆ-ತೊಡುಗೆಗಳೂ ನಿಷ್ಕರ್ಷಿಸಲ್ಪಟ್ಟಿವೆ. ಸ್ಥಾಪಕರು ತಮ್ಮ ಸಂಘಗಳಿಗೆ ಆಯಾಕಾಲದ ಬಳಕೆಯ ಉಡುಗೆ-ತೊಡುಗೆಗಳನ್ನೇ ಒಂದೆರಡು ವ್ಯತ್ಯಾಸಗಳೊಡನೆ ಆರಿಸಿದ್ದರೂ ಕಾಲಕ್ರಮೇಣ ಜನಸಾಮಾನ್ಯರ ವಸನಗಳು ವ್ಯತ್ಯಾಸಗೊಂಡು, ಸಂಘಗಳ ನಿಶ್ಚಿತರೀತಿಯು ಉಳಿದುಕೊಂಡುದರಿಂದ ನೋಡುವಾಗ ಪ್ರತ್ಯೇಕತೆಯೊಂದು ತೋರುವುದು. ಸಾಮಾನ್ಯ ಜನತೆಗಿಂತ ಭಿನ್ನವಾದ ಆದರ್ಶಗಳನ್ನು ಅನುಸರಿಸುವ ಕಾರಣವಾಗಿ ಆ ಪ್ರತ್ಯೇಕತೆಯು ಸಮಂಜಸವಾಗಿದೆ.

ಹೀಗೆ ಪ್ರತ್ಯೇಕವಾಗಿ ಜೀವಿಸುವ ಮಠವಾಸಿಗಳನ್ನು ಕಥೋಲಿಕ ಸನ್ಯಾಸಿ, ಸನ್ಯಾಸಿನಿಯರೆಂದು ಹೇಳಬಹುದು. ಅವರು ಸ್ವಾಯತ್ತ ಬ್ರಹ್ಮಚರ್ಯದ ಆಜನ್ಮವ್ರತ, ನಿರಂತರ ದಾರಿದ್ರ್ಯದ ವ್ರತ, ಮತ್ತು ಪರಿಪೂರ್ಣ ವಿಧೇಯತೆಯ ವ್ರತ-ಎಂಬ ಮೂರು ವ್ರತಗಳ ಪ್ರತಿಜ್ಞೆಯನ್ನು ಕೈಕೊಳ್ಳುವರು. ಬ್ರಹ್ಮಚರ್ಯದ ಹಿರಿಮೆಯನ್ನು ನಾವು ನೋಡಿರುವೆವು. ಸನ್ಯಾಸಿ, ಸನ್ಯಾಸಿನಿಯರು ನಿರಂತರ ದಾರಿದ್ರ್ಯದ

ವ್ರತದ ಮೂಲಕ ಸಕಲವಿಧಗಳ ಸ್ವಾರ್ಥ ಹಾಗೂ ಮಮತೆಗಳನ್ನು ಬಿಡಬೇಕಾಗಿದೆ. ತನ್ನೊಡನಿರುವ ಪ್ರತಿಯೊಂದು ವಿಷಯವೂ ತಮ್ಮ ಸಂಘಕ್ಕೆ ಸೇರಿದುದೆಂದೂ ಅಧಿಕಾರಿಗಳ ಅನುಮತಿ ವಿನಃ ಅದನ್ನು ಪರಾಧೀನ ಮಾಡುವ ಅಥವಾ ದುರುಪಯೋಗಗೊಳಿಸುವ ಅಧಿಕಾರ ತಮಗಿಲ್ಲವೆಂದೂ ತಿಳಿದುಕೊಳ್ಳುವರು. ಹೀಗಿದ್ದರೂ ತಮ್ಮ ಸಂಘಕ್ಕೆ ಬೇಕಾದ ವಸ್ತು ವಿಷಯಗಳನ್ನು ಸಂಗ್ರಹಿಸುವರು.

ಪರಿಪೂರ್ಣ ವಿಧೇಯತೆಯ ವ್ರತದಿಂದ ಮೇಲಧಿಕಾರಿಯ ಆಜ್ಞೆಯನ್ನು ತನ್ನಿಂದಾದಷ್ಟು ಮನಃಪೂರ್ವಕವಾಗಿ ಕಾರ್ಯರೂಪಕ್ಕೆ ತರಲು ಅವರು ಬದ್ಧರು. ಆ ಕಾರ್ಯದ ಇತಿಮಿತಿಗಳನ್ನು ಅವರು ಪ್ರಶ್ನಿಸರು. ಪ್ರತಿಯೊಂದು ಹಿರಿಯಧಿಕಾರಿಯ ಆಣತಿಯ ಮೇಲೆ ನಡೆಯುವುದು. ಇಂದು ಹಿರಿಯಧಿಕಾರಿಯಾಗಿ ನಿರ್ವಹಿಸುವವನು ನಾಳೆ ಸಾಮಾನ್ಯ ಸದಸ್ಯನಾಗಿರಬಹುದು. ಅದೇ ರೀತಿಯಲ್ಲಿ ಇಂದು ಸಾಮಾನ್ಯ ಸದಸ್ಯನಾಗಿದ್ದವನು ನಾಳೆ ಹಿರಿಯಧಿಕಾರಿಯಾಗಿ ಆರಿಸಲ್ಪಡುವನು. ತನ್ನ ಹಿಂದಿನ ಅಧಿಕಾರ ಗೌರವಗಳನ್ನು ಅವರು ಲೆಕ್ಕಿಸರು. ಹೀಗಾಗಿ ಮಠದ (ಸಂಘದ) ಸಮಸ್ತ ಕಾರ್ಯಗಳು ಏಕರೂಪತೆಯಿಂದ ನಡೆಯುವವು.

ಎಲ್ಲ ಮತಗಳಲ್ಲಿಯೂ ಪುರೋಹಿತರಿಗೆ ಗೌರವದ ಸ್ಥಾನವಿದೆ. ಆದರೆ ಕಥೋಲಿಕರಲ್ಲಿ ಅವರಿಗೆ ವಿಶಿಷ್ಟವಾದೊಂದು ಗೌರವದ ಸ್ಥಾನವಿದೆ. ಜನನದಿಂದ ಮರಣದವರೆಗೆ, ಮರಣದ ಅನಂತರವೂ ಪುರೋಹಿತರ ಸೇವೆಯು ಬೇಕಾಗಿದೆ. ರೋಗಿಯು ವೈದ್ಯನಲ್ಲಿಗೆ ಹೋಗುವಂತೆ, ತೊಂದರೆಗೀಡಾದವನು ನೀತಿಕರ್ತನ ಬಳಿಗೈದುವಂತೆ ಅವರು ಪುರೋಹಿತನಲ್ಲಿಗೆ ಧಾವಿಸುವರು. ಐಹಿಕ ಮಂದಿರವನ್ನು ರಚಿಸಲು ಶಿಲ್ಪಿಯನ್ನು ವಿಚಾರಿಸುವಂತೆ ಪರಲೋಕದ ಶಾಶ್ವತ ಶಾಂತಿಯನ್ನು ಸಂಪಾದಿಸುವ ಸೂಚನೆಗಳನ್ನು ಪಡೆಯಲು ಪುರೋಹಿತನನ್ನು ಕಾಣುವರು. ಆತನು ತಿಳಿದಿರದ ವಿಷಯವೊಂದೂ ಇಲ್ಲವೆಂದು ಮನಬಿಚ್ಚಿ ಅವನೊಡನೆ ಮಾತಾಡುವರು.

ಪುರೋಹಿತರು ಆಧ್ಯಾತ್ಮಿಕ ಗುರುಗಳಾಗಿರುವುದರಿಂದ ಅವರನ್ನು ಪಿತ (Father)ರೆಂದು ಕರೆಯುವರು. ಹಾಗೆಯೇ ಬ್ರಹ್ಮಚಾರಿಣಿಯರ

ಕೂಟಗಳ ಸದಸ್ಯೆಯರನ್ನು ಸಹೋದರಿಯರು (Sisters) ಎಂದೂ ಅವರ ನಾಯಕಿಯರನ್ನು ಮಾತೆ(Mother)ಯೆಂದೂ ಕರೆಯುವರು. ಈ ಪಿತ, ಮಾತೆಗಳು ಇಂಗ್ಲಿಷ್ ಪದಗಳ Father, Motherಗಳಿ ಗನುಗುಣವಾಗಿ ಪಾದ್ರಿ–ಮಾತೆಗಳೆಂಬ ರೂಪವನ್ನು ಪಡೆದಿವೆ. ಈ ಪಾದ್ರಿ ಮಾತೆಗಳು ಭಗವತ್–ಸೇವೆ, ಲೋಕಸೇವೆಗಳನ್ನು ಮಾಡುತ್ತ ಸಮಾಜ ಹಿತವನ್ನು ಮಾಡುತ್ತಿರುವರು.

ಇಲ್ಲೊಂದು ಪ್ರಶ್ನೆ ಬರುತ್ತದೆ: ಎಲ್ಲ ಪಾದ್ರಿಗಳೂ ಮಾತೆಗಳೂ ಜಿತೇಂದ್ರಿಯರಾಗಿಯೇ ಇರುತ್ತಾರೆಯೇ? ಎಂದು ವಾಚಕರು ಪ್ರಶ್ನಿಸ ಬಹುದು. ಪ್ರತಿಯೊಂದು ಸಂಘ–ಸಮಾಜದಲ್ಲಿ ಎಲ್ಲ ಬಗೆಯ ವ್ಯಕ್ತಿ ಗಳೂ ಇರುವರೆಂಬುದನ್ನು ಅದಾರೂ ನಿರಾಕರಿಸಲಾರರು. ಅದೇರೀತಿಯಲ್ಲಿ ಆಧ್ಯಾತ್ಮಿಕ ಜೀವನದ ಉದಾತ್ತ ಸೂತ್ರಗಳನ್ನು ಅನುಸರಿಸು ವಾಗಲೇ ವ್ಯಕ್ತಿಗಳೂ ತಮ್ಮ ಮಾನವ ಸ್ವಭಾವದ ಸಹಜವಾದ ಚಾಂಚಲ್ಯ ಗಳ ಸೆಳೆತಗಳಿಂದಾಗಿ ಸ್ಥಾನ ತಪ್ಪುವುದುಂಟು. ಅವರಾದರೂ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳಬೇಕಾಗಿದೆ. ಪ್ರತಿಯೊಂದು ವ್ಯಕ್ತಿಗೂ ಅದನ್ನು ಸಾಧಿಸಲು ಅದೆಷ್ಟು ಮಾರ್ಗಗಳಿವೆ. ಹಾಗಿರುತ್ತ ಕೆಲವು ವ್ಯಕ್ತಿ ಗಳಿಗೂ ತಮ್ಮ ಸ್ಥಾನ ತಪ್ಪಿಹೋಗಬಹುದು. ಅವರು ತಮ್ಮ ಉನ್ನತಿ ಯನ್ನು ಸಾಧಿಸಬೇಕಾಗಿದೆ. ಅವರಾದರೂ ಜಾರಿಬೀಳುವ ಕಾಲದಲ್ಲಿ ಮರೆತಿರಬಹುದು. ಅದೇ ಸಂದರ್ಭದಲ್ಲಿ ಶುದ್ಧ ಹೃದಯದ, ಸಮಾಜೋದ್ಧಾರಕರಾದ ನಿಸ್ವಾರ್ಥಿಗಳು ಎಷ್ಟೋ ಮಂದಿ ಇರುವರೆಂಬು ದನ್ನು ನಾವು ನೆನವರಿಕೆ ಮಾಡಿಕೊಳ್ಳಬೇಕು. ಕೆಲವರ ಅಪರಾಧವನ್ನು ಹಲವರ ಮೇಲೆ ಹೊರಿಸಿ, ನ್ಯಾಯವಂತರಿಗೆ ದ್ರೋಹವನ್ನು ವ್ಯಕ್ತಿಗಿಂತ ಸಂಘವು ಮೇಲೆಂದು ತಿಳಿಯದ ವೈರಿಯು ವೈಯಕ್ತಿಕ ಅಪರಾಧವನ್ನು ಅಖಿಲ ಸಮಾಜದ ಮೇಲೆ ಹೊರಿಸಿ, ತನ್ನ ವಿಷವನ್ನು ಕಾರುವನು.

ಪೂಜಾದಿಗಳಲ್ಲಿ ಲತೀನಿನ ಪ್ರಯೋಗ

ಕಥೋಲಿಕರಲ್ಲಿ ಪೂಜಾದಿಗಳಲ್ಲಿ ಲತೀನ್ ಭಾಷೆ (Latin) ಯನ್ನು ಬಳಸುವರು. ಲತೀನ್ ಭಾಷೆಯು ಈಗ ಬಳಕೆಯಲ್ಲಿಲ್ಲದಿರುವುದರಿಂದ

ಪಾದ್ರಿಗಳು ಅದನ್ನು ಬಳಸಿಕೊಂಡು ಧರ್ಮಶಾಸ್ತ್ರಾರ್ಥಗಳನ್ನು ಜನಸಾಮಾನ್ಯರಿಂದ ಗೋಪ್ಯವಾಗಿರಿಸುವರೆಂಬ ಅಪವಾದಕ್ಕೆಡೆಯಿದೆ. ಈ ಕುರಿತು ತುಸು ವಿಸ್ತರಣವು ಅಗತ್ಯವಿದೆ.

ನಾವೆಲ್ಲರೂ ವಿಶ್ವಕರ್ತೃ ಭಗವಂತನಲ್ಲಿ ಪ್ರಾರ್ಥಿಸುವೆವು. ಸಮಸ್ತ ಭಾಷೆಗಳ ಸ್ವಾಮಿಯಾದ ಆತನಲ್ಲಿ ಯಾವ ಭಾಷೆಯಲ್ಲಿ ಪ್ರಾರ್ಥಿಸಿದರೇನು! ಕಥೋಲಿಕರಲ್ಲಿ ಧರ್ಮಶಾಸ್ತ್ರಗಳ ಮೂಲವು ಲತೀನು ಭಾಷೆಯಲ್ಲಿರುವುದು. ಕ್ರೈಸ್ತಮತ ಸ್ಥಾಪನೆ ಕಾಲದಲ್ಲಿ ಲತೀನು ಜನಸಾಮಾನ್ಯರ ಭಾಷೆಯಾಗಿತ್ತು. ಗ್ರೀಕ್ ಭಾಷೆಯು ಸುಸಂಸ್ಕೃತರ ಭಾಷೆಯಾಗಿದ್ದಿತಾದರೂ ಪ್ರಸಿದ್ಧ ರೋಮಕ ಸಾಮ್ರಾಜ್ಯವು ಆಗ ಅತ್ಯುನ್ನತ ಸ್ಥಿತಿಯಲ್ಲಿದ್ದು ಲತೀನು ರಾಜ್ಯ ವ್ಯವಹಾರದ ಭಾಷೆಯಾಗಿತ್ತು. ಅದು ನಮ್ಮಲ್ಲಿ ರೂಢಿಯಲ್ಲಿಲ್ಲದ ಸಂಸ್ಕೃತ ಭಾಷೆಯಂತೆ ಸತ್ವಯುತ ಭಾಷೆಯಾಗಿದೆ. ಬೈಬಲಿನ ಹೆಚ್ಚಿನ ಭಾಗಗಳು ಮೂಲದಲ್ಲಿ ಇತರ ಭಾಷೆಗಳಲ್ಲಿ ರಚಿಸಲ್ಪಟ್ಟವೆಯಾದರೂ ಕೆಲವು ಭಾಗಗಳು ಲತೀನ್ ಭಾಷೆಯಲ್ಲಿ ಬರೆಯಲ್ಪಟ್ಟವೆ-ಮಾತ್ರವಲ್ಲ ಕ್ರಿ ಶ. ಮೂರನೆಯ ಶತಮಾನದಲ್ಲಿಯೇ ಅಖಿಲ ಬೈಬಲ್ ಲತೀನ್ ಭಾಷೆಯಲ್ಲಿ ಅನುವಾದ ಮಾಡಲ್ಪಟ್ಟದ್ದಿತು. ಈಗ ಕಥೋಲಿಕರೂ ಇತರ ಕ್ರೈಸ್ತರೂ ಬಳಸುತ್ತಿರುವ ಬೈಬಲ್ ಆರಮೇಯಿಕ್ (Aramaic) ಗ್ರೀಕ್, ಹೀಬ್ರೂ ಅಥವಾ ಲತೀನ್ ಬಾಷೆಗಳ ಮೂಲವುಳ್ಳದು. ಲತೀನಿನಂತೆ ಕೆಲವೆಡೆಗಳಲ್ಲಿ ಪ್ರಾಚೀನ ರೂಪದ ಗ್ರೀಕ್, ಸೀರಿಯನ್ ಮೊದಲಾದ ಇತರ ಕೆಲವು ಭಾಷೆಗಳನ್ನು ಕಥೋಲಿಕರಲ್ಲಿ ಕೆಲವೆಡೆಗಳಲ್ಲಿ ಬಳಸುತ್ತಾರಾದರೂ ಲತೀನಿನಷ್ಟು ಪ್ರಾಬಲ್ಯವಿಲ್ಲ.

ಪೂಜಾಕಾಲಗಳಲ್ಲಾಗಲಿ, ಇತರ ಧಾರ್ಮಿಕ ಕ್ರಿಯಾಕಲಾಪಗಳಲ್ಲಾಗಲಿ ಸರ್ವತ್ರವಾದ ಭಾಷೆಯೊಂದರ ಪ್ರಯೋಗದಿಂದ ಪ್ರಯೋಜನಗಳಿಲ್ಲದಿಲ್ಲ. ಯಾವ ದೇಶದವನೇ ಆಗಿರಲಿ, ಪೂಜಾದಿಕಾರ್ಯಗಳು ಅವನಿಗೆ ಅರ್ಥವಾಗುವುವು. ಹೀಗೆ ಭಾರತದ ಕನ್ನಡಿಗನು ತನ್ನ ಊರಲ್ಲಿ ಲತೀನ್ ಭಾಷೆಯಲ್ಲಿ ನಡೆಯುವ ಶ್ರೀ ಪೂಜೆಯನ್ನು ತಿಳಿದಿರುವುದರಿಂದ ಜರ್ಮನಿಗೆ ಹೋದರೂ ಅದೇ ರೀತಿಯಲ್ಲಿರುವ ಶ್ರೀ ಪೂಜೆಯನ್ನು ಕಾಣುವನು. ಆಗ ಸಮಸ್ತ ಕಥೋಲಿಕರೂ ಶ್ರೀ ಸಭೆಯ

ಸದಸ್ಯರೆಂದೂ ಶ್ರೀ ಪೂಜೆಯು ಅವರೆಲ್ಲರನ್ನು ಸಂಬಂಧಿಸುವ ಐಕ್ಯಕಾರಕ ವಿಷಯವೊಂದೆಂದೂ ತಿಳಿಯುವನು.

ಪೌರೋಹಿತ್ಯದ ದೀಕ್ಷೆಯನ್ನು ಪಡೆಯುವ ಮುನ್ನ ವ್ಯಕ್ತಿಗಳು ಲತೀನ್ ಭಾಷೆಯಲ್ಲಿ ಸಾಕಷ್ಟು ಅಭ್ಯಾಸ ಮಾಡಲಿದೆ. ಹೀಗಾಗಿ ಅವರು ಅರ್ಥಪೂರ್ವಕವಾಗಿಯೇ ಬಳಸುವರು. ಮಾತ್ರವಲ್ಲ, ಲತೀನ್ ಭಾಷೆಯ ಸಮಸ್ತ ಗ್ರಂಥಗಳು ಇಂಗ್ಲಿಷ್ ಮುಂತಾದ ಪ್ರೌಢ ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿವೆ. ಶ್ರೀ ಪೂಜೆಯಂತಹ ಸರ್ವತ್ರ ಪ್ರಯೋಗದಲ್ಲಿರುವ ವಿಷಯುಗಳು ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟಿವೆ. ಪ್ರತಿಯೊಂದು ಮೂಲವಾಕ್ಯದ ಮುಂದೆ ಅದರ ಅನುವಾದವನ್ನು ಕೊಟ್ಟಿರುವ ಕೈಪಿಡಿಗಳ ಪ್ರಯೋಗವು ಈಗ ಹೆಚ್ಚಿದೆ. ಪೂಜಾದಿ ಧಾರ್ಮಿಕ ಕ್ರಿಯೆಗಳಲ್ಲಿ ದೇಶೀಯ ಭಾಷೆಗಳ ಪ್ರಯೋಗವನ್ನು ಮಾಡಲು ಶ್ರೀ ಸಭೆಯು ಅನುಮತಿಯನ್ನು ನೀಡಿರುವುದು. ಮುಂದೆ ಇನ್ನೂ ಹೆಚ್ಚಿನ ಭಾಗಗಳನ್ನು ದೇಶಭಾಷೆಗಳಲ್ಲಿ ನಡೆಯಿಸುವಂತೆಯೇ ಆದೇಶಗಳನ್ನು ನಾವು ಹಾರೈಸಬಹುದು. ಜನಸಾಮಾನ್ಯರು ಧರ್ಮಕ್ರಿಯೆಗಳಲ್ಲಿ ಸಹಕರಿಸಲು ಅವುಗಳ ಅರ್ಥವಿಚಾರವಾಗಬೇಕಾದುದು ಅಗತ್ಯ.

ಕಥೋಲಿಕರೂ ಮೂರ್ತಿಪೂಜೆಯೂ

ಕಥೋಲಿಕ ದೇವಾಲಯಗಳಲ್ಲಿ ಮಾತ್ರವಲ್ಲ ವೈಯಕ್ತಿಕ ಮನೆಮಠಗಳಲ್ಲಿ ಮೂರ್ತಿಗಳೂ ಚಿತ್ರಪಟಗಳೂ ಕಾಣುತ್ತವೆ. ದೇವಾಲಯಗಳಲ್ಲಿ ಹಲವು ಮೂರ್ತಿಗಳನ್ನು ಅಲಂಕರಿಸಿರುವುದನ್ನು ಕಾಣಬಹುದು. ಅದನ್ನು ಕಂಡವರು ಕ್ರೈಸ್ತರು ಮೂರ್ತಿಪೂಜಕರೆಂದು ಹೇಳುವುದುಂಟು. ಇದು ನಿಜವಲ್ಲ.

ಸರ್ವೇಶ್ವರನಾದ ಭಗವಂತನಿಗೆ ಮಾತ್ರ ಸಲ್ಲಬೇಕಾದ ಸರ್ವಾರ್ಪಣಭಾವದ ಪೂಜೆಯನ್ನು ಇತರ ಯಾವತ್ತೂ ವ್ಯಕ್ತಿಗಾಗಲಿ, ವಿಷಯಕ್ಕಾಗಲಿ ಮಾಡಿದರೆ ಅದು ಮೂರ್ತಿಪೂಜೆಯೆಂದು ತಿಳಿಯಬೇಕು. ಆದುದರಿಂದ ಅಂತಹ ಗೌರವವನ್ನು, ಅರ್ಥಾತ್ ಆರಾಧನೆಯನ್ನು ಮೂರ್ತಿಗಳಿಗಾಗಲಿ, ವ್ಯಕ್ತಿಗಳಿಗಾಗಲಿ ಕ್ರೈಸ್ತರು ಕೊಡಲಾರರು. ಹಾಗಿದ್ದರೂ

ಕ್ರೈಸ್ತರು ಮೂರ್ತಿಗಳನ್ನು ಗೌರವಿಸದಿಲ್ಲ. ಆದರೆ ಮೂರ್ತಿಗಳೇ ಭಗವಂತನೆಂದು ಮಾತ್ರ ತಿಳಿದುಕೊಳ್ಳುವುದಿಲ್ಲ. ಇದನ್ನು ದೃಷ್ಟಾಂತ ವೊಂದರಿಂದ ನಾವು ಸ್ಪಷ್ಟಮಾಡಿಕೊಳ್ಳಬಹುದು. ಒಬ್ಬ ಹೆಂಗುಸು ತನ್ನ ಮನೆಯಲ್ಲಿ ತೂಗುಹಾಕಿದ ಪಟವೊಂದನ್ನು ತೋರಿಸಿ "ಇವನು ನನ್ನ ಹಿರಿಯಮಗನು, ಈಗ ಮದ್ರಾಸಿನಲ್ಲಿರುವನು" ಎಂದು ಆತನ ಪರಿಚಯ ವನ್ನು ಮಾಡಿಕೊಡುವಳೆಂದು ಊಹಿಸಿದರೆ, ಆಕೆಯ ಮಗನು ಆ ಪಟ ವಾಗಲಿ, ಆ ಪಟದಲ್ಲಿರುವ ವ್ಯಕ್ತಿಯಾಗಲಿ ಅಲ್ಲ. ಆದರೆ ಆ ಪಟದಲ್ಲಿ ಯಾವ ಲಕ್ಷಣಗಳನ್ನು ಒಡಮೂಡಿಸಿರುವರೋ ಅಂತಹ ಲಕ್ಷಣಗಳಿರುವ ವ್ಯಕ್ತಿಯೊಬ್ಬನು, ಪಟದಿಂದ ಪ್ರತ್ಯೇಕವಾಗಿರುವವನು–ಆಕೆಯ ಮಗನು. ಅಂತೆಯೇ ಸಂದುಹೋದ ವ್ಯಕ್ತಿಗಳ ಸ್ಮರಣೆಗಾಗಿ ಆ ವ್ಯಕ್ತಿಗಳ ರೂಪ ಗಳನ್ನು ಮಾಡಿ ಗೌರವಿಸುವುದು ಪ್ರತಿಯೊಂದು ಸಮಾಜದಲ್ಲಿಯೂ ರೂಢಿಯಲ್ಲಿರುವುದು. ಹಾಗಿರುವಾಗ ಭಗವಂತನ ಸೇವೆಯಲ್ಲಿ ಸರ್ವಸ್ವ ವನ್ನೂ ತ್ಯಜಿಸಿ, ಆತನ ಪವಿತ್ರ ನಾಮದಲ್ಲಿ ಸಮಾಜದ, ಆ ಮೂಲಕ ದೇಶದ ಮತ್ತು ಜಗತ್ತಿನ ಹಿತವನ್ನು ಮಾಡಿದ ಮಹಾಭಕ್ತರ ಪ್ರತಿಮೆ ಯನ್ನು ಅಥವಾ ಚಿತ್ರವನ್ನು ಗೌರವಿಸುವುದು ದೋಷವಲ್ಲ. ಆದರೆ ಸರ್ವೇಶ್ವರನಿಗೆ ಮಾತ್ರ ನೀಡುವ ಗೌರವವನ್ನು ನೀಡುವುದು ಮೂರ್ತಿ ಪೂಜೆಯೆನಿಸುವುದು.

"ಪ್ರತೀಕೇಷು ಪ್ರತೀಕಏವೋಪಾಸ್ಯಃ ನ ಬ್ರಹ್ಮ"

ವಿಗ್ರಹಾದಿಗಳಲ್ಲಿ ಸರ್ವೇಶ್ವರನಿಲ್ಲ; ಅವುಗಳು ಪ್ರತಿಮೆಗಳೆಂದೇ ಉಪಾಸಿಸಬೇಕು–ಎಂದು ಶ್ರೀ ರಾಮಾನುಜರು ಹೇಳಿದ ಮಾತಿನ ಮರ್ಮ ವಾದರೂ ಮೂರ್ತಿಪೂಜೆಯ ಕುರಿತು ಕಥೋಲಿಕ ಪಂಥದ ಭಾವನೆಗೆ ವ್ಯತಿರಿಕ್ತವಾದುದೇನಲ್ಲವೆಂದು ತಿಳಿಯಬಹುದು.

ಅಂತ್ಯಕ್ರಿಯೆ (Funeral)

ಹುಟ್ಟಿದ ಮನುಷ್ಯನು ಸಾಯುವನು. ಆತನ ಆತ್ಮವು ದೇಹದಿಂದ ಪ್ರತ್ಯೇಕವಾಗುವುದು. ಆತ್ಮದ ಮನೆಯಾದ ದೇಹವನ್ನು ಹಾಗೆಯೇ ಬಿಟ್ಟುಬಿಡಲಾಗುವುದಿಲ್ಲವಾದುದರಿಂದ ಅದನ್ನು ಗೌರವಪೂರ್ವಕವಾಗಿ

ತೆಗೆಯಬೇಕಾಗುತ್ತದೆ. ಬೈಬಲ್ ತಿಳಿಸುವಂತೆ ಬಹು ಪ್ರಾಚೀನ ಕಾಲದಿಂದಲೂ ಇಸ್ರೇಲರು ದಫನ ರೂಪದಲ್ಲಿ ದೇಹದ ಅಂತ್ಯಕ್ರಿಯೆಯನ್ನು ಮಾಡುತ್ತಿದ್ದರು. ಅವರು ವಿಧರ್ಮಿಗಳ ದಹನರೂಪದ ಅಂತ್ಯಕ್ರಿಯೆಯನ್ನು ಮೆಚ್ಚುತ್ತಿರಲಿಲ್ಲ. ಕ್ರೈಸ್ತ ಧರ್ಮಸಂಸ್ಥೆಯಾದ ಶ್ರೀ ಸಭೆಯಾದರೋ ಇಸ್ರೇಲರ ದಫನ ಕ್ರಿಯೆಯನ್ನು ಸ್ವೀಕರಿಸಿದೆ. ಅದು "ನಿಮ್ಮಲ್ಲಿರುವ ಪವಿತ್ರಾತ್ಮನ ಮಂದಿರವು ನಿಮ್ಮ ಅವಯವಗಳಾಗಿರುವುವೆಂದು ನೀವರಿತಿಲ್ಲವೇ?" (೧ ಕೊರಿಂತ್ ೬, ೧೯) ಎಂದು ಸೂಚಿಸುತ್ತ, ತನ್ನ ಸದಸ್ಯರ ಕಳೇವರಗಳನ್ನು ಸರಿಯಾದ ರೀತಿಯಲ್ಲಿ ಗೌರವಿಸಬೇಕೆಂದೂ, ಅವುಗಳನ್ನು ಪವಿತ್ರೀಕರಿಸಿದ ನೆಲದಲ್ಲಿ ಅಡಕಮಾಡಬೇಕೆಂದೂ ಆದೇಶಿಸುತ್ತದೆ.

ಆದರೆ ಕ್ರೈಸ್ತ ವಿರೋಧಿಗಳು ಕ್ರೈಸ್ತರ ದಫನ ಪದ್ಧತಿಯ ಸ್ವೀಕಾರಕ್ಕೆ ಬೇರೊಂದು ಕಾರಣವನ್ನು ಕೊಟ್ಟಿರುವರು: ಅಂತ್ಯಕಾಲದಲ್ಲಿ ಭೂಮಿಯ ಮೇಲೆ ಜನಿಸಿದ ಪ್ರತಿವ್ಯಕ್ತಿಯು ತನ್ನದೇ ಆದ ದೇಹವನ್ನು ಕೂಡಿಕೊಂಡು ಕೊನೆಯ ವಿಚಾರಣೆಗೆ ಭಗವತ್-ಸನ್ನಿಧಾನಕ್ಕೆ ಬಂದು, ದೇಹಸಮೇತ ಅನಂತಸೌಭಾಗ್ಯ ಅಥವಾ ಅನಂತಯಾತನೆಗಳಲ್ಲಿ ಒಂದನ್ನು ಪಡೆಯುವನು. ವ್ಯಕ್ತಿಯ ಆತ್ಮವು ಸುಲಭವಾಗಿಯೇ ತನ್ನ ಮೂಲ ದೇಹದಲ್ಲಿ ಕೂಡಿಕೊಳ್ಳಬೇಕಾದರೆ- ಆತನ ದೇಹವು ಅದೊಂದೆಡೆಯಲ್ಲಿರಬೇಕೆಂದೂ, ದಹನ ಮಾಡಿದರೆ ಅದರಂಕಗಳು ಗಾಳಿಯಲ್ಲಿ ಹಾರಿಹೋಗಿ, ಮಿಲನವು ಕಷ್ಟಸಾಧ್ಯವಾಗುವುದೆಂದೂ ಅವರ ಹೇಳಿಕೆ. ಅದು ಸರಿಯಲ್ಲ. ಪ್ರಕೃತಿಯ ಮೂಲಭೂತಗಳಿಂದ ಉಂಟುಮಾಡಲ್ಪಟ್ಟ ದೇಹವು ಅದೇ ಪ್ರಕೃತಿಯಲ್ಲಿ ವಿಲೀನಗೊಳ್ಳಲು ದಹನವಾಗಲಿ, ದಫನವಾಗಲಿ ಎರಡೂ ಸಮಾನವಾಗಿವೆ. ಮಾತ್ರವಲ್ಲ ಭಗವಂತನಿಗೆ ಅಸಾಧ್ಯವಾಗಿರುವುದೆಂಬುದು ಯಾವುದೂ ಇಲ್ಲದಿರುವಾಗ ಆ ಅರ್ಥದಿಂದ ದಹನವು ನಿಷೇಧಿಸಲ್ಪಟ್ಟಿಲ್ಲ.

ಸತ್ತವನನ್ನು ನಾವು ಗೌರವಪೂರ್ವಕವಾಗಿಯೇ ಸಂಸ್ಕರಿಸುವೆವು. ಆತನ ಸಂಬಂಧವು ನಮಗೆ ಅದೆಷ್ಟು ಹೆಚ್ಚಿರುವುದೋ ಅಷ್ಟೇ ಮಿಗಿಲಾಗಿ ಆತನಿಗೆ ಅಂತ್ಯಗೌರವವನ್ನು ನಾವು ನೀಡುವೆವು. ಮಾದಿಗನಾದರೂ

ತನ್ನ ಮಗನಿಗೆ ತನ್ನಿಂದಾಗುವಷ್ಟು ಗೌರವದಲ್ಲಿ ಅಂತ್ಯ ಸಂಸ್ಕಾರವನ್ನು ನೀಡುತ್ತಾನೆ. ಸರಕಾರದಿಂದ ಮರಣದಂಡನೆಗೊಳಪಟ್ಟ ಅಥವಾ ಉತ್ತರಾಧಿಕಾರಿಗಳೇ ಇರದವರ ದೇಹಗಳನ್ನು ಕೇವಲ ಹೆಣಗಳೆಂದು ತಾತ್ಸಾರದಿಂದ ನೋಡುತ್ತ ಅಗೌರವದಿಂದ ಅಡಕಮಾಡುವವನೂ ತನ್ನ ಬಂಧುವಿನ ದೇಹದಲ್ಲಿ ವ್ಯತ್ಯಾಸಗೊಳ್ಳುತ್ತಾನೆ. ಒಬ್ಬ ಮನುಷ್ಯನು ಸತ್ತಾಗ ಅವನು ಜಗತ್ತಿನಲ್ಲಿ ಜನೋಪಕಾರಿಯಾಗಿರಬಹುದು ಅಥವಾ ಸಮಾಜದ್ರೋಹಿಯಾಗಿರಬಹುದು–ಅದು ನಮ್ಮ ಸಂಕುಚಿತದೃಷ್ಟಿಯು. ಆದರೆ ಭಗವಂತನ ದೃಷ್ಟಿಯಲ್ಲಿ ಆತನ ಸ್ಥಾನವನ್ನು ನಾವರಿತ್ತಿಲ್ಲ. ಆದುದರಿಂದ ಪ್ರತಿವ್ಯಕ್ತಿಯ ದೇಹದ ಅಂತ್ಯಕ್ರಿಯೆಗೆ ಗೌರವದ ಸ್ಥಾನವೊಂದಿರಬೇಕಾಗಿದೆ.

ಅಂತ್ಯಕ್ರಿಯೆಯಾಗಿ ದೇಹವನ್ನು ಮಿಾಯಿಸುವುದೂ, ಉತ್ತಮ ವಸನಗಳಿಂದ ಅಲಂಕರಿಸುವುದೂ ಧೂಪ, ಪುಷ್ಪ ಮೊದಲಾದುವುಗಳಿಂದ ಗೌರವಿಸುವುದೂ, ಕೆಲವು ಸಂದರ್ಭಗಳಲ್ಲಿ ಕಾಣಿಕೆಗಳನ್ನೀಯುವುದೂ ಸಮಾಜರೂಢಿಯಾಗಿದೆ. ಆದುದರಿಂದ ದೇಹವು ನಮ್ಮ ಕಣ್ಣಮುಂದೆ ತೋರುವಂತೆಯೇ ಅಡಗಿಸುವುದು ಉತ್ತಮ ವಿಧಾನವೂ ಆಗಿದೆ. ಅದು ಮುಂದೆ ವಿಕ್ರಿಯೆಗೊಳಗಾಗುವುದೆಂಬ ಭಾವನೆಯಿಂದ ಕಣ್ಣ ಮುಂದೆಯೇ ವಿಕ್ರಿಯೆಗೊಳಪಡಿಸಲು ಶ್ರೀಸಭೆಯು ಒಪ್ಪುವುದಿಲ್ಲ. ಮಾತ್ರವಲ್ಲ ಅಂತ್ಯಕ್ರಿಯೆಗಾಗಿ ಸತ್ತವನ ಮನೆಯಿಂದ ಆತನ ಜಡಶರೀರವನ್ನು ಗೌರವಪೂರ್ವಕವಾಗಿಯೇ ದೇವಾಲಯಕ್ಕೊಯ್ದು ಅನಂತರ ಪವಿತ್ರೀಕರಿಸಿದ ನೆಲದಲ್ಲಿ ಅಡಕಮಾಡಲು ಯುಕ್ತರೀತಿಯೊಂದನ್ನು ಬಳಸುತ್ತದೆ. ಸತ್ತವನ ಆತ್ಮಕ್ಕೆ ಚಿರಶಾಂತಿಯು ದೊರಕುವಂತೆ ಪ್ರಾರ್ಥಿಸುತ್ತದೆ. ಭಗವಂತನ ಕರುಣೆಯನ್ನು ಪ್ರಾರ್ಥಿಸುವ ಗೀತಗಳನ್ನು ಯುಕ್ತರಾಗದಿಂದ ಹಾಡುವಂತೆ ಮಾಡುತ್ತದೆ.

ಕೊನೆಯ ನಾಲ್ಕು ವಿಷಯಗಳು

ಮಾನವನು ತನ್ನ ಮೂಲವಾದ ಭಗವತ್–ಸನ್ನಿಧಾನಕ್ಕೆ ಹೋಗಬೇಕಾಗಿದೆ. ಅದಕ್ಕಾಗಿ ಯುಕ್ತಸಿದ್ಧತೆಯನ್ನು ಇಹದಲ್ಲಿಯೇ ಅವನು

ಮಾಡಿಕೊಳ್ಳಬೇಕಾಗಿದೆ. ಭಗವತ್‌ಪ್ರೇಮವನ್ನು ಸಂಪಾದಿಸಿ, ಅದನ್ನೇ ವೃದ್ಧಿಗೊಳಿಸುವುದು ಅವನಿಗೆ ಆಗತ್ಯವಾಗಿದೆ. ಅದೇ ಕಾಲದಲ್ಲಿ ಸಮಸ್ತ ಪಾತಕಗಳಿಂದ, ನಿಯಮಾತಿಕ್ರಮಣಗಳಿಂದ ಆತನು ದೂರವಿರಬೇಕು. ಹೀಗೆ ಪಾತಕಗಳಿಂದ ದೂರವಿರಲು, ಸದ್ಗುಣಗಳನ್ನು ಅಪ್ಪಿಕೊಂಡು ಅವುಗಳನ್ನು ನಿತ್ಯಜೀವನದಲ್ಲಿ ಅನುವರ್ತಿಸಿಕೊಳ್ಳಲು ಐಹಿಕ ಸುಖಭೋಗಗಳ ಅನಿತ್ಯತೆಯನ್ನು ಅವನು ತಿಳಿಯಬೇಕು. ಅನಂತ ಸುಖವನ್ನು ಈ ಕ್ಷಣಿಕ ಸುಖದಿಂದ ಕಳೆದುಹೋಗದಂತೆ ಆತನು ತನ್ನ ಜೀವನದ ಕೊನೆಯ ನಾಲ್ಕು ವಿಷಯಗಳನ್ನು ನಿತ್ಯವೂ ಸ್ಮೃತಿಪಟಲದಲ್ಲಿಟ್ಟುಕೊಳ್ಳಬೇಕೆಂದು ಬಲ್ಲವರು ತಿಳಿಸುತ್ತಾರೆ.

"ನಿನ್ನ ಪ್ರತಿಯೊಂದು ಕಾರ್ಯದಲ್ಲಿಯೂ ನಿನ್ನ ಕೊನೆಯ ಅಂತ್ಯವನ್ನು ಸ್ಮರಿಸು, ಮತ್ತು ನೀನು ಎಂದಿಗೂ ಪಾತಕವನ್ನು ಮಾಡಲಾರೆ" (Eecl. z, ೪೦).

ಮಾನವನು ತನ್ನ ನಿತ್ಯಜೀವನದಲ್ಲಿ ಸ್ಮೃತಿಪಟಲದಲ್ಲಿ ಜೀವಂತವಾಗಿರಿಸಬೇಕಾದ ಆ ನಾಲ್ಕು ವಿಷಯಗಳು ಮರಣ, ನ್ಯಾಯವಿಚಾರಣೆ, ನರಕ ಮತ್ತು ಮೋಕ್ಷ–ಎಂಬಿವು. ಅವು ಪ್ರತಿಯೊಬ್ಬನ ಐಹಿಕ ಜೀವನದ ಅಂತ್ಯದಲ್ಲಿ ಬರುವುವು. ಅವುಗಳಲ್ಲಿ ಪ್ರತಿಯೊಂದನ್ನು ತುಸು ವಿವೇಚಿಸಬೇಕು.

ಮರಣ –

ದೇಹಾತ್ಮಗಳೆರಡರ ಸಂಯೋಗದಿಂದ ಉಂಟಾದ ಮಾನವನ ಅಸ್ತಿತ್ವವು ಅವುಗಳ ವಿಯೋಗದಿಂದ ಕೊನೆಗೊಳ್ಳುತ್ತದೆ. ಜಗತ್ತಿನ ತತ್ತ್ವಜ್ಞರು ಪ್ರತಿಯೊಂದು ವಿಷಯದಲ್ಲಿಯೂ ಭಿನ್ನಾಭಿಪ್ರಾಯವುಳ್ಳವರು. ಆದರೆ ಮರಣವನ್ನು ಕುರಿತು ಅದೂ ಅದರ ಅನಿಶ್ಚಿತತೆಯನ್ನು ಕುರಿತು ಏಕಾಭಿಪ್ರಾಯವುಳ್ಳವರು.

"ಧೂಳು ನೀನಾಗಿರುವೆ, ಮತ್ತು ಧೂಳಿಗೆ ನೀನು ಹಿಂತಿರುಗುವೆ" (ಉತ್ಪತ್ತಿ ೩, ೧೯) ಎಂದು ದೇಹವನ್ನು ಕುರಿತು ಹೇಳಿದೆ. ಆದರೆ ದೈವಿಕ ಆದೇಶಗಳಲ್ಲಿ ವಿಶ್ವಾಸವಿಡುವ ಆಸ್ತಿಕನು

ಒಬ್ಬ ಮನುಷ್ಯನಿಂದಾಗಿ ಪಾತಕವೂ ಪಾತಕದಿಂದ ಮರಣವೂ

ಜಗತ್ತನ್ನು ಪ್ರವೇಶಿಸಿದುವು. ಆತನಿಂದಾಗಿಯೇ ಎಲ್ಲರೂ ಪಾತಕಿಗಳಾದುದರಿಂದ ಮರಣವೂ ಎಲ್ಲ ಮಾನವರಿಗೆ ಬಂದಿತು (ರೋಮ ೫, ೧೨) ಎಂದು ಅದನ್ನು ಸ್ವೀಕರಿಸುವನು. ಆ ಮರಣವು ಮಾತ್ರ ವ್ಯಕ್ತಿಯು ಬಯಸದ ಗಳಿಗೆಯಲ್ಲಿ ಬರಬಹುದು.

"ಮಾನವಪುತ್ರನು ಅದಾವಗಳಿಗೆಯಲ್ಲಿ ಬರಬಹುದೆಂದು ನೀವು ತಿಳಿಯದಿರುವುದರಿಂದ ನೀವು ಕೂಡಾ ಸಿದ್ಧರಾಗಿರಿ" (ಮತ್ತಾಯ ೨೪, ೪೪).

ಮನುಷ್ಯನ ಮನಸ್ಸು ಊರ್ಧ್ವಮುಖಿ, ಆತನ ಬಯಕೆ ಗಗನ ಚುಂಬಿ. ಆತನ ಕಾರ್ಯಗಳು ಉನ್ನತಧ್ಯೇಯಗಳುಳ್ಳವು. ಆತನ ರೀತಿಗಳು ಮಾತ್ರ ಅಧೋಗತಿಗಿಳಿಸುವುವು.

"ನಿಜವಾಗಿಯೂ ಮನವು ಇಚ್ಛಿಸುತ್ತದೆ, ಆದರೆ ಕಾಯವು ದುರ್ಬಲವು"

ಹೀಗೆ ದ್ವಿಮುಖ ಸೆಳೆತಗಳಲ್ಲಿ ದೇಹವು ಹಿರಿತನವನ್ನು ಪಡೆದರೆ ಮಾನವನು ತನ್ನ ನಿಶ್ಚಿತ ಧ್ಯೇಯವನ್ನು ಮರೆತು ಕಲ್ಪನೆಯ ಸಾಮ್ರಾಜ್ಯವೊಂದರಲ್ಲಿ ವಿಹರಿಸಿ, ಸತ್ಯವನ್ನು ಸುಳ್ಳಿನಿಂದ, ಪ್ರಕಾಶವನ್ನು ಕತ್ತಲೆಯಿಂದ ಜಯಿಸಲು ನೋಡುವನು. ಆದರೆ ಮರಣವು ಸನ್ನಿಹಿತವಾದಾಗ ಆತನು ಕಣ್ದೆರೆಯುವನು. ನಿಸರ್ಗನಿಯಮಗಳಂತೆ ಆತನ ದೇಹವು ಪಂಚಭೂತಗಳೊಡನೆ ಸಮನ್ವಯಗೊಳ್ಳುವುದು. ಆತ್ಮವು ಮಾತ್ರ ತಾನು ಸಂಗ್ರಹಿಸಿದ ಪಾಪ ಅಥವಾ ಪುಣ್ಯಗಳ ಸಮೇತ ತನ್ನ ಮೂಲವೂ ಅಂತ್ಯವೂ ಆದ ಭಗವಂತನ ಸನ್ನಿಧಿಗೆ ತೆರಳುವುದು. ಯಾವ ರೀತಿಯಲ್ಲಿ ಜೀವಿತವಿದ್ದಿತೋ ಅದುವೆ ರೀತಿಯ ಮರಣವು ಬರುವುದು.

ನ್ಯಾಯವಿಚಾರಣೆ– (Judgement)

ಕೂಲಿಗಾರನಿಗೆ ಆತನ ಕೆಲಸದ ಮಜೂರಿಯು ಸಿಗಬೇಕಾದುದು ನ್ಯಾಯವು. ಹಾಗಿರುವಾಗ ನಿಷ್ಪಕ್ಷಪಾತಿ ಸರ್ವೇಶ್ವರನು ನಮ್ಮ ನ್ಯಾಯ–ಅನ್ಯಾಯಗಳನ್ನು, ಪಾಪ–ಪುಣ್ಯಗಳನ್ನು ಸಮಗ್ರವಾಗಿ ತೂಗಿ ಯುಕ್ತವಾಗಿರುವ ತೀರ್ಮಾನವನ್ನು ನೀಡದಿರಲಾರನು. ಕೆಲಸಕ್ಕೆ ಬಂದ ಆಳಿನ ಕೆಲಸದ ಪ್ರಮಾಣ, ರೀತಿ, ವ್ಯವಸ್ಥೆಗಳನ್ನು ಪರಿಶೀಲಿಸಿ ಹಗಲು ಅಂತ್ಯ

ಗೊಂಡಾಗ ಆತನ ಕಾರ್ಯಕ್ಕನುಗುಣವಾದ ಶುಲ್ಕವನ್ನು ನಿರ್ಧರಿಸುವಂತೆ, ಮಹಾಸ್ವಾಮಿಯಾದ ಭಗವಂತನು ನಮ್ಮ ಜೀವನಕಾಲವೆಂಬ ದಿನದಲ್ಲಿ ನಿರ್ವಹಿಸಿದ ಕಾರ್ಯಾಕಾರ್ಯಗಳನ್ನು ಪರಿಶೀಲಿಸಿ, ಯುಕ್ತವಾದ ಪರಿಹಾರವನ್ನು ನಿಯಮಿಸುವಂತೆ ಮರಣವೆಂಬ ಹೆಬ್ಬಾಗಲಿನ ಮೂಲಕ ಆತನ ಸನ್ನಿಧಿಗೆ ಹೋಗುವೆವು.

"ಹೃದಯಗಳನ್ನು ಶೋಧಿಸುವ, ಮೂಗುದಾರಗಳನ್ನು ಪರಿಶೀಲಿಸುವ ಸ್ವಾಮಿ ನಾನಾಗಿರುವೆನು. ಪ್ರತಿಯೊಬ್ಬನಿಗೂ ಆತನ ದಾರಿಯಂತೆ ಮತ್ತು ಆತನ ಬಳಸಿದ ಉಪಾಯಗಳ ಫಲದಂತೆ ಕೊಡುವವನಾಗಿರುವೆನು" (ದೇವೋಕ್ತಶಾಸ್ತ್ರ ೧೧, ೨೩).

ಭಗವಂತನಲ್ಲಿ ಪಕ್ಷಭೇದವಿಲ್ಲ. ಪಾಪ–ಪುಣ್ಯ ಕಾರ್ಯಗಳನ್ನು ಮಾಡುವ ಸ್ವಾತಂತ್ರ್ಯವನ್ನು ಆತನು ನಮಗಿತ್ತಿರುವನು. ಅದನ್ನು ಯಥಾಯೋಗ್ಯವಾಗಿ ಬಳಸಿಕೊಂಡು ನಮ್ಮ ಕೊನೆಗಾಲಕ್ಕೆ ಅದಾವುದು ಹಿತವೋ ಅದನ್ನು ಇಹದಲ್ಲಿಯೇ ಸಾಧಿಸಬೇಕು. ಜೀವನವು ಕೊನೆಗೊಂಡ ಬಳಿಕ ಯಾವುದನ್ನೂ ನಾವು ಮಾಡಲಾರೆವು. ಕೊನೆಯಗಳಿಗೆಯಲ್ಲಿ ಸರಿದಾರಿಯನ್ನು ಹಿಡಿಯಬಹುದೆಂದು ನಾವು ಕೊನೆಯವರೆಗೂ ಸುಮ್ಮನಿರಲಾಗುವುದಿಲ್ಲ. ಆ ಕೊನೆಯಗಳಿಗೆ ಅದಾವುದು? ಎಂದು ಯಾರು ಮುಂದಾಗಿ ತಿಳಿಸುವರು! ಆದುದರಿಂದ ಈಗ, ಈ ಹೊತ್ತಿನಿಂದಲೇ ನಾವು ಪಾತಕಗಳನ್ನು ದೂರಮಾಡಿ ಪುಣ್ಯಪ್ರದ ಕಾರ್ಯಗಳನ್ನು ಮಾಡುತ್ತ ಬರಬೇಕಾಗಿದೆ. ನಾಳೆಯೆಂಬುದು ಸ್ಥಿರವಲ್ಲ.

ಪ್ರತಿಯೊಬ್ಬ ಮನುಷ್ಯನು ಏನು ಮಾಡಿರುವನೆಂದು ಮಾತ್ರ ಭಗವಂತನು ಕಾಣುವನಲ್ಲದೆ, ಆತನ ಪ್ರಾಪಂಚಿಕ ಸುಖ, ರಾಜಕೀಯದರ್ಪ, ವೈಜ್ಞಾನಿಕಶೋಧನೆ, ದಂಡಯಾತ್ರೆಗಳ ಸ್ಥಾನ ಮೊದಲಾದುವುಗಳನ್ನು ಗಣಿಸಲಾರನು. ಆದರೆ ಯಾರಿಗೆ ಹೆಚ್ಚಿಗೆ ಶಕ್ತಿಯೂ ಸಂದರ್ಭವೂ ಇದ್ದು ಅದನ್ನು ಸರಿಯಾಗಿ ಪ್ರಯೋಗಿಸಲಿಲ್ಲವೋ ಅವನ ಸ್ಥಾನವು ಇತರರಿಗಿಂತ ಕೀಳಾಗುವುದು.

"ಅಖಿಲ ಜಗತ್ತನ್ನು ಜಯಿಸಿ, ಸ್ವಾರ್ತದ ವಿನಾಶವನ್ನು ಪಡೆದರೆ ಏನು ಸಾರ್ಥಕವಾಯಿತು" ಎಂದು ಲಯೋಲದ ಸೈನಿಕ ಇಗ್ನಾಸಿಯುಸ್ ಮಾಡಿದ ಪ್ರಶ್ನೆಯು.

ನರಕ (Hell)

ಭಗವಂತನ ಭಯವೇ ಜ್ಞಾನದ ಆರಂಭವೆಂದು ಹಳೆಯ ನುಡಿಯೊಂದಿದೆ. ಈ ನುಡಿಯ ಮರ್ಮವನ್ನು ನಿರಾಕರಿಸುವವನು ಭಗವಂತನ ಅಸ್ತಿತ್ವವನ್ನು ನಿರಾಕರಿಸುವನು. ನಾಸ್ತಿಕನು ನರಕವೂ ಮೋಕ್ಷವೂ ಇಲ್ಲವೆನ್ನುವನು.

ನರಕವೆಷ್ಟು ವಿಸ್ತಾರವಾದುದು, ಅದೆಷ್ಟು ಭಯಂಕರವಾದುದು ಎಂದು ಬಣ್ಣಿಸುವವರಿಲ್ಲ. ಅದನ್ನೊಮ್ಮೆ ಪ್ರವೇಶಿಸಿದವನು ಎಂದಿಗೂ ಹೊರಬಾರನು. ಭೂಮಿಯು ನಾಶವಾಗಬಹುದು, ನಕ್ಷತ್ರಾದಿಗಳು ಸ್ಥಾನ ತಪ್ಪಬಹುದು–ನರಕವು ಮಾತ್ರ ಶಾಶ್ವತವು–ಅನಂತವು. ಅಲ್ಲಿ ಮಹಾಪಾತಕಿಗಳಿದ್ದು ಯಾವ ಬಗೆಯ ಸದ್ಗುಣವೂ ಅಲ್ಲಿರಲಾರದು. ನಿರಾಶೆಯಿಂದ ಕೂಡಿದ ಆತ್ಮಗಳು ತಮದ ರಾಜನೂ ಸುಳ್ಳಿನ ಹಿತನೂ ಆದ ಸೈತಾನನ ಹಾಗೂ ಆತನ ಅನುಯಾಯಿಗಳ ಜೊತೆಯಲ್ಲಿ ಬಹು ಬಗೆಯ ಪೀಡೆಗಳಿಗೊಳಗಾಗುವರು. ಅಂತಹ ನರಕಕ್ಕೆ ಭಾಗಿಯಾಗದಂತೆ ಮಾನವನು ಎಚ್ಚರದಿಂದಿರಬೇಕು.

“ಅಂತಹ ಮನುಷ್ಯನು ಹುಟ್ಟದಿರುತ್ತಿದ್ದರೆ ಅದೆಷ್ಟೋ ಹಿತವಾಗಿರುತಿತ್ತು. (ಮಾರ್ಕ ೧೪, ೨೧)

ಎಂದು ಯೂದಾಸನಿಗನ್ವಯಿಸಿದ ನುಡಿಯು ನಮಗೂ ಅನ್ವಯಿಸದಂತೆ ನಾವು ನೋಡಿಕೊಳ್ಳಬೇಕು. ಇದಕ್ಕಿರುವ ಮಾರ್ಗವು ಒಂದು ಮಾತ್ರ : ಪಾತಕಗಳನ್ನು ವರ್ಜಿಸುವುದು, ಪುಣ್ಯವನ್ನು ಗಳಿಸುವುದು.

ಇಹದಲ್ಲಿ ಅತ್ಯಂತ ಭಯಂಕರವಾದುದು ಅಗ್ನಿಯು. ಅದು ಮಾನವೋಪಕಾರಿಯಾದ ಅಗ್ನಿಯು. ಆದರೆ ನರಕದಲ್ಲಿರುವ ಅಗ್ನಿಯು ಭೀಕರಸ್ವರೂಪವುಳ್ಳದು. ಭಗವತ್ ಕ್ರೋಧಾಗ್ನಿಯದು. ಆ ಅಗ್ನಿಗೆ ಆಹುತಿಯಾಗಬೇಡವೆಂದು ನಮ್ಮ ಅಂತಃಕರಣವು ಭೋದಿಸುತ್ತದೆ. ಆದರೆ ದೈಹಿಕ ಪ್ರಕೃತಿಯು ಅದನ್ನು ಮರೆಯುವಂತೆ ನೋಡಿಕೊಳ್ಳುತ್ತದೆ.

ನರಕ–ಅದೂ ಅನಂತವಾದುದು, ಪರಮಪ್ರೇಮಮಯ ಭಗವಂತನು, ಕರುಣಾಸಾಗರನು ಆ ಅನಂತ ನರಕವನ್ನು ಸೃಷ್ಟಿಸಿರಲಾರನೆಂದು

ಹೇಳುವವರಿಲ್ಲದಿಲ್ಲ. ಆದರೆ ಭಗವಂತನು ನ್ಯಾಯಶೀಲನು. ಆತನ ಔದಾರ್ಯಕ್ಕೆ ಮಿತಿಯಿಲ್ಲ. ಆತನ ಸತ್ಯಕ್ಕೆ ಚ್ಯುತಿಯಿಲ್ಲ. ಸೈತಾನ ಹಾಗೂ ಆತನ ಸಹಚರರಿಂದ ತೆರವಾದ ಮೋಕ್ಷದ ಸ್ಥಾನಗಳನ್ನು ತುಂಬಿಸಲು ಮಾನವನನ್ನು ರಚಿಸಿದನು. ಅದರೆ ಆತನು ಪತನಗೊಳ್ಳಲು ರಕ್ಷಕನಾಗಿ ತನ್ನ ಏಕಮಾತ್ರ ಪುತ್ರನನ್ನು ಭೂಲೋಕಕ್ಕೆ ಕಳುಹಿಸಿದನು. ರಕ್ಷಣೆಯ ಮಾರ್ಗವನ್ನು ತೋರಿಸಿದನು. ಆದರೆ ಮಾನವನು ತನ್ನ ಸ್ವತಂತ್ರ ಶಕ್ತಿಯನ್ನು–ಆ ಸ್ವೇಚ್ಛೆಯನ್ನು ದುರುಪಯೋಗಗೊಳಿಸದಂತೆ, ಭಯಾನಕ ಸ್ವರೂಪದ ನರಕದ ಅಸ್ತಿತ್ವವನ್ನೂ ತಿಳಿಸಿರುವನು. ಅದರ ಭಯವೂ ಆತನನ್ನು ಸರಿದಾರಿಗೆ ತರದಿದ್ದರೆ ಕೊನೆಗೆ ತನ್ನ ಸನ್ನಿಧಾನದ-ಮೋಕ್ಷದ ಸುಖವನ್ನು ಕರುಣಿಸುವ ವಾಗ್ದಾನವನ್ನು ಮಾಡಿರುವನು. ಭಗವಂತನ ಔದಾರ್ಯಕ್ಕೆ ಅಂತ್ಯವಿಲ್ಲ. ಆತನ ನ್ಯಾಯಕ್ಕೆ ಚ್ಯುತಿಯಿಲ್ಲ.

ಮೋಕ್ಷ–(Heaven)

ಭಗವಂತನ ಸಾಕ್ಷಾತ್ಕಾರವೇ ಮೋಕ್ಷದ ಹಿರಿಮೆಗೆ ಕಾರಣವು. ಆತನು ಇರುವ ತಾಣವೇ ಮೋಕ್ಷವು. ಅಲ್ಲಿ ಅದಾವ ಬಗೆಯ ಕೊರತೆಗಳಿಲ್ಲ. ಚಿರಶಾಂತಿಯು ಅಲ್ಲಿ ವಿರಾಜಿಸುತ್ತಿರುವುದು. ಅಲ್ಲಿಗೆ ಹೋದವನು ನಿತ್ಯಸಂತೃಪ್ತನು. ಆದುದರಿಂದ ಇಹವನ್ನು ಬಿಟ್ಟು ಹೋದವರಿಗೆ ಆ ಚಿರಶಾಂತಿಯು ಲಭಿಸಲೆಂದು ನಾವು ಹಾರೈಸುವೆವು. ನರಕದ ಭಯವಲ್ಲವಾದರೂ ಮೋಕ್ಷದ ಬಯಕೆಯು ನಮ್ಮನ್ನು ಸರಿದಾರಿಯಲ್ಲಿರಿಸಲಿ.

ನರಕದಲ್ಲಿ ಭಗವಂತನ ಸಾಕ್ಷಾತ್ಕಾರವಿಲ್ಲದುದೇ ಆದರೆ ಭಯಾನಕ ಸ್ಥಿತಿಗೆ ಕಾರಣವೆಂಬುದನ್ನು ಹಿಂದೆಯೇ ನಾವು ನೋಡಿರುವೆವು. ಮಹಾ ಪಾತಕಿಗಳಾಗಿ ಪ್ರೇಮಮಯ ಭಗವಂತನ ಸನ್ನಿಧಾನವನ್ನು ಬಯಸುವ ಬದಲು ಆತನಿಂದ ದೂರಹೋದ ಮಾನವಾತ್ಮಗಳಿಗೆ 'ತೊಲಗಿರತ್ತ' 'ಎಂದು ಆತನೇ ಆಜ್ಞಾಪಿಸುವನು. ಆದರೆ ಆತನ ಪ್ರೇಮದಿಂದ ಆತನ ಸೇವೆಯನ್ನು ಮಾಡುತ್ತ ಬಂದವರನ್ನು ಬನ್ನಿರಿ' ಎಂದು ಸ್ವಾಗತಿಸುವನು. ಆ ಎರಡು ಮಾತುಗಳಲ್ಲಿ ಒಂದು ನಮಗೆ ದೊರಕುವುದು. ಬನ್ನಿರೆಂದು ಸ್ವಾಗತಿಸುವ ಮಾತಿನಲ್ಲಿಯೇ ಆ ಭಗವಂತನು ಕರುಣಿಸುವ ಸೌಭಾಗ್ಯದ

ಸೂಚನೆಯಿದೆ. ಆದರೆ 'ತೊಲಗಿರತ್ತ' ಎಂಬ ಆಜ್ಞೆಯಲ್ಲಿ ನಿಷ್ಟುರತೆಯಿದೆ. ಭಗವಂತನ ಸನ್ನಿಧಾನದಿಂದ ತೊಲಗಿಹೋಗುವುದೇ ನರಕವು. ಆದರೆ ಮೋಕ್ಷದಲ್ಲಿ.

"ಭಗವಂತನು ತನ್ನನ್ನು ಪ್ರೀತಿಸಿದವರಿಗಾಗಿ ಏನೆಲ್ಲವನ್ನು ಸಿದ್ಧ ಮಾಡಿಟ್ಟುಕೊಂಡಿರುವನೆಂದು ಕಣ್ಣು ನೋಡಿಲ್ಲ, ಕಿವಿ ಕೇಳಿಲ್ಲ ಮಾನವನ ಹೃದಯದೊಳಗೆ ಹೋಗಿಲ್ಲ" (೧ ಕೊರಿಂತಿ ೨, ೯)

ಅಂತಹ ಸೌಭಾಗ್ಯವು ಭಗವಂತನು ಸಜ್ಜನರಿಗಾಗಿ ಕೊಡಲಿಚ್ಛಿಸುವನು. ಅಲ್ಲಿಗೆ ಹೋದವರು ಸತ್ಯದ ಪರಿಚಯವನ್ನು ಪ್ರತ್ಯಕ್ಷವಾಗಿಯೇ ಮಾಡುವರು. ಇಹಲೋಕದಲ್ಲಿ ನಮಗರಿಯದ ಹಲವು ಸಮಸ್ಯೆಗಳು ಅಲ್ಲಿ ಸ್ಫುಟವಾಗುವುವು. ಭಗವಂತನನ್ನೇ ನಾವು ಕಾಣುವುದರಿಂದ ಯಾವ ಬಗೆಯ ಸಂದೇಹಗಳೂ ಉಳಿಯವು.

ಆ ಚರಮಸ್ಥಾನವು ನಮಗೆಲ್ಲರಿಗೂ ದೊರಕಲಿ.